ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

# ತ್ತೈತ್ತಿರೀಯೋಪನಿಷತ್

ಉಪನಿಷತ್ತಿನ ಮೂಲಮಂತ್ರಗಳೂ
ಮಂತ್ರಗಳಿಗೆ ಕನ್ನಡ ಭಾಷೆಯಲ್ಲಿ
ಶ್ರೀ ವಿಶಿಷ್ಟಾದ್ವೈತಸಿದ್ಧಾಂತ ರೀತ್ಯಾ
ಪ್ರತಿಪದಾರ್ಥ ಭಾವಾರ್ಥ ಸಹಿತ ವ್ಯಾಖ್ಯಾನವೂ

ಶ್ರೀ ಶ್ರೀ ಯದುಗಿರಿ ಯತಿರಾಜಸ್ವಾಮಿಗಳವರಿಂದ
ಅನುಗ್ರಹಿಸಲ್ಪಟ್ಟದೆ.


*Publishers :*

SRI MANDAYAM ANNADHORAY
Srinivasa Iyengar—Yadugiriamma Trust
No. 9, Appajappana Agrahar, Chamarajpet
BANGALORE-18.

ಶ್ರೀಃ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ
ಉಭಯವೇದಾಂತ ಪ್ರವರ್ತಕಾಚಾರ್ಯೇತ್ಯಾದಿ

# ಶ್ರೀ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜಜೀಯರ್ ಸ್ವಾಮಿಗಳವರ

೮೦ನೆಯ ತಿರುನಕ್ಷತ್ರದ ಸುಸಮಯದಲ್ಲಿ
(ಪ್ಲವಂಗ ಸಂವತ್ಸರ ಮೀನ ಹಸ್ತ ಭಾನುವಾರ)
(೨೬—೩—೧೯೬೭)

೮೦ ನೆಯ (ಅಶೀತಿ) ತಿರುನಕ್ಷತ್ರಮಹೋತ್ಸವ
ನಿರ್ವಾಹಕ ಸಮಿತಿಯವರಿಂದ
ಮುದ್ರಿಸಲ್ಪಟ್ಟು

ಶ್ರೀ ಶ್ರೀಯರ ಪರಮಕೃಪಾಕಟಾಕ್ಷದಿಂದ
ಪ್ರಕಟಿತವಾಯಿತು.

# ವಿಜ್ಞಾಪನೆ.

ಶ್ರೀ ತಿರುನಾರಾಯಣಪುರಂ ದಿವ್ಯ ಕ್ಷೇತ್ರದಲ್ಲಿ, ಶ್ರೀ ಯದುಗಿರಿ ಶೆಲ್ವ ನಾರಾಯಣ ಸನ್ನಿಧಿಯ ಕೈಂಕರ್ಯ ನಿರ್ವಾಹಕ್ಕಾಗಿ, ಸಾಕ್ಷಾತ್ ಶ್ರೀ ಭಗವದ್ರಾಮಾನುಜಾಚಾರ್ಯರಿಂದಲೇ ಸ್ಥಾಪಿಸಲ್ಪಟ್ಟ ನಮ್ಮ ಶ್ರೀ ಯದುಗಿರಿ ಯತಿರಾಜಮಠವು ಸುಮಾರು ಒಂದು ಸಹಸ್ರ ವರ್ಷಗಳಿಂದಲೂ ಅನುಸ್ಯೂತವಾಗಿ ನಡೆದು ಬರುತ್ತಿರುವುದು ಸರ್ವವಿದಿತವಾಗಿದೆ. ನಮ್ಮ ಈ ಶ್ರೀ ಮಠದ ದಿವ್ಯ ಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಈಗ ೧೪ ವರ್ಷಗಳಿಂದಲೂ ಪೀಠಾಧಿಪತ್ಯವನ್ನು ನಿರ್ವಹಿಸಿಕೊಂಡು ಬರುತ್ತಿರುವ ಶ್ರೀ ಶ್ರೀ ಯದುಗಿರಿ ಯತಿರಾಜಸಂಪತ್ಕುಮಾರ ರಾಮಾನುಜಜೀಯರ್ ಸ್ವಾಮಿಗಳವರು (ವಿದ್ವಾನ್ ರಾ. ಅ. ಅಯ್ಯನಯ್ಯಂಗಾರ್ಯಸ್ವಾಮಿಗಳವರು) ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಚಾರಕ್ಕಾಗಿಯೇ ಬದ್ಧ ಕಂಕಣರಾಗಿ, ತಮ್ಮ ವಿದ್ವತ್ಪ್ರಭೆಯಿಂದಲೂ ಜ್ಞಾನ ಅನುಷ್ಠಾನಗಳಿಂದಲೂ, ದಿವ್ಯ ಕಾಲಕ್ಷೇಪಗಳಿಂದಲೂ ಉಪದೇಶ ಉಪನ್ಯಾಸಗಳಿಂದಲೂ, ಸಿದ್ಧಾಂತ ಪ್ರಚಾರವನ್ನು ಇತೋಪ್ಯತಿಶಯಿತವಾಗಿ ನಡೆಸಿಕೊಂಡು ಬರುತ್ತಿರುವುದು ಪ್ರಸಿದ್ಧವಾಗಿದೆ. ಶ್ರೀ ಶ್ರೀಯವರು ಲೋಕೋಪಕಾರಕ್ಕಾಗಿ ಬಹಳವಾಗಿ ಗ್ರಂಥಗಳನ್ನು ರಚಿಸಿ ಅನುಗ್ರಹಿಸಿದ್ದಾರೆ.

ಭಗವತ್ಕೃಪೆಯಿಂದ ಈ ನಮ್ಮ ಜೀಯರ್‌ಸ್ವಾಮಿಗಳವರ (ಅಶೀತಿ) ೮೦ನೆಯ ತಿರುನಕ್ಷತ್ರ ಮಹೋತ್ಸವವನ್ನು ನಡೆಸಿ ಕೊಂಡಾಡುವ ಸುಯೋಗವು ನಮಗೆ ಒದಗಿತು. ಅಪೂರ್ವವಾದ ಈ ತಿರುನಕ್ಷತ್ರೋತ್ಸವವನ್ನು ಸಂಭ್ರಮವಾಗಿ ನಡೆಸಲು ನೂರಾರು ಶಿಷ್ಯರುಗಳೂ ಅಭಿಮಾನಿಗಳೂ ನಮ್ಮ ಸಮುದಾಯದ ಸಕಲರೂ ಪರಮಮಹೋತ್ಸಾಹದಿಂದ ಸೇರಿ ಸಹಕರಿಸಿ, ತಿರುನಕ್ಷತ್ರ ನಿರ್ವಾಹಕ ಸಮಿತಿಯವರ ಮೂಲಕ ಭಕ್ತಿಪೂರ್ವಕವಾಗಿ ಬಹಳ ವಿಜೃಂಭಣೆಯಿಂದ (೧೯-೪-೬೭ — ೨೩-೪-೬೭) ನಡೆಯಿಸಿರುವುದು ಎಲ್ಲರಿಗೂ ಅಪರಿಮಿತವಾದ ಆನಂದಾನುಭವವನ್ನುಂಟುಮಾಡಿದೆ. ಜ್ಞಾನ ಪ್ರಸಾರವೇ ಪರಮೋದ್ದೇಶವನ್ನಾಗಿ ಇಟ್ಟುಕೊಂಡಿರುವ ನಮ್ಮ ಶ್ರೀ ಶ್ರೀಯವರ ಈ ತಿರುನಕ್ಷತ್ರೋತ್ಸವ ಸುಸಮಯದಲ್ಲಿ, ಅವರ ಗ್ರಂಥಗಳಲ್ಲೊಂದನ್ನು ಪ್ರಕಟಿಸುವುದು ಬಹಳ ಉಚಿತವೆಂದು ನಿರ್ವಾಹಕ ಸಮಿತಿಯವರಿಗೆ ಕಂಡು ಬಂದಿತು. ಶ್ರೀ ಶ್ರೀಯವರು ಸಮಿತಿಯವರ ಈ ಪ್ರಾರ್ಥನೆಯನ್ನು

ಮನ್ನಿಸಿ ಉಪನಿಷತ್ತಿನ ಸಾರವಾದ 'ತೈತ್ತಿರೀಯೋಪನಿಷತ್ತನ್ನು' ಕನ್ನಡ ಭಾಷೆಯಲ್ಲಿ ವ್ಯಾಖ್ಯಾನದೊಂದಿಗೆ ಪ್ರಕಟಿಸುವುದಕ್ಕೆ ಪರಮಕೃಪೆಯಿಂದ ಸಮ್ಮತಿಸಿ ಅನುಗ್ರಹಿಸಿರುತ್ತಾರೆ. ಇದೇ ರೀತಿ ಶ್ರೀ ಶ್ರೀಯವರಿಂದ ರಚಿತವಾಗಿ ಇನ್ನೂ ಅಮುದ್ರಿತವಾಗಿರುವ ಅನೇಕ ಸದ್ಗ್ರಂಥಗಳು ಪ್ರಕಟಿಸಲ್ಪಟ್ಟು, ಶಿಷ್ಯಾಭಿಮಾನಿಗಳ ಶ್ರೇಯಸ್ಸೂ ಅಭೀಷ್ಟಸಿದ್ಧಿಯೂ, ಸದಾ ಆಚಾರ್ಯ ಕಟಾಕ್ಷದಿಂದ ಅಭಿವೃದ್ಧಿ ಹೊಂದುತ್ತಿರಬೇಕೆಂಬುದೇ ನಮ್ಮ ಆಶಯ. ಶ್ರೀ ಶ್ರೀಯವರ ತಿರುವಡಿಗಳಲ್ಲಿ ನಮ್ಮೆಲ್ಲರ ಸಾಷ್ಟಾಂಗ ದಂಡವತ್ಪ್ರಣಾಮಗಳು.

ಈ ಗ್ರಂಥ ಪ್ರಕಟನೆಗಾಗಿ ಸಂಪೂರ್ಣಸಹಾಯ ಮಾಡಿರುವ ಪ್ರಕಾಶಕರಾದ "ಶ್ರೀ ಮಂಡಯಂ ಅಣ್ಣಾ ಧೊರೈ ಶ್ರೀನಿವಾಸೈಯಂಗಾರ್ಯ-ಯದುಗಿರಿಯಮ್ಮ ಟ್ರಸ್ಟ್" ಸಭೆಯ ಅಧಿಕಾರಿಗಳಿಗೆ ನಮ್ಮ ಸಮಿತಿಯವರ ಕೃತಜ್ಞತಾಪೂರ್ವಕವಾದ ವಂದನೆಯನ್ನು ಸಮರ್ಪಿಸುತ್ತೇನೆ.

ಈ ಪುಸ್ತಕದ ಕೊನೆಯಲ್ಲಿ ಕಂಡುಬರುವ, ಶ್ರೀ ಶ್ರೀಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಸುಲಭ ಶೈಲಿಯಲ್ಲಿ ಬರೆದುಕೊಟ್ಟಿರುವ ಶ್ರೀ ಮಂ. ಆಜಿ ನಾರಾಯಣೈಯಂಗಾರ್ಯ ಸ್ವಾಮಿಗಳವರ ಉಪಕಾರವು ಚಿರಸ್ಮರಣೀಯವಾಗಿದೆ. ಈ ಪುಸ್ತಕ ಮುದ್ರಣಕಾಲದಲ್ಲಿ ಶೋಧನಾಕಾರ್ಯವನ್ನು ವಹಿಸಿ ನಡೆಸಿಕೊಟ್ಟು ಉಪಕರಿಸಿದ ಶ್ರೀ ಉ.ವೆ. ವಿದ್ವಾನ್ ಪಂಡಿತ ರಾ. ಅ. ಕೃಷ್ಣಮಾಚಾರ್ಯ ಸ್ವಾಮಿಗಳವರಿಗೂ ವೇದ ವಿದ್ವಾನ್ ಮಂಡಯಂ ಒಕ್ಕರಣೆ ಸಂಪತ್ಕುಮಾರಾಚಾರ್ಯಸ್ವಾಮಿಗಳವರಿಗೂ ಹೃತ್ಪೂರ್ವಕ ಧನ್ಯವಾದವನ್ನು ಸಮರ್ಪಿಸುತ್ತೇನೆ.

ಈ ಪುಸ್ತಕವನ್ನು ಅಂದವಾದ ರೀತಿಯಲ್ಲಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಜ್ಯೂಪಿಟರ್ ಪ್ರೆಸ್ಸಿನ ಯಜಮಾನರಿಗೂ ಅಧಿಕಾರಿಗಳಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಆಸ್ತಿಕ ಮಹನೀಯರೆಲ್ಲರೂ ಅಧಿಕ ಸಂಖ್ಯೆಯಲ್ಲಿ ಈ ಪರಮ ಪವಿತ್ರ ಗ್ರಂಥವನ್ನು ಓದಿ ಸಂತೋಷಿಸಿ ಕೃತಾರ್ಥರಾಗಬೇಕೆಂಬುದೇ ನಮ್ಮ ಕೋರಿಕೆ.

ಬೆಂಗಳೂರು
೨೬-೨-೬೮

**ಮ. ಅ. ರಂಗಸ್ವಾಮಿ**
ತಿರುನಕ್ಷತ್ರ ನಿರ್ವಾಹಕ ಸಮಿತಿ
ಗೌ॥ ಕಾರ್ಯದರ್ಶಿ.

ಶ್ರೀಃ

# ವಿಷಯ ಸೂಚೀ.


1. ವಿಜ್ಞಾಪನೆ

2. ಅವತಾರಿಕೆ (i)...(viii)

3. ತೈತ್ತಿರೀಯೋಪನಿಷತ್

(I) ಶೀಕ್ಷಾವಲ್ಲೀ ೧–೬೧

(II) ಆನಂದವಲ್ಲೀ ೬೩–೧೧೯

(III) ಭೃಗುವಲ್ಲೀ ೧೧೭–೧೫೨

4. ಸಂಕ್ಷಿಪ್ತ ಜೀವನ ಚರಿತ್ರೆ ೧೫೩–೧೭೧

# ಶ್ರೀ ಶ್ರೀಯವರು ಅನುಗ್ರಹಿಸಿದ ಅವತಾರಿಕೆ

## ಶ್ರೀಮತೇ ರಾಮಾನುಜಾಯನಮಃ

ಋಗ್ಯಜುಸ್ಸಾಮವೇದಗಳಲ್ಲಿ ಯಜ್ಞಯಾಗಾದಿ ಕರ್ಮಗಳಲ್ಲಿ ಉಪಯುಕ್ತವಾದುದು ಯಜುರ್ವೇದ. ಇದು ಕೃಷ್ಣ, ಶುಕ್ಲವೆಂದು ಎರಡು ಭಾಗವಾಗಿದೆ. ಈ ಭಾಗಗಳಲ್ಲಿ ಕೃಷ್ಣವೇ ಪ್ರಾಚೀನವಾದುದು. ಶುಕ್ಲ ಯಜುರ್ವೇದದಲ್ಲಿ ಮುಖ್ಯವಾದುದು ವಾಜಸನೇಯ ಸಂಹಿತೆ. ಕೃಷ್ಣಯಜುರ್ವೇದದಲ್ಲಿ ಮುಖ್ಯವಾದುದು ತೈತ್ತಿರೀಯ ಸಂಹಿತೆ.

ಈ ಸಂಹಿತೆಯು ವೈಶಂಪಾಯನರ ಶಿಷ್ಯರಾದ ಯಾಜ್ಞವಲ್ಕ್ಯರು ವಮನ ಮಾಡಿದುದನ್ನು ಅವರ ಇತರ ಶಿಷ್ಯರು 'ತಿತ್ತಿರಿ' ಪಕ್ಷಿಯ ರೂಪದಲ್ಲಿ ಬಂದು ಸ್ವೀಕರಿಸಿ ಹೊರಗೆಡವಿದರಾದುದರಿಂದ ಈ ಸಂಹಿತೆಗೆ ತೈತ್ತಿರೀಯ ಸಂಹಿತೆಯೆಂದು ಹೆಸರಾಯಿತೆಂದು ಪ್ರತೀತಿ. ಯಾಜ್ಞವಲ್ಕ್ಯನು ವೈಶಂಪಾಯನ ಋಷಿಯ ಶಿಷ್ಯರಲ್ಲಿ ಅತಿಮೇಧಾವಿಯಾಗಿದ್ದು ಗುರುವಿನ ಉಪದೇಶವನ್ನು ಆಮೂಲಾಗ್ರ ಗ್ರಹಿಸಿ ತನ್ನ ಸ್ವಾಧೀನಪಡಿಸಿಕೊಂಡಿದ್ದನೆಂಬುದನ್ನು ಸ್ಪಷ್ಟಪಡಿಸುವುದೇ ಈ ಕಥೆಯ ಮುಖ್ಯ ತಾತ್ಪರ್ಯ ಆತನಿಗೆ ಗುರುವಿನ ಉಪದೇಶಗಳು ವಾಚೋ ವಿಧೇಯವಾಗಿದ್ದುದರಿಂದ ಆತನು ಅವನ್ನು (ವಮನಮಾಡಿ) ಹೊರಗೆಡುವ ಸಾಮರ್ಥ್ಯವುಳ್ಳವನಾದನು. ಹಾಗೇ ಅತನು ಹೊರಗೆಡವಿದುದುದನ್ನು ಆತನಿಗಿಂತ ಮಂದಮತಿಗಳಾದ ಆತನ ಸಹಾಧ್ಯಾಯಿಗಳು ಸ್ವೀಕರಿಸುವುದು ಅಂದರೆ ಗ್ರಹಿಸುವುದು, ಯುಕ್ತವಾಗಿಯೇ ಇದೆ. 'ವಮನ', ತಿತ್ತಿರಿಪಕ್ಷಿಗಳು, ಗ್ರಹಣ, ಇವುಗಳಿಂದ, ಈ ಉಪದೇಶಗಳನ್ನು ಗ್ರಹಿಸಬೇಕಾದರೆ, ಚಟುವಟಿಕೆ ಮತ್ತು ಸಾಮರ್ಥ್ಯವು ಅವಶ್ಯಕವೆಂಬುದು ವ್ಯಕ್ತಪಡುತ್ತದೆ. ಈ ಕಥಾಭಾಗವು ವಿಷ್ಣು ಪುರಾಣದಲ್ಲಿಯೂ (iii,5) ಮತ್ತು ಮಹಾಭಾರತದಲ್ಲಿಯೂ ಇರುವುದು.

ಈ ತೈತ್ತಿರೀಯ ಉಪನಿಷತ್ತು ತೈತ್ತಿರೀಯಾರಣ್ಯಕದ 7, 8, 9, ನೆಯ ಪ್ರಪಾಠಕಗಳಾದ, ಶೀಕ್ಷಾವಲ್ಲಿ, ಆನಂದವಲ್ಲಿ ಮತ್ತು ಭೃಗುವಲ್ಲಿಗಳಿಂದ ಕೂಡಿದುದು. ಈ ವಲ್ಲಿಗಳಲ್ಲಿ ಪ್ರತಿಯೊಂದರಲ್ಲಿಯೂ ಸಣ್ಣ ಸಣ್ಣ ಅನುವಾಕ

ಗಳಿವೆ. ಮೊದಲನೆಯ ವಲ್ಲಿಯಲ್ಲಿ (ಪ್ರಥಮ ಪ್ರಶ್ನ) ಅನುವಾಕಗಳು 12, ಎರಡನೆಯದರಲ್ಲಿ 9; ಮತ್ತು ಮೂರನೆಯದರಲ್ಲಿ ಹತ್ತು ; ಹೀಗೆ ಒಟ್ಟು ಮೂವತ್ತೊಂದು ಅನುವಾಕಗಳು ಈ ಉಪನಿಷತ್ತಿನಲ್ಲಿವೆ.

ಈ ಉಪನಿಷತ್ತಿನ ಎರಡನೆಯ ಭಾಗವಾದ ಆನಂದವಲ್ಲಿಯಲ್ಲಿರುವ, 'ಬ್ರಹ್ಮವಿದಾಪ್ನೋತಿ ಪರಂ', ಎಂಬುದರ ಅರ್ಥವನ್ನು ವಿವರಿಸುವುದೇ ಈ ಉಪನಿಷತ್ತಿನ ಮುಖ್ಯಕಾರ್ಯವೆನ್ನಬಹುದು. ಬ್ರಹ್ಮನನ್ನು ಉಪಾಸನೆ ಮಾಡುವವನು ಪರವನ್ನು ಹೊಂದುವನು. ಇಲ್ಲಿ ಪರಬ್ರಹ್ಮನಾದ ಶ್ರಿಮನ್ನಾರಾಯಣನೇ ತತ್ವ, ಆತನನ್ನು ಪರಮಪದವೆಂಬ ದೇಶವಿಶೇಷದಲ್ಲಿ ಹೊಂದಿ ಆತನ ಕಲ್ಯಾಣಗುಣಗಳನ್ನು ಅನುಭವಿಸುವುದೇ ಪುರುಷಾರ್ಥ. ಇದಕ್ಕೆ ಸಾಧನವಾದ ಉಪಾಸನೆಯೇ ಹಿತ. ಈ ಪರತತ್ವದ ಸ್ವರೂಪವನ್ನು ಚೆನ್ನಾಗಿ ತಿಳಿಯಪಡಿಸುವುದು ವೇದ, ಆದುದರಿಂದ ಈ ವೇದವನ್ನು ಸರಿಯಾಗಿ ಕಲಿತು, ಇದರ ಆರ್ಥವನ್ನು ನಿಸ್ಸಂದೇಹವಾಗಿ ಅರಿಯಬೇಕು. ಇದು ವೇದದ ಅಧ್ಯಯನ ಪ್ರವಚನಗಳಿಂದ ಸಾಧ್ಯ. ಗ್ರಂಥ ಪಾಠವನ್ನು ಸ್ವರ, ವರ್ಣ ವಿಪರ್ಯಾಸ ವಿಲ್ಲದಂತೆ ಮಾಡಬೇಕು. ಹಾಗೆಯೇ, ಪ್ರವಚನ ಮಾಡಬೇಕು. ಇಲ್ಲದಿದ್ದರೆ ವೇದವಾಕ್ಯಗಳ ಆರ್ಥವು ಮನಸ್ಸಿಗೆ ಬೇರೂರಿ ಬರುವುದಿಲ್ಲ. ಈ ರೀತಿ ಬಂದ ಅರ್ಥವು ಬೇರೂರಿ ಇರಬೇಕಾದರೆ ಧ್ಯಾನೋಪಾಸನೆಗಳನ್ನು ಮಾಡಲೇಬೇಕು. ಇದಕ್ಕೆ ತಕ್ಕಶರೀರೇಂದ್ರಿಯಗಳ ಯೋಗ್ಯತೆ, ಉಜ್ವಲ ವಾದ ಜ್ಞಾನ ಇವುಗಳು ಬೇಕು, ಹೀಗೆ 'ಬ್ರಹ್ಮವಿತ್' ಆಗಬೇಕಾದರೆ 'ಜಿಜ್ಞಾಸುವು' ಯಾವ ಯಾವ ಸಾಧನೆಗಳನ್ನು ಮಾಡಬೇಕೆಂಬುದನ್ನು ಶೀಕ್ಷಾವಲ್ಲಿಯು ವಿವರಿಸುತ್ತದೆ.

**ಆನಂದವಲ್ಲಿಯಲ್ಲಿ** ಮೊದಲು ಬ್ರಹ್ಮಶಬ್ದದ ಅರ್ಥವು ವಿವರಿಸಲ್ಪಟಿದೆ. ಬ್ರಹ್ಮನು ನಿರುಪಾಧಿಕ ಸತ್ತೆಯುಳ್ಳವನು ; ಸಂಕೋಚವಿಲ್ಲದ ಜ್ಞಾನ ವುಳ್ಳವನು. ದೇಶಕಾಲವಸ್ತುಗಳಿಂದ ಅಪರಿಚ್ಛೇದ್ಯನು, ಮತ್ತು ಅನಂತ ಕಲ್ಯಾಣ ಗುಣಪರಿಪೂರ್ಣನು. ಆದುದರಿಂದ ಆತನು ಜಡವಾದ ಪ್ರಕೃತಿ ಗಿಂತಲೂ, ಬದ್ಧ, ಮುಕ್ತ, ನಿತ್ಯರೆಂಬ ಚೇತನರಿಗಿಂತಲೂ ವಿಲಕ್ಷಣನು. ಇಂತಹ ಪರಬ್ರಹ್ಮನನ್ನು ಯಾರು ತನ್ನ ಹೃದಯದಲ್ಲಿ ಅಂತರ್ಯಾಮಿಯಾಗಿದ್ದು,

ನಿಯಾಮಕನೂ, ಸ್ವಾಮಿಯೂ ಆಗಿ ಇರುವನೆಂದು ಶುದ್ಧಮನಸ್ಕರಾಗಿ ಉಪಾಸನೆಮಾಡುವವನೋ, ಆತನು, ಆ ಪರಬ್ರಹ್ಮನನ್ನು ಶ್ರೀವೈಕುಂಠದಲ್ಲಿ ಆತನ ಕಲ್ಯಾಣಗುಣಗಳನ್ನು ನಿರಂತರ ಅನುಭವಿಸುತ್ತಿರುವನು. ಇಂತಹ ಪರಬ್ರಹ್ಮನೇ, ಆಕಾಶ. ವಾಯು. ಅಗ್ನಿ, ನೀರು, ಭೂಮಿ, ಸಸ್ಯ, ಆಹಾರ, ಅನ್ನರಸಮಯವಾದ ಸ್ಥೂಲಶರೀರ, ಇವುಗಳಿಗಲ್ಲಾ ಉಪಾದಾನಕಾರಣನು ಮತ್ತು ಅಂತರ್ಯಾಮಿಯು. ಆನಂದಮಯನಾದ ಈತನೇ ಅನ್ನಮಯ, ಪ್ರಾಣಮಯ, ಮನೋಮಯ, ಮತ್ತು ವಿಜ್ಞಾನಮಯ ಜೀವಾತ್ಮಗಳಿಗೆಲ್ಲಾ ಅಂತರಾತ್ಮನು. ಆನಂದಮಯ ಪರಬ್ರಹ್ಮನಿಗೆ ಆನಂದಮಯನಾದ ಪರಬ್ರಹ್ಮನೇ ಆತ್ಮನು. ಈ ಪರಬ್ರಹ್ಮನನ್ನು ಉಪಾಸನೆ ಮಾಡುವವನು ಪರಮ ಸುಖಿ. ಉಪಾಸನೆಮಾಡದವನು ಇರುವುದೂ ವ್ಯರ್ಥ.

ಮುಂದೆ ಈ ಪರಬ್ರಹ್ಮನ ಉಪಾಸನೆಯಿಂದ ಆಗುವ ಫಲವೇನೆಂಬುದನ್ನು ವಿವರಿಸಿದೆ. ಪರಬ್ರಹ್ಮೋಪಾಸಕನು (1) ಈ ಶರೀರವನ್ನು ಬಿಟ್ಟು 'ಪರಮವ್ಯೋಮ' ವೆಂದು ಹೇಳಲ್ಪಡುವ ವೈಕುಂಠ ಲೋಕವನ್ನು ಸೇರುವನೋ? ಅಥವಾ ಈ ಲೋಕದಲ್ಲೇ ಆ ಬ್ರಹ್ಮನನ್ನು ಅನುಭವಿಸವನೋ? ಅಥವಾ (2) ಈ ಶರೀರವನ್ನು ಬಿಟ್ಟು 'ಅರ್ಚಿರಾದಿ' ಮಾರ್ಗದಲ್ಲಿ ಹೋಗಿ ಬ್ರಹ್ಮನನ್ನು ಅನುಭವಿಸುವನೋ? ಅಥವಾ ಆ ಬ್ರಹ್ಮನಲ್ಲಿ ಐಕ್ಯನಾಗುವನೋ? ಈ ಪ್ರಶ್ನೆಗಳಿಗೆ ಸಮಾಧಾನ ಹೇಳುವ ಉದ್ದೇಶದಿಂದ ಮೊದಲು ಪರಮಾತ್ಮನಿಗೆ ಜಗತ್ಕಾರಣತ್ವವನ್ನು ಸ್ಥಾಪಿಸುತ್ತದೆ- ಚೇತನಾಚೇತನಾತ್ಮಕವಾದ ಈ ಜಗತ್ತಿಗೆ ಆ ಪರಬ್ರಹ್ಮನೇ ಉಪಾದಾನ ಮತ್ತು ನಿಮಿತ್ತಕಾರಣ. ಕಾರ್ಯವೂ ಆತನೇ; ಈ ಜಗತ್ತನ್ನು ಆತನೇ ತನ್ನ ಸಂಕಲ್ಪ ಮಾತ್ರದಿಂದ ಸೃಷ್ಟಿಸಿ, ಅದರೊಳಗೆ ಹೊಕ್ಕು, ಅದರ ಅಂತರ್ಯಾಮಿಯಾಗಿ ನಿಂತನು. 'ದೇವ' 'ಮನುಷ್ಯ' ಮೊದಲಾದ ಶಬ್ದಗಳು ಶರೀರಮಾತ್ರವಲ್ಲದೆ ಆ ಶರೀರದೊಳಗಿರುವ ಶರೀರಿಯನ್ನು (ಆತ್ಮನನ್ನು) ಹೇಳುವಂತೆ, ಚೇತನಾಚೇತನಾತ್ಮಕವಾದ ಈ ಪ್ರಪಂಚವನ್ನು ಹೊಕ್ಕಿರುವ ಪರಮಾತ್ಮನನ್ನು, ಚೇತನ-ಅಚೇತನ', ಸತ್ಯ-ಅನೃತ, ಶಬ್ದಗಳಿಂದ ವೇದಾಂತಗಳು ಕರೆಯುತ್ತವೆ. ಈ ಜಗತ್ಕಾರಣನಾದ ಬ್ರಹ್ಮನು ಆನಂದ ಸ್ವರೂಪನು. ಮತ್ತು

ಅನಂದಗುಣವುಳ್ಳವನು. ಆತನೇ ಉಪಾಸ್ಯನು. ಪ್ರಾಪ್ಯನೂ ಆತನೇ. ಸರ್ವವಿಧ ಆನಂದಕ್ಕೂ ಆತನೇ ಕಾರಣನು. ಯಾವಾತನು ಇಂದ್ರಿಯಗಳಿಗೆ ಅಗೋಚರನಾದ, ಶರೀರಕ್ಕಿಂತ ಬೇರೆಯಾದ, ಮುಕ್ತರಿಗಿಂತ ವಿಲಕ್ಷಣನಾದ ಈ ಪರಮಾತ್ಮನನ್ನು ನಿರಂತರ ಉಪಾಸನೆ ಮಾಡುವನೋ ಆತನು ಭಯವಿಲ್ಲದವನಾಗಿ ಇರುವನು. ಈ ಸ್ಮರಣೆಗೆ ವಿಚ್ಛೇದವಾದರೆ ಆತನಿಗೆ ಭಯವುಂಟಾಗುವುದು. ಬ್ರಹ್ಮಪ್ರಾಪ್ತಿಗೆ ಧ್ಯಾನೋಪಾಸನೆಗಳೇ ಮುಖ್ಯಸಾಧನ. ಇವು ಯಾವ ಅಡ್ಡಿಯೂ ಇಲ್ಲದೆ ಸುಗಮವಾಗಿ ನಡೆಯಲು ಮಿತ್ರರೇ ಮೊದಲಾದ ದೇವತೆಗಳನ್ನು ಗುರು ಶಿಷ್ಯರಿಬ್ಬರೂ ಸೇರಿ ಆದಿಯಲ್ಲಿ ಪ್ರಾರ್ಥಿಸುತ್ತಾರೆ. ಮಿತ್ರನು ಪ್ರಾಣಕ್ಕೂ ಹಗಲಿಗೂ ಅಧಿದೇವತೆ; ವರುಣನು ಅಪಾನಕ್ಕೂ ರಾತ್ರಿಗೂ ಅಧಿದೇವತೆ, ಅರ್ಯಮನು ಸೂರ್ಯನಿಗೆ ಮತ್ತೆ ಕಣ್ಣಿಗೆ; ಇಂದ್ರನು ಬಲಕ್ಕೆ ದೇಹಶಕ್ತಿಗೆ: ಬೃಹಸ್ಪತಿಯು ಜ್ಞಾನಕ್ಕೆ; ವಾಯುವೇಪ್ರತ್ಯಕ್ಷ ಬ್ರಹ್ಮ-ಎಲ್ಲ ವಸ್ತುಗಳಲ್ಲೂ ವ್ಯಾಪಿಸಿ, ಎಲ್ಲಕ್ಕೂ ಚೈತನ್ಯ ಕೊಡತಕ್ಕದು, ವೇದಾಧ್ಯಯನ ಮತ್ತು ಪ್ರವಚನಗಳು ಮಹತ್ಕಾರ್ಯ. ಈ ಕಾರ್ಯ ಗಳಿಗೂ, ಓಂಕಾರಾದಿ ಉಪಾಸನೆಗೂ, ದೇಹಶಕ್ತಿ, ಇಂದ್ರಿಯಬಲ, ಆರೋಗ್ಯ ಮತ್ತು ಬುದ್ಧಿ ಶಕ್ತಿಯು ಅವಶ್ಯಕವೆಂಬುದು ಇದರಿಂದ ಸೂಚಿತವಾಗಿದೆ.

ಈ ಪರಮಾತ್ಮನು ಮಹಾಮಹಿಮನು. ಈತನಿಗೆ ಭಯಪಟ್ಟು ಗಾಳಿಯು ಬೀಸುತ್ತದೆ, ಸೂರ್ಯನು ಉದಯಿಸುತ್ತಾನೆ ಅಗ್ನಿ ಇಂದ್ರಾದಿ ದೇವತೆಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಾರೆ, ಯಮನು ಭಯದಿಂದ ಓಡಿ ಹೋಗುತ್ತಾನೆ. ಇಂತಹ ಸೂರ್ಯ, ಅಗ್ನಿ, ಇಂದ್ರಾದಿದೇವತೆಗಳ ಪದವಿಯನ್ನು ಕೋರುವುದು ಅಧಃ ಪತನಕ್ಕೂ ದುಃಖಕ್ಕೂ ಕಾರಣ. ಆ ಪರಬ್ರಹ್ಮವನ್ನು ಸೇರಲು ಅಪೇಕ್ಷಿಸಿ ಆತನನ್ನು ಯೊಂದಿದರೆ ನಿರ್ಭಯ; ಶಾಶ್ವತ ಪದವಿ ಬರುತ್ತದೆ.

ಆ ಪರಮಾತ್ಮನು ನಿರತಿಶಯ ಆನಂದವುಳ್ಳವನು. ಮನುಷ್ಯ ಆನಂದವು ಮುಕ್ತನ ಆನಂದದಲ್ಲಿ ಒಂದು ಭಾಗ, ಸಂಸಾರಿಕ ಭೋಗವನ್ನು ಬಿಟ್ಟ ಬ್ರಹ್ಮನಿಷ್ಠನ ಆನಂದವು, ಮನುಷ್ಯರಲ್ಲಿ ಅಂತರ್ಧಾನ ಶಕ್ತಿಯನ್ನು ಪಡೆದವರ, ಅಂತರಿಕ್ಷದಲ್ಲಿರುವ ದೇವಗಂಧರ್ವರ, ಪಿತೃದೇವತೆ

ಗಳ, ಸ್ಮಾರ್ತಕರ್ಮದಿಂದ ಹುಟ್ಟಿದ ದೇವತೆಗಳ, ಅಗ್ನಿಹೋತ್ರಾದಿಗಳಿಂದ ದೇವತೆಗಳ ಸಾಮ್ಯವನ್ನು ಪಡೆದವರ, ವಸುರುದ್ರಾದಿ ಸ್ವಾಭಾವಿಕ ದೇವತೆಗಳ ಅವರ ಅಧಿಪತಿಯಾದ ಇಂದ್ರನ, ಗುರುವಾದಬೃಹಸ್ಪತಿಯ, ಇವರೆಲ್ಲರಿಗೂ ಮೇಲಾದ ಪ್ರಜಾಪತಿಯ ಆನಂದಕ್ಕಿಂತ ಅಪರಿಮಿತವಾದುದು. ಆದ್ದರಿಂದ ಆ ಮಹಾಮಹಿಮನಾದ ಪರಮಾತ್ಮನನ್ನೇ ಉಪಾಸನೆ ಮಾಡಬೇಕು. ಯಾವಾತನು ಚೇತನಾ ಚೇತನಗಳನ್ನು ಶರೀರವನ್ನಾಗಿ ಮಾಡಿಕೊಂಡಿರುವವನಾಗಿ, ಆದಿತ್ಯ ಮಂಡಲ ಮಧ್ಯದಲ್ಲಿರುವ ಪುಂಡರೀಕಾಕ್ಷನನ್ನಾಗಿ, ಸತ್ಯಜ್ಞಾನಾನಂತರೂಪನನ್ನಾಗಿ, ಧ್ಯಾನ ಮಾಡುವನೋ ಆತನು ಈ ಲೋಕವನ್ನು ಬಿಟ್ಟು ಅರ್ಚಿರಾದಿ ಮಾರ್ಗವಾಗಿ, ಅನ್ನ, ಪ್ರಾಣ, ಮನಸ್ಸ, ವಿಜ್ಞಾನ, 'ಆನಂದ ಮಯನಾದ ಪರಮಾತ್ಮನನ್ನು ಅಂದರೆ ಸಮಷ್ಟಿ ವ್ಯಷ್ಟಿ ವಿಭೂತಿಯುಳ್ಳ, ನಿರತಿಶಯಾನಂದಮಯನಾಗಿ ಭೋಗ್ಯವಾಗಿರುವ ಪರಮಾತ್ಮನನ್ನು ಅನುಭವಿಸುತ್ತಾನಲ್ಲದೆ ಆತನೊಡನೆ ಐಕ್ಯನಾಗುವುದಿಲ್ಲ. ಹೀಗೆ ನಿರತಿಶಯವಾದ ಈ ಬ್ರಹ್ಮಾನಂದವು ಅಪರಿಚ್ಛಿನ್ನವಾದುದೆಂದು ಯಾವಾತನು ಅನುಭವಿಸುತ್ತಾನೋ ಆತನಿಗೆ ಭಯವಿಲ್ಲ. ಆ ಬ್ರಹ್ಮಜ್ಞಾನಿಯನ್ನು, 'ನಾನು ಒಳ್ಳೆಯ ಕೆಲಸವನ್ನು ಮಾಡಲಿಲ್ಲವೇನೋ. ಪಾಪಕೃತ್ಯವನ್ನು ಮಾಡಿದನೇನೋ", ಎಂಬ ಶಂಕೆಗಳು ಭಾಧಿಸುವುದಿಲ್ಲ. ಬ್ರಹ್ಮಜ್ಞಾನದ ಮಾಹಾತ್ಮ್ಯವನ್ನರಿತವನನ್ನು ಪುಣ್ಯಪಾಪಗಳೆರಡೂ ಏನನ್ನೂ ಮಾಡಲಾರವು.

ಮೂರನೆಯದಾದ ಭೃಗುವಲ್ಲಿಯು ಮೇಲೆ ಹೇಳಿದ ಬ್ರಹ್ಮನ ಸ್ವರೂಪವನ್ನು ಬೇರೆ ರೀತಿಯಲ್ಲಿ ಹೇಳಿ, ಆ ಬ್ರಹ್ಮನನ್ನು ತಿಳಿಯಬೇಕಾದರೆ ತಪಸ್ಸಿನಿಂದ ಪಾಪಗಳನ್ನೆಲ್ಲಾ ಕಳೆದುಕೊಂಡು, ನಿಷ್ಕಲ್ಮಷವಾದ ಅಂತಃಕರಣವುಳ್ಳವನಾಗಬೇಕೆಂಬುದನ್ನು ತಿಳಿಯಪಡಿಸುತ್ತದೆ.

ಭೃಗುವು ತನ್ನ ತಂದೆಯಾದ ವರುಣನಲ್ಲಿ ಹೋಗಿ ಬ್ರಹ್ಮಜ್ಞಾನವನ್ನು ಉಪದೇಶಿಸುವಂತೆ ಕೇಳಿಕೊಳ್ಳುವನು. ವರುಣನು, ಮಗನಿಗೆ, ಅನ್ನಪ್ರಾಣ ಕಣ್ಣು, ಕಿವಿ, ವಾಕ್ಕು, ಬ್ರಹ್ಮವೆಂದು ಹೇಳುವನು. ಆದರೆ, ಭೃಗುವು ಇವುಗಳೆಲ್ಲಾ ಒಟ್ಟಿಗೆ ಬ್ರಹ್ಮವೋ, ಅಥವಾ, ಒಂದು ಮಾತ್ರ ಬ್ರಹ್ಮವೋ ಎಂದು ಸಂದೇಹ ಪಟ್ಟು ಮತ್ತೆ ಮತ್ತೆ ತಂದೆಯಲ್ಲಿ ಹೋಗಿ ಪ್ರಶ್ನಿಸುವನು.

ಅದಕ್ಕೆ ವರುಣನು ಈ ಪ್ರಾಣಿಗಳು ಯಾವನಿಂದ ಹುಟ್ಟುವುವೋ, ಯಾವನಿಂದ ಬದುಕುವುವೋ ಮತ್ತು ನಾಶವಾಗಿ ಯಾವನಲ್ಲಿ ಸೇರುವುವೋ, ಅದನ್ನು ಬ್ರಹ್ಮ ವೆಂದು ತಿಳಿದುಕೊಳ್ಳಬೇಕೆಂದು ಉಪದೇಶಿಸುವನು. ಭೃಗುವು, ಮೊದಲು ಸ್ಥೂಲದೇಹಕ್ಕೆ ಕಾರಣಭೂತವಾದ ಪಂಚಭೂತಗಳನ್ನೇ (ಅನ್ನ) ಬ್ರಹ್ಮ ವೆಂದು ತಿಳಿದುಕೊಂಡನು. ಆದರೆ ಅದರಿಂದ ಆತನು ತೃಪ್ತಿ ಹೊಂದಲಿಲ್ಲ. ಮತ್ತೆ ಮತ್ತೆ ತಪಸ್ಸುಮಾಡಿ, ಪ್ರಾಣ; ನಂತರ, ಮನಸ್ಸು; ನಂತರ ವಿಜ್ಞಾನ, ಇವು ಗಳನ್ನು ಬ್ರಹ್ಮವೆಂದು ತಿಳಿದೂ ತೃಪ್ತನಾಗದೆ ಕೊನೆಯಲ್ಲಿ ಆನಂದಮಯನೇ ಬ್ರಹ್ಮನೆಂದು ಅರಿತನು. ತನ್ನ ತಂದೆಯು ಹೇಳಿದ ಲಕ್ಷಣವು ಅಲ್ಲಿ ಸರಿ ಯಾಗಿ ಸಮನ್ವಯವಾಗುವುದೆಂದು ನಿರ್ಧರಿಸಿದನು. (ಇದೇ ಭಾರ್ಗವೀ ವಾರುಣೀ ವಿದ್ಯೆ). ವರುಣ ಪುತ್ರನಾದ ಭೃಗುವು ತಪಃ ಫಲ ರೂಪವಾಗಿ ಕಂಡು ಹಿಡಿದ ಪರಮವಿದ್ಯೆ. ಇದನ್ನು ಅರಿತವನು ಸ್ಥಿರ ಬುದ್ಧಿಯುಳ್ಳ ವನಾಗಿ ಶಾಶ್ವತ ಪದವನ್ನೇ ಹೊಂದುವನು. ಈತನೇ ಬ್ರಹ್ಮಜ್ಞಾನಿಯು, ಬ್ರಹ್ಮನನ್ನು ಅನುಭವಿಸತಕ್ಕವನು, ಈತನು ಅನ್ನ ಪಶು, ಪುತ್ರ, ಬ್ರಹ್ಮ ತೇಜಸ್ಸುಗಳನ್ನು ಪಡೆದು ಕೀರ್ತಿವಂತನಾಗಿ ಮಹಾತ್ಮನೆನಿಸಿಕೊಳ್ಳುವನು

ಕೊನೆಯಲ್ಲಿ, ಅನ್ನವೇ ಎಲ್ಲಕ್ಕೂ ಆಧಾರವಾದುದರಿಂದ ಅನ್ನದ ಮತ್ತು ಅನ್ನದಾನದ ಪ್ರಶಂಸೆಮಾಡಿ. ಪುರುಷನಲ್ಲಿಯೂ, ಆದಿತ್ಯನಲ್ಲಿಯೂ, ಇರುವ ಬ್ರಹ್ಮವು ಒಂದೇ ಎಂಬುದನ್ನು ವಿಶದಪಡಿಸಿ, ಯಾರು ಈ ರೀತಿ ಅರಿತು ಕೊಳ್ಳುವರೋ ಅವರು ಬ್ರಹ್ಮಾನಂದವನ್ನು ಅನುಭವಿಸುತ್ತಾರೆಂದು ತಿಳಿಸಿ, ಈ ಉಪನಿಷತ್ತು ಶಾಂತಿಪಾಠದೊಡನೆ ಮುಕ್ತಾಯಗೊಳ್ಳುವುದು. ಒಂದು ದೃಷ್ಟಿಯಿಂದ ಶರೀರವು ಅನ್ನ-ಪ್ರಾಣವು ಅನ್ನಾದ, ಮತ್ತೊಂದು ದೃಷ್ಟಿಯಿಂದ ಪ್ರಾಣವು ಅನ್ನ-ಶರೀರವು ಅನ್ನಾದ, ಹೀಗೆ ಆಪಃ-ಜ್ಯೋತಿಸ್ಸು, ಪೃಥಿವೀ-ಆಕಾಶ. ಈ ರೀತಿಯ ಉಪಾಸನೆಯಿಂದಲೂ, ಅನ್ನವಸತಿಗಳ ದಾನ ದಿಂದಲೂ ಉಪಾಸಕನು, ಪುರುಷನಲ್ಲಿಯೂ, ಆದಿತ್ಯನಲ್ಲಿಯೂ ಇರುವ 'ಬ್ರಹ್ಮದಜ್ಞಾನವನ್ನು ಪಡೆದು ಈ ಲೋಕದಿಂದ ಅರ್ಚಿರಾದಿಮಾರ್ಗವಾಗಿ ಹೊರಟು, ಅನ್ನ, ಪ್ರಾಣ, ಮನಸ್ಸು. ವಿಜ್ಞಾನ, ಆನಂದ, ಮಯನಾದ ಪರಮಾತ್ಮನನ್ನು ಅನುಭವಿಸಿ, ಆತನ ಕಲ್ಯಾಣಗುಣಗಳನ್ನು ಅನುಭವಿಸುತ್ತಾ

ಸಂಕಲ್ಪಮಾತ್ರದಿಂದುಂಟಾದ ರೂಪವುಳ್ಳವನಾಗಿ, ಪರಮಾತ್ಮನ ದಾಸನಾಗಿ ಸಂಚರಿಸುತ್ತ ಸಾಮಗಾನವಮಾಡುತ್ತಿರುವನು. ನಮ್ಮ ಶರೀರದಲ್ಲಿರುವ ಅಂತರ್ಯಾಮಿಯಾದ ಪರಮಾತ್ಮನೇ ಭೋಕ್ತಾ (ಅನ್ನಾದ), ಭೋಗ್ಯ (ಅನ್ನ) ಆತನು ಭೋಕ್ತೃವಾದ ಚೇತನ, ಮತ್ತು ಭೋಗ್ಯವಾದ ಅ ಚೇತನ ವಸ್ತುಗಳನ್ನು ವ್ಯಾಪಿಸಿರುವನು. ಆತನೇ ಸೃಷ್ಟಿ ಸಂಹಾರ ಕರ್ತನು. ಆತನನ್ನು ಸೇರಿ ಆತನ ಕೈಂಕರ್ಯ ನಿರತನಾಗಿರುವುದೇ ಪರಮಪುರುಷಾರ್ಥ.

ಇತರ ಉಪನಿಷತ್ತುಗಳಲ್ಲಿ ಹೇಳದ ಕೆಲವು ಅಪೂರ್ವ ವಿಷಯಗಳು ಇದರಲ್ಲಿವೆ. ಮೊದಲನೆಯದಾಗಿ, ವೇದಾಧ್ಯಯನ ಪ್ರವಚನಗಳೆರಡೂ ಅವಶ್ಯವೆಂದೂ ಗುರುಶಿಷ್ಯರಿಬ್ಬರೂ ಸೇರಿ ಈ ಕಾರ್ಯವನ್ನು ಸಾಧಿಸುವುದೇ ಸರಿಯಾದ ಮಾರ್ಗವೆಂದೂ, ಕೇವಲ ಜ್ಞಾನಾರ್ಜನೆಮಾತ್ರ ಸಾಲದು ಸಮಾಜ ಸೇವೆಯೂ ಆವಶ್ಯಕವೆಂದೂ, ಮತ್ತು ಅಂತೇ ವಾಸಿಯು ಆಶ್ರಮದಲ್ಲಿ ಯಾವ ರೀತಿ ಇರಬೇಕು ಮತ್ತು ವಿದ್ಯಾಭ್ಯಾಸವಾದಮೇಲೆ ಆಶ್ರಮವನ್ನು ಬಿಟ್ಟು ಗೃಹಸ್ಥಾಶ್ರಮವನ್ನು ಅಂಗೀಕರಿಸಿ ಲೋಕಕಲ್ಯಾಣಕ್ಕಾಗಿ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನೂ ಅತ್ಯುತ್ತಮ ರೀತಿಯಲ್ಲಿ ವಿಶದಪಡಿಸಿದೆ. ಎರಡನೆಯದಾಗಿ-ಪ್ರತಿ ಮನುಷ್ಯನಲ್ಲೂ, ಅನ್ನಮಯ ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ, ಒಂದಕ್ಕಿಂತ ಒಂದು ಸೂಕ್ಷ್ಮವಾದ, ಐದುಕೋಶಗಳಿರುವುವೆಂದೂ, ಇವುಗಳೆಲ್ಲಕ್ಕೂ ಆನಂದಮಯನಾದ ಪರಬ್ರಹ್ಮನೇ ಅಂತರಾತ್ಮನೆಂದು ಭಾವಿಸಿ ಉಪಾಸನೆಮಾಡಿದರೆ ಉಪಾಸಕನು ನಿರ್ಭಯನಾಗಿ ನಿರತಿಶಯಾನಂದವನ್ನನುಭವಿಸುವನೆಂಬುದನ್ನು ಆಶ್ಚರ್ಯಕರವಾಗಿ ವಿವರಿಸಿದೆ. ಭೃಗುವಲ್ಲಿಯಲ್ಲೂ, ವರುಣನು ಉಪದೇಶಿಸಿದ ಬ್ರಹ್ಮಲಕ್ಷಣವು, ಅನ್ನ, ಪ್ರಾಣ, ಮನಸ್ಸು, ವಿಜ್ಞಾನಗಳಲ್ಲಿ ಪೂರ್ಣವಾಗಿಲ್ಲವೆಂದೂ, ಆನಂದದಲ್ಲೇ ಸಮನ್ವಯವಾಗುವುದೆಂದು ವ್ಯಕ್ತಪಡಿಸಿದ. ಆದ್ದರಿಂದ ಆನಂದಮಯನೇ ಬ್ರಹ್ಮನೆಂದು ಅರಿವುದು-ಇದೇ ಭಾರ್ಗವೀ ವಾರುಣೀ ವಿದ್ಯೆ. ಯಾವಾತನು ಹೀಗೆ ತಿಳಿಯುತ್ತಾನೋ ಆತನು ಸ್ಥಿರಬುದ್ಧಿಯುಳ್ಳವನಾಗಿ ಶಾಶ್ವತಸ್ಥಾನದಲ್ಲಿ ನಿಲ್ಲುವನು ಆತನೇ ಬ್ರಹ್ಮಜ್ಞಾನಿಯು. ಆ ಬ್ರಹ್ಮ ವರ್ಚಸ್ಸಿನಿಂದ ಕೂಡಿ ಸತ್ಸಂತಾನಾದಿ ಸಕಲ ಸೌಭಾಗ್ಯವನ್ನು ಪಡೆದು ಕೀರ್ತಿಹೊಂದಿ ಮಹಾತ್ಮನೆನಿಸಿಕೊಳ್ಳುವನು.

ಮೂರನೆಯದಾಗಿ, ಆಶ್ರಮಕ್ಕೆ ಬಂದವರನ್ನು ಚೆನ್ನಾಗಿ ಸತ್ಕರಿಸಬೇಕು ಬಂದವರಾರನ್ನೂ ಹೊರಗಟ್ಟಬಾರದು. ದಾನ ಮತ್ತು ಅತಿಥಿ ಸತ್ಕಾರ ಮುಖ್ಯ ಧರ್ಮ, ಇವುಗಳನ್ನು ಪರಿಪಾಲಿಸಲು ಎಷ್ಟುಬೇಕಾದರೂ ಸಂಪಾದಿಸಬಹುದು. ಆದಷ್ಟು ಶ್ರೋತೃಗಳನ್ನು ಆಕರ್ಷಿಸಿ, ಸನಾತನಧರ್ಮ, ಉಪನಿಷತ್ತತ್ತ್ವಗಳು ಹಬ್ಬಿ ಬೆಳಗುವಂತೆ ಮಾಡಬೇಕು. ಅನ್ನವು ಬ್ರಹ್ಮ; ಬ್ರಹ್ಮಾರ್ಜನೆಗೆ ಬರುವವರನ್ನು ಹೊರಗಟ್ಟಬಾರದು. ಅವರಿಗೆ ಹಿತವನ್ನು ಬಯಸಿ ಬೋಧಿಸಿ, ತತ್ತ್ವವು ಬೆಳಗಿ, ಎಲ್ಲೆಲ್ಲೂ ಪ್ರಸರಿಸಿ ಶಾಶ್ವತವಾಗಿರುವಂತೆ ಮಾಡುವುದು ಧರ್ಮ, ಕರ್ತವ್ಯ.

ಈ ರೀತಿ ತತ್ತ್ವ ಹಿತ ಪುರುಷಾರ್ಥ ಸ್ವರೂಪಗಳನ್ನು ಬೋಧಿಸುವ ಮತ್ತು ಇನ್ನೂ ಅಪೂರ್ವ ವಿಷಯಗಳನ್ನು ಪ್ರತಿಪಾದಿಸಿರುವ ಈ ಪ್ರಾಚೀನ ಉಪನಿಷದ್ಗ್ರಂಥವನ್ನು ಎಲ್ಲರೂ ಅರ್ಥದೊಡನೆ ಓದಿ ಕೃತಾರ್ಥರಾಗಬೇಕೆಂಬುದೇ ನಮ್ಮ ಆಶಯ.

ಶ್ರೀ ಯತಿರಾಜಃ

ಶ್ರೀಃ

# ತೈತ್ತಿರೀಯೋಪನಿಷತ್

(I)

## (ಶೀಕ್ಷಾವಲ್ಲೀ.)

ಶ್ರೀರಸ್ತು

ಶ್ರೀಮತೇ ರಾಮಾನುಜಾಯ ನಮಃ

# ತೈತ್ತಿರೀಯೋಪನಿಷತ್

## ೧ ಶೀಕ್ಷಾವಲ್ಲೀ

### ಮೊದಲನೆಯ ಅನುವಾಕ

ಹರಿಃ ಓಂ

**ಮೂಲ ಮಂತ್ರ :—** ಶನ್ನೋಮಿತ್ರಃ ಶಂ ವರುಣಃ । ಶಂ ನೋ
ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಃ । ಶಂ
ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ ।
ನಮಸ್ತೇವಾಯೋ । ತ್ವ ಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।
ತ್ವಾ ಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ । ಋತಂ
ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು ।
ತದ್ವಕ್ತಾ ರ ಮವತು । ಅವತು ಮಾಂ । ಅವತು
ವಕ್ತಾರಂ ॥ ಓಂ ಶಾಂತಿಃ ಶಾಂತಿಃ ಶಾಂತಿಃ

ಬ್ರಹ್ಮವಿದ್ಯೆಯವನ್ನು ಆರಂಭಿಸುವುದಕ್ಕೆ ಅಡ್ಡಿಮಾಡತಕ್ಕ ವಿಘ್ನಗಳು ಪರಿಹಾರವಾಗಲೆಂದು ದೇವತೆಗಳನ್ನು ಪ್ರಾರ್ಥನೆ ಮಾಡತಕ್ಕದ್ದೆಂದು ಈ ಶಾಂತಿಮಂತ್ರಗಳು ತಿಳಿಯಪಡಿಸುತ್ತವೆ.

**ಪ್ರತಿಪದಾರ್ಥ—**ಮಿತ್ರಃ-ಪ್ರಾಣಗಳನ್ನು ಕಿರಣಗಳ ಮೂಲಕ ಪೋಷಿಸತಕ್ಕ ಸೂರ್ಯನು, ನಃ-ನಮಗೆ, ಶಂ ಭವತು-ಸುಖವನ್ನು ಕೊಡತಕ್ಕವನಾಗಲಿ.

ವರುಣಃ–ಅಪಾನ ವೃತ್ತಿಗೆ ಅಭಿಮಾನಿಯಾದ ವರುಣನು, ಶಂ ಭವತು–ಸುಖ ಪ್ರದನಾಗಲಿ. ಅರ್ಯಮಾ–ಚಕ್ಷುರಿಂದ್ರಿಯ ಅಭಿಮಾನಿಯಾದ ಅರ್ಯಮನು. ನಃ–ನಮಗೆ, ಶಂಭವತು–ಸುಖಪ್ರದನಾಗಲಿ. ಬೃಹಸ್ಪತಿಃ–ವಾಕ್ಕಿಗೆ ಅಭಿಮಾನಿ ಯಾದ ಬೃಹಸ್ಪತಿಯು, ನಃ–ನಮಗೆ, ಶಂಭವತು–ಸುಖಪ್ರದನಾಗಲಿ. ಉರುಕ್ರಮಃ–ಎಲ್ಲಾ ಕಡೆಯಲ್ಲೂ ವ್ಯಾಪಿಸಿರುವ, ವಿಷ್ಣುಃ–ವಿಷ್ಣುವು, ನಃ-ನಮಗೆ, ಶಂ ಭವತು-ಸುಖಪ್ರದನಾಗಲಿ. ಬ್ರಹ್ಮಣೇ-ವೇದಕ್ಕೆ, ನಮಃ–ನಮಸ್ಕಾರ, ವಾಯೋ–ಪ್ರಾಣಾ ಪಾನಾದಿಗಳ ಮೂಲಕ ಶರೀರವನ್ನು ಧರಿಸಿ, ವೇದಾಕ್ಷರಗಳನ್ನು ಪ್ರಕಾಶಪಡಿಸುವ ವಾಯುವೇ. ತೇ–ನಿನಗೆ, ನಮಃ–ನಮಸ್ಕಾರ. ತ್ವಂ ಏವ–ನೀನೇ, ಪ್ರತ್ಯಕ್ಷಂ–ಕಣ್ಣಿಗೆ ಕಾಣಿಸತಕ್ಕ, ಬ್ರಹ್ಮ-ಜಗತ್ತನ್ನು ಕಾಪಾಡತಕ್ಕ ದೊಡ್ಡಗುಣವುಳ್ಳವನಾಗಿ, ಅಸಿ–ಇದ್ದೀಯೆ. ತ್ವಾಮೇವ–ನಿನ್ನನ್ನೇ, ಪ್ರತ್ಯಕ್ಷಂ ಬ್ರಹ್ಮ–ಪ್ರತ್ಯಕ್ಷವಾದ ವೇದವನ್ನಾಗಿ, ವದಿಷ್ಯಾಮಿ-ಹೇಳುವೆನು. ಋತಂ–ಸ್ವರವನ್ನೂ ಅಕ್ಷರವನ್ನೂ ತಪ್ಪಾಗದಂತೆ, ವದಿಷ್ಯಾಮಿ-ಹೇಳುವೆನು. ಸತ್ಯಂ–ನಿಜವನ್ನೂ, ವದಿಷ್ಯಾಮಿ–ಹೇಳುವೆನು. ತತ್-ಆವೇದವೆಂಬ ಬ್ರಹ್ಮವು, ಮಾಂ ಅವತು–ನನ್ನನ್ನು ಕಾಪಾಡಲಿ. ತತ್–ಅದು, ವಕ್ತಾರಂ–ಆ ವೇದವನ್ನು ಹೇಳಿಕೊಡುವ ಗುರುವನ್ನು, ಅವತು–ಕಾಪಾಡಲಿ. ಓಂ ಶಾಂತಿಃ ಶಾಂತಿಃ ಶಾಂತಿಃ

## ವಾಕ್ಯಗಳನ್ನು ಅನುಸರಿಸಿ ಅರ್ಥ

| | |
|---|---|
| ೧) ಮಿತ್ರಃ ನಃ ಶಂ ಭವತು. | ೧) ಪ್ರಾಣಗಳನ್ನು ಕಿರಣಗಳ ಮೂಲಕ ಪೋಷಿಸತಕ್ಕ ಸೂರ್ಯನು ನಮಗೆ ಸುಖವನ್ನು ಕೊಡತಕ್ಕವನಾಗಲಿ. |
| ೨) ವರುಣಃ ಶಂ ಭವತು. | ೨) ಅಪಾನ ವೃತ್ತಿಗೆ ಅಭಿಮಾನಿಯಾದವರುಣನು ಸುಖಪ್ರದನಾಗಲಿ |
| ೩) ಅರ್ಯಮಾ ನಃ ಶಂ ಭವತು. | ೩) ಚಕ್ಷುರಿಂದ್ರಿಯ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |

| | |
|---|---|
| ೪) ಇಂದ್ರಃ ನಃ ಶಂ ಭವತು. | ೪) ಬಲಕ್ಕೆ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |
| ೫) ಬೃಹಸ್ಪತಿಃ ನಃ ಶಂ ಭವತು. | ೫) ವಾಕ್ಕಿಗೆ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |
| ೬) ಉರುಕ್ರಮಃ ವಿಷ್ಣುಃ ನಃ ಶಂ ಭವತು. | ೬) ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ ವಿಷ್ಣುವು ನಮಗೆ ಸುಖಪ್ರದನಾಗಲಿ |
| ೭) ಬ್ರಹ್ಮಣೇ ನಮಃ | ೭) ವೇದಕ್ಕೆ ನಮಸ್ಕಾರವು. |
| ೮) ವಾಯೋ ತೇ ನಮಃ | ೮) ಪ್ರಾಣಾಪಾನಾದಿಗಳ ಶರೀರವನ್ನು ಧರಿಸಿ ವೇದಾಕ್ಷರಗಳನ್ನು ಪ್ರಕಾಶಪಡಿಸುವ, ವಾಯುವೇ ನಿನಗೆ ನಮಸ್ಕಾರವು. |
| ೯) ತ್ವಮೇವ ಪ್ರತ್ಯಕ್ಷಂ ಬ್ರಹ್ಮ ಅಸಿ. | ೯) ನೀನೇ ಕಣ್ಣಿಗೆ ಕಾಣಿಸತಕ್ಕ ಜಗತ್ತನ್ನು ಕೊಡತಕ್ಕ ದೊಡ್ಡ ಗುಣವುಳ್ಳವನು ಆಗಿದ್ದೀಯೆ. |
| ೧೦) ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ. | ೧೦) ನಿನ್ನನ್ನೇ ಪ್ರತ್ಯಕ್ಷವಾದ ವೇದವನ್ನಾಗಿ ಹೇಳುವೆನು |
| ೧೧) ಋತಂ ವದಿಷ್ಯಾಮಿ. | ೧೧) ಸ್ವರವನ್ನೂ ಅಕ್ಷರವನ್ನೂ ತಪ್ಪಾಗದಂತೆ ಹೇಳುವೆನು. |
| ೧೨) ಸತ್ಯಂ ವದಿಷ್ಯಾಮಿ. | ೧೨) ನಿಜವನ್ನು ಹೇಳುವೆನು |
| ೧೩) ತತ್ ಮಾಂ ಅವತು. | ೧೩) ಆ ವೇದವೆಂಬ ಬ್ರಹ್ಮವು ನನ್ನನ್ನು ಕಾಪಾಡಲಿ. |

೧೪) ತತ್ ವಕ್ತಾರಂ ಅವತು. ೧೪) ಅದು ವೇದವನ್ನು ಹೇಳತಕ್ಕ ಗುರುವನ್ನು ಕಾಪಡಲಿ.

೧೫) ಓಂ ಶಾಂತಿಃ ಶಾಂತಿಃ ಶಾಂತಿಃ ! ೧೫) ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ವಿಘ್ನಗಳಿಗೆಲ್ಲಾ ನಾಶವುಂಟಾಗಲಿ

ಭಾವ—ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ವಿಘ್ನಗಳಿಗೆಲ್ಲಾ ನಾಶವುಂಟಾಗಲಿ.

## ೨ನೆಯ ಅನುವಾಕ

**ಮೂಲ ಮಂತ್ರ :—ಶೀಕ್ಷಾಂ ವ್ಯಾಖ್ಯಾಸ್ಯಾಮಃ । ವರ್ಣಃ**

**ಸ್ವರಃ । ಮಾತ್ರಾಬಲಂ । ಸಾಮ ಸಂತಾನಃ । ಇತ್ಯುಕ್ತಃ**

**ಶೀಕ್ಷಾಧ್ಯಾಯಃ ॥**

ಉಪನಿಷತ್ತುಗಳನ್ನು ಕಲಿಯತಕ್ಕವರಿಗೆ ಸ್ವರವರ್ಣಗಳು ವ್ಯತ್ಯಾಸವಾಗದಿರುವುದಕ್ಕಾಗಿ ವೇದಕ್ಕೆ ಅಂಗವಾದ ಶಿಕ್ಷೆಯು ಹೇಳಲ್ಪಡುತ್ತದೆ.

**ಅರ್ಥ** :—ಶೀಕ್ಷಾಂ-ವೇದಕ್ಕೆ ಉಪಕಾರ ಮಾಡತಕ್ಕ ವೇದಾಂಗವಾದ ಶಿಕ್ಷೆಯನ್ನು, ವ್ಯಾಖ್ಯಾಸ್ಯಾಮಃ-(ಕ್ರಮವನ್ನು) ವಿವರಿಸುವೆವು. ವರ್ಣಃ-ಅಕಾರ ಮೊದಲಾದ ಅಕ್ಷರಗಳೂ ಸ್ವರಃ-ಉದಾತ್ತ, ಅನುದಾತ್ತ, ಸ್ವರಿತಗಳೆಂಬ ಸ್ವರಗಳೂ, ಮಾತ್ರಾ-ಹ್ರಸ್ವ, ದೀರ್ಘ ಪ್ಲುತ ಮೊದಲಾದ ಅಕ್ಷರ ಉಚ್ಚಾರಣ ಕಾಲಗಳೂ, ಬಲಂ-ಅಲ್ಪಪ್ರಾಣ ಮಹಾಪ್ರಾಣ ಮೊದಲಾದ ಪ್ರಯತ್ನಗಳೂ, ಸಾಮ-ಸಪ್ತಸ್ವರಗಳೂ, ಸಂತಾನಃ-ಪದಗಳ ಜೋಡಣೆ, ಇತಿ-ಹೀಗೆಂಬುವುಗಳು, ಶೀಕ್ಷಾಧ್ಯಾಯಃ ಉಕ್ತಃ-ಶಿಕ್ಷೆಯಲ್ಲಿ ಹೇಳಲ್ಪಟ್ಟಿರುತ್ತವೆ.

(ವಾ. ಅರ್ಥ)

| | |
|---|---|
| ೧) ಶೀಕ್ಷಾಂ ವ್ಯಾಖ್ಯಾಸ್ಯಾಮಃ | ೧) ವೇದಾಂಗವಾದ ಶಿಕ್ಷೆಯು ವೇದಕ್ಕೆ ಉಪಕಾರಮಾಡತಕ್ಕ ಕ್ರಮವನ್ನು ವಿವರಿಸುವೆವು. |
| ೨) ವರ್ಣಃ, ಸ್ವರಃ, ಮಾತ್ರಾಃ, ಬಲಂ, ಸಾಮ, ಸಂತಾನಃ, ಇತಿ ಶಿಕ್ಷಾಧ್ಯಾಯೋ ಉಕ್ತಃ | ೨) ಆಕಾರ ಮೊದಲಾದ ಅಕ್ಷರಗಳೂ ಉದಾತ್ತ ಅನುದಾತ್ತ ಸ್ವರಿತಗಳೆಂಬ ಸ್ವರಗಳೂ, ಹ್ರಸ್ವದೀರ್ಘ ಪ್ಲುತ ಮೊದಲಾದ ಅಕ್ಷರೋಚ್ಚಾರಣಕಾಲಗಳೂ, ಅಲ್ಪಪ್ರಾಣ ಮಹಾಪ್ರಾಣ ಮೊದಲಾದಪ್ರಯತ್ನಗಳೂ, ಸಪ್ತಸ್ವರಗಳೂ, ಪದಗಳ ಜೋಡಣೆ, ಹೀಗೆಂಬುವುಗಳು ಶಿಕ್ಷೆಯಲ್ಲಿ ಹೇಳಲ್ಪಟ್ಟಿರುತ್ತವೆ. |

ಉಪನಿಷತ್ತುಗಳನ್ನು ಕಲಿಯತಕ್ಕವರಿಗೆ ಸ್ವರವರ್ಣಗಳು ವ್ಯತ್ಯಾಸವಾಗದಿರುವುದಕ್ಕಾಗಿ ವೇದಕ್ಕೆ ಅಂಗವಾದ ಶಿಕ್ಷೆಯು ಹೇಳಲ್ಪಡುತ್ತದೆ. ಅಂದರೆ ವೇದವನ್ನು ಕಲಿಯಲು ಸಾಧನವಾದ ಮತ್ತು ವೇದಾಂಗವಾದ ಶಿಕ್ಷಾಕ್ರಮವನ್ನು ಈಗ ಹೇಳುತ್ತಾರೆ.

## ೩ನೆಯ ಅನುವಾಕ

**ಮೂಲ ಮಂತ್ರ:**—ಸಹನೌ ಯಶಃ । ಸಹನೌ ಬ್ರಹ್ಮವರ್ಚಸಂ

ಬ್ರಹ್ಮವಿದ್ಯೆಯ ಫಲವು ಗುರುಶಿಷ್ಯರಿಬ್ಬರಿಗೂ, ಉಂಟಾಗಲಿ-ಎಂದು ಪ್ರಾರ್ಥಿಸಲ್ಪಡುತ್ತದೆ.

**ಅರ್ಥ**—ಯಶಃ-ಕೀರ್ತಿಯು, ನೌ-ನಮ್ಮಿಬ್ಬರಿಗೂ, ಸಹ ಅಸ್ತು-

ಒಟ್ಟಿಗೆ ಬರಲಿ. ಬ್ರಹವರ್ಚಸಂ-ಬ್ರಹ್ಮತೇಜಸ್ಸು, ನೌ-ನಮ್ಮಿಬ್ಬರಿಗೂ, ಸಹ ಅಸ್ತು-ಒಟ್ಟಿಗೆ ಬರಲಿ.

(ವಾ. ಅರ್ಥ)

| | |
|---|---|
| ೧) ಯಶಃ ನೌ ಸಹ ಅಸ್ತು | ೧) ಕೀರ್ತಿಯು ನಮ್ಮಿಬ್ಬರಿಗೂ ಒಟ್ಟಿಗೆ ಬರಲಿ. |
| ೨) ಬ್ರಹ್ಮವರ್ಚಸಂ ನೌ ಸಹ ಅಸ್ತು. | ೨) ಬ್ರಹ್ಮ ತೇಜಸ್ಸು ನಮ್ಮಿಬ್ಬರಿಗೂ ಒಟ್ಟಿಗೆ ಬರಲಿ. |

ಮೂಲ ಮಂತ್ರ:—ಅಥಾತಃ ಸಗ್ಂಹಿತಾಯಾ ಉಪನಿಷದಂ

ವ್ಯಾಖ್ಯಾಸ್ಯಾಮಃ.

ಅರ್ಥ—ಅಥ-ಶಿಕ್ಷೆಯನ್ನು ತಿಳಿದನಂತರ, ಅತಃ-ಆದಕಾರಣದಿಂದ, ಸಂಹಿತಾಯಾಃ-ಅಕ್ಷರಗಳು ಒಟ್ಟಿಗೆ ಸೇರಿದ ಸಂಧಿಯಾಗುವುದರ, ಉಪನಿಷದಂ ರಹಸ್ಯವನ್ನು, ವಾಖ್ಯಾಸ್ಯಾಮಃ-ವಿವರಿಸುವೆವು.

(ವಾ. ಅರ್ಥ]

| | |
|---|---|
| ೩) ಅಥ ಅತಃ ಸಂಹಿತಾಯಾಃ ಉಪನಿಷದಂ ವ್ಯಾಖ್ಯಾಸ್ಯಾಮಃ | ೩) ಶಿಕ್ಷೆಯನ್ನು ತಿಳಿದನಂತರ, ಆದ ಕಾರಣದಿಂದ ಅಕ್ಷರಗಳು ಒಟ್ಟಿಗೆ ಸೇರಿ ಸಂಧಿಯಾಗುವುದರ ರಹಸ್ಯವನ್ನೂ ವಿವರಿಸುವೆವು. |

ಮೂಲ ಮಂತ್ರ:—ಪಂಚಸ್ವಧಿಕರಣೇಷು । ಅಧಿಲೋಕ ಮಧಿ

ಜ್ಯೌತಿಷ ಮಧಿವಿದ್ಯ ಮಧಿಪ್ರಜ ಮಧ್ಯಾತ್ಮಂ । ತಾಮುಹಾ

ಸಗ್ಂಹಿತಾ ಇತ್ಯಾಚಕ್ಷತೇ ॥

ಅರ್ಥ—ಅಧಿಲೋಕಂ-ಲೋಕಗಳು, ಅಧಿಜ್ಯೌತಿಷಂ-ತೇಜಸ್ಸುಗಳು, ಅಧಿವಿದ್ಯಂ-ವಿದ್ಯೆ, ಅಧಿಪ್ರಜಂ-ಪ್ರಜೆ, ಅಧ್ಯಾತ್ಮಂ-ಶರೀರ ಎಂಬ, ಪಂಚಸು ಅಧಿಕರಣೇಷು-ಐದು ಆಶ್ರಮಗಳಲ್ಲಿ ಕಲಿಯಲ್ಪಟ್ಟ, ತಾಃ-ಆ ಸಂಹಿತೆಗಳು ಎಂದರೆ ಸಂಧಿಗಳು, ಮಹಾಸಂಹಿತಾಃ ಇತಿ-ಪೂಜ್ಯವಾದ ಸಂಹಿತೆಗಳು ಎಂಬುದಾಗಿ, ಆಚಕ್ಷತೇ-ಗುರುಗಳಿಂದ ಹೇಳಲ್ಪಡುತ್ತವೆ.

(ವಾ. ಅರ್ಥ)

| | |
|---|---|
| ೪) ಅಧಿಲೋಕಂ, ಅಧಿಜ್ಯೌತಿಷಂ ಅಧಿವಿದ್ಯಂ, ಅಧಿಪ್ರಜಂ, ಅಧ್ಯಾತ್ಮಂ ಪಂಚಸು ಅಧಿಕರಣೇಷು ತಾಃ ಮಹಾಸಂಹಿತಾಃ, ಆಚಕ್ಷತೇ | ೪) ಲೋಕಗಳೂ, ತೇಜಸ್ಸುಗಳೂ, ವಿದ್ಯೆ, ಪ್ರಜೆ, ಶರೀರ ಎಂಬ ಐದು ಆಶ್ರಯಗಳಲ್ಲಿ ಕಲಿಯಲ್ಪಟ್ಟ ಆ ಸಂಹಿತೆಗಳು ಎಂದರೆ ಸಂಧಿಗಳು ಪೂಜ್ಯವಾದ ಸಂಹಿತೆಗಳು ಎಂದು ಗುರುಗಳು ಹೇಳುತ್ತಾರೆ. |

ಭಾವ—ವರ್ಣಗಳು ಒಂದಕ್ಕೊಂದು ಸೇರಿ ಒಟ್ಟಾಗಿ ಆಗುವುದಕ್ಕೆ ಸಂಹಿತೆ ಎಂದು ಹೆಸರು. ಸಂಹಿತೆಯಲ್ಲಿ ನಾಲ್ಕು ಅಂಶಗಳಿರುವುವು. ಹೇಗೆಂದರೆ " ಅ " ಎಂಬ ಅಕ್ಷರಕ್ಕೆ " ಉ "ಕಾರವು ಸೇರಿದರೆ " ಓ " ಎಂದಾಗುತ್ತದೆ. ಇದರಲ್ಲಿ " ಅ " ಎಂಬುದು ಪೂರ್ವರೂಪವು, " ಉ " ಎಂಬುದು ಉತ್ತರರೂಪವು, ಒಟ್ಟಿಗೆ " ಓ " ಎಂದು ಉಚ್ಚರಿಸುವುದು ಸಂಧಿಯು. ಆ ರೀತಿ ಉಚ್ಚರಿಸುವುದಕ್ಕೆ ಅನುಕೂಲವಾದ ಪ್ರಯತ್ನ ಸಂಧಾನವು, ಇವುಗಳನ್ನು ಲೋಕ, ಜ್ಯೋತಿಸ್ಸು, ವಿದ್ಯೆ, ಪ್ರಜೆ, ಶರೀರ ಎಂಬ 5 ಸ್ಥಳಗಳಲ್ಲಿ ಕಂಡುಕೊಳ್ಳತಕ್ಕ ಕ್ರಮವು ತಿಳಿಸಲ್ಪಡುವುದು.

**ಮೂಲ ಮಂತ್ರ :—ಅಥಾಧಿಲೋಕಂ । ಪೃಥಿವೀಪೂರ್ವರೂಪಂ ।**

**ದ್ಯೌರುತ್ತರರೂಪಂ । ಆಕಾಶಃ ಸಂಧಿಃ । ವಾಯುಃ ಸಂಧಾನಂ**

**ಇತ್ಯಧಿ ಲೋಕಂ ॥**

**ಅರ್ಥ** ಅಥ-ಬಳಿಕ, ಅಧಿಲೋಕಂ-ಲೋಕದ ವಿಷಯದಲ್ಲಿ (ಹೇಳಲ್ಪಡುತ್ತವೆ) ಪೃಥಿವೀ ಪೂರ್ವರೂಪಂ-ಭೂಮಿಯು "ಅ" ಎಂಬ ಪೂರ್ವರೂಪ. ದ್ಯೌಃ ಉತ್ತರರೂಪಂ-ಸ್ವರ್ಗಲೋಕವು "ಉ" ಎಂಬ ಉತ್ತರರೂಪ. ಆಕಾಶ : ಸಂಧಿಃ-ಮಧ್ಯದಲ್ಲಿ ಬಿಟ್ಟಿರುವ ಆಕಾಶವು "ಓ" ಎಂದು ಸಂಧಿಯು. ವಾಯುಃ ಸಂಧಾನಂ-ವಾಯುವು ಅವುಗಳನ್ನು ಸೇರಿಸುವ ಪ್ರಯತ್ನವು, ಇತಿ-ಈ ರೀತಿಯಾಗಿ, ಅಧಿಲೋಕಂ-ಲೋಕದ ವಿಷಯವಾಗಿ ಹೇಳಲ್ಪಟ್ಟಿತು.

**(ವಾ. ಅರ್ಥ)**

**೫**) ಅಥ ಅಧಿಲೋಕಂ, ಪೃಥಿವೀ ಪೂರ್ವ ರೂಪಮ್ ದ್ಯೌಃ ಉತ್ತರ ರೂಪಂ, ಆಕಾಶಃ ಸಂಧಿಃ, ವಾಯುಃ ಸಂಧಾನಮ್ ; ಇತಿ ಅಧಿಲೋಕಮ್.

೫) ಬಳಿಕಲೋಕದ ವಿಷಯದಲ್ಲಿ (ಹೇಳಲ್ಪಡುತ್ತದೆ); ಭೂಮಿಯು "ಅ" ಎಂಬ ಪೂರ್ವರೂಪವು, ಸ್ವರ್ಗಲೋಕವು "ಉ" ಎಂಬ ಉತ್ತರರೂಪವು, ಮಧ್ಯದಲ್ಲಿ ಬಿಟ್ಟಿರುವ ಆಕಾಶವು "ಓ" ಎಂಬ ಸಂಧಿಯು, ವಾಯುವು ಅವುಗಳನ್ನು ಸೇರಿಸುವ ಪ್ರಯತ್ನವು; ಈ ರೀತಿಯಾಗಿ ಲೋಕದ ವಿಷಯವಾಗಿ (ಹೇಳಲ್ಪಟ್ಟಿತು)

**ಭಾವ**— ವಾಯುವು ಪೂರ್ವೋತ್ತರಗಳಾದ ಭೂಲೋಕ-ಸ್ವರ್ಗಲೋಕಗಳಲ್ಲಿ ಸಂಚಾರ ಮಾಡಿ ಆಕಾಶ ವುಂಟಾಗುವ ಹಾಗೆ ಪ್ರಯತ್ನ ವಿಶೇಷದಿಂದ "ಅ"ಕಾರ "ಉ"ಕಾರಗಳು ಸೇರಿ "ಓ" ಎಂಬ ಸಂಧಿಯಾಗುತ್ತದೆ ಎಂದು ಲೋಕಗಳ ದೃಷ್ಟಾಂತದ ಮೂಲಕ ವಿಶದಪಡಿಸಲ್ಪಟ್ಟಿದೆ.

ಮೂಲ ಮಂತ್ರ:—ಅಥಾಧಿಜ್ಯೌತಿಷಂ । ಅಗ್ನಿಃಪೂರ್ವ

ರೂಪಂ । ಆದಿತ್ಯ ಉತ್ತರ ರೂಪಂ। ಆಪಃಸಂಧಿಃ ।

ವೈದ್ಯುತಃ ಸಂಧಾನಂ । ಇತ್ಯಧಿ ಜ್ಯೌತಿಷಂ ॥

**ಅರ್ಥ**—ಅಥ-ಬಳಿಕ, ಅಧಿಜ್ಯೌತಿಷಂ-ತೇಜಸ್ಸುಗಳ ವಿಷಯದಲ್ಲಿ ಹೇಳಲ್ಪಡುತ್ತದೆ. ಅಗ್ನಿಃ ಪೂರ್ವರೂಪಂ-ಅಗ್ನಿಯು "ಅ" ಎಂಬ ಪೂರ್ವರೂಪ, ಆದಿತ್ಯಃ ಉತ್ತರರೂಪಂ-ಸೂರ್ಯನು "ಉ" ಎಂಬ ಉತ್ತರರೂಪವು, ಆಪಃ ಸಂಧಿಃ-ನೀರುಸಂಧಿಯು ("ಓ" ಎಂಬುದು) ವೈದ್ಯುತಃ ಸಂಧಾನಂ-ಮಿಂಚಿನ ಸಂಬಂಧವು ಪ್ರಯತ್ನವು, ಇತಿ ಅಧಿಜ್ಯೌತಿಷಂ-ಈ ರೀತಿ ತೇಜಸ್ಸಿನ ವಿಷಯವಾಗಿ ಹೇಳಲ್ಪಟ್ಟಿತು.

**(ವಾ. ಅರ್ಥ)**

೬) ಅಥ ಅಧಿಜ್ಯೌತಿಷಂ; ಅಗ್ನಿಃ ಪೂರ್ವರೂಪಂ, ಆದಿತ್ಯಃ ಉತ್ತರ ರೂಪಂ, ಆಪಃಸಂಧಿಃ, ವೈದ್ಯುತಃ ಸಂಧಾನಮ್; ಇತಿ ಅಧಿಜ್ಯೌತಿಷಂ.

೬) ಬಳಿಕ ತೇಜಸ್ಸುಗಳ ವಿಷಯದಲ್ಲಿ (ಹೇಳಲ್ಪಡುತ್ತದೆ); ಅಗ್ನಿಯು "ಅ" ಎಂಬಂತೆ ಪೂರ್ವರೂಪವು, ಸೂರ್ಯನು "ಉ" ಎಂಬಂತೆ ಉತ್ತರರೂಪವು, ನೀರು ಸಂಧಿಯು ('ಓ' ಎಂಬುದು); ಮಿಂಚಿನ ಸಂಬಂಧವು ಪ್ರಯತ್ನವು; ಈ ರೀತಿ ತೇಜಸ್ಸುಗಳ ವಿಷಯವಾಗಿ ಹೇಳಲ್ಪಟ್ಟಿತು.

**ಭಾವ**—ಅಗ್ನಿಸೂರ್ಯ ಎರಡೂ ಮಿಂಚಿನ ಮೂಲಕ ಸೇರಿ ನೀರು ಉಂಟಾಗುವ ಹಾಗೆ, "ಅ, ಉ," ಎರಡೂ ಪ್ರಯತ್ನ ಮೂಲಕ ಸೇರಿ "ಓ" ಆಗುತ್ತದೆ ಎಂದು ತೇಜಸ್ಸುಗಳನ್ನು ದೃಷ್ಟಾಂತ ಕೊಟ್ಟು ಸಂಧಿಯು ವಿಶದ ಪಡಿಸಲ್ಪಟ್ಟಿದೆ.

**ಮೂಲ ಮಂತ್ರ:**—ಅಥಾಧಿವಿದ್ಯಂ । ಆಚಾರ್ಯಃ ಪೂರ್ವರೂಪಂ ।

ಅಂತೇವಾಸ್ಯುತ್ತರರೂಪಂ । ವಿದ್ಯಾಸಂಧಿಃ। ಪ್ರವಚನಗ್ಂ

ಸಂಧಾನಂ । ಇತ್ಯಧಿವಿದ್ಯಂ ॥

**ಅರ್ಥ**—ಅಥ ಅಧಿವಿದ್ಯಂ-ಬಳಿಕವಿದ್ಯೆಯ ವಿಷಯ ಹೇಳಲ್ಪಡುತ್ತದೆ, ಆಚಾರ್ಯಃ ಪೂರ್ವರೂಪಂ-ಆಚಾರ್ಯನು "ಅ" ಎಂಬ ಪೂರ್ವರೂಪವು, ಅಂತೇವಾಸೀ ಉತ್ತರರೂಪಂ-ಶಿಷ್ಯನು "ಉ" ಎಂಬ ಉತ್ತರರೂಪವು, ವಿದ್ಯಾಸಂಧಿಃ-ವಿದ್ಯೆಯು ಸಂಧಿಯು, ಪ್ರವಚನಂ ಸಂಧಾನಂ-ಹೇಳಿಕೊಡುವುದು ಪ್ರಯತ್ನವು, ಇತಿ ಅಧಿವಿದ್ಯಂ-ಈ ರೀತಿ ವಿದ್ಯೆಯ ವಿಷಯ ಹೇಳಲ್ಪಟ್ಟಿತು.

**(ವಾ. ಅರ್ಥ)**

| | |
|---|---|
| ೭) ಅಥ ಅಧಿವಿದ್ಯಂ ಆಚಾರ್ಯಃ ಪೂರ್ವರೂಪಂ ಅಂತೇವಾಸೀ ಉತ್ತರರೂಪಂ, ವಿದ್ಯಾಸಂಧಿಃ, ಪ್ರವಚನಂ ಸಂಧಾನಮ್; ಇತ್ಯಧಿವಿದ್ಯಂ | ೭) ಬಳಿಕ ವಿದ್ಯೆಯ ವಿಷಯ (ಹೇಳಲ್ಪಡುತ್ತದೆ) ; ಆಚಾರ್ಯನು "ಅ" ಎಂಬ ಪೂರ್ವರೂಪವು, ಶಿಷ್ಯನು "ಉ" ಎಂಬ ಉತ್ತರರೂಪವು, ವಿದ್ಯೆಯು ಸಂಧಿಯು ('ಓ'ಎಂಬುವದು), ಹೇಳಿಕೊಡುವುದು ಪ್ರಯತ್ನವು ; ಈ ರೀತಿ ವಿದ್ಯೆಯ ವಿಷಯವು ಹೇಳಲ್ಪಟ್ಟಿತು. |

**ಭಾವ**—ಆಚಾರ್ಯನು ಶಿಷ್ಯನಿಗೆ ಹೇಳಿಕೊಟ್ಟು ವಿದ್ಯೆ ಬರುವ ಹಾಗೆ "ಅ,ಉ" ಎರಡೂ ಪ್ರಯತ್ನ ವಿಶೇಷದಿಂದ "ಓ" ಎಂದಾಗುತ್ತದೆ, ಎಂಬುದಾಗಿ ವಿದ್ಯೆಯನ್ನು ದೃಷ್ಟಾಂತ ಕೊಟ್ಟು ತಿಳಿಸಲ್ಪಟ್ಟಿರುತ್ತದೆ.

**ಮೂಲ ಮಂತ್ರ;**—ಅಥಾಧಿಪ್ರಜಂ । ಮಾತಾಪೂರ್ವರೂಪಂ ।

ಪಿತೋತ್ತರರೂಪಂ । ಪ್ರಜಾಸಂಧಿ। ಪ್ರಜನನಗ್ಂಃ

ಸಂಧಾನಂ । ಇತ್ಯಧಿಪ್ರಜಂ ॥

**ಅರ್ಥ**—ಅಥ ಅಧಿಪ್ರಜಂ-ಬಳಿಕ ಪ್ರಜೆಯ ವಿಷಯ ಹೇಳಲ್ಪಡುತ್ತದೆ, ಮಾತಾ ಪೂರ್ವರೂಪಂ-ತಾಯಿಯ "ಅ" ಎಂಬ ಪೂರ್ವರೂಪವು, ಪಿತಾ ಉತ್ತರರೂಪಂ-ತಂದೆಯು "ಉ" ಎಂಬ ಉತ್ತರರೂಪವು, ಪ್ರಜಾಸಂಧಿಃ-ಮಗುವು "ಓ" ಎಂಬ ಸಂಧಿ, ಪ್ರಜನನಂ ಸಂಧಾನಂ-ಗರ್ಭವನ್ನುಂಟುಮಾಡುವುದು ಪ್ರಯತ್ನವು, ಇತ್ಯಧಿಪ್ರಜಂ-ಈ ರೀತಿ ಪ್ರಜೆಯ ವಿಷಯವು ಹೇಳಲ್ಪಟ್ಟಿತು.

**(ವಾ. ಅರ್ಥ)**

| | |
|---|---|
| ೮) ಅಥ ಅಧಿಪ್ರಜಂ; ಮಾತಾ ಪೂರ್ವರೂಪಂ, ಪಿತಾ ಉತ್ತರರೂಪಂ, ಪ್ರಜಾಸಂಧಿಃ, ಪ್ರಜನನಂ ಸಂಧಾನಮ್, ಇತ್ಯಧಿಪ್ರಜಂ. | ೮) ಬಳಿಕ ಪ್ರಜೆಯ (ವಿಷಯವು ಹೇಳಲ್ಪಡುತ್ತದೆ) ; ತಾಯಿಯು "ಅ" ಎಂಬ ಪೂರ್ವರೂಪವು, ತಂದೆಯು "ಉ" ಎಂಬ ಉತ್ತರರೂಪವು, ಮಗುವು "ಓ" ಎಂಬ ಸಂಧಿ, ಗರ್ಭವನ್ನುಂಟು ಮಾಡುವುದು ಪ್ರಯತ್ನವು ; ಈ ರೀತಿ ಪ್ರಜೆಯ ವಿಷಯವು (ಹೇಳಲ್ಪಟ್ಟಿತು) |

**ಭಾವ**—ತಾಯಿಯಲ್ಲಿ ತಂದೆಯು ಗರ್ಭವನ್ನು ಉಂಟುಮಾಡಿ ಮಗು ಜನಿಸುವಂತೆ "ಅ","ಉ" ಎರಡೂ ಪ್ರಯತ್ನಗಳು ಸೇರಿ "ಓ" ಎಂದು ಸಂಧಿಯಾಗುತ್ತದೆ, ಎಂಬುದಾಗಿ ಮಗುವಿನ ದೃಷ್ಟಾಂತ ಕೊಟ್ಟು ವಿಶದಪಡಿಸಲಾಗಿದೆ.

**ಮೂಲ ಮಂತ್ರ: – ಅಥಾಧ್ಯಾತ್ಮಂ । ಅಧರಾಹನುಃ ಪೂರ್ವರೂಪಂ ।**

ಉತ್ತರಾಹನುರುತ್ತರರೂಪಂ । ವಾಕ್ಸಂಧಿಃ। ಜಿಹ್ವಾಸಂಧಾನಂ ।

ಇತ್ಯಧ್ಯಾತ್ಮಂ ॥

**ಅರ್ಥ**—ಅಥ ಅಧ್ಯಾತ್ಮಂ-ಬಳಿಕ ಶರೀರದ ವಿಷಯ ಹೇಳಲ್ಪಡುತ್ತದೆ, ಅಧರಾಹನುಃಪೂರ್ವರೂಪಂ-ಕಪೋಲದ ಕೆಳಗಿನ ಭಾಗವು, "ಅ" ಎಂಬಪೂರ್ವ ರೂಪವು, ಉತ್ತರಾಹನುಃ ಉತ್ತರರೂಪಂ-ಕಪೋಲದ ಮೇಲಿನ ಭಾಗವು "ಉ" ಎಂಬ ಉತ್ತರರೂಪವು, ವಾಕ್ ಸಂಧಿಃ-ಮಾತು "ಓ" ಎಂಬ ಸಂಧಿಯು ಜಿಹ್ವಾಸಂಧಾನಂ-ನಾಲಿಗೆಯು ಪ್ರಯತ್ನವು, ಇತಿ ಅಧ್ಯಾತ್ಮಂ-ಈ ರೀತಿ ಶರೀರದ ವಿಷಯವು ಹೇಳಲ್ಪಟ್ಟಿತು.

(ವಾ. ಅರ್ಥ)

| | |
|---|---|
| ೯) ಅಥ ಅಧ್ಯಾತ್ಯಂ; ಅಧರಾಹನುಃ ಪೂರ್ವರೂಪಂ, ಉತ್ತರಾಹನುಃ ಉತ್ತರರೂಪಂ, ವಾಕ್ ಸಂಧಿಃ, ಜಿಹ್ವಾಸಂಧಾನಂ, ಇತಿ ಅಧ್ಯಾತ್ಮಂ | ೯) ಬಳಿಕ ಶರೀರದ ವಿಷಯವು (ಹೇಳಲ್ಪಡುತ್ತದೆ); ಕಪೋಲದ ಕೆಳಗಿನ ಭಾಗವು "ಅ" ಎಂಬ ಪೂರ್ವರೂಪವೂ ಕಪೋಲದ ಮೇಲಿನ ಭಾಗವು "ಉ" ಎಂಬ ಉತ್ತರರೂಪವು, ಮಾತು "ಓ" ಎಂಬ ಸಂಧಿಯು, ನಾಲಿಗೆಯು ಪ್ರಯತ್ನವು ; ಈ ರೀತಿ ಶರೀರದ ವಿಷಯವು ಹೇಳಲ್ಪಟ್ಟಿತು. |

ಭಾವ—ಕಪೋಲದ ಕೆಳಭಾಗ ಮೇಲ್ಭಾಗಗಳೂ ನಾಲಿಗೆಯ ಸಹಾಯದಿಂದ ಕೂಡಿ ಮಾತು ಉಂಟಾಗುವ ಹಾಗೆ "ಅ,ಉ" ಇವೆರಡೂ ಪ್ರಯತ್ನದಿಂದ ಸೇರಿ "ಓ" ಎಂಬ ಸಂಧ್ಯಕ್ಷರ ಆಗಿದೆ ಎಂಬುದನ್ನು ಶರೀರದ ಭಾಗಗಳನ್ನು ದೃಷ್ಟಾಂತ ಕೊಟ್ಟು ವಿಶದಪಡಿಸಲಾಗಿದೆ.

ಮೂಲ ಮಂತ್ರ:—ಇತೀ ಮಾಮಹಾಸಗ್ಂಹಿತಾಃ । ಯ

ಏವಮೇತಾ ಮಹಾಸಗ್ಂಹಿತಾ ವ್ಯಾಖ್ಯಾತಾ

ವೇದ । ಸಂಧೀಯತೇ ಪ್ರಜಯಾಪಶುಭಿಃ ।

ಬ್ರಹ್ಮವರ್ಚಸೇನಾನ್ನಾದ್ಯೇನ ಸುವರ್ಗೇಣ ಲೋಕೇನ ॥

**ಅರ್ಥ**—ಇತಿ-ಹೀಗೆ, ಇಮಾಃ ಮಹಾಸಂಹಿತಾಃ-ಈ ಪೂಜ್ಯ ಸಂಧಿಗಳು (ಹೇಳಲ್ಪಟ್ಟವು). ಏವಂ-ಈ ರೀತಿಯಾಗಿ, ವ್ಯಾಖ್ಯಾತಾಃ-ವಿವರಿಸಲ್ಪಟ್ಟ ಏತಾಃ ಮಹಾಸಂಹಿತಾಃ-ಈ ಪೂಜ್ಯಗಳಾದ ಸಂಧಿಗಳನ್ನು, ಯಃ-ಯಾವನು, ವೇದ-ತಿಳಿಯುತ್ತಾನೆಯೋ (ಅವನು) ಪಶುಭಿಃ-ಹಸುಗಳಿಂದಲೂ, ಪ್ರಜಯಾ-ಮಕ್ಕಳಿಂದಲೂ, ಬ್ರಹ್ಮವರ್ಚಸೇನ-ಬ್ರಹ್ಮತೇಜಸ್ಸಿನಿಂದಲೂ, ಅನ್ನಾದ್ಯೇನ-ಅನ್ನದಿಂದಲೂ ಸುವರ್ಗೇಣಲೋಕೇನ-ಸ್ವರ್ಗವೆಂಬ ಪ್ರಯೋಜನದಿಂದಲೂ, ಸಂಧೀಯತೇ-ಕೂಡಿದವನಾಗುತ್ತಾನೆ.

(ವಾ. ಅರ್ಥ)

| | |
|---|---|
| ೧೦) ಇತಿ ಇಮಾಃ ಮಹಾ ಸಂಹಿತಾಃ. | ೧೦) ಹೀಗೆ ಪೂಜ್ಯಸಂಧಿಗಳು (ಹೇಳಲ್ಪಟ್ಟವು); |
| ೧೧) ಏವಂ ವ್ಯಾಖ್ಯಾತಾಃ ಏತಾಃ ಮಹಾಸಂಹಿತಾಃ ಯಃ ವೇದ, ಪ್ರಜಯಾ, ಪಶುಭಿಃ, ಬ್ರಹ್ಮವರ್ಚಸೇನ, ಅನ್ನಾದ್ಯೇನ, ಸುವರ್ಗೇಣ ಲೋಕೇನ ಸಂಧೀಯತೇ. | ೧೧) ಈ ರೀತಿಯಾಗಿ ವಿವರಿಸಲ್ಪಟ್ಟಂಥಾ ಈ ಪೂಜ್ಯಗಳಾದ ಸಂಧಿಗಳನ್ನು ಯಾವನು ತಿಳಿಯುತ್ತಾನೆಯೋ(ಅವನು) ಮಕ್ಕಳಿಂದಲೂ, ಹಸುಗಳಿಂದಲೂ, ಬ್ರಹ್ಮತೇಜಸ್ಸಿನಿಂದಲೂ, ಅನ್ನದಿಂದಲೂ, ಸ್ವರ್ಗವೆಂಬ ಪ್ರಯೋಜನದಿಂದಲೂ ಕೂಡಿದವನಾಗುತ್ತಾನೆ. |

**ಭಾವ**—ಹಿಂದೆ ತಿಳಿಯಪಡಿಸಿದ ಪ್ರಕಾರ ಐದು ಸ್ಥಳಗಳಲ್ಲಿಯೂ ಸಂಧಿಯ ವಿಷಯವನ್ನು ಚೆನ್ನಾಗಿ ಮನನ ಮಾಡಿ ತಿಳಿದುಕೊಂಡವನಿಗೆ, ಪಶು, ಪುತ್ರ, ಬ್ರಹ್ಮತೇಜಸ್ಸು, ಅನ್ನ, ಸ್ವರ್ಗ ಮೊದಲಾದ ಫಲಗಳು ಉಂಟಾಗುವುವು.

## ೪ನೆಯ ಅನುವಾಕ

ಮೂಲ ಮಂತ್ರ :—ಯಶ್ಛಂದಸಾ ಮೃಷಭೋ ವಿಶ್ವರೂಪಃ ।
ಛಂದೋಭ್ಯೋಽಧ್ಯ ಮೃತಾತ್ಸಂಬಭೂವ । ಸಮೇಂದ್ರೋ
ಮೇಧಯಾ ಸ್ಪೃಣೋತು । ಅಮೃತಸ್ಯ ದೇವಧಾರಣೋ
ಭೂಯಾಸಂ । ಶರೀರಂ ಮೇ ವಿಚರ್ಷಣಂ । ಜಿಹ್ವಾ
ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿ ವಿಶ್ರುವಂ ।
ಬ್ರಹ್ಮಣಃ ಕೋಶೋಽಸಿ ಮೇಧಯಾಪಿಹಿತಃ। ಶ್ರುತಂಮೇ
ಗೋಪಾಯ ॥

ಅರ್ಥ—ವಿಶ್ವರೂಪಃ-ಶಬ್ದಗಳನ್ನೆಲ್ಲಾ ರೂಪವಾಗಿ ಉಳ್ಳ ವಿಷ್ಣುವನ್ನು ಬೋಧಿಸತಕ್ಕ ಛಂದಸಾಂ ಋಷಭಃ-ವೇದಗಳಸಾರವಾದ ಯಃ-ಯಾವ "ಓಂ" ಕಾರವೆಂಬ ಪ್ರಣವವುಂಟೋ ಅದು, ಅಮೃತಾತ್-ಪರಮಾತ್ಮನಿಂದ ಛಂದೋಭ್ಯಃ ಅಧಿ-ವೇದಗಳಿಗಿಂತ ಅಧಿಕವೆನಿಸಿಕೊಂಡು, ಸಂಬಭೂವ-ಪ್ರಕಾಶಕ್ಕೆ ಬಂದಿತು. ಇಂದ್ರಃ-ಹೆಚ್ಚಾದಐಶ್ವರ್ಯವುಳ್ಳ, ಸಃ-ಆಪ್ರಣವವು ಮಾ-ನನ್ನನ್ನು ಮೇಧಯಾ-ಜ್ಞಾನದಿಂದ, ಸ್ಪೃಣೋತು-ಉಜ್ಜೀವಿಸುವಂತೆಮಾಡಲಿ ದೇವ-ಬೆಳಗುತ್ತಿರುವ ಪ್ರಣವವೇ !, ಅಮೃತಸ್ಯ-ಪರಮಾತ್ಮನನ್ನು, ಧಾರಣಃ-ಸದಾ ಹೃದಯದಲ್ಲಿ ಧರಿಸತಕ್ಕವನು, ಭೂಯಾಸಂ-ಆಗುವೆನು, ಮೇ-ನನ್ನ, ಶರೀರಂ-ದೇಹವು, ವಿಚರ್ಷಣಂ-ಬಲ, ಆರೋಗ್ಯ ಕಾಂತಿಗಳಿಂದ ಕೂಡಿದ್ದು (ಆಗಲಿ). ಮೇಜಿಹ್ವಾ-ನನ್ನ ನಾಲಿಗೆಯು, ಮಧುಮತ್ತಮಾ-ಸದಾ ಬ್ರಹ್ಮನನ್ನು

ಹೇಳುವುದರಿಂದ ಭೋಗ್ಯವಾಗಿ ಆಗಲಿ, ಕರ್ಣಾಭ್ಯಾಂ-ಕಿವಿಗಳಿಂದ, ಭೂರಿ-ಹೆಚ್ಚಾಗಿ, ವಿಶ್ರುವಂ-ಬ್ರಹ್ಮನನ್ನು ಬೋಧಿಸತಕ್ಕ ಶಾಸ್ತ್ರಗಳನ್ನು ಕೇಳುವೆನು, ಬ್ರಹ್ಮಣಃ-ಪರಮಾತ್ಮನ, ಕೋಶಃ ಅಸಿ-ವಾಸಸ್ಥಾನವಾಗಿದ್ದೀಯೆ, ಮೇಧಯಾ-ಲೌಕಿಕಜ್ಞಾನದಿಂದ, ಪಿಹಿತಃ ಅಸಿ-ಮುಚ್ಚಲ್ಪಟ್ಟವನಾಗಿದ್ದೀಯೆ, ಮೇ-ನನ್ನಿಂದ, ಶ್ರುತಂ-ಕೇಳಲ್ಪಟ್ಟ ಅರ್ಥವನ್ನು, ಗೋಪಾಯ-ಮರೆಯದಂತೆ ಕಾಪಾಡು.

ವಾ. ಅರ್ಥ)

ಬ್ರಹ್ಮವಿದ್ಯೆಯುಂಟಾಗುವುದಕ್ಕಾಗಿ "ಓಂ" ಎಂಬ ಪ್ರಣವವನ್ನು ಪ್ರಾರ್ಥನೆ ಮಾಡುವುದು.

| | |
|---|---|
| ೧) ವಿಶ್ವರೂಪಃ ಛಂದಸಾಂ ಋಷಭಃ ಯಃ ಅಮೃತಾತ್ ಛಂದೋಭ್ಯಃ ಅಧಿ ಸಂಬಭೂವ. | ೧) ಶಬ್ದಗಳನ್ನೆಲ್ಲಾ ರೂಪವಾಗಿ ಉಳ್ಳ ವಿಷ್ಣುವನ್ನು ಬೋಧಿಸತಕ್ಕ, ವೇದಗಳ ಸಾರವಾದ, ಯಾವ "ಓಂ" ಕಾರವೆಂಬ ಪ್ರಣವವುಂಟೋ ಅದು ಪರಮಾತ್ಮನಿಂದ ವೇದಗಳಿಗಿಂತ್ರ ಅಧಿಕವೆನಿಸಿಕೊಂಡು ಪ್ರಕಾಶಕ್ಕೆ ಬಂದಿತು. |
| ೨) ಇಂದ್ರಃ ಸಃ ಮಾಮೇಧಯಾ ಸ್ಪೃಣೋತು. | ೨) ಹೆಚ್ಚಾದ ಐಶ್ವರ್ಯವುಳ್ಳ ಆ ಪ್ರಣವವು ನನ್ನನ್ನು ಜ್ಞಾನದಿಂದ ಉಜ್ಜೀವಿಸುವಂತೆ ಮಾಡಲಿ. |
| ೩) ದೇವ! ಅಮೃತಸ್ಯ ಧಾರಣಃ ಭೂಯಾಸಂ | ೩) ಬೆಳಗುತ್ತಿರುವ ಪ್ರಣವವೇ! ಪರಮಾತ್ಮನನ್ನು ಸದಾ ಹೃದಯದಲ್ಲಿ ಧರಿಸತಕ್ಕವನು ಆಗುವೆನು. |
| ೪) ಮೇ ಶರೀರಂ ವಿಚರ್ಷಣಂ | ೪) ನನ್ನ ದೇಹವು ಬಲ, ಆರೋಗ್ಯ, ಶಾಂತಿಗಳಿಂದ ಕೂಡಿದ್ದು (ಆಗಲಿ). |

೫) ಮೇ ಜಿಹ್ವಾ ಮಧು ಮತ್ತಮಾ. ೫) ನನ್ನ ನಾಲಗೆಯು ಸದಾಬ್ರಹ್ಮನನ್ನು ಹೇಳುವುದರಿಂದ ಭೋಗ್ಯವಾಗಿ (ಆಗಲಿ).

೬) ಕರ್ಣಾಭ್ಯಾಂ ಭೂರಿವಿಶ್ರುವಂ ೬) ಕಿವಿಗಳಿಂದ (ಬ್ರಹ್ಮನನ್ನು ಬೋಧಿಸತಕ್ಕ ಶಾಸ್ತ್ರಗಳನ್ನು) ಹೆಚ್ಚಾಗಿ ಕೇಳುವೆನು.

೭) ಬ್ರಹಣಃ ಕೋಶಃ ಅಸಿ ೭) ಪರಮಾತ್ಮನ ವಾಸಸ್ಥಾನವಾಗಿ ಆಗಿದ್ದೀಯೆ.

೮) ಮೇಧಯಾ ಪಿಹಿತಃ ಅಸಿ ೮) ಲೌಕಿಕ ಜ್ಞಾನದಿಂದ ಮುಚ್ಚಲ್ಪಟ್ಟವನಾಗಿ ಇದ್ದೀಯೆ.

೯) ಮೇ ಶ್ರುತಂ ಗೋಪಾಯ ೯) ನನ್ನಿಂದ ಕೇಳಲ್ಪಟ್ಟ ಅರ್ಥವನ್ನು ಮರೆಯದಂತೆ ಕಾಪಾಡು.

**ಭಾವ**—ಬ್ರಹ್ಮವಿದ್ಯೆ ಉಂಟಾಗುವುದಕ್ಕಾಗಿ "ಓಂ" ಎಂಬ ಪ್ರಣವವನ್ನು ಪ್ರಾರ್ಥನೆ ಮಾಡುವುದು-"ಓಂ"ಕಾರದಿಂದ ಎಲ್ಲಾ ವೇದಗಳೂ ಎಲ್ಲಾ ಶಬ್ದಗಳೂ, ವಿಸ್ತಾರವಾಗಿ ಅದರಲ್ಲಿಯೇ ಅಡಗಿರುವುದರಿಂದ ಇದು ವೇದಸಾರವಾಗಿ ವೇದಗಳಿಗಿಂತ ಅಧಿಕವೆನಿಸಿಕೊಂಡಿರುವುದು. ಜಗತ್ತನ್ನೆಲ್ಲಾ ಶರೀರವಾಗಿ ಉಳ್ಳ ವಿಷ್ಣುವನ್ನು ಬೋಧಿಸುವುದರಿಂದ ವಿಶ್ವರೂಪವೆನಿಸಿಕೊಂಡಿರುವುದು. ಈ ರೀತಿ ಅಧಿಕ ಸಂಪತ್ತುಳ್ಳ ಆ "ಓಂ"ಕಾರವು ನನ್ನನ್ನು ಉಜ್ಜೀವಿಸುವಂತೆ ಮಾಡಲಿ. ಆ ಪ್ರಕಾರವಾದ ಪ್ರಣವವನ್ನು ಯಾವಾಗಲೂ ಮನಸ್ಸಿನಲ್ಲಿ ಧರಿಸುತ್ತೇನೆ. ನನ್ನ ಶರೀರಕ್ಕೆ ಬಲ, ಆರೋಗ್ಯ, ಕಾಂತಿ ಇವುಗಳು ಉಂಟಾಗಲಿ. ಆ ಪ್ರಣವವನ್ನು ಸದಾ ಉಚ್ಚರಿಸುವುದರಿಂದ ನನ್ನ ನಾಲಿಗೆಯೂ ಅತ್ಯಂತ ಭೋಗ್ಯವಾಗಿರಲಿ, ನನ್ನ ಕಿವಿಗಳಿಂದ ಆ ಪರಬ್ರಹ್ಮನನ್ನು ಬೋಧಿಸತಕ್ಕ ಶಾಸ್ತ್ರಗಳನ್ನು ಸದಾ ಕೇಳುವೆನು. ಬ್ರಹ್ಮವಿದ್ಯೆಗೆ ವಾಸಸ್ಥಾನವಾದ ಪ್ರಣವವೇ, ನಾನು ಕೇಳಿದ ಅರ್ಥಗಳನ್ನು ಮರೆತು ಹೋಗದಂತೆ ಕಾಪಾಡು. ನಿನ್ನಲ್ಲಿ ಪರಬ್ರಹ್ಮವು ಹಣದಂತೆ ಅಡಗಿದೆ. ಅದು ಲೌಕಿಕ ಜ್ಞಾನದಿಂದ

ಮರೆಯಾಗಿದೆ, ಅನೇಕರು "ಓಂ"ಕಾರವು ಎಲ್ಲಾ ವಾಕ್ಯಗಳ ಮೂಲವಾದ ಶಬ್ದವೆಂದು ಅದರ ಮಹಿಮೆಯನ್ನು ತಿಳಿದು ಆ "ಓಂ"ಕಾರವನ್ನು ಜಪ ಹೋಮಗಳಲ್ಲಿ ಉಪಯೋಗಿಸುತ್ತಾರೆ. ಧೀರನಾದವನು "ಓಂ"ಕಾರವು ಪರಬ್ರಹ್ಮನನ್ನು ಬೋಧಿಸುವುದೆಂದು ತಿಳಿದು ಆ ಪರಬ್ರಹ್ಮನನ್ನು ಉಪಾಸನೆ ಮಾಡುತ್ತಾನೆ. ಅಂತಹವನಿಗೆ ಕೋಶದಿಂದ ಹಣ ಸಿಕ್ಕುವ ಹಾಗೆ ಪರಬ್ರಹ್ಮನು ಲಭಿಸುವನು. ಗುರುಗಳಿಂದ ಕೇಳಿದ ಅರ್ಥವನ್ನು ಮರೆಯದಂತೆ ಕಾಪಾಡು-ಎಂದು, ಮೇಧಾಶಕ್ತಿಯುಂಟಾಗುವುದಕ್ಕೆ ಮೇಲ್ಕಂಡ ಮಂತ್ರಗಳಿಂದ ಪ್ರಣವವನ್ನು ಪ್ರಾರ್ಥಿಸುವುದು. ಮೇಧೆಯುಂಟಾದರೆ ಬ್ರಹ್ಮವಿದ್ಯೆಗೆ ಅಂಗವಾದ ಶ್ರವಣ ಮನನಗಳುಂಟಾಗಿ, ಬಳಿಕ ಬ್ರಹ್ಮವಿದ್ಯೆಯು ಸಿದ್ಧಿಸುವುದೆಂದು ತಾತ್ಪರ್ಯ.

**ಮೂಲ ಮಂತ್ರ:—ಆವಹಂತೀ ವಿತನ್ವಾನಾ । ಕುರ್ವಾಣಾ ಚೀರ**

**ಮಾತ್ಮನಃ । ವಾಸಾಗ್ಂಸಿ ಮಮ ಗಾವಶ್ಚ । ಅನ್ನಪಾನೇ**

**ಚ ಸರ್ವದಾ । ತತೋ ಮೇ ಶ್ರಿಯ ಮಾವಹ । ಲೋಮಶಾಂ**

**ಪಶುಭಿಃ ಸಹಸ್ವಾಹಾ॥**

ಯಜ್ಞಮಾಡುವುದಕ್ಕೆ ಹಣ, ಬಟ್ಟೆ, ಹಸು ಇವುಗಳು ಬೇಕು ;
ಈ ಅನುಕೂಲ್ಯಗಳಿಗೆ ಮಹಾಲಕ್ಷ್ಮಿಯನ್ನು ಪ್ರಾರ್ಥನೆ ಮಾಡಿ
ಈ ಮಂತ್ರಗಳಿಂದ ಹೋಮ ಮಾಡಬೇಕು.

ಅರ್ಥ —(ಎಲೈ ಲಕ್ಷ್ಮಿಯೇ ನೀನು ಯಾವ ಕಾರಣದಿಂದ) ಆವಹಂತಿ ಯಾಗಕ್ಕೆ ಬೇಕಾದ ದ್ರವ್ಯವನ್ನು ಒದಗಿಸತಕ್ಕವಳೂ, ವಿತನ್ವಾನಾ-ವೃದ್ಧಿಪಡಿಸತಕ್ಕವಳೂ, ಆತ್ಮನಃ-ನನಗೆ, ಚೀರಂ-ಶ್ರೇಷ್ಠ ವಸ್ತ್ರವನ್ನೂ, ಮಮ-ನನಗೆ, ವಾಸಾಂಸಿ-ಸಾಧಾರಣ ಬಟ್ಟೆಗಳನ್ನೂ, ಅನ್ನಪಾನೇಚ-ಅನ್ನ ನೀರುಗಳನ್ನೂ ಸರ್ವದಾ-ಯಾವಾಗಲೂ, ಕುರ್ವಾಣಾ ಅಸಿ-ಉಂಟುಮಾಡತಕ್ಕವಳೂ ಆ

ದ್ದೀಯೋ, ತತಃ-ಆದಕಾರಣ, ಮೇ-ನನಗೆ, ಶ್ರಿಯಂ-ಯಜ್ಞಕ್ಕೆ ಬೇಕಾದ ಸಂಪತ್ತನ್ನು, ಲೋಮಶಾಂ-ಬಹಳವಾದ, ಪಶುಭಿಃ ಸಹ-ಹಸುಗಳೊಡನೆ, ಆವಹ-ಉಂಟುಮಾಡು. ಸ್ವಾಹಾ-ಹೋಮ ಮಾಡುವುದದನ್ನು ಸೂಚಿಸುವುದು.

(ವಾ. ಅರ್ಥ)

| | |
|---|---|
| ೧) ಆವಹಂತೀ ವಿತನ್ವಾನಾ ಆತ್ಮನಃ ಚೀರಂ ಮಮ ವಾಸಾಂಸಿ ಅನ್ನಪಾನೇಚ ಸರ್ವದಾ ಕುರ್ವಾಣಾ ಅಸಿ | ೧) (ಎಲೈ ಲಕ್ಷ್ಮಿಯೇ! ನೀನು ಯಾವ ಕಾರಣದಿಂದ) ಯಾಗಕ್ಕೆ ಬೇಕಾದ ದ್ರವ್ಯವನ್ನು ಒದಗಿಸತಕ್ಕವಳೂ, ವೃದ್ಧಿಪಡಿಸತಕ್ಕವಳೂ, ನನಗೆ ರೇಷ್ಮೆ ವಸ್ತ್ರವನ್ನೂ ನನಗೆ ಸಾಧಾರಣ ಬಟ್ಟೆಗಳನ್ನೂ ಅನ್ನ, ನೀರುಗಳನ್ನೂ, ಯಾವಾಗಲೂ ಉಂಟುಮಾಡತಕ್ಕವಳು ಆಗಿದ್ದೀಯೋ |
| ೨) ತತಃ ಮೇ ಶ್ರಿಯಂ, ಲೋಮಶಾಂ ಪಶುಭಿಸ್ಸಹ ಆವಹ ಸ್ವಾಹಾ ! | ೨) ಆದಕಾರಣ ನನಗೆ ಯಜ್ಞಕ್ಕೆ ಬೇಕಾದ ಸಂಪತ್ತನ್ನು ಬಹಳವಾದ ಹಸುಗಳೊಡನೆ ಉಂಟು ಮಾಡು. "ಸ್ವಾಹಾ" ಎಂಬುದು ಹೋಮ ಮಾಡುವುದನ್ನು ಸೂಚಿಸುವುದು. |

ಭಾವ—ಯಜ್ಞ ಯಾಗಾದಿಗಳನ್ನು ಫಲದಲ್ಲಿ ಆಸೆ ಇಲ್ಲದೇ ಮಾಡಿದರೆ, ಮನುಸ್ಸಿನಲ್ಲಿ ರಜೋಗುಣ ತಮೋಗುಣಗಳು ಅಡಗಿ ಸತ್ತ್ವಗುಣವು ಹೆಚ್ಚಿ, ಬ್ರಹ್ಮಜ್ಞಾನಕ್ಕೆ ಬೇಕಾದ ಅಡ್ಡಿಗಳು ಹೋಗಿ ನಿರ್ಮಲವಾದ ಮನಸ್ಸಿನಲ್ಲಿ ಬ್ರಹ್ಮವಿದ್ಯೆಯುಂಟಾಗುವುದು. ಈ ಯಜ್ಞ ಮಾಡುವುದಕ್ಕೆ ಹಣ, ಬಟ್ಟೆ, ಹಸು, ಇತ್ಯಾದಿಗಳು ಬೇಕು. ಮಾಡತಕ್ಕವನ ಶರೀರಧಾರಣೆಗೆ ಅನ್ನ ನೀರು ಬೇಕು. ಇವುಗಳನ್ನೆಲ್ಲಾ ಉಂಟುಮಾಡಿಕೊಡುವಂತೆ ಮಹಾಲಕ್ಷ್ಮಿಯನ್ನು ಪ್ರಾರ್ಥನೆ ಮಾಡಿ ಈ ಮಂತ್ರಗಳಿಂದ ಹೋಮ ಮಾಡಬೇಕೆಂದು ತಿಳಿಸುವುದು.

## ೫ನೆಯ ಅನುವಾಕ

ಮೂಲ ಮಂತ್ರ:—ಆಮಾಯಂತು ಬ್ರಹ್ಮಚಾರಿಣಃ ಸ್ವಾಹಾ ।

ಯಶೋಜನೇಽಸಾನಿಸ್ವಾಹಾ । ಶ್ರೇಯಾನ್ ವಸ್ಯಸೋಽ

ಸಾನಿಸ್ವಾಹಾ । ತಂತ್ವಾಭಗಪ್ರವಿಶಾನಿ ಸ್ವಾಹಾ । ಸಮಾಭಗ

ಪ್ರವಿಶ ಸ್ವಾಹಾ । ತಸ್ಮಿಂತ್ಸಹಸ್ರಶಾಖೇ । ನಿಭಗಾಹಂ

ತ್ವಯಿ ಮೃಜೇ ಸ್ವಾಹಾ । ಯಥಾಽಽಪಃಪ್ರವತಾಯಂತಿ ।

ಯಥಾಮಾಸಾ ಅಹರ್ಜರಂ । ಏವಂ ಮಾಂ ಬ್ರಹ್ಮ

ಚಾರಿಣಃ । ಧಾತರಾಯನ್ತು ಸರ್ವತಃ ಸ್ವಾಹಾ । ಪ್ರತಿವೇ

ಶೋಽಸಿಪ್ರಮಾ ಭಾಹಿ ಪ್ರಮಾಪದ್ಯಸ್ವ॥

**ಅರ್ಥ**—ಬ್ರಹ್ಮಚಾರಿಣಃ-ಬ್ರಹ್ಮವಿದ್ಯೆಗೆ ಅರ್ಹರಾಗಿ ಬ್ರಹ್ಮಚರ್ಯವ್ರತ ದಿಂದ ಕೂಡಿದವರು, ಮಾ ಆಯಂತು-ನನ್ನ ಬಳಿಗೆ ಬರಲಿ, ಜನೇ—ಜನಗಳ ಗುಂಪಿನಲ್ಲಿ, ಯಶಃ-ಕೀರ್ತಿಯುಳ್ಳವನು, ಅಸಾನಿ—ಆಗುವೆನು. ಭಗ-ಐಶ್ವರ್ಯವೇ, ಅಥವಾ ಪರಮಾತ್ಮನೇ! ತಂ ತ್ವಾ-ಆ ವಿಧವಾದ ನಿನ್ನನ್ನು, ಪ್ರವಿಶಾನಿ-ಹೊಂದು ವೆನು. ಭಗ—ಐಶ್ವರ್ಯವೇ, ಸ್ವತಃ-ಆ ನೀನು, ಮಾ-ನನ್ನನ್ನು, ಪ್ರವಿಶ—ಹೊಂದು -ಭಗಐಶ್ವರ್ಯವೇ, ಸಹಸ್ರಶಾಖೇ—ಐಶ್ವರ್ಯ ವೀರ್ಯ ಮೊದಲಾದ ಅನಂತಶಾಖೆ ಯುಳ್ಳ, ತ್ವಯಿ-ನಿನ್ನಲ್ಲಿ, ಅಹಂ-ಪ್ರವೇಶ ಮಾಡಿದಂತಹ ನಾನು, ನಿಮೃಜೇ— ಪರಿಶುದ್ಧನಾಗುತ್ತೇನೆ. ಆಪಃ-ನೀರು, ಪ್ರವತಾಃ-ಹಳ್ಳದ ಕಡೆಗೆ ಪ್ರವಣಗಳಾಗಿ ಯಥಾ-ಹೇಗೆ, ಯಾಂತಿ-ದಿಕ್ಕು ದಿಕ್ಕುಗಳಿಗೆ ಹೋಗುತ್ತವೆಯೋ, ಏವಂ-ಹೀಗೆ, ಧಾತಃ-ಎಲೈ ಪರಮಾತ್ಮನೇ, ಬ್ರಹ್ಮಚಾರಿಣಃ-ಬ್ರಹ್ಮಚಾರಿಗಳು, ಮಾ- ನನ್ನನ್ನು ಕುರಿತು, ಸರ್ವತಃ ಆಯಾಂತು-ಎಲ್ಲಾ ಕಡೆಯಿಂದಲೂ ಬರಲಿ,

ಧಾತಃ-ಪರಮಾತ್ಮನೇ, ಪ್ರತಿವೇಶಃ ಅಸಿ-ಹತ್ತಿರದಲ್ಲಿಯೇ ಇದ್ದೀಯೆ. ಮಾ-ನನ್ನನ್ನು, ಪ್ರಭಾಹಿ-ಚೆನ್ನಾಗಿ ಕಾಪಾಡು. ಪ್ರಪದ್ಯಸ್ವ-ಶರಣಾಗತನನ್ನಾಗಿ ಮಾಡಿಕೋ.

ಸ್ವಾಹಾ ಎಂಬುದು ಎಲ್ಲಾ ಕಡೆಯಲ್ಲಿಯೂ ಹೋಮ ಮಾಡಬೇಕೆಂಬುದನ್ನು ಸೂಚನೆ ಮಾಡುವುದು.

(ವಾ. ಅರ್ಥ)

ಬ್ರಹ್ಮಚಾರಿಗಳು ಎಲ್ಲಾ ಕಡೆಯಿಂದಲೂ ಬ್ರಹ್ಮವಿದ್ಯೆ ಕಲಿಯಲು ಬರುವಂತೆ ಆಗಲಿ ಎಂಬ ಪ್ರಾರ್ಥನೆ.

| | |
|---|---|
| ೧) ಬ್ರಹ್ಮ ಚಾ ರಿ ಣಃ ಮಾ ಆಯಂತು ಸ್ವಾಹಾ। | ೧) ಬ್ರಹ್ಮವಿದ್ಯೆಗೆ ಅರ್ಹರಾಗಿ ಬ್ರಹ್ಮಚರ್ಯ ವ್ರತದಿಂದ ಕೂಡಿದವರು ನನಬಳಿಗೆ ಬರಲಿ! ಸ್ವಾಹಾ–ಹೋಮ ಮಾಡುವುದನ್ನು ತಿಳಿಸುವುದು. |
| ೨) ಜನೇ ಯಶಃ ಅಸಾನಿ ಸ್ವಾಹಾ! | ೨) ಜನಗಳ ಗುಂಪಿನಲ್ಲಿ ಕೀರ್ತಿಯುಳ್ಳವನು ಆಗುವೆನು-ಸ್ವಾಹಾ! |
| ೩) ಭ ಗ ತ ಂ ತ್ವಾ ಪ್ರವಿಶಾನಿ-ಸ್ವಾಹಾ! | ೩) ಐಶ್ವರ್ಯವೇ ಅಥವಾ ಪರಮಾತ್ಮನೇ ಆ ವಿಧವಾದ ನಿನ್ನನ್ನು ಹೊಂದುವೆನು-ಸ್ವಾಹಾ! |
| ೪) ಭಗ ಸಃ ತ್ವಂ ಮಾ ಪ್ರವಿಶ ಸ್ವಾಹಾ | ೪) ಐಶ್ವರ್ಯವೇ! ಆ ನೀನು ನನ್ನನು ಹೊಂದು-ಸ್ವಾಹಾ! |
| ೫) ಭಗ ತಸ್ಮಿನ್ ಸಹಸ್ರ ಶಾಖೇ ತ್ವಯಿ ಅಹಂ ನಿಮೃಜೇ-ಸ್ವಾಹಾ! | ೫) ಐಶ್ವರ್ಯವೇ! ಐಶ್ವರ್ಯ, ವೀರ್ಯ ಮೊದಲಾದ ಅನಂತ ಶಾಖೆಗಳುಳ್ಳ ನಿನ್ನಲ್ಲಿ ಪ್ರವೇಶ ಮಾಡಿದಂಥಾ ನಾನು ಪರಿಶುದ್ಧನಾಗುತ್ತೇನೆ-ಸ್ವಾಹಾ! |

೬) ಆಪಃ ಪ್ರವತಾಃ ಯಥಾ ಯಂತಿ, ಯಥಾಮಾಸಾ ಅಹ ರ್ಜರಂ, ಏವಂ, ಧಾತಃ ! ಬ್ರಹ್ಮ ಚಾರಿಣಃ ಮಾಂ ಸರ್ವತಃ ಆಯಂತು ಸ್ವಾಹಾ !

೬) ನೀರಿನ ಪ್ರವಾಹಗಳು ಹಳ್ಳದ ಕಡೆಗೆ ಹೇಗೆ ದಿಕ್ಕುದಿಕ್ಕುಗಳಿಗೆ ಹೋಗುತ್ತವೆಯೋ, ಹೇಗೆ ತಿಂಗಳುಗಳು ವರ್ಷದಲ್ಲಿ ಸೇರುತ್ತವೆಯೋ, ಹಾಗೆ ಎಲೈ ಪರಮಾತ್ಮನೇ ! ಬ್ರಹ್ಮಚಾರಿಗಳು ನನ್ನನ್ನು ಕುರಿತು ಎಲ್ಲಾ ಕಡೆಯಿಂದಲೂ ಬರಲಿ! ಸ್ವಾಹಾ,

೭) (ಧಾತಃ) ಪ್ರತಿವೇಶಃ ಅಸಿ ; ಮಾ ಪ್ರವಾಹಿ ; ಮಾ ಪ್ರಪದ್ಯಸ್ವ-ಸ್ವಾಹಾ

೭) (ಪರಮಾತ್ಮನೇ) ಹತ್ತಿರದಲ್ಲಿಯೇ ಇದ್ದೀಯೆ. ನನ್ನನ್ನು ಚೆನ್ನಾಗಿ ಕಾಪಾಡು; ನನ್ನನ್ನು ಶರಣಾಗತನನ್ನಾಗಿ ಮಾಡಿಕೋ.

೮) ಸ್ವಾಹಾ !

೮) 'ಸ್ವಾಹಾ' ಎಂಬುದು ಎಲ್ಲಾ ಕಡೆಯಲ್ಲೂ ಹೋಮ ಮಾಡಬೇಕೆಂಬುದನ್ನು ಸೂಚಿಸುತ್ತದೆ. (ಸಕಲದೇವತೆಗಳೂ ನಾನು ಮಾಡುವ ಯಜ್ಞದಿಂದ ಸಂತುಷ್ಟರಾಗಲಿ).

ಭಾವ— ಈ ಮಂತ್ರಗಳು ಬ್ರಹ್ಮವಿದ್ಯೆಯನ್ನು ಕಲಿಯಲು ಅರ್ಹರಾದ, ಸ್ತ್ರೀಸಂಗ ಬಿಟ್ಟಿರತಕ್ಕ ಬ್ರಹ್ಮಚಾರಿಗಳು, ಎಲ್ಲಾ ಕಡೆಯಿಂದಲೂ ಬರುವಂತೆಯೂ, ತನ್ನನ್ನು ಶರಣಾಗತನನ್ನಾಗಿ ಮಾಡಿಕೊಂಡು ಚೆನ್ನಾಗಿ ರಕ್ಷಿಸುವಂತೆಯೂ, ಪರಮಾತ್ಮನನ್ನು ಪ್ರಾರ್ಥನೆ ಮಾಡಿಕೊಂಡು ಹೋಮ ಮಾಡುವಂತೆಯೂ ತಿಳಿಸುವುವು. ಪ್ರಣವಕ್ಕೆ ಅರ್ಥವು ಪರಮಾತ್ಮನೇ ಆದುದರಿಂದ ಪ್ರಣವವನ್ನೇ ಸ್ತುತಿ ಮಾಡಿದಂತೆ ಆಯಿತು. ವೇದಗಳಲ್ಲಿ ಶ್ರೇಷ್ಠವೂ, ವಿಶ್ವರೂಪವೂ ಆದ ಪ್ರಣವವು ಅಮೃತನಾದ ಪರಮಾತ್ಮನಿಂದ ಸರ್ವವೇದಗಳಿಗೂ ಅಧಿಕವಾಗಿ ಪ್ರಾದುರ್ಭೂತವಾಗಿದೆ.ಅದು ಪರಮೈಶ್ವರ್ಯಶಾಲಿ,ಅದು ಜ್ಞಾನದಿಂದ ನನ್ನನ್ನು ಉಜ್ಜೀವಗೊಳಿಸಲಿ, ಎಲೈ ಪ್ರಕಾಶಮಾನವಾದ ಪ್ರಣವವೇ ! ನನ್ನಲ್ಲಿ

ಸದಾ ಅಮೃತ ಸ್ವರೂಪಿಯಾದ (ಬ್ರಹ್ಮವಿದ್ಯೆಗಾಗಿ ಇಲ್ಲಿ ಪ್ರಣವವನ್ನು ಪ್ರಾರ್ಥಿಸಿದೆ) ಪರಮಾತ್ಮನ ಧಾರಣೆಯಾಗಲಿ. ನನ್ನ ಶರೀರವು ಕಾಂತಿಯುಕ್ತವಾಗಲಿ. ನನ್ನ ಜಿಹ್ವೆಯು ಬ್ರಹ್ಮವದನಶೀಲವಾಗಿ ಭೋಗ್ಯತನುವಾಗಲಿ. ಕಿವಿಗಳಿಂದ ಹೆಚ್ಚು ಹೆಚ್ಚಾಗಿ ಬ್ರಹ್ಮಪ್ರತಿಪಾದಕವಾದ ಶಾಸ್ತ್ರಗಳನ್ನು ನಾನು ಕೇಳುವಂತಾಗಲಿ. ನೀನು ಬ್ರಹ್ಮನ ಕೋಶವಾಗಿರುವೆ. ಜ್ಞಾನಜನಕವೂ (ಜ್ಞಾನಭರಿತವೂ ಆಗಿರುವುದರಿಂದ) ನೀನು ಜ್ಞಾನದಿಂದ ಮುಚ್ಚಲ್ಪಟ್ಟಿರುವೆ. ನಾನು ಕೇಳಿದ ತತ್ತ್ವಾರ್ಥವನ್ನು, ಮರೆಯದಂತೆ ಕಾಪಾಡು.

(ಲಕ್ಷ್ಮೀ ಪ್ರಾರ್ಥನಾಮಂತ್ರ) ನೀನು ಸರ್ವಸ್ವವನ್ನೂ ಉತ್ಪತ್ತಿ ಮಾಡಿ, ವೃದ್ಧಿಗೊಳಿಸುವವಳಾದ್ದರಿಂದ ನನಗೆ ಚೀರ ಮತ್ತು ಇತರ ವಸ್ತುಗಳು, ಹಸುಗಳು, ಅನ್ನಪಾನ, ಇವನ್ನು ಸರ್ವದಾ ಉಂಟುಮಾಡುವವಳಾಗಿ, ಹೆಚ್ಚಾಗಿ ವೇದಶ್ರೀಯನ್ನು, ಪಶ್ವಾದಿವಸ್ತುಗಳೊಡನೆ ನೀಡು. " ಸ್ವಾಹಾ " (ಮಂತ್ರವು ಹೋಮ ಸಾಧನವಾಗಿರುವುದರಿಂದ " ಸ್ವಾಹಾ " ಎಂಬುದು ಪ್ರತಿವಾಕ್ಯದ ಅಂತ್ಯದಲ್ಲಿದೆ.)

ಯೋಗ್ಯರಾದ ಬ್ರಹ್ಮಚಾರಿಗಳು ನನ್ನಲ್ಲಿ ಬರಲಿ, ಜನಮಧ್ಯೆ ನಾನು ಯಶಸ್ವಿಯಾಗುವಂತೆ ಆಗಲಿ. ವಸುಯುಕ್ತರ ಮಧ್ಯೆ ನಾನು ಶ್ರೇಷ್ಠನಾಗುವಂತೆ ಆಗಲಿ. ಎಲೈ ಈಶ್ವರನೇ! ಆ ನಿನ್ನನ್ನು ನಾನು ಹೊಂದುವೆನು. ಆ ನೀನು ನನ್ನನ್ನು ಸೇರು. ಹೇ ಸಹಸ್ರ ಶಾಖೆಯುಳ್ಳ ಈಶ್ವರನೇ! ನಿನ್ನನ್ನು ಪ್ರವೇಶಿಸಿ ನಾನು ಶುದ್ಧನಾಗುವೆನು. ಎಲೈ ಪರಮಾತ್ಮನೇ! ಹೇಗೆ ನೀರು ದಿಕ್ಕು ದಿಕ್ಕುಗಳಲ್ಲಿ ಹರಿಯುತ್ತದೆಯೋ, ಹೇಗೆ ಮಾಸಗಳು ಸಂವತ್ಸರದಲ್ಲಿ ನುಗ್ಗಿ ಬರುತ್ತವೆಯೋ, ಹಾಗೆ ಯೋಗ್ಯರಾದ ಶಿಷ್ಯರು ನನ್ನಲ್ಲಿ ಬರಲಿ. ಎಲೈ ಧಾತನೇ, ನೀನು ಸನ್ನಿಹಿತನಾಗಿರುವೆ. ನನ್ನನ್ನು ವಿಶೇಷತಃ ಪಾಲಿಸು, ನನ್ನನ್ನು ಪ್ರಪನ್ನನನ್ನಾಗಿ ಮಾಡು.

**ಮೂಲ ಮಂತ್ರ:**—ಭೂರ್ಭುವಸ್ಸುವ ರಿತಿವಾ ಏತಾಸ್ತಿಸ್ರೋ

ವ್ಯಾಹೃತಯಃ । ತಾಸಾ ಮುಹಸ್ಮೈತಾಂ ಚತುರ್ಥೀಂ।

ಮಾಹಾಚಮಸ್ಯಃ ಪ್ರವೇದಯತೇ । ಮಹ ಇತಿ । ತದ್ಬ್ರಹ್ಮ ।
ಸ ಆತ್ಮಾ । ಅಂಗಾನ್ಯನ್ಯಾ ದೇವತಾಃ ॥

**ಅರ್ಥ**— ಭೂಃ, ಭುವಃ, ಸುವಃ, ಇತಿ–ಭೂಃ, ಭುವಃ, ಸುವಃ ಎಂಬ, ಏತಾಃ ತಿಸ್ರಃ ವ್ಯಾಹೃತಯಃ ವೈ- ಈ ಮೂರು ವ್ಯಾಹೃತಿಗಳು ಪ್ರಸಿದ್ಧಗಳಾಗಿವೆ. ತಾಸಾಂ- ಈ ವ್ಯಾಹೃತಿಗಳಿಗೆ, ಮಹಃ ಇತಿ–ಮಹಃ ಎಂಬ, ಏತಾಂ ಚತುರ್ಥೀಂ ಈ ನಾಲ್ಕನೆಯ ವ್ಯಾಹೃತಿಯನ್ನು, ಮಾಹಾಚಮಸ್ಯಃ–ಮಹಾಚಮಸ್ಯನೆಂಬ ಋಷಿಯು, ಪ್ರವೇದಯತೇ–ಕಂಡನು. ತತ್–ಆ, ಮಹಃ ಎಂಬುದು, ಬ್ರಹ್ಮ- ಪರಬ್ರಹ್ಮನನ್ನು ಬೋಧಿಸುವುದರಿಂದ ಎಲ್ಲಕ್ಕಿಂತಲೂ ದೊಡ್ಡದು. ಸಃ ಆತ್ಮಾ- ಆ ಪರಬ್ರಹ್ಮನು ಎಲ್ಲವನ್ನೂ ವ್ಯಾಪಿಸಿರುವ ಆತ್ಮನು. ಅನ್ಯಾಃ ದೇವತಾಃ- ಇತರ ದೇವತೆಗಳು, ಅಂಗಾನಿ-ಆ ಪರಬ್ರಹ್ಮನ ಅವಯವಗಳು.

(ವಾ. ಅರ್ಥ)

| | |
|---|---|
| ೧) ಭೂಃ, ಭುವಃ, ಸುವಃ ಇತಿ ಏತಾಃ ತಿಸ್ರಃ ವ್ಯಾಹೃತಯಃ ವೈ. | ೧) ಭೂಃ, ಭುವಃ, ಸುವಃ, ಎಂಬ ಈ ಮೂರು ವ್ಯಾಹೃತಿಗಳು ಪ್ರಸಿದ್ಧಗಳಾಗಿವೆ. |
| ೨) ತಾಸಾಂ ಮಹ ಇತಿ ಏತಾಂ ಚತುರ್ಥೀಂ ಮಾಹಾಚಮಸ್ಯಃ ಪ್ರವೇದಯತೇ. | ೨) ಈ ವ್ಯಾಹೃತಿಗಳಿಗೆ 'ಮಹಃ' ಎಂಬ ಈ ನಾಲ್ಕನೆಯ ವ್ಯಾಹೃತಿಯನ್ನು ಮಹಾಚಮಸನೆಂಬ ಋಷಿಯು ಕಂಡನು. |
| ೩) ತತ್ ಬ್ರಹ್ಮ, ಸಃ ಆತ್ಮಾ ; ಅನ್ಯಾಃ ದೇವತಾಃ ಅಂಗಾನಿ. | ೩) ಆ 'ಮಹಃ' ಎಂಬುದು ಪರಬ್ರಹ್ಮನನ್ನು ಬೋಧಿಸುವುದರಿಂದ ಎಲ್ಲಕ್ಕಿಂತಲೂ ದೊಡ್ಡದು ; ಆ ಪರಬ್ರಹ್ಮನು ಎಲ್ಲವನ್ನೂ ವ್ಯಾಪಿಸಿರತಕ್ಕ ಪರಮಾತ್ಮನು ; ಇತರ ದೇವತೆಗಳು ಆ ಪರಬ್ರಹ್ಮನ ಅವಯವಗಳು. |

ಭಾವ—ಪರಬ್ರಹ್ಮನನ್ನು ತಿಳಿಸುವ ವಿದ್ಯೆಗೆ ಪರವಿದ್ಯೆ ಎಂದು ಹೆಸರು. ಅದನ್ನು ಮುಂದೆ ತಿಳಿಸಲಾಗುತ್ತದೆ. ಈ ಮಂತ್ರದಲ್ಲಿ ಆ ಪರವಿದ್ಯೆಗೆ ಅಂಗವಾದ ವ್ಯಾಹೃತಿಯನ್ನು ಉಪಾಸನೆ ಮಾಡತಕ್ಕ ರೀತಿಯು ತಿಳಿಸಲ್ಪಟ್ಟಿದೆ. ಭೂಃ, ಭುವಃ, ಸುವಃ ಎಂಬುವು ಕ್ರಮವಾಗಿ, ಋಗ್ವೇದ, ಯಜುರ್ವೇದ, ಸಾಮವೇದಗಳ ಸಾರಗಳು. ಇವುಗಳನ್ನು ವ್ಯಾಹೃತಿಗಳೆಂದು ಕರೆಯುತ್ತಾರೆ. ಮಹಾಚಮಸ್ಯನೆಂಬ ಋಷಿಯು "ಮಹಃ" ಎಂಬ ವ್ಯಾಹೃತಿಯನ್ನು ಕಂಡನು. ಇದು ಪರಬ್ರಹ್ಮನನ್ನು ಬೋಧಿಸುವುದರಿಂದ ಎಲ್ಲಕ್ಕಿಂತ ದೊಡ್ಡದು. ಪರಬ್ರಹ್ಮನು ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಿಸಿರುವುದರಿಂದ ಆತ್ಮನು, ಇತರ ದೇವತೆಗಳು ಅವನ ಅವಯವಗಳಂತೆ ಅವನ ಆಧೀನರು.

**ಮೂಲ ಮಂತ್ರ ;—ಭೂರಿತಿವಾ ಅಯಂ ಲೋಕಃ । ಭುವ**

**ಇತ್ಯಂತರಿಕ್ಷಂ । ಸುವರಿತ್ಯಸೌ ಲೋಕಃ । ಮಹ ಇತ್ಯಾ**

**ದಿತ್ಯಃ । ಆದಿತ್ಯೇನ ವಾವಸರ್ವೇ ಲೋಕಾಮಹಿಯಂತೇ ॥**

**ಅರ್ಥ**—ಭೂಃ ಇತಿ ಅಯಂಲೋಕಃ-ಭೂಃ ಎಂಬುದನ್ನು ಭೂಲೋಕ ಎಂದು ಧ್ಯಾನ ಮಾಡಬೇಕು. ಭುವಃ ಇತಿ ಅಂತರಿಕ್ಷಂ-"ಭುವಃ" ಎಂಬುದನ್ನು ಅಂತರಿಕ್ಷವನ್ನಾಗಿ ಧ್ಯಾನ ಮಾಡಬೇಕು. ಸುವಃ ಇತಿ ಅಸೌಲೋಕಃ-"ಸುವಃ" ಎಂಬುದನ್ನು ಸ್ವರ್ಗವನ್ನಾಗಿ ಧ್ಯಾನಮಾಡಬೇಕು. ಮಹಃ ಇತಿ ಆದಿತ್ಯಃ-ಮಹಃ ಎಂಬುದನ್ನು ಸೂರ್ಯಲೋಕವನ್ನಾಗಿ ಧ್ಯಾನ ಮಾಡಬೇಕು. ಆದಿತ್ಯೇನವಾವ-ಸೂರ್ಯನಿಂದಲೇ, ಸರ್ವೇ ಲೋಕಾಃ-ಎಲ್ಲಾ ಲೋಕಗಳೂ, ಮಹೀಯಂತೇ-ಪೂಜಿಸಲ್ಪಡುತ್ತವೆ.

**(ವಾ. ಅರ್ಥ)**

| | |
|---|---|
| ೪) "ಭೂಃ" ಇತಿ ಅಯಂಲೋಕಃ 'ಭುವಃ' ಇತಿ ಅಂತರಿಕ್ಷಂ; "ಸುವಃ" | ೪) 'ಭೂಃ' ಎಂಬುದನ್ನು 'ಭೂಲೋಕ' ಎಂದು ಧ್ಯಾನ ಮಾಡಬೇಕು; |

| | |
|---|---|
| ಇತಿ ಅಸೌ ಲೋಕಃ; 'ಮಹಃ' ಇತಿ ಆದಿತ್ಯ: | "ಭುವಃ" ಎಂಬುದನ್ನು ಅಂತರಿಕ್ಷವನ್ನಾಗಿ ಧ್ಯಾನ ಮಾಡಬೇಕು; "ಸುವಃ" ಎಂಬುದನ್ನು ಸ್ವರ್ಗವನ್ನಾಗಿ ಧ್ಯಾನ ಮಾಡಬೇಕು; "ಮಹಃ" ಎಂಬುದನ್ನು ಸೂರ್ಯಲೋಕವನ್ನಾಗಿ ಧ್ಯಾನ ಮಾಡಬೇಕು. |
| ಆದಿತ್ಯೇನ ಸರ್ವೇ ಲೋಕಾಃ ಮಹೀಯಂತೇ. | ಸೂರ್ಯನಿಂದಲೇ ಎಲ್ಲಾ ಲೋಕಗಳೂ ಪೂಜಿಸಲ್ಪಡುತ್ತವೆ. |

ಭಾವ – ಸೂರ್ಯನಿ ದ ಭೂಲೋಕ ಭುವರ್ಲೋಕ, ಸ್ವರ್ಗಲೋಕಗಳಿಗೆ ಸ್ಥಿತಿ ಉಂಟಾಗುವುದರಿಂದ ಸೂರ್ಯನು ದೊಡ್ಡವನೆನಿಸಿಕೊಂಡಂತೆ, ಮಹಃ ಎಂಬ ವ್ಯಾಹೃತಿಗಳು ವ್ಯಾಪಿಸಲ್ಪಟ್ಟು ಆದಕ್ಕೆ ಅಂಗವಾಗಿರುತ್ತವೆ. ಮಹಃ ಎಂಬುದು ಅವುಗಳಿಗಿಂತ ದೊಡ್ಡದು ಎನಿಸಿಕೊಳ್ಳುತ್ತದೆ. ಈ ರೀತಿ ಮುಂದಿನ ಉಪಾಸನೆಗಳಲ್ಲಿಯೂ ತಾತ್ಪರ್ಯವನ್ನರಿಯಬೇಕು.

**ಮೂಲ ಮಂತ್ರ:—ಭೂರಿತಿವಾ ಅಗ್ನಿಃ । ಭುವ ಇತಿವಾಯುಃ ।**

**ಸುವರಿತ್ಯಾದಿತ್ಯಃ । ಮಹಃ ಇತಿ ಚಂದ್ರಮಾಃ । ಚಂದ್ರಮಸಾವಾವ ಸರ್ವಾಣಿ ಜ್ಯೋತೀಗ್‌ಂಷಿ ಮಹೀಯಂತೇ ॥**

**ಅರ್ಥ:** ಭೂಃ ಇತಿ ಅಗ್ನಿಃ–ಭೂಃ ಎಂಬುದನ್ನು ಅಗ್ನಿ ಎಂದು ಧ್ಯಾನಿಸಬೇಕು. ಭುವಃ ಇತಿವಾಯುಃ–ಭುವಃ ಎಂಬುದನ್ನು ವಾಯುವೆಂದು ಧ್ಯಾನಿಸಬೇಕು. ಸುವಃ ಇತಿ ಆದಿತ್ಯಃ–ಸುವಃ ಎಂಬುದನ್ನು ಸೂರ್ಯನೆಂದು ಧ್ಯಾನಿಸಬೇಕು. ಮಹಃ ಇತಿ ಚಂದ್ರಮಾಃ–ಮಹಃ ಎಂಬುದನ್ನು ಚಂದ್ರನೆಂದು ಧ್ಯಾನಿಸಬೇಕು. ಚಂದ್ರಮಸಾವಾವ–ಚಂದ್ರನಿಂದಲೇ, ಸರ್ವಾಣಿ ಜ್ಯೋತಿಂಷಿ–ಎಲ್ಲಾ ತೇಜಸ್ಸುಗಳೂ, ಮಹೀಯಂತೇ–ಪೂಜಿಸಲ್ಪಡುತ್ತವೆ.

**(ವಾ. ಅರ್ಥ)**

| | |
|---|---|
| ೫) 'ಭೂಃ' ಇತಿ ಅಗ್ನಿಃ; 'ಭುವಃ' ಇತಿ ವಾಯುಃ, 'ಸುವಃ' | ೫) 'ಭೂಃ' ಎಂಬುದನ್ನು ಅಗ್ನಿಯೆಂದು ಧ್ಯಾನಿಸಬೇಕು; 'ಭುವಃ' |

ಇತಿ ಆದಿತ್ಯಃ, 'ಮಹ' ಇತಿ ಚಂದ್ರ ಮಾಃ ; ಚಂದ್ರಮಸಾವಾವ ಸರ್ವಾ ಣಿ ಜ್ಯೋತೀಂಷಿ ಮಹೀಯಂತೇ.

ಎಂಬುದನ್ನು ವಾಯು ಎಂದು ಧ್ಯಾನಿಸ ಬೇಕು ; 'ಸುವಃ' ಎಂಬುದನ್ನು ಸೂರ್ಯ ನೆಂದು ಧ್ಯಾನಿಸಬೇಕು ; 'ಮಹಃ' ಎಂಬುದನ್ನು 'ಚಂದ್ರ' ಎಂದು ಧ್ಯಾನಿ ಸಬೇಕು ; ಚಂದ್ರನಿಂದಲೇ ಎಲ್ಲಾ ತೇಜಸ್ಸುಗಳೂ ಪೂಜಿಸಲ್ಪಡುತ್ತವೆ.

**ಭಾವ :** ಚಂದ್ರನಿಗೆ ಇತರ ತೇಜಸ್ಸುಗಳು ಅಧೀನವಾಗಿರುವಂತೆ ಮಹಃ ಎಂಬುದಕ್ಕೆ ಇತರ ವ್ಯಾಹೃತಿಗಳು ಅಂಗ.

**ಮೂಲ ಮಂತ್ರ :—ಭೂರಿತಿವಾ ಋಚಃ । ಭುವ ಇತಿ ಸಾಮಾನಿ ।**

**ಸುವರಿತಿ ಯಜೂಗ್ಂಷಿ । ಮಹ ಇತಿ ಬ್ರಹ್ಮ । ಬ್ರಹ್ಮಣಾ**

**ವಾವ ಸರ್ವೇವೇದಾ ಮಹೀಯಂತೇ ॥**

**ಅರ್ಥ :** ಭೂಃ ಇತಿ ಋಚಃ-ಭೂಃ ಎಂಬುದನ್ನು ಋಗ್ವೇದವೆಂದು ಧ್ಯಾನಿಸಬೇಕು. ಭುವಃ ಇತಿ ಸಾಮಾನಿ-ಭುವಃ ಎಂಬುದನ್ನು ಸಾಮವೇದ ವೆಂದು ಧ್ಯಾನಿಸಬೇಕು. ಸುವಃ ಇತಿಯಜೂಂಷಿ-ಸುವಃ ಎಂಬುದನ್ನು ಯಜು ರ್ವೇದವೆಂದು ಧ್ಯಾನಿಸಬೇಕು. ಮಹಃ ಇತಿ ಬ್ರಹ್ಮ-ಮಹಃ ಎಂಬುದನ್ನು ಓಂ ಕಾರವೆಂದು ಧ್ಯಾನಿಸಬೇಕು. ಬ್ರಹ್ಮಣಾವಾವ-ಈ ಓಂಕಾರದಿಂದಲೇ, ಸರ್ವೇವೇದಾಃ-ಎಲ್ಲಾ ವೇದಗಳೂ, ಮಹೀಯಂತೇ-ಪೂಜಿಸಲ್ಪಡುತ್ತವೆ. ಓಂ ಕಾರಕ್ಕೆ ವೇದತ್ರಯಗಳು ಅಧೀನವಾಗಿರುವಂತೆ ಮಹಃ ಎಂಬುದಕ್ಕೆ ಇತರ ವ್ಯಾಹೃತಿಗಳು ಅಂಗಗಳು.

(ವಾ. ಅರ್ಥ)

೬) 'ಭೂಃ' ಇತಿ ಋಚಃ; ಭುವಃ ಇತಿ ಸಾಮಾನಿ ; ಸುವಃ

೬) ಭೂಃ ಎಂಬುದನ್ನು ಋಗ್ವೇದ ಎಂದು ಧ್ಯಾನಿಸಬೇಕು, ಭುವಃ ಎಂಬು

ಇತಿ ಯಜೂಂಷಿ; ಮಹ ಇತಿಬ್ರಹ್ಮ; ಬ್ರಹ್ಮಣಾವಾವ ಸರ್ವೇ ವೇದಾಃ ಮಹೀಯಂತೇ.

ದನ್ನು ಸಾಮವೇದ ಎಂದು ಧ್ಯಾನಿಸಬೇಕು; ಸುವಃ ಎಂಬುದನ್ನು ಯಜುರ್ವೇದ ಎಂದು ಧ್ಯಾನಿಸಬೇಕು; ಮಹಃ ಎಂಬುದನ್ನು 'ಓಂ'ಕಾರವೆಂದು ಧ್ಯಾನಿಸಬೇಕು. 'ಓಂ'ಕಾರದಿಂದಲೇ ಎಲ್ಲಾ ವೇದಗಳೂ ಪೂಜಿಸಲ್ಪಡುತ್ತವೆ.

ಮೂಲ ಮಂತ್ರ :—ಭೂರಿತಿವೈ ಪ್ರಾಣಃ । ಭುವ ಇತ್ಯಪಾನಃ ।

ಸುವ ರಿತಿ ವ್ಯಾನಃ । ಮಹ ಇತ್ಯನ್ನಂ । ಅನ್ನೇನವಾವ

ಸರ್ವೇ ಪ್ರಾಣಾ ಮಹೀಯಂತೇ ॥

ಅರ್ಥ :— ಭೂಃ ಇತಿ ಪ್ರಾಣಃ-ಭೂಃ ಎಂಬುದನ್ನು ಪ್ರಾಣ ಎಂದು ಧ್ಯಾನಮಾಡಬೇಕು. ಭುವಃ ಇತಿ ಅಪಾನಃ-ಭುವಃ ಎಂಬುದನ್ನು ಅಪಾನ ಎಂದು ಧ್ಯಾನಮಾಡಬೇಕು. ಸುವಃ ಇತಿ ವ್ಯಾನಃ-ಸುವಃ ಎಂಬುದನ್ನು ವ್ಯಾನ ಎಂದು ಮಾಡಬೇಕು. ಮಹಃ ಇತಿ ಅನ್ನಂ-ಮಹಃ ಎಂಬುದನ್ನು ಅನ್ನ ಎಂದು ಧ್ಯಾನಮಾಡಬೇಕು. ಅನ್ನೇನವಾವ-ಅನ್ನದಿಂದಲೇ, ಸರ್ವೇ ಪ್ರಾಣಾಃ-ಎಲ್ಲಾ ಪ್ರಾಣಗಳೂ, ಮಹೀಯಂತೇ-ಪೂಜಿಸಲ್ಪಡುತ್ತವೆ.

(ವಾ. ಅರ್ಥ)

೭) ಭೂಃ ಇತಿ ಪ್ರಾಣಃ ; ಭುವಃ ಇತಿ ಅಪಾನಃ; ಸುವಃ ಇತಿ ವ್ಯಾನಃ; ಮಹ ಇತಿ ಅನ್ನಂ; ಅನ್ನೇನವಾವ ಸರ್ವೇಪ್ರಾಣಾಃ ಮಹೀಯಂತೇ.

೭) ಭೂಃ ಎಂಬುದನ್ನು ಪ್ರಾಣ ಎಂದು ಧ್ಯಾನಮಾಡಬೇಕು; ಭುವಃ ಎಂಬುದನ್ನು ಅಪಾನ ಎಂದು ಧ್ಯಾನ ಮಾಡಬೇಕು; 'ಸುವಃ' ಎಂಬುದನ್ನು ವ್ಯಾನ ಎಂದು ಧ್ಯಾನಮಾಡಬೇಕು; ಮಹಃ ಎಂಬುದನ್ನು ಅನ್ನ ಎಂದು ಧ್ಯಾನಮಾಡಬೇಕು ; ಅನ್ನದಿಂದಲೇ

ಎಲ್ಲಾ ಪ್ರಾಣಗಳೂ ಪೂಜಿಸಲ್ಪಡುತ್ತವೆ.

**ಭಾವ :** ಅನ್ನದಿಂದ ಪ್ರಾಣಾಪಾನಾದಿಗಳು ಪೋಷಿಸಲ್ಪಟ್ಟು ಅದಕ್ಕೆ ಅಧೀನವಾಗಿರುವಂತೆ ಮಹಃ ಎಂಬ ವ್ಯಾಹೃತಿಗೆ ಇತರ ವ್ಯಾಹೃತಿಗಳು ಅಂಗಗಳು.

**ಮೂಲ ಮಂತ್ರ :—ತಾವಾ ಏತಾಶ್ಚತಸ್ರಶ್ಚತುರ್ಧಾ । ಚತಸ್ರಶ್ಚ**

**ತಸ್ರೋ ವ್ಯಾಹೃತಯಃ। ತಾಯೋ ವೇದ। ಸವೇದಬ್ರಹ್ಮ।**

**ಸರ್ವೇಸ್ಮೈದೇವಾ ಬಲಿಮಾವಹಂತಿ ॥**

**ಅರ್ಥ :** ತಾಃ ಏತಾಃ ಚತಸ್ರಃ-ಈ ನಾಲ್ಕು ವ್ಯಾಹೃತಿಗಳೂ, ಚತುರ್ಧಾವಾ-ನಾಲ್ಕು ವಿಧಗಳಲ್ಲದೆ ; ವ್ಯಾಹೃತಯಃ-ವ್ಯಾಹೃತಿಗಳು, ಚತಸ್ರಃ ಚತಸ್ರಃ-ಹದಿನಾರು ಆಗುತ್ತವೆ. ಯಃ ಏವಂ ವೇದ-ಯಾವನು ಈ ರೀತಿ ಉಪಾಸನೆಮಾಡುತ್ತಾನೆಯೋ, ಅಸ್ಮೈ-ಇವನಿಗೆ, ಬಲಿಂ-ಪೂಜೆಯನ್ನು, ಆವಹಂತಿ-ಮಾಡುತ್ತಾರೆ.

**(ವಾ. ಅರ್ಥ)**

| | |
|---|---|
| ೮) ತಾಃ ಏತಾಃ ಚತಸ್ರಃ ಚತುರ್ಧಾವಾ; ವ್ಯಾಹೃತಯಃ ಚತಸ್ರಃ ಚತಸ್ರಃ. | ೮) ಈ ನಾಲ್ಕು ವ್ಯಾಹೃತಿಗಳಲ್ಲಿ, ಪ್ರತಿಯೊಂದು ನಾಲ್ಕು ವಿಧಗಳು. ಆದುದರಿಂದ ವ್ಯಾಹೃತಿಗಳು ಹದಿನಾರು ಆಗುತ್ತವೆ. |
| ೯) ಯಃ ಏವಂ ವೇದ, ಅಸ್ಮೈ ಬಲಿಂ ಆವ ಹಂತಿ. | ೯) ಯಾವನು ಈರೀತಿ ಉಪಾಸನೆ ಮಾಡುತ್ತಾನೆಯೋ ಅವನಿಗೆ ಪೂಜೆಯನ್ನು ಮಾಡುತ್ತಾರೆ. |

**ಭಾವ :** ಭೂಃ ಭುವಃ ಸುವಃ ಮಹಃ ಎಂಬ ವ್ಯಾಹೃತಿಗಳಲ್ಲಿ ಲೋಕ, ದೇವ, ವೇದ, ಪ್ರಾಣ ಎಂಬ ದೃಷ್ಟಿಗಳನ್ನು ಇಟ್ಟು ಉಪಾಸನೆ ಮಾಡುವುದು

ರಿಂದ ವ್ಯಾಹೃತಿಗಳು 16 ಆಗುವುವು. ಈ ರೀತಿ ಉಪಾಸನೆ ಮಾಡತಕ್ಕವನಿಗೆ ಬ್ರಹ್ಮವಿದ್ಯೆ ಸಿದ್ಧಿಸುವುದು. ಈ ರೀತಿ ಉಪಾಸನೆ ಮಾಡತಕ್ಕವನನ್ನು ಎಲ್ಲರೂ ಪೂಜಿಸುವರು.

## ವ್ಯಾಹೃತಿಯನ್ನು ಉಪಾಸನೆ ಮಾಡುವ ಕ್ರಮ

| | | | | |
|---|---|---|---|---|
| | ಭೂಃ | ಭುವಃ | ಸುವಃ | ಮಹಃ |
| | ಎಂಬುದನ್ನು | ಎಂಬುದನ್ನು | ಎಂಬುದನ್ನು | ಎಂಬುದನ್ನು |
| ಲೋಕ. | ಭೂಲೋಕ. | ಅಂತರಿಕ್ಷ | ಸ್ವರ್ಗ | ಆದಿತ್ಯ |
| ದೇವ. | ಅಗ್ನಿ | ವಾಯು | ಆದಿತ್ಯ | ಚಂದ್ರ |
| ವೇದ. | ಋಗ್ವೇದ | ಸಾಮವೇದ | ಯಜುರ್ವೇದ | ಓಂ |
| ಪ್ರಾಣ. | ಪ್ರಾಣವಾಯು | ಅಪಾನ | ವ್ಯಾನ | ಅನ್ನ |
| | ಎಂದೂ | ಎಂದೂ | ಎಂದೂ | ಎಂದೂ |

ಧ್ಯಾನಮಾಡಬೇಕು. ಈರೀತಿ ಬ್ರಹ್ಮೋಪಾಸನೆಗೆ ಅಂಗಗಳು ಹೇಳಲ್ಪಟ್ಟವು ಮುಂದಿನ ಮಂತ್ರವು ಬ್ರಹ್ಮೋಪಾಸನೆಯನ್ನು ಬೋಧಿಸುವುದು.

## ವ್ಯಾಹೃತಿಯನ್ನು ಉಪಾಸನೆ ಮಾಡುವ ಕ್ರಮ

| | | ಉಪಾಸನೆ ೧ | ಉಪಾಸನೆ ೨ | ಉಪಾಸನೆ ೩ | ಉಪಾಸನೆ ೪ |
|---|---|---|---|---|---|
| | ವ್ಯಾಹೃತಿ | ಲೋಕ | ದೇವ | ವೇದ | ಪ್ರಾಣ |
| ೧. | ಭೂಃ | ಭೂಲೋಕ | ಅಗ್ನಿ | ಋಕ್ | ಪ್ರಾಣ |
| ೨. | ಭುವಃ | ಅಂತರಿಕ್ಷ | ವಾಯು | ಸಾಮ | ಅಪಾನ |
| ೩. | ಸುವಃ | ಸ್ವರ್ಗ | ಆದಿತ್ಯ | ಯಜುಸ್ | ವ್ಯಾನ |
| ೪. | ಮಹಃ | ಆದಿತ್ಯ | ಚಂದ್ರ | ಓಂ | ಅನ್ನ |

## ೬ ನೆಯ ಅನುವಾಕ

ಮೂಲ ಮಂತ್ರ :—ಸಯ ಏಷೋಽನ್ತರ್ ಹೃದಯ ಆಕಾಶಃ ।

ತಸ್ಮಿನ್ನಯಂ ಪುರುಷೋ ಮನೋಮಯಃ । ಅಮೃತೋ

ಹಿರಣ್ಮಯಃ । ಅಂತರೇಣ ತಾಲುಕೇ । ಯ ಏಷಃ ಸ್ತನ

ಇವಾವಲಂಬತೇ । ಸೇಂದ್ರಯೋನಿಃ । ಯತ್ರಾಸೌಕೇ

ಶಾನ್ತೋ ವಿವರ್ತ್ತತೇ । ವ್ಯಪೋಹ್ಯ ಶೀರ್ಷ ಕಪಾಲೇ ।

ಭೂರಿತ್ಯಗ್ನೌಪ್ರತಿತಿಷ್ಠತಿ । ಭುವ ಇತಿವಾಯೌ । ಸುವರಿ

ತ್ಯಾದಿತ್ಯೇ । ಮಹ ಇತಿ ಬ್ರಹ್ಮಣಿ । ಆಪ್ನೋತಿಸ್ವಾರಾ

ಜ್ಯಮ್। ಆಪ್ನೋತಿ ಮನಸಸ್ಪತಿಮ್। ವಾಕ್ಪತಿಶ್ಚಕ್ಷುಷ್ಪತಿಃ॥

ಶ್ರೋತ್ರಪತಿ ರ್ವಿಜ್ಞಾನಪತಿಃ । ಏತತ್ತತೋ ಭವತಿ ।

ಆಕಾಶಶರೀರಂ ಬ್ರಹ್ಮ । ಸತ್ಯಾತ್ಮಪ್ರಾಣಾರಾಮಂ ಮನ

ಆನಂದಮ್। ಶಾಂತಿ ಸಮೃದ್ಧಮಮೃತಂ । ಇತಿ ಪ್ರಾಚೀನ

ಯೋಗ್ಯೋಪಾಸ್ವ ॥

ಅರ್ಥ—ಏಷಃ-ಪ್ರಸಿದ್ಧವಾದ, ಅಂತರ್ಹೃದಯೇ-ಹೃದಯದೊಳಗೆ, ಯಃ ಆಕಾಶಃ-ಯಾವ ಆಕಾಶವಿದೆಯೋ, ತಸ್ಮಿನ್-ಆದರಲ್ಲಿ, ಮನೋಮಯಃ-ಪರಿಶುದ್ಧವಾದ ಮನಸ್ಸಿನಿಂದ ತಿಳಿಯಲ್ಪಡತಕ್ಕಂತಹ, ಅಮೃತಃ-ಜನನಮರಣ ಮೊದಲಾದ ಸಾಂಸಾರಿಕ ಧರ್ಮವಿಲ್ಲದಂತಹ, ಹಿರಣ್ಮಯಃ-ಚಿನ್ನದಂತೆ ಸುಂದರ

ವಿಗ್ರಹವುಳ್ಳಂತಹ, ಅಸೌ–ಈ, ಅಯಂಪುರುಷಃ-"ಮಹಃ" ಎಂಬ ವ್ಯಾಹೃತಿ ಯಿಂದ ಬೋಧಿಸಲ್ಪಟ್ಟ ಪರಬ್ರಹ್ಮನು ಇರುತ್ತಾನೆ. ಸಃ ಅಯಂ ಪುರುಷಃ ಉಪಾಸ್ಯಃ-ಅವನು ಹೃದಯಾಕಾಶದಲ್ಲಿ ಮೇಲ್ಕಂಡ ಗುಣಗಳೊಡನೆ ಉಪಾಸನೆ ಮಾಡಲ್ಪಡತಕ್ಕವನು ಎಂದು ತಾತ್ಪರ್ಯ. ತಾಲುಕೇ ಅಂತರೇಣ–ನಾಲಿಗೆಯ ಮಧ್ಯದಲ್ಲಿ, ಸ್ತನ ಇವ–ಮೊಲೆಯ ಹಾಗೆ, ಯಃ ಏಷಃ ಅವಲಂಬತೇ-ಯಾವ ಈ ಮಾರ್ಗವು ತೂಗಾಡುತ್ತಿದೆಯೋ, ಸಾ-ಆ ದಾರಿಯು, ಇಂದ್ರಯೋನಿಃ-ಮುಕ್ತರಂತೆ ಪ್ರಕಾಶನಾದ ಜೀವನಿಗೆ ಹೊರಕ್ಕೆ ಹೋಗುವ ದಾರಿಯು. ಯತ್ರ-ಯಾವ ಅರ್ಚಿರಾದಿ ಮಾರ್ಗದಲ್ಲಿ; ಕೇಶಾಂತಃ–ಬ್ರಹ್ಮರುದ್ರರಿಗೆ ಒಡೆಯನಾದ ಪರಮಾತ್ಮನು, ವಿವರ್ತತೇ–ವಿಶೇಷವಾಗಿಪ್ರಾಪ್ಯನಾಗಿರುತ್ತಾನೆ. (ಉಪಾಸನೆ ಮಾಡತಕ್ಕ ಜೀವಾತ್ಮನು) ಶೀರ್ಷಕಪಾಲೇ-ತಲೆ ಬರುಡೆಯನ್ನು ವ್ಯಪೋಹ್ಯ-ಸೀಳಿಕೊಂಡು, ಭೂಃ ಇತಿ-ಭೂಃ ಎಂದು ಧ್ಯಾನ ಮಾಡಿದುದರಿಂದ ಅಗ್ನೌ–ಅಗ್ನಿ ಲೋಕದಲ್ಲಿ, ಪ್ರತಿತಿಷ್ಠತಿ–ಕೆಲವು ಕಾಲ ತಂಗುತ್ತಾನೆ. ಭುವಃ ಇತಿ-ಭುವಃ ಎಂದು ಧ್ಯಾನ ಮಾಡಿದುದರಿಂದ, ವಾಯೌ–ವಾಯುಲೋಕದಲ್ಲಿ. ಪ್ರತಿತಿಷ್ಠತಿ-ತಂಗುತ್ತಾನೆ. ಸುವ: ಇತಿ–ಸುವಃ ಎಂದು ಧ್ಯಾನ ಮಾಡಿದುದ ರಿಂದ, ಆದಿತ್ಯೇ-ಸೂರ್ಯ ಲೋಕದಲ್ಲಿ, ಪ್ರತಿತಿಷ್ಠತಿ–ತಂಗುತ್ತಾನೆ. ಮಹಃ ಇತಿ-ಮಹಃ ಎಂದು ಉಪಾಸನೆ ಮಾಡಿದುದರಿಂದ, ಬ್ರಹ್ಮಣಿ-ಪರಬ್ರಹ್ಮನಲ್ಲಿ, ಪ್ರತಿ ತಿಷ್ಠತಿ-ಶಾಶ್ವತವಾಗಿರುತ್ತಾನೆ. ಸ್ವಾರಾಜ್ಯಂ–ಕರ್ಮಕ್ಕೆ ವಶನಾಗದೇ–ಇರುವಿಕೆ ಯನ್ನು, ಆಪ್ನೋತಿ–ಹೊಂದುತ್ತಾನೆ. ಮನಸಸ್ಪತಿಂ-ಮನಸ್ಸು ಮೊದಲಾದ ಇಂದ್ರಿಯಗಳಿಗೆ ಒಡೆಯನಾಗುತ್ತಾನೆ. (ಇಂದ್ರಿಯಗಳ ಸಹಾಯವಿಲ್ಲದೇ ವಿಷಯಗಳನ್ನು ಪ್ರಕಾಶಪಡಿಸುವ ಶಕ್ತಿಯುಳ್ಳವನಾಗುತ್ತಾನೆಂದು ತಾತ್ಪರ್ಯ) ವಾಕ್ಪತಿಃ-ವಾಗಿಂದ್ರಿಯಕ್ಕೆ ಒಡೆಯನೂ, ಚಕ್ಷುಷ್ಪತಿಃ-ನೇತ್ರೇಂದ್ರಿಯಕ್ಕೆ ಒಡೆ ಯನೂ, ಶ್ರೋತ್ರಪತಿಃ–ಶ್ರವಣೇಂದ್ರಿಯಕ್ಕೆ ಒಡೆಯನೂ, ವಿಜ್ಞಾನಪತಿಃ-ಜ್ಞಾನಕ್ಕೆ ಒಡೆಯನೂ, (ಭವತಿ-ಆಗುತ್ತಾನೆ); ಎಂದರೆ ಸಂಕಲ್ಪ ಮಾತ್ರದಿಂದ ಆಯಾ ಇಂದ್ರಿಯಗಳ ಕೆಲಸಗಳನ್ನು ನಡೆಸುತ್ತಾನೆ. ತತಃ–ಆ ಪರಬ್ರಹ್ಮ ಪ್ರಾಪ್ತಿಯಾದನಂತರ, ಏತತ್–ಈ, ಆಕಾಶ-ಶರೀರಂಬ್ರಹ್ಮ–ಎಲ್ಲಾ ಕಡೆಯೂ ಪ್ರಕಾಶಿಸುತ್ತಿರುವ ಅಪ್ರಾಕೃತ ಶರೀರವುಳ್ಳ ಪರಬ್ರಹ್ಮನಿಗೆ ಸಮಾನತೆಯು, ಭವತಿ-ಉಂಟಾಗುವುದು. ಸತ್ಯಾತ್ಮ ಪ್ರಾಣಾರಾಮಂ-ವಿಕಾರವಿಲ್ಲದೇ ಎಲ್ಲ

ರಿಗೂ ಆತ್ಮನಾಗಿ ಪ್ರಾಣನಾಗಿರತಕ್ಕ ಪರಬ್ರಹ್ಮನೇ ಭೋಗ್ಯವಾಗುಳ್ಳವನಾಗಿ (ಎಂದರೆ ಪರಮಾತ್ಮನಲ್ಲಿಯೇ ಪ್ರೀತಿಯುಳ್ಳವನಾಗಿ) ಮನಃ ಆನಂದಂ-ಸಂಕಲ್ಪ ಮಾತ್ರದಿಂದ ಸಿದ್ಧವಾದ ಆನಂದವುಳ್ಳವನಾಗಿ, ಶಾಂತಿಸಮೃದ್ಧಂ-ಅತ್ಯಂತ ಶಾಂತಿಯಿಂದ ಕೂಡಿದ, ಅಮೃತಂ-ಮರಣವಿಲ್ಲದಂತಹ (ಬ್ರಹ್ಮಭವತಿ-ಬ್ರಹ್ಮ ಸ್ವರೂಪಕ್ಕೆ ಸಮನಾಗುತ್ತಾನೆ) ಇತಿ-ಈ ರೀತಿಯಾಗಿ, ಪ್ರಾಚೀನಯೋಗ್ಯ-ಪ್ರಾಚೀನ ಯೋಗ್ಯನೆಂಬ ಶಿಷ್ಯನೇ, ಉಪಾಸ್ವ-ಉಪಾಸನೆ ಮಾಡು (ಎಂದು ಗುರುವು ಹೇಳುತ್ತಾನೆ).

(ವಾ. ಅರ್ಥ) ಈರೀತಿ ಬ್ರಹ್ಮೋಪಾಸನೆಗೆ ಅಂಗಗಳು ಹೇಳಲ್ಪಟ್ಟವು; ಮುಂದಿನಮಂತ್ರವು ಬ್ರಹ್ಮೋಪಾಸನೆಯನ್ನು ಬೋಧಿಸುವುದು.

| | |
|---|---|
| ೧) ಏಷಃ ಅಂತ ಹೃದಯೇ ಯಃ ಆಕಾಶಃ ತಸ್ಮಿನ್ ಮನೋಮಯಃ ಅಮೃತಃ ಹಿರಣ್ಮಯಃ ಆಯಂ ಪುರುಷಃ. | ೧) ಪ್ರಸಿದ್ಧವಾದ ಹೃದಯದೊಳಗೆ ಯಾವ ಆಕಾಶವಿದೆಯೋ ಅದರಲ್ಲಿ ಪರಿಶುದ್ಧವಾದ ಮನಸ್ಸಿನಿಂದ ತಿಳಿಯಲ್ಪಡತಕ್ಕಂಥಾ ಜನನ ಮರಣ ಮೊದಲಾದ ಸಾಂಸಾರಿಕ ಧರ್ಮವಿಲ್ಲದಂಥಾ ಚಿನ್ನದಂತೆ ಸುಂದರ ವಿಗ್ರಹ ಉಳ್ಳಂಥಾ ಈ 'ಮಹಃ' ಎಂಬ ವ್ಯಾಹೃತಿಯಿಂದ ಬೋಧಿಸಲ್ಪಟ್ಟ ಬ್ರಹ್ಮನು (ಇರುತ್ತಾನೆ.) |
| ೨) ಸಃ ಅಯಂ ಪುರುಷಃ (ಉಪಾಸ್ಯಃ). | ೨) ಅವನು ಹೃದಯಾಕಾಶದಲ್ಲಿ. ಮೇಲ್ಕಂಡ ಗುಣಗಳೊದನೆ ಉಪಾಸನೆ ಮಾಡಲ್ಪಡತಕ್ಕವನು. |
| ೩) ತಾಲುಕೇ ಅಂತರೇಣ ಸ್ತನ ಇವ ಯಃ ಏಷಃ ಅವಲಂಬತೇ ಸಾ ಇಂದ್ರ ಯೋ ನಿಃ; ಯತ್ರ ಕೇಶಾಂತಃ ವಿವರ್ತತೇ. | ೩) ನಾಲಿಗೆಯ ಮಧ್ಯದಲ್ಲಿ ಮೊಲೆಯ ಹಾಗೆ ಯಾವ ಈ ಮಾರ್ಗವು ತೋರುತ್ತದೆಯೋ ಆದಾರಿಯು ಮುಕ್ತರಂತೆ ಪ್ರಕಾಶನಾದ ಜೀವನಿಗೆ ಹೊರಕ್ಕೆ |

ಹೋಗುವ ದಾರಿಯು; ಯಾವ ಅರ್ಚಿ ರಾದಿ ಮಾರ್ಗದಲ್ಲಿ ಬ್ರಹ್ಮರುದ್ರರಿಗೆ ಒಡೆಯನಾದ ಪರಮಾತ್ಮನು ವಿಶೇಷ ವಾಗಿ ಪ್ರಾಪ್ಯನಾಗಿರುತ್ತಾನೆ.

೪) ಶೀರ್ಷ ಕಪಾಲೇ ವ್ಯಪೋಹ್ಯ ಭೂಃ ಇತಿ ಅಗ್ನೌ ಪ್ರತಿತಿಷ್ಠತಿ; ಭುವಃ ಇತಿ ವಾಯೌ ಪ್ರತಿತಿಷ್ಠತಿ; ಸುವಃ ಇತಿ ಆದಿತ್ಯೇ ಪ್ರತಿತಿಷ್ಠತಿ; ಮಹಃ ಇತಿ ಬ್ರಹ್ಮಣಿ ಪ್ರತಿತಿಷ್ಠತಿ.

೪) ಉಪಾಸನೆ ಮಾಡತಕ್ಕ ಜೀವಾತ್ಮನು) ತಲೇ ಬುರುಡೆಯನ್ನು ಶೀಳಿ ಕೊಂಡು 'ಭೂಃ' ಎಂದು ಧ್ಯಾನಮಾಡಿದುದರಿಂದ ಅಗ್ನಿಯಲ್ಲಿ ತಂಗುತ್ತಾನೆ; 'ಭುವಃ' ಎಂದು ಧ್ಯಾನಮಾಡಿದುದರಿಂದ ವಾಯುಲೋಕದಲ್ಲಿ ತಂಗುತ್ತಾನೆ; 'ಸುವಃ' ಎಂದು ಧ್ಯಾನಮಾಡಿದುದರಿಂದ ಸೂರ್ಯಲೋಕದಲ್ಲಿ ತಂಗುತ್ತಾನೆ. 'ಮಹಃ' ಎಂದು ಉಪಾಸನೆ ಮಾಡಿದುದರಿಂದ ಪರಬ್ರಹ್ಮನಲ್ಲಿ ಶಾಶ್ವತವಾಗಿ ಇರುತ್ತಾನೆ.

೫) ಸ್ವಾರಾಜ್ಯಂ ಆಪ್ನೋತಿ; ಮನಸಸ್ಪತಿಂ. ವಾಕ್ಪತಿಃ, ಚಕ್ಷುಷ್ಪತಿಃ, ಶ್ರೋತ್ರಪತಿಃ, ವಿಜ್ಞಾನ ಪತಿಃ; (ಭವತಿ.)

೫) ಕರ್ಮಕ್ಕೆ ವಶನಾಗದೆ ಇರುವಿಕೆಯನ್ನು ಹೊಂದುತ್ತಾನೆ; ಮನಸ್ಸು ಮೊದಲಾದ ಇಂದ್ರಿಯಗಳಿಗೆ ಒಡೆಯನಾಗುತ್ತಾನೆ. (ಇಂದ್ರಿಯಗಳ ಸಹಾಯವಿಲ್ಲದೆ, ವಿಷಯಗಳನ್ನು ಪ್ರಕಾಶಪಡಿಸುವ ,ಶಕ್ತಿಯುಳ್ಳವನಾಗುತ್ತಾನೆ) ವಾಗಿಂದ್ರಿಯಕ್ಕೆ ಒಡೆಯನೂ, ನೇತ್ರೇಂದ್ರಿಯಕ್ಕೆ ಒಡೆಯನೂ, ಶ್ರವಣೇಂದ್ರಿಯಕ್ಕೆ ಒಡೆಯನೂ, ಜ್ಞಾನಕ್ಕೆ ಒಡೆಯನೂ (ಆಗುತ್ತಾನೆ.) — ಎಂದರೆ ಸಂಕಲ್ಪ ಮಾತ್ರದಿಂದ ಆ ಇಂದ್ರಿಯಗಳ ಕಾರ್ಯಗಳನ್ನು ನಡೆಸುತ್ತಾನೆ.

೬) ತತಃ ಏತತ್ ಆಕಾಶ ಶರೀರಂ ಬ್ರಹ್ಮ ಭವತಿ.

೬) ಆ ಬ್ರಹ್ಮಪ್ರಾಪ್ತಿಯಾದ ನಂತರ ಈ ಎಲ್ಲಾ ಕಡೆಯಲ್ಲಿಯೂ ಪ್ರಕಾಶಿಸುತ್ತಿರುವ ಅಪ್ರಾಕೃತ ಶರೀರವುಳ್ಳ ಪರಬ್ರಹ್ಮನಿಗೆ ಸಮಾನತೆಯು ಆಗುವುದು.

೭) ಸತ್ಯಾತ್ಮ ಪ್ರಾಣಾರಾಮಂ । ಮನಃ ಆನಂದಂ । ಶಾಂತಿ ಸಮೃದ್ಧಂ । ಅಮೃತಂ (ಬ್ರಹ್ಮ- ಭವತಿ.)

೭) ವಿಕಾರವಿಲ್ಲದೇ ಎಲ್ಲರಿಗೂ ಆತ್ಮನಾಗಿ ಪ್ರಾಣನಾಗಿರತಕ್ಕ ಪರಬ್ರಹ್ಮನನ್ನೇ ಭೋಗ್ಯವಾಗುಳ್ಳವನಾಗಿ (ಎಂದರೆ ಪರಮಾತ್ಮಲ್ಲಿಯೇ ಪ್ರೀತಿಯುಳ್ಳವನಾಗಿ), ಸಂಕಲ್ಪಮಾತ್ರದಿಂದ ಸಿದ್ಧವಾದ ಆನಂದವುಳ್ಳವನಾಗಿ, ಅತ್ಯಂತ ಶಾಂತಿಯಿಂದ ಕೂಡಿದ ಮರಣವಿಲ್ಲದಂಥಾ ಬ್ರಹ್ಮ ಸ್ವರೂಪಕ್ಕೆ ಸಮನಾಗುತ್ತಾನೆ.

೮) ಇತಿ ಪ್ರಾಚೀನಯೋಗ್ಯ ಉಪಾಸ್ವ.

೮) ಪ್ರಾಚೀನಯೋಗ್ಯನೆಂಬ ಶಿಷ್ಯನೇ! ಈ ರೀತಿಯಾಗಿ ಉಪಾಸನೆ ಮಾಡು. (ಎಂದು ಗುರುವು ಹೇಳುತ್ತಾನೆ.

**ಭಾವ**—ಹೃದಯಾಂತರ್ಗತವಾದ ಆಕಾಶದಲ್ಲಿ ವಿಶುದ್ಧ ಮನೋಗ್ರಾಹ್ಯನೂ, ಅಮೃತನೂ, ಕಮನೀಯ ವಿಗ್ರಹನೂ ಆಗಿ ಯಾವನು ಇರವನೋ ಅವನು ಉಪಾಸಿತವ್ಯನು. ಜಹ್ವೆಯ ಮಧ್ಯದಲ್ಲಿ ಗೋಸ್ತನದಂತೆ ಯಾವುದು ಲಂಬಿಸಿರುವುದೋ ಅದು ಸನ್ನಿಹಿತ ಮುಕ್ತೈಶ್ವರ್ಯನಾದ ಜೀವನ ನಿರ್ಗಮಮಾರ್ಗ. ಆ ಮಾರ್ಗದಲ್ಲಿ ಬ್ರಹ್ಮರುದ್ರರ ಕಾರಣಭೂತನಾದ ಭಗವಂತನು ವಿಶೇಷತಃ ಪ್ರಾಪ್ಯನಾಗಿ ನೆಲೆಸಿರುವನು.

ಪ್ರಯಾಣಕಾಲದಲ್ಲಿ ಶಿರಃಕಪಾಲವನ್ನು ಭೇದಿಸಿಕೊಂಡು "ಭೂಃ" ಎಂಬ ವ್ಯಾಹೃತಿಯ ಉಪಾಸನೆಯಿಂದ ಅಗ್ನಿಲೋಕದಲ್ಲಿ ಪ್ರತಿಷ್ಠಿತನಾಗುವನು. "ಭುವಃ"ಎಂಬ ವ್ಯಾಹೃತಿಯಲ್ಲಿ ಉಪಾನೆಯಿಂದ ವಾಯುಲೋಕದಲ್ಲಿ ಪ್ರತಿಷ್ಠಿತ

ನಾಗುವನು. "ಸುವಃ" ಎಂಬ ವ್ಯಾಹೃತಿಯ ಉಪಾಸನೆಯಿಂದ ಆದಿತ್ಯನಲ್ಲಿ ಪ್ರಷ್ಠಿತನಾಗುವನು. "ಮಹಃ" ಎಂಬ ವ್ಯಾಹೃತಿಯ ಉಪಾಸನೆಯಿಂದ ಬ್ರಹ್ಮನಲ್ಲಿ ಪ್ರತಿಷ್ಠಿತನಾಗುವನು. ಸ್ವಾರಾಜ್ಯವನ್ನು ಹೊಂದುವನು. ಮನಸ್ಸು, ವಾಕ್ಕು, ಚಕ್ಷುಸ್ಸು, ಶ್ರೋತ್ರ ಮತ್ತ ವಿಜ್ಞಾನ ಇವುಗಳ ಆಧಿಪತ್ಯ ವನ್ನು ಹೊಂದುವನು. ಅನಂತರ ಹೀಗಾಗುವುದು. ಅವನಿಗೆ, ಆಕಾಶ ಶರೀ ರನೂ, ಸತ್ಯಾತ್ಮರಾದ ಮುಕ್ತರಿಗೆ ಪ್ರಾಣದಂತೆ ಪ್ರೇಮಾಸ್ಪದ ಭೋಗ್ಯನೂ, ಸಂಕಲ್ಪಮಾತ್ರಸಿದ್ಧನಾದ ಆನಂದ ಸ್ವರೂಪನೂ, ಶಾಂತಿಸಮೃದ್ಧನೂ, ಅಮೃ ತನೂ, ಆದ ಪರಬಹ್ಮನ ರೂಪವು ಆವಿರ್ಭವಿಸುವುದು.

ಹೀಗೆ ಪ್ರಾಚೀನ ಯೋಗ್ಯನೆಂಬ ಶಿಷ್ಯನಿಗೆ ಉಪದೇಶವಾಯಿತು. (ಸರ್ವೇಂದ್ರಿಯಗಳೂ ಇವನ ಸಂಕಲ್ಪಾಧೀನಗಳಾಗುವುವು. ಅಥವಾ ಕರಣ ನಿರಪೇಕ್ಷವಾಗಿ ಇವನಿಗೆ ಜ್ಞಾನಪ್ರಾಪ್ತಿಯಾಗುವುದು.

## ೭ ನೆಯ ಅನುವಾಕ

ಮೂಲ ಮಂತ್ರ :— ಪೃಥಿವ್ಯನ್ತರಿಕ್ಷಂ ದ್ಯೌರ್ದಿಶೋಽವಾನ್ತರ

ದಿಶಾಃ । ಅಗ್ನಿರ್ವಾಯುರಾದಿತ್ಯಶ್ಚಂದ್ರಮಾನಕ್ಷತ್ರಾಣಿ ।

ಆಪ ಓಷಧಯೋ ವನಸ್ಪತಯ ಆಕಾಶ ಆತ್ಮಾ । ಇತ್ಯಧಿ

ಭೂತಂ । ಅಥಾಧ್ಯಾತ್ಮಂ । ಪ್ರಾಣೋ ವ್ಯಾನೋಽಪಾನ

ಉದಾನಸ್ಸಮಾನಃ । ಚಕ್ಷುಃ ಶ್ರೋತ್ರಂ ಮನೋವಾಕ್ ।

ತ್ವಕ್ಚರ್ಮ ಮಾಗ್‌ಂ ಸಗ್‌ಂ ಸ್ನಾವಾಸ್ಥಿಮಜ್ಜಾ । ಏತದಧಿ

ವಿಧಾಯ ಋುಷಿರವೋಚತ್ । ಪಾಙ್ಕ್ತಂವಾ ಇದಗ್‌ಂ

ಸರ್ವಮ್ । ಪಾಙ್ಕ್ತೇನೈವ ಪಾಙ್ಕ್ತಗ್‌ಂ ಸ್ಪೃಣೋತೀತಿ॥

**ಅರ್ಥ :** ಪೃಥಿವೀ, ಅಂತರಿಕ್ಷಂ, ದ್ಯೌಃ, ದಿಶಃ, ಅವಾನ್ತರದಿಶಾಃ- ಭೂಮಿ, ಅಕಾಶ, ದೇವಲೋಕ, ದಿಕ್ಕುಗಳು, ವಿದಿಕ್ಕುಗಳು ಇವು ಲೋಕ ಪಂಕ್ತಿ.

ಅಗ್ನಿಃ, ವಾಯುಃ, ಆದಿತ್ಯಃ, ಚಂದ್ರಮಾಃ, ನಕ್ಷತ್ರಾಣಿ-ಅಗ್ನಿ, ವಾಯು, ಸೂರ್ಯ, ಚಂದ್ರ, ನಕ್ಷತ್ರಗಳು ಇವು ದೇವಪಂಕ್ತಿ.
ಅಪಃ, ಓಷಧಯಃ, ವನಸ್ಪತಯಃ, ಆಕಾಶಃ, ಆತ್ಮಾ-ನೀರು, ಲತೆ, ಮರ, ಆಕಾಶ, ಆತ್ಮಾ ಇವು ಭೂತಪಂಕ್ತಿ.

ಇತಿ ಅಧಿಭೂತಂ-ಹೀಗೆ ಭೂತ ಪಂಕ್ತಿಗಳು, ಹೇಳಲ್ಪಟ್ಟಿವೆ. ಅಥ ಅಧ್ಯಾತ್ಮಂ-ಬಳಿಕ ದೇಹ ವಿಷಯಗಳಾದ ಮೂರು ಹೇಳಲ್ಪಡುವುವು.

ಪ್ರಾಣಃ, ವ್ಯಾನಃ, ಅಪಾನಃ, ಉದಾನಃ, ಸಮಾನಃ-ಈ ಐದೂ ವಾಯುಪಂಕ್ತಿ. ಚಕ್ಷುಃ, ಶ್ರೋತ್ರಂ, ಮನಃ, ವಾಕ್, ತ್ವಕ್-ಈ ಐದೂ ಇಂದ್ರಿಯ ಪಂಕ್ತಿ. ಚರ್ಮ, ಮಾಂಸಂ, ಸ್ನಾಯು, ಅಸ್ಥಿ, ಮಜ್ಜಾ- ಈ ಐದೂ ಧಾತುಪಂಕ್ತಿ.

ಏತತ್-ಇದನ್ನು, ಅಧಿವಿಧಾಯ-ಮಾಡಿ, ಇದಂ ಸರ್ವಂ-ಈ ಪ್ರಪಂಚ ವೆಲ್ಲಾ, ಪಾಂಕ್ತಂವಾ-ಪಂಕ್ತಿಯುಳ್ಳದ್ದಾಗಿಯೇ ಇದೆ ; ಇತಿ-ಹೀಗೆಂದು, ಋಷಿ-ಒಬ್ಬ ಋಷಿಯು, ಅವೋಚತ್-ಹೇಳಿದನು. ಪಾಂಕ್ತೇನ-ಐದು ಅಕ್ಷರವುಳ್ಳ ಪಂಕ್ತಿ ಛಂದಸ್ಸಿನಿಂದ ಕೂಡಿದುದಾಗಿ ಉಪಾಸನೆ ಮಾಡಲ್ಪಟ್ಟ ಆರುಪಂಚಕಗಳಿಂದ, ಪಾಂಕ್ತಂ-ಪಂಚಭೂತಾದಿಗಳನ್ನು, ಸ್ಪೃಣೋತಿ- ಕಾಪಾಡುತ್ತಾನೆ. (ಎಂದು ಋಷಿಯು ಹೇಳಿದನು)

**(ವಾ. ಅರ್ಥ)**

೧) ಪೃಥಿವೀ,ಅಂತರಿಕ್ಷಂ, ದ್ಯೌಃ, ದಿಶಃ, ಅವಾಂತರ ದಿಶಾಃ ; ಅಗ್ನಿಃ ವಾಯುಃ, ಆದಿತ್ಯಃ, ಚಂದ್ರಮಾಃ, ನಕ್ಷತ್ರಾಣಿ ; ಅಪಃ, ಓಷಧಯಃ,

೧) ಭೂಮಿ, ಆಕಾಶ, ದೇವಲೋಕ, ದಿಕ್ಕುಗಳು, ವಿದಿಕ್ಕುಗಳು ಇವು ಐದೂ ಲೋಕಪಙ್ಕ್ತಿ. ಅಗ್ನಿ, ವಾಯು, ಸೂರ್ಯ, ಚಂದ್ರ, ನಕ್ಷತ್ರಗಳು ಇವು ಐದೂ

ವನಸ್ಪತಯಃ, ಆಕಾಶಃ, ಇತ್ಯಧಿಭೂತಂ.

ದೇವತಾ ಪಙ್ಕ್ತಿ; ನೀರು, ಲತೆ, ಮರ, ಆಕಾಶ, ಆತ್ಮಾ ಇವು ಐದೂ ಭೂತ ಪಙ್ಕ್ತಿ-ಹೀಗೆ ಭೂತ ಪಙ್ಕ್ತಿಗಳು ಹೇಳಲ್ಪಟ್ಟವೆ.

೨) ಅಥ ಅಧ್ಯಾತ್ಮಂ. ಪ್ರಾಣಃ, ವ್ಯಾನಃ, ಅಪಾನಃ, ಉದಾನಃ, ಸಮಾನಃ; ಚಕ್ಷುಃ, ಶ್ರೋತ್ರಂ, ಮನಃ, ವಾಕ್, ತ್ವಕ್, ಚರ್ಮ, ಮಾಂಸಂ, ಸ್ನಾಯು, ಅಸ್ಥಿ, ಮಜ್ಜಾ; ಏತತ್ ಅಧಿವಿಧಾಯ ಇದಂ ಸರ್ವಂ ಪಾಙ್ಕ್ತಂವಾ ಇತಿ ಋಷಿಃ ಅವೋಚಿತ್,

೨) ಬಳಿಕ ದೇಹ ವಿಷಯವಾದ ಮೂರು ಪಙ್ಕ್ತಿಗಳು ಹೇಳಲ್ಪಡುವುವು. ಪ್ರಾಣವು, ವ್ಯಾನವು, ಅಪಾನವು, ಉದಾನವು, ಸಮಾನವು ಈ ಐದೂ ವಾಯುಪಙ್ಕ್ತಿ; ಚಕ್ಷುವು, ಶ್ರೋತ್ರವು, ಮನವು, ವಾಕ್ಕೂ, ತ್ವಕ್ಕೂ ಈ ಐದೂ ಇಂದ್ರಿಯಪಙ್ಕ್ತಿ; ಚರ್ಮವು, ಮಾಂಸವು, ಸ್ನಾಯುವು, ಅಸ್ಥಿಯು, ಮಜ್ಜೆಯು ಈ ಐದೂ ಧಾತುಪಙ್ಕ್ತಿ; ಇದನ್ನು ಮಾಡಿ ಈ ಪ್ರಪಂಚವೆಲ್ಲಾ ಪಙ್ಕ್ತಿಯುಳ್ಳದ್ದಾಗಿಯೇ ಇದೆ. ಹೀಗೆಂದು ಒಬ್ಬ ಋಷಿಯು ಹೇಳಿದನು.

೩) ಪಾಙ್ಕ್ತೇನ ಏವ ಪಾಙ್ಕ್ತಂ ಸ್ಪೃಣೋತಿ.

೩) ಐದು ವಸ್ತುಗಳುಳ್ಳ ಪಙ್ಕ್ತಿ ಛಂದಸ್ಸಿನಿಂದ ಕೂಡಿದುದಾಗಿ ಉಪಾಸನೆ ಮಾಡಲ್ಪಟ್ಟ ಆರು ಪಂಚಕಗಳಿಂದ ಪಂಚಭೂತಾದಿಗಳನ್ನು ಕಾಪಾಡುತ್ತಾನೆ. (ಎಂದು ಋಷಿಯು ಹೇಳಿದನು.)

**ಭಾವ**—ಲೋಕಪಂಕ್ತಿ, ದೇವತಾಪಂಕ್ತಿ, ಭೂತಪಂಕ್ತಿ, ಪ್ರಾಣಪಂಕ್ತಿ, ಇಂದ್ರಿಯಪಂಕ್ತಿ, ಧಾತುಪಂಕ್ತಿ ಎಂದು ೫ ವಸ್ತುಗಳುಳ್ಳ ಪಂಕ್ತಿಗಳನ್ನು ಉಪಾಸನೆ ಮಾಡತಕ್ಕವನು ಲೋಕವನ್ನಾಳುತ್ತಾನೆ ಎಂದು ಒಬ್ಬ ಋಷಿಯು ಹೇಳಿದನು.

ಪೃಥಿವಿ, ಅಂತರಿಕ್ಷ, ದ್ಯುಲೋಕ, ದಿಕ್ಕುಗಳು ಮತ್ತು ಅಂತರ ದಿಕ್ಕುಗಳು ಇವು ಒಂದು ಪಂಚಕ. ಅಗ್ನಿ, ವಾಯು, ಆದಿತ್ಯ, ಚಂದ್ರಮ ಮತ್ತು ನಕ್ಷತ್ರಗಳು ಇವು ಒಂದು ಪಂಚಕ. ಅಪ್ಪು, ಓಷಧಿಗಳು, ವನಸ್ಪತಿಗಳು, ಆಕಾಶ ಮತ್ತು ಆತ್ಮಾ ಇವು ಒಂದು ಪಂಚಕ. ಭೂತಗಳಿಗೆ ಸಂಬಂಧಪಟ್ಟ ಪಂಚಕಗಳು ಇಷ್ಟು.

ಇನ್ನು ಅಧ್ಯಾತ್ಮ ಪಂಚಕಗಳು ಪ್ರಾಣ, ವ್ಯಾನ, ಅಪಾನ, ಉಪಾನ, ಮತ್ತು ಸಮಾನ ಇವು ಒಂದು ಪಂಚಕ. ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು ಮತ್ತು ತ್ವಕ್ಕೂ ಇವು ಒಂದು ಪಂಚಕ. ಇದೆಲ್ಲಾ ಐದಾಗಿರುವುದು. ಐದರಿಂದಲೇ ಇದನ್ನು ಪಾಲಿಸುತ್ತಾನೆ. ಇವುಗಳನ್ನು ಕುರಿತು ಋಷಿ ಹೇಳಿದನು.

## ೮ ನೆಯ ಅನುವಾಕ

ಮೂಲ ಮಂತ್ರ :—ಓಮಿತಿಬ್ರಹ್ಮ । ಓಮಿತೀದಗ್ ಂಸರ್ವಮ್ ।

ಓಮಿತ್ಯೇತದನುಕೃತಿಹಸ್ಮವಾ ಅಪ್ಯೋಶ್ರಾವಯೇತ್ಯಾ

ಶ್ರಾವಯಂತಿ। ಓಮಿತಿ ಸಾಮಾನಿ ಗಾಯನ್ತಿ । ಓಗ್ ಂಶೋ

ಮಿತಿ ಶಸ್ತ್ರಾಣಿ ಶಗ್ ಂಸನ್ತಿ । ಓಮಿತ್ಯಧ್ವರ್ಯುಃ ಪ್ರತಿಗರಂ

ಪ್ರತಿಗೃಣಾತಿ । ಓಮಿತಿಬ್ರಹ್ಮಾ ಪ್ರಸೌತಿ । ಓಮಿತ್ಯಗ್ನಿ

ಹೋತ್ರ ಮನುಜಾನಾತಿ । ಓಮಿತಿ ಬ್ರಾಹ್ಮಣಃ ಪ್ರವಕ್ಷ್ಯ

ನ್ನಾಹ ಬ್ರಹ್ಮೋಪಾಪ್ನವಾನೀತಿ । ಬ್ರಹ್ಮೈವೋಪಾ

ಪ್ನೋತಿ ॥

ಅರ್ಥ—" ಓಂ " ಇತಿಬ್ರಹ್ಮ-" ಓಂ " ಎಂಬುದು ಪರಬ್ರಹ್ಮನ ಪ್ರತೀಕವಾಗಿಯೂ ಅದನ್ನು ಧ್ಯಾನ ಮಾಡಲು ಸಾಧಕವಾಗಿಯೂ ಇರುವುದರಿಂದ "ಬ್ರಹ್ಮ"ವೆನಿಸಿಕೊಳ್ಳುವುದು. ಇದಂ ಸರ್ವಂ ಬ್ರಹ್ಮ-ಈ ಪ್ರಪಂಚವೆಲ್ಲಾ ಬ್ರಹ್ಮನನ್ನೇ ಆತ್ಮನನ್ನಾಗುಳ್ಳದ್ದರಿಂದ "ಓಂ" ಎಂದು ಹೇಳಲ್ಪಡುತ್ತದೆ. ಓಂ ಇತಿ ಏತತ್-ಓಂ ಎಂಬುದು, ಅನುಕೃತಿಹಸ್ಮವೈ-ಅನುಕರಣ ಶಬ್ದವೆಂದು ಪ್ರಸಿದ್ಧವಲ್ಲವೇ ? (ಓಂ ಎಂದು ಹೇಳಿ ಅನುಕರಿಸುತ್ತಾನೆಂದು ಭಾವ) ಅಪಿ-ಮತ್ತು ಓಂ ಶ್ರಾವಯ ಇತಿ ಆಶ್ರಾವಯಂತಿ-ಓಂ ಶ್ರಾವಯ ಎಂದು ಬದಲು ಹೇಳುತ್ತಾನೆ. ಓಂ ಇತಿ ಸಾಮಾನಿ ಗಾಯಂತಿ-ಓಂ ಎಂದು ಸಾಮವೇದ ಮಂತ್ರಗಳನ್ನು ಗಾನ ಮಾಡುತ್ತಾನೆ. ಓಂ ಶೋಂ ಇತಿ-ಓಂ ಎಂದು ಪ್ರಾರಂಭ ಮಾಡಿ, ಶಸ್ತ್ರಾಣಿ ಶಂಸಂತಿ-ಹೋತೃಗಳು ಋಗ್ವೇದ ಮಂತ್ರದ ಸ್ತೋತ್ರ ಹೇಳುತ್ತಾರೆ. ಓಂ ಇತಿ ಅಧ್ವರ್ಯುಃ-"ಓಂ" ಎಂದು ಯಜುರ್ವೇದ ಹೇಳುವ ಅಧ್ವರ್ಯುವು, ಪ್ರತಿಗರಂ-"ಓಥಾ ಮೋದ ಇವ" ಎಂಬ ಹೋತೃವಿಗೆ ಪ್ರೋತ್ಸಾಹ ಕೊಡತಕ್ಕ ಮಂತ್ರದಿಂದ, ಪ್ರತಿಗೃಣಾತಿ-ಬದಲು ಹೇಳುತ್ತಾನೆ. ಓಂ ಇತಿ ಬ್ರಹ್ಮಾ ಪ್ರಸೌತಿ-ಓಂ ಎಂದು ಬ್ರಹ್ಮನೆಂಬ ಋತ್ವಿಕ್ಕು ಅನುಜ್ಞೆಯನ್ನು ಕೊಡುತ್ತಾನೆ. ಓಂ ಇತಿ ಅಗ್ನಿಹೋತ್ರಂ ಅನುಜಾನಾತಿ-ಓಂ ಎಂದು ಅಗ್ನಿಹೋತ್ರ ಕರ್ಮವನ್ನು ಆರಂಭಿಸಲು ಯಜಮಾನನು ಅಪ್ಪಣೆ ಕೊಡುತ್ತಾನೆ. ಬ್ರಾಹ್ಮಣಃ-ಬ್ರಾಹ್ಮಣನು ಬ್ರಹ್ಮ-ವೇದವನ್ನು ಉಪಾಪ್ನವಾನಿ-ಹೊಂದುವೆನು, (ಎಂದು) ಪ್ರವಕ್ಷ್ಯನ್-ವೇದಾಭ್ಯಾಸ ಮಾಡುತ್ತಾ, ಓಂ ಇತಿ ಓಂ ಎಂದು ಹೇಳುತ್ತಾನೆ. ಬ್ರಹ್ಮೈವ ಉಪಾಪ್ನೋತಿ-ವೇದವನ್ನು ಹೊಂದುತ್ತಾನೆ.

(ವಾ. ಅರ್ಥ) ವೈದಿಕ ಕಾರ್ಯಗಳಿಗೆಲ್ಲಾ ಪ್ರಣವವೇ ಮುಂದಾಗಿರುವುದು ; ಪ್ರಣವವನ್ನು ಉಪಾಸನೆ ಮಾಡುವುವನಿಗೆ ವೇದವೆಲ್ಲವೂ ಸ್ವಾಧೀನವಾಗಿ ಪರಬ್ರಹ್ಮನ ಪ್ರಾಪ್ತಿಯುಂಟಾಗುವುದು.

| | |
|---|---|
| ೧) 'ಓಂ' ಇತಿಬ್ರಹ್ಮ; 'ಓಂ' ಇತಿ ಇದಂ ಸರ್ವಂ ಬ್ರಹ್ಮ; | ೧) "ಓಂ" ಎಂಬುದು ಪರಬ್ರಹ್ಮನ ಪ್ರತೀಕವಾಗಿಯೂ, ಅವನನ್ನು ಧ್ಯಾನ ಮಾಡಲು ಸಾಧನವಾಗಿಯೂ, ಇರು |

ವದರಿಂದ "ಬ್ರಹ್ಮ"ವೆನಿಸಿಕೊಳ್ಳುವುದು, ಈ ಪ್ರಪಂಚವೆಲ್ಲಾ ಬ್ರಹ್ಮನನ್ನೇ ಆತ್ಮನಾಗುಳ್ಳದ್ದರಿಂದ "ಓಂ" ಎಂದು ಹೇಳಲ್ಪಡುತ್ತದೆ.

೨) 'ಓಂ' ಇತಿ ಏತತ್ ಅನುಕೃತಿ ಹಸ್ಮವೈ. ಅಪಿ, ಓಂ ಶ್ರಾವಯ ಇತಿ ಆಶ್ರಾವಯಂತಿ. 'ಓಂ' ಇತಿ ಸಾಮಾನಿಗಾಯಂತಿ.

(೨) "ಓಂ" ಎಂಬುದು ಅನುಕರಣಶಬ್ಧವೆಂದು ಪ್ರಸಿದ್ಧವಲ್ಲವೆ? ("ಓಂ" ಎಂದು ಹೇಳಿ ಅನುಕರಿಸುತ್ತಾನೆಂದು ಭಾವ); ಮತ್ತು "ಓಂ" ಶ್ರಾವಯ ಎಂದು ಬದಲು ಹೇಳುತ್ತಾನೆ; "ಓಂ" ಎಂದು ಸಾಮವೇದ ಮಂತ್ರಗಳನ್ನು ಗಾನಮಾಡುತ್ತಾನೆ.

೩) 'ಓಂ' ಶೋಂ ಇತಿ ಶಸ್ತ್ರಾಣಿ ಶಂಸಂತಿ. 'ಓಂ' ಇತಿ ಅಧ್ವರ್ಯುಃ ಪ್ರತಿಗರಂ ಪ್ರತಿಗೃಣಾತಿ;

೩) "ಓಂ" ಎಂದು ಪ್ರಾರಂಭಮಾಡಿ ಹೋತೃಗಳು ಋಗ್ವೇದ ಮಂತ್ರದ ಸ್ತೋತ್ರ ಹೇಳುತ್ತಾರೆ; "ಓಂ" ಎಂದು ಯಜುರ್ವೇದ ಹೇಳುವ ಅಧ್ವರ್ಯುವು "ಓಂ"(S)ಥಾ ಮೋದ ಇವ" ಎಂಬ ಹೋತೃವಿಗೆ ಪ್ರೋತ್ಸಾಹ ಕೊಡತಕ್ಕ ಮಂತ್ರದಿಂದ ಬದಲು ಹೇಳುತ್ತಾನೆ.

೪) "ಓಂ"ಇತಿ ಬ್ರಹ್ಮಾ ಪ್ರಸೌತಿ. ಓಂ ಇತಿ ಅಗ್ನಿಹೋತ್ರಂ ಅನುಜಾನಾತಿ.

೪) "ಓಂ" ಎಂದು ಬ್ರಹ್ಮನೆಂಬ ಋತ್ವಿಕ್ಕು ಅನುಜ್ಞೆಯನ್ನು ಕೊಡುತ್ತಾನೆ. "ಓಂ" ಎಂದು ಅಗ್ನಿಹೋತ್ರ ಕರ್ಮವನ್ನು ಆರಂಭಿಸಲು ಯಜಮಾನನು ಅಪ್ಪಣೆಮಾಡುತ್ತಾನೆ.

೫) ಬ್ರಾಹ್ಮಣಃ ಬ್ರಹ್ಮ ಉಪಾಪ್ನವಾನಿ ಪ್ರವಕ್ಷ್ಯನ್ "ಓಂ" ಇತಿ ಆಹ. ಬ್ರಹ್ಮೈವ ಉಪಾಪ್ನೋತಿ.

೫) ಬ್ರಾಹ್ಮಣನು ವೇದವನ್ನು ಹೊಂದುವೆನು (ಎಂದು) ವೇದಾಭ್ಯಾಸ ಮಾಡುತ್ತಾ "ಓಂ" ಎಂದು ಹೇಳ

ತ್ತಾನೆ; ವೇದವನ್ನೇ ಹೊಂದುತ್ತಾನೆ.
(ಅನಂತರ ಬ್ರಹ್ಮಪ್ರಾಪ್ತಿಯುಂಟಾಗುತ್ತದೆ.)

ಭಾವ—ವೈದಿಕಕಾರ್ಯಗಳಿಗೆಲ್ಲಾ ಪ್ರಣವವೇ ಮೊದಲಾಗಿರುವುದರಿಂದ ಈ ವಿಧವಾದ ಮಹಿಮೆಯುಳ್ಳ ಪ್ರಣವವನ್ನು ಉಪಾಸನೆ ಮಾಡುವುದರಿಂದ ವೇದವೆಲ್ಲವೂ ಇವನಿಗೆ ಸ್ವಾಧೀನವಾಗುವುದು. ಅನಂತರ ವೇದದಿಂದ ತಿಳಿಯಲ್ಪಡತಕ್ಕ ಪರಬ್ರಹ್ಮನ ಪ್ರಾಪ್ತಿಯುಂಟಾಗುವುದು. ಓಂ ಎನ್ನುವುದು ಬ್ರಹ್ಮ. ಈ ಸರ್ವವೂ ಓಂ-ವಿಧಿನಿಷೇಧಾತ್ಮಕ ಸರ್ವಧರ್ಮಗಳೂ ಓಂ ಎನ್ನುವುದರ ಅನುಕರಣ. ಓಂ ಎಂದು ಕೇಳುವುದನ್ನು ಹೇಳುವರು. ಓಂ ಎಂದು ಸಾಮಗಳು ಗಾನ ಮಾಡುವುವು. ಓಂ ಎಂದು ಶಾಸ್ತ್ರಗಳು (ಗಾನವಿಲ್ಲದ ಋಕ್ಕುಗಳು) ಪ್ರಶಂಸಿಸುವುವು. ಓಂ ಎಂದು ಅಧ್ವರ್ಯುವು ಅನುಮೋದನೆ ಮಾಡುವನು. ಓಂ ಎಂದು ಬ್ರಹ್ಮನು ಅನುಜ್ಞೆ ಮಾಡುವನು. ಓಂ ಎಂದು ಅಗ್ನಿಹೋತ್ರಕ್ಕೆ ಅನುಜ್ಞೆ ಕೊಡುವನು. ವೇದವನ್ನು ಹೊಂದಬೇಕೆಂದು ಅಧ್ಯಯನ ಮಾಡುವನು. ಓಂ ಎನ್ನುವನು. ಹಾಗೆಯೇ ವೇದವನ್ನು ಹೊಂದುವನು.

## ೯ನೆಯ ಅನುವಾಕ

ಮೂಲ ಮಂತ್ರ:—ಋತಂ ಚ ಸ್ವಾಧ್ಯಾಯಪ್ರವಚನೇ ಚ ।

ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ । ತಪಶ್ಚ ಸ್ವಾಧ್ಯಾಯ ಪ್ರವಚನೇ ಚ। ದಮಶ್ಚ ಸ್ವಾಧ್ಯಾಯ ಪ್ರವಚನೇ ಚ। ಶಮಶ್ಚ ಸ್ವಾಧ್ಯಾಯ ಪ್ರವಚನೇ ಚ । ಅಗ್ನಯಶ್ಚ ಸ್ವಾಧ್ಯಾಯ ಪ್ರವಚನೇ ಚ। ಅಗ್ನಿಹೋತ್ರಂ ಚ ಸ್ವಾಧ್ಯಾಯ

ಪ್ರವಚನೇ ಚ । ಅತಿಥಯಶ್ಚ ಸ್ವಾಧ್ಯಾಯಪ್ರವಚನೇ ಚ।

ಮಾನುಷಂ ಚ ಸ್ವಾಧ್ಯಾಯ ಪ್ರವಚನೇ ಚ । ಪ್ರಜಾ ಚ

ಸ್ವಾಧ್ಯಾಯ ಪ್ರವಚನೇ ಚ । ಪ್ರಜನಶ್ಚ ಸ್ವಾಧ್ಯಾಯ

ಪ್ರವಚನೇ ಚ । ಪ್ರಜಾತಿಶ್ಚ ಸ್ವಾಧ್ಯಾಯ ಪ್ರವಚನೇ ಚ ।

ಸತ್ಯಮಿತಿ ಸತ್ಯವಚಾರಾಥೀತರಃ । ತಪ ಇತಿ ತಪೋ

ನಿತ್ಯಃ ಪೌರುಶಿಷ್ಟಿಃ । ಸ್ವಾಧ್ಯಾಯಪ್ರವಚನೇ ಏವೇತಿ

ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ ॥

ಅರ್ಥ—ಋತಂ ಚ-ಸತ್ಯವಾದ ಮಾತೂ, ಸ್ವಾಧ್ಯಾಯ ಪ್ರವಚನೇ-ವೇದ ಕಲಿಯುವುದೂ ಕಲಿಸುವುದೂ, ಇವು ಆಚರಿಸಲ್ಪಡಬೇಕು.

ಸತ್ಯಂಚ-ಎಲ್ಲಾ ಆತ್ಮರೂ ಸಮರೆಂಬ ಸಾಮ್ಯದರ್ಶನವೂ ಅಥವಾ ಭೂತಹಿತವೂ, ಸ್ವಾಧ್ಯಾಯ ಪ್ರವಚನೇಚ ವೇದ ಕಲಿಯುವುದು ಕಲಿಸುವುದು.

(ಋತಂಚ-ಇತ್ಯಾದಿ ವಾಕ್ಯಗಳ ಕೊನೆಯಲ್ಲಿ, ಇವು ಆಚರಿಸಲ್ಪಡಬೇಕು -ಎಂದು ಸೇರಿಸಿಕೊಳ್ಳಬೇಕು)

ತಪಶ್ಚ-ಶರೀರವನ್ನು ಶೋಷಣೆ ಮಾಡುವುದು ವೇದ ಕಲಿಯುವುದು ಕಲಿಸುವುದು,

ದಮಶ್ಚ.ಬಾಹ್ಯೇಂದ್ರಿಯಗಳನ್ನಡಗಿಸುವುದು ವೇದ ಕಲಿಯುವುದು ಕಲಿಸುವುದು.

ಶಮಶ್ಚ-ಮನಸ್ಸನ್ನಡಗಿಸುವುದು ವೇದ ಕಲಿಯುವುದು ಕಲಿಸುವುದು.

ಅಗ್ನಯಶ್ಚ-ಗಾರ್ಹಪತ್ಯ ಮೊದಲಾದ ಅಗ್ನಿಗಳು ವೇದ ಕಲಿಯುವುದು ಕಲಿಸುವುದು.

ಅಗ್ನಿಹೋತ್ರಂ-ಅಗ್ನಿಯ ಮೂಲಕ ಮಾಡತಕ್ಕ ನಿತ್ಯಕರ್ಮಗಳೂ ವೇದ ಕಲಿಯುವುದು ಕಲಿಸುವುದು.

ಅತಿಥಯಃ-ಅತಿಥಿ ಸತ್ಕಾರವೂ, ಸ್ವಾಧ್ಯಾಯ ಪ್ರವಚನೇಚ ವೇದ ವನ್ನು ಕಲಿಯುವುದು ಕಲಿಸವುದು.

ಮಾನುಷಂ-ಶ್ರಾದ್ಧ ಭಗವದಾರಾಧನೆಗಳು ವೇದ ಕಲಿಯುವುದು ಕಲಿಸು ವುದು.

ಪ್ರಜಾ-ಸಂತಾನವನ್ನು ಪಡೆಯುವುದು ವೇದ ಕಲಿಯುವುದು ಕಲಿಸು ವುದು.

ಪ್ರಜನಃ-ಋತು ಕಾಲದಲ್ಲಿ ಧರ್ಮಪತ್ನಿಯೊಡನೆ ಸೇರುವಿಕೆಯೂ ವೇದ ಕಲಿಯುವುದು ಕಲಿಸುವುದು.

ಪ್ರಜಾತಿಃ-ಪೌತ್ರನು ಹುಟ್ಟುವುದಕ್ಕಾಗಿ ಪುತ್ರನಿಗೆ ವಿವಾಹವೂ ವೇದ ಕಲಿಯುವುದು ಕಲಿಸುವುದು.

ಇವುಗಳು ವೇದಾಭ್ಯಾಸ, ವೇದ ಕಲಿಸುವುದರೊಡನೆ ಆಚರಿಸಲ್ಪಡ ತಕ್ಕವು. ಸತ್ಯವಚಾಃ-ನಿಜವನ್ನೇ ಹೇಳತಕ್ಕ, ರಾಥೀತರಃ-ರಾಥೀತರನೆಂಬ ಋಷಿಯು, ಸತ್ಯಂ ಇತಿ-ನಿಜವನ್ನು ಹೇಳುವುದೇ ಮುಖ್ಯವೆಂದು ಹೇಳು ತ್ತಾನೆ. ಪೌರುಶಿಷ್ಟಿಃ-ಪುರುಶಿಷ್ಟಿಯ ಮಗನಾದ, ತಪೋನಿತ್ಯಃ-ತಪೋನಿತ್ಯ ನೆಂಬ ಋಷಿಯು, ತಪಃ ಇತಿ-ತಪಸ್ಸೇ ಮುಖ್ಯವೆಂದು ಹೇಳುತ್ತಾನೆ. ಮೌದ್ಗಲ್ಯಃ-ಮುದ್ಗಲನ ಮಗನಾದ, ನಾಕಃ-ನಾಕನೆಂಬ ಋಷಿಯು, ಸ್ವಾಧ್ಯಾ ಯಪ್ರವಚನೇ, ಏವ-ವೇದ ಕಲಿಯುವುದು ವೇದ ಕಲಿಸುವುದು ಇವುಗಳೇ ಮುಖ್ಯವೆಂದು ಹೇಳುತ್ತಾನೆ. ತತ್ ಹಿ ತಪಃ-ಆ ಅಧ್ಯಯನ ಅಧ್ಯಾಪನಗಳೇ ತಪಸ್ಸು ಎನಿಸುವುದು. ತತ್ ಹಿ ತಪಃ-ಆ ಅಧ್ಯಯನ ಅಧ್ಯಾಪನಗಳೇ ತಪಸ್ಸು ಎನಿಸುವುದು.

**(ವಾ. ಅರ್ಥ)**

ನಿಜ ಹೇಳುವುದೇ ಮುಂತಾದ ಉತ್ತಮ ಕಾರ್ಯಗಳನ್ನೂ ವೇದಾಧ್ಯ ಯನ, ಅಧ್ಯಾಪನಗಳೊಡನೆ ಮಾಡಬೇಕು.

| | |
|---|---|
| ೧) ಋತಂಚ ಚ ಸ್ವಾಧ್ಯಾಯ ಪ್ರವಚನೇ | ೧) ಸತ್ಯವಾದ ಮಾತೂ ಮತ್ತು ವೇದ ಕಲಿಯುವುದು ಕಲಿಸುವುದು. (ಅಂದರೆ, ವೇದಾಧ್ಯಯನ ಅಧ್ಯಾಪನ ಗೊಳೊಡನೆ ಕೂಡಿಯೇ ಇರಬೇಕು. |
| ೨) ಸತ್ಯಂ ಚ ಸ್ವಾಧ್ಯಾಯ ಪ್ರವಚನೇ. | ೨) ಎಲ್ಲಾ ಆತ್ಮರೂ ಸಾಮ್ಯರೆಂಬ ಸಾಮ್ಯದರ್ಶನವೂ ಅಥವಾ ಭೂತ ಹಿತವೂ ಮತ್ತು ವೇದ ಕಲಿಯುವುದೂ ಕಲಿಸುವುದೂ (ಕೂಡಿಯೇ ಇರಬೇಕು) |
| ೩) ತಪಶ್ಚ ಸ್ವಾಧ್ಯಾಯ ಪ್ರವಚನೇ. | ೩) ಶರೀರವನ್ನು ಶೋಷಣ ಮಾಡುವುದು ಮತ್ತು ವೇದ ಕಲಿಯುವುದೂ ಕಲಿಸುವುದೂ (ಕೂಡಿಯೇ ಇರಬೇಕು) |
| ೪) ದಮಶ್ಚ ಚ ಸ್ವಾಧ್ಯಾಯ ಪ್ರವಚನೇ. | ೪) ಬಾಹ್ಯೇಂದ್ರಿಯಗಳನ್ನು ಅಡಗಿಸುವುದು ಮತ್ತು ವೇದ ಕಲಿಯುವುದು ಕಲಿಸುವುದು (ಕೂಡಿಯೇ ಇರಬೇಕು.) |
| ೫) ಶಮಶ್ಚ ಚ ಸ್ವಾಧ್ಯಾಯ ಪ್ರವಚನೇ. | ೫) ಮನಸ್ಸನ್ನು ಅಡಗಿಸುವುದು ಮತ್ತು ವೇದ ಕಲಿಯುವುದು ಕಲಿಸುವುದು (ಕೂಡಿಯೇ ಇರಬೇಕು.) |
| ೬) ಅಗ್ನಯಶ್ಚ ಚ ಸ್ವಾಧ್ಯಾಯ ಪ್ರವಚನೇ. | ೬) ಗಾರ್ಹಪತ್ಯ ಮೊದಲಾದ ಅಗ್ನಿಗಳು ಮತ್ತು ವೇದ ಕಲಿಯುವುದು ಕಲಿಸುವುದು (ಕೂಡಿಯೇ ಇರಬೇಕು.) |
| ೭) ಅಗ್ನಿಹೋತ್ರಂ ಚ ಸ್ವಾಧ್ಯಾಯ ಪ್ರವಚನೇ. | ೭) ಅಗ್ನಿಯ ಮೂಲಕ ಮಾಡತಕ್ಕ ನಿತ್ಯಕರ್ಮಗಳು ಮತ್ತು ವೇದ ಕಲಿಯುವುದು ಕಲಿಸುವುದು. (ಕೂಡಿಯೇ ಇರಬೇಕು) |

| | |
|---|---|
| ೮) ಅತಿಥಯಃ ಚ ಸ್ವಾಧ್ಯಾಯ ಪ್ರವಚನೇ. | ೫) ಅತಿಥಿ ಸತ್ಕಾರ ಮತ್ತು ವೇದ ಕಲಿಯುವುದು ಕಲಿಸುವುದು (ಕೂಡಿಯೇ ಇರಬೇಕು) |
| ೯) ಮಾನುಷಂ ಚ ಸ್ವಾಧ್ಯಾಯ ಪ್ರವಚನೇ. | ೯) ಶ್ರಾದ್ಧ ಭಗವದಾರಾಧನೆಗಳು ಮತ್ತು ವೇದ ಕಲಿಯುವುದು ಕಲಿಸುವುದು. (ಕೂಡಿಯೇ ಇರಬೇಕು) |
| ೧೦) ಪ್ರಜಾ ಚ ಸ್ವಾಧ್ಯಾಯ ಪ್ರವಚನೇ. | ೧೦) ಸಂತಾನ ಪಡೆಯುವದು ಮತು ವೇದ ಕಲಿಯುವುದು ಕಲಿಸುವುದೆ (ಕೂಡಿಯೇ ಇರಬೇಕು) |
| ೧೧) ಪ್ರಜನಃ ಚ ಸ್ವಾಧ್ಯಾಯ ಪ್ರವಚನೇ. | ೧೧) ಋತು ಕಾಲದಲ್ಲಿ ಧರ್ಮಪತ್ನಿಯೊಡನೆ ಸೇರುವಿಕೆಯು ಮತ್ತು ವೇದ ಕಲಿಯುವುದು ಕಲಿಸುವುದು. (ಕೂಡಿಯೇ ಇರಬೇಕು) |
| ೧೨) ಪ್ರಜಾತಿಃ ಚ ಸ್ವಾಧ್ಯಾಯ ಪ್ರವಚನೇ. | ೧೨) ಪೌತ್ರನು ಹುಟ್ಟುವುದಕ್ಕಾಗಿ ಪುತ್ರನಿಗೆ ವಿವಾಹವೂ ಮತ್ತು ವೇದ ಕಲಿಯುವುದು ಕಲಿಸುವುದು (ಕೂಡಿಯೇ ಇರಬೇಕು.) |
| ೧೩) ಸತ್ಯವಚಾಃ ರಾಥೀತರಃ ಸತ್ಯಂ ಇತಿ. | ೧೩) ನಿಜವನ್ನೇ ಹೇಳತಕ್ಕ ರಾಥೀತರನೆಂಬ ಋಷಿಯು ನಿಜವನ್ನು ಹೇಳುವುದೇ ಮುಖ್ಯವೆಂದು ಹೇಳುತ್ತಾನೆ. |
| ೧೪) ಪೌರುಶಿಷ್ಟಿಃ ತಪೋನಿತ್ಯಃ ತಪ ಇತಿ, | ೧೪) ಪುರುಶಿಷ್ಟಿಯ ಮಗನಾದ ತಪೋನಿತ್ಯನೆಂಬ ಋಷಿಯು ತಪಸ್ಸೇ ಮುಖ್ಯವೆಂದು ಹೇಳುತ್ತಾನೆ. |

| | |
|---|---|
| ೧೫) ಮೌದ್ಗಲ್ಯಃ ನಾಕಃ ಸ್ವಾಧ್ಯಾಯ ಪ್ರವಚನೇ ಏವ. | ೧೫) ಮುದ್ಗಲನ ಮಗನಾದ ನಾಕನೆಂಬ ಋಷಿಯು ವೇದ ಕಲಿಯುವುದೂ ಕಲಿಸುವುದೂ ಇವುಗಳೇ ಮುಖ್ಯವೆಂದು ಹೇಳುತ್ತಾನೆ. |
| ೧೬) ತತ್ ಹಿ ತಪಃ ; ತತ್ ಹಿ ತಪಃ. | ೧೬) ಆ ಅಧ್ಯಯನ, ಅಧ್ಯಾಪನಗಳೇ ತಪಸ್ಸು ಎನಿಸುವುದು ; ಆ ಅಧ್ಯಯನ ಅಧ್ಯಾಪನಗಳೇ ತಪಸ್ಸು ಎನಿಸುವುದು |

ಭಾವ—ನಿಜ ಹೇಳುವುದು, ಭೂತಗಳಿಗೆ ಹಿತವನ್ನಾಚರಿಸುವುದು ಶರೀರವನ್ನು ಬಾಡಿಸುವುದು, ಅಗ್ನಿಯನ್ನು ತರುವುದು ಅದರಲ್ಲಿ ಹೋಮಾದಿ ಕಾರ್ಯಮಾಡುವುದು ಅತಿಥಿಪೂಜೆ, ಶ್ರಾದ್ಧ, ಮಕ್ಕಳನ್ನು ಪಡೆಯುವುದು, ಋತುಕಾಲದಲ್ಲಿ ಭಾರ್ಯೆಯೊಡನೆ ಸೇರುವುದು, ಪೌತ್ರನು ಹುಟ್ಟಲು ಪುತ್ರನಿಗೆ ವಿವಾಹ ಮಾಡುವುದು ಈ ಕಾರ್ಯಗಳನ್ನು ವೇದಾಧ್ಯಯನ, ಅಧ್ಯಾಪನಗಳೊಡನೆ ಮಾಡಬೇಕು. ಇವುಗಳಲ್ಲಿ ನಿಜ ಹೇಳುವುದೇ ಮುಖ್ಯವೆಂದು ರಾಥೀತರಸ್ಸು, ತಪಸ್ಸೇ ಮುಖ್ಯವೆಂದು ತಪೋನಿತ್ಯನೂ, ವೇದಾಧ್ಯಯನ ಅಧ್ಯಾಪನಗಳೇ ಮುಖ್ಯವೆಂದೂ ಅದೇ ತಪಸ್ಸೆಂದೂ ನಾಕನೂ ಹೇಳುತ್ತಾರೆ.

ಋತವು ಮತ್ತು ವೇದಾಧ್ಯಯನ-ಅಧ್ಯಾಪನ

ಸತ್ಯ ಮತ್ತು ವೇದಾಧ್ಯಯನ-ಅಧ್ಯಾಪನ

ತಪಸ್ಸು ಮತ್ತು ವೇದಾಧ್ಯಯನ-ಅಧ್ಯಾಪನ

ದಮ ಮತ್ತು ವೇದಾಧ್ಯಯನ-ಅಧ್ಯಾಪನ

ಶಮ ಮತ್ತು ವೇದಾಧ್ಯಯನ-ಅಧ್ಯಾಪನ

ಅಗ್ನಿಗಳು ಮತ್ತು ವೇದಾಧ್ಯಯನ-ಅಧ್ಯಾಪನ

ಅಗ್ನಿಹೋತ್ರ ಮತ್ತು ವೇದಾಧ್ಯಯನ-ಅಧ್ಯಾಪನ

ಶ್ರಾದ್ಧ ಮತ್ತು ವೇದಾಧ್ಯಯನ-ಅಧ್ಯಾಪನ

ಪ್ರಜೆಗಳು ಮತ್ತು ವೇದಾಧ್ಯಯನ-ಅಧ್ಯಾಪನ

ಪ್ರಜನನ ಮತ್ತು ವೇದಾಧ್ಯಯನ-ಅಧ್ಯಾಪನ

ಪೌತ್ರೋತ್ಪತ್ತಿ ಮತ್ತು ವೇದಾಧ್ಯಯವ-ಅಧ್ಯಾಪನ

ಸತ್ಯವಚನ ಶೀಲನಾದ ರಾಥೀತರ ಋಷಿಯು ಸತ್ಯವೊಂದೇ ಅನುಷ್ಠೇಯ ವೆಂದು ಹೇಳುವನು. ತಪೋನಿರತನಾದ ಪೌರು ಶಿಷ್ಟಿಯು ತಪಸ್ಸೊಂದೇ ಅನುಷ್ಠೇಯುವೆನ್ನುವನು, ನಾಕಮೌದ್ಗಲ್ಯ ಋಷಿಯು ವೇದಾಧ್ಯಯನ ಅಧ್ಯಾಪನ ಇದೇ ಅನುಷ್ಠೇಯುವೆನ್ನುವನು, ಅದೇ ತಪಸ್ಸು-ಅದೇ ತಪಸ್ಸು.

(ಋತವನ್ನು ಬ್ರಹ್ಮವಿದ್ಯೆಗೆ ಅಂಗವಾಗಿ ಅನುಷ್ಠಾನ ಮಾಡಬೇಕಾದ್ದು)

## ೧೦ನೆಯ ಅನುವಾಕ

**ಮೂಲಮಂತ್ರ :–ಅಹಂ ವೃಕ್ಷಸ್ಯರೇರಿವಾ । ಕೀರ್ತಿಃ ಪೃಷ್ಠಂ ಗಿರೇರಿವ । ಊರ್ಧ್ವಪವಿತ್ರೋ ವಾಜಿನೀ ವಸ್ವಮೃತ ಮಸ್ಮಿ । ದ್ರವಿಣಗ್ಂ ಸವರ್ಚಸಂ । ಸುಮೇಧಾ ಅಮೃತೋ ಕ್ಷಿತಃ । ಇತಿ ತ್ರಿಶಂಕೋರ್ವೇದಾನುವಚನಂ ॥**

**ಅರ್ಥ :**—ಅಹಂ-ನಾನು, ವೃಕ್ಷಸ್ಯ-ಅಹಂಕಾರವೆಂಬ ಮರವನ್ನು ರೇರಿವಾ-ಕಡಿದು ಹಾಕತಕ್ಕವನು ಆಗಿದ್ದೇನೆ. ಎಂದರೆ-(ದೇಹದಲ್ಲಿ ಆತ್ಮನೆಂಬ ಬುದ್ಧಿಯನ್ನು ಬಿಟ್ಟಿದ್ದೇನೆ) ಗಿರೇಃಪೃಷ್ಠಂ ಇವ-ಮೇರುವಿನ ಶಿಖರದಂತೆ, ಕೀರ್ತಿಃ-ಯಶಸ್ಸುಳ್ಳವನು ಊರ್ಧ್ವಪವಿತ್ರಃ-ಎಲ್ಲರಿಗಿಂತ ಪರಿಶುದ್ಧನೂ ವಾಜಿನಿ-ಅನ್ನವುಳ್ಳವನೂ, ಸ್ವಮೃತಂ-ಪರಮಾತ್ಮನಿಗೆ ಅಮೃತದ ಹಾಗೆ ಅತ್ಯಂತ ಭೋಗ್ಯನೂ, ಅಸ್ಮಿ-ಆಗಿದ್ದೇನೆ. ಸುವರ್ಚಸಂ-ಒಳ್ಳೆಯದಾದ, ದ್ರವಿಣಂ ಅಸ್ಮಿ-ದ್ರವ್ಯವಾಗಿದ್ದೇನೆ. (ಪರಮಾತ್ಮನ ಭೋಗಕ್ಕೆ ಉಪಕರಣನು) ಸುಮೇಧಾಃ-ಭಗವಂತನಿಗೆ ನಾನು ಶೇಷನು ಎಂಬ ಒಳ್ಳೆಯ ಜ್ಞಾನವುಳ್ಳವನು ಅಮೃತಃ-ಸಂಸಾರವಿಲ್ಲದವನು, ಅಕ್ಷಿತಃ-ಜನನ ಮರಣಗಳೆಂಬ

ವಿಕಾರವಿಲ್ಲದವನೂ, ಅಸ್ಮಿ-ಆಗಿದ್ದೇನೆ. ಇತಿ-ಹೀಗೆಂಬುದು, ತ್ರಿಶಂಕೋಃ-ತ್ರಿಶಂಕುವಿನಿಂದ ಕಾಣಲ್ಪಟ್ಟ, ವೇದಾನುವಚನಂ-ವೇದದ ಮಂತ್ರವು.

(ವಾ. ಅರ್ಥ)

ಈ ಮಂತ್ರವನ್ನು ಬ್ರಹ್ಮವಿದ್ಯೆಗೆ ಅಂಗವಾಗಿ ಜಪಿಸಬೇಕು.

| | |
|---|---|
| ೧) ಅಹಂ ವೃಕ್ಷಸ್ಯ ರೇರಿವಾ. | ೧) ನಾನು ಅಹಂಕಾರವೆಂಬ ಮರವನ್ನು ಕಡಿದು ಹಾಕತಕ್ಕವನು (ಆಗಿದ್ದೇನೆ)(ಎಂದರೆ ದೇಹದಲ್ಲಿ ಆತ್ಮನೆಂಬ ಬುದ್ಧಿಯನ್ನು ಬಿಟ್ಟದ್ದೇನೆ). |
| ೨) ಗಿರೇಃ ಪೃಷ್ಠಮಿವ ಕೀರ್ತಿಃ. | ೨) ಮೇರುವಿನ ಶಿಖರದಂತೆ ಯಶಸ್ಸುಳ್ಳವನು. |
| ೩) ಊರ್ಧ್ವ ಪವಿತ್ರಃ, ವಾಜಿನಿ, ಸ್ವಮೃತಂ ಅಸ್ಮಿ. | ೩) ಎಲ್ಲರಿಗಿಂತಲೂ ಪರಿಶುದ್ಧನೂ, ಅನ್ನವುಳ್ಳವನೂ, ಪರಮಾತ್ಮನಿಗೆ ಅಮೃತದ ಹಾಗೆ ಅತ್ಯಂತ ಭೋಗ್ಯನೂ ಆಗಿದ್ದೇನೆ. |
| ೪) ಸುವರ್ಚಸಂ, ದ್ರವಿಣಂ ಅಸ್ಮಿ. | ೪) ಪರಮಾತ್ಮನ ಭೋಗಕ್ಕೆ ಉಪಕರಣವಾದ ಒಳ್ಳೆಯ ದ್ರವ್ಯವಾಗಿದ್ದೇನೆ. |
| ೫) ಸುಮೇಧಾಃ, ಅಮೃತಃ, ಅಕ್ಷಿತಃ, (ಅಸ್ಮಿ). | ೫) ಭಗವಂತನಿಗೆ ನಾನು ಶೇಷನು ಎಂಬ ಒಳ್ಳೆಯ ಜ್ಞಾನವುಳ್ಳವನು, ಸಂಸಾರವಿಲ್ಲದವನು, ಜನನ ಮರಣಗಳೆಂಬ ಏನೂ ವಿಕಾರವಿಲ್ಲದವನು (ಆಗಿದ್ದೇನೆ) |
| ೬) ಇತಿ ತ್ರಿಶಂಕೋಃ ವೇದಾನು-ವಚನಂ. | ೬) ಹೀಗೆಂದು ತ್ರಿಶಂಕುವಿನಿಂದ ಕಾಣಲ್ಪಟ್ಟ ವೇದದ ಮಂತ್ರವು. |

ಭಾವ—ನಾನು ದೇಹಾತ್ಮಾಭಿಮಾನವಿಲ್ಲದೇ, ಕೀರ್ತಿವಂತನೂ, ಪರಿಶುದ್ಧನೂ, ಆಗಿ ಪರಮಾತ್ಮನ ಪ್ರೀತಿಗೆ ವಿಷಯನಾಗಿಯೂ ಅವನ ಭೋಗಕ್ಕೆ ಉಪಕರಣವಾಗಿಯೇ ಇದ್ದೇನೆ. ಭಗವಂತನಿಗೇ ಶೇಷನೆಂಬ ಒಳ್ಳೆಯ ಜ್ಞಾನ ಪಡೆದು ಸಂಸಾರ ಕಳೆದುಕೊಂಡು ಜನನ ಮರಣವಿಲ್ಲದವನಾಗಿದ್ದೇನೆ ಎಂಬುದಾಗಿ ಹೇಳತಕ್ಕ ಈ ಮಂತ್ರವನ್ನು ಬ್ರಹ್ಮವಿದ್ಯೆಗೆ ಅಂಗವಾಗಿ ಜಪಿಸಬೇಕು. ಈ ಮಂತ್ರವನ್ನು ತ್ರಿಶಂಕು ಎಂಬ ಋಷಿಯು ಮೊದಲು ಕಂಡನು. ನಾನು ದೇಹಾಭಿಮಾನವನ್ನು ಛೇಧಿಸಿರುವೆನು. ಗಿರಿಪೃಷ್ಠದಂತೆ ಕೀರ್ತಿವಂತನಾಗಿರುವೆನು. ಸರ್ವೋತ್ತರ ಪವಿತ್ರನಾಗಿ ಸರ್ವಭೋಕ್ತೃವಾದ ಪರಮಾತ್ಮನಿಗೆ ಅಮೃತದಂತೆ ಭೋಗ್ಯನಾಗಿರುವೆನು. ಅವನಿಗೆ ಸಮಿಾಚೀನ ಭೋಗೋಪಕರಣಗಳಿವೆ. ನಾನು ಭಗವಂತನ ಜ್ಞಾನವುಳ್ಳವನೂ ಅಮೃತನೂ ಅಕ್ಷಯನೂ ಆಗಿರುವೆನು. ಇದು ತ್ರಿಶಂಕುವು ಕಂಡ ಮಂತ್ರ.

## ೧೧ ನೆಯ ಅನುವಾಕ

ಮೂಲ ಮಂತ್ರ:—ವೇದ ಮನೂಚ್ಯಾಚಾರ್ಯೋಽನ್ತೇವಾಸಿನಮನುಶಾಸ್ತಿ । ಸತ್ಯಂವದ । ಧರ್ಮಂಚರ । ಸ್ವಾಧ್ಯಾಯಾನ್ಮಾ ಪ್ರಮದಃ । ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ । ಸತ್ಯಾನ್ನಪ್ರಮದಿತವ್ಯಂ । ಧರ್ಮಾನ್ನ ಪ್ರಮದಿತವ್ಯಂ । ಕುಶಲಾನ್ನ ಪ್ರಮದಿತವ್ಯಂ । ಭೂತ್ಯೈನಪ್ರಮದಿತವ್ಯಂ । ಸ್ವಾಧ್ಯಾಯ ಪ್ರವಚನಾಭ್ಯಾಂ ನಪ್ರಮದಿತವ್ಯಂ । ದೇವಪಿತೃಕಾರ್ಯಾಭ್ಯಾಂ ನಪ್ರಮದಿತವ್ಯಂ । ಮಾತೃದೇವೋಭವ । ಪಿತೃದೇವೋ

ಭವ । ಆಚಾರ್ಯದೇವೋಭವ । ಅತಿಥಿದೇವೋಭವ ।
ಯಾನ್ಯನವದ್ಯಾನಿಕರ್ಮಾಣಿ । ತಾನಿಸೇವಿತವ್ಯಾನಿ । ನೋ
ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವ
ಯೋಪಾಸ್ಯಾನಿ । ನೋ ಇತರಾಣಿ । ಯೇಕೇ ಚಾಸ್ಮಚ್ಛ್ರೇ
ಯಾಗ್ಂಸೋ ಬ್ರಾಹ್ಮಣಾಃ । ತೇಷಾಂ ತ್ವಯಾಽಽಸನೇ
ನಪ್ರಶ್ವಸಿತವ್ಯಂ । ಶ್ರದ್ಧಯಾದೇಯಂ । ಅಶ್ರದ್ಧಯಾಽ
ದೇಯಂ । ಶ್ರಿಯಾದೇಯಂ । ಹ್ರಿಯಾದೇಯಂ। ಭಿಯಾ
ದೇಯಂ । ಸಂವಿದಾದೇಯಂ । ಅಥ ಯದಿತೇ ಕರ್ಮವಿ
ಚಿಕಿತ್ಸಾ ವಾ ವೃತ್ತವಿಚಿಕಿತ್ಸಾ ವಾಸ್ಯಾತ್ । ಯೇ ತತ್ರ
ಬ್ರಾಹ್ಮಣಾಸ್ಸಂಮರ್ಶಿನಃ । ಯುಕ್ತಾ ಆಯುಕ್ತಾಃ ।
ಅಲೂಕ್ಷಾ ಧರ್ಮಕಾಮಾಃ ಸ್ಯುಃ । ಯಥಾ ತೇ ತತ್ರ
ವರ್ತೇರನ್। ತಥಾ ತತ್ರವರ್ತೇಥಾಃ। ಅಥಾಭ್ಯಾ ಖ್ಯಾತೇಷು।
ಯೇ ತತ್ರ ಬ್ರಾಹ್ಮಣಾಸ್ಸಂಮರ್ಶಿನಃ । ಯುಕ್ತಾ ಆ
ಯುಕ್ತಾಃ । ಅಲೂಕ್ಷಾ ಧರ್ಮಕಾಮಾಃ ಸ್ಯುಃ । ಯಥಾತೇ
ತೇಷುವರ್ತೇರನ್। ತಥಾತೇಷು ವರ್ತೇಥಾಃ। ಏಷ ಆದೇಶಃ।

ಏಷ ಉಪದೇಶಃ । ಏಷಾ ವೇದೋಪನಿಷತ್ । ಏತದನು

ಶಾಸನಂ । ಏವಮುಪಾಸಿತವ್ಯಂ । ಏವಮುಚೈತದು

ಪಾಸ್ಯಂ ॥

ಅರ್ಥ — ಆಚಾರ್ಯಃ-ಗುರುವು, ವೇದಂ, ಅನೂಚ್ಯ-ವೇದವನ್ನು ಕಲಿಸಿ, ಅಂತೇವಾಸಿನಂ-ಶಿಷ್ಯನನ್ನು ಕುರಿತು, ಅನುಶಾಸ್ತಿ-ಅಪ್ಪಣೆ ಮಾಡುತ್ತಾನೆ. ಸತ್ಯಂ ವದ-ನಿಜವನ್ನು ಹೇಳು. ಧರ್ಮಂಚರ-ಧರ್ಮವನ್ನು ಮಾಡು. ಸ್ವಾಧ್ಯಾಯಾತ್-ವೇದ ಕಲಿಯುವುದರಲ್ಲಿ, ಮಾಪ್ರಮದಃ-ಅಜಾಗರೂಕನಾಗಬೇಡ. ಆಚಾರ್ಯಾಯ-ಗುರುವಿಗೆ, ಪ್ರಿಯಂಧನಂ-ಇಷ್ಟವಾದ ಧನವನ್ನು ಆಹೃತ್ಯ-ತಂದುಕೊಡು; ಪ್ರಜಾತಂತುಂ-ವಂಶ ಬೆಳೆಯತಕ್ಕದ್ದನ್ನು, ಮಾವ್ಯವಚ್ಛೇತ್ಸೀಃ-ನಿಲ್ಲಿಸಬೇಡ. (ಎಂದರೆ ಮಕ್ಕಳಾಗಲು ವಿವಾಹ ಮಾಡಿಕೋ) ಸತ್ಯಾತ್-ನಿಜ ಹೇಳುವುದರಿಂದ, ನಪ್ರಮದಿತವ್ಯಂ-ಅಜಾಗರೂಕನಾಗಬೇಡ. ಧರ್ಮಾತ್-ಧರ್ಮವನ್ನು ಮಾಡುವುದರಿಂದ ಅಜಾಗರೂಕನಾಗಬೇಡ. ಕುಶಲಾತ್-ದೇವರ ಪೂಜೆ ಮೊದಲಾದವುಗಳಿಂದ ಅಜಾಗರೂಕನಾಗಬೇಡ. ಭೂತ್ಯೈ-ಐಶ್ವರ್ಯಕ್ಕಾಗಿ ಅಜಾಗರೂಕನಾಗಬೇಡ. ಸ್ವಾಧ್ಯಾಯ ಪ್ರವಚನಾಭ್ಯಾಂ-ವೇದ ಕಲಿಯುವುದು ಕಲಿಸುವುದರಿಂದ ಅಜಾಗರೂಕನಾಗಬೇಡ. ದೇವಪಿತೃ ಕಾರ್ಯಾಭ್ಯಾಂ ನಪ್ರಮದಿತ್ಯವ್ಯಂ-ಯಜ್ಞ-ಶ್ರಾದ್ಧಗಳಿಂದ ಅಜಾಗರೂಕನಾಗಬೇಡ.

ಮಾತೃದೇವೋ ಭವ-ತಾಯಿಯೇ ದೇವರೆಂದು ಇರು. ಪಿತೃದೇವೋ ಭವ-ತಂದೆಯೇ ದೇವರೆಂದು ಇರು. ಆಚಾರ್ಯದೇವೋಭವ-ಗುರುವೇ ದೇವರೆಂದು ಇರು. ಅತಿಥಿದೇವೋಭವ-ಅತಿಥಿಯೇ ದೇವರೆಂದು ಇರು.

ಯಾನಿಕಾರ್ಯಾಣಿ-ಯಾವ ಕೆಲಸಗಳು, ಅನವದ್ಯಾನಿ-ದೋಷವಿಲ್ಲದವೋ, ತಾನಿ-ಅವುಗಳೇ, ಸೇವಿತವ್ಯಾನಿ-ಆಚರಿಸಲ್ಪಡತಕ್ಕವು. ಇತರಾಣಿ ನೋ-ಬೇರೆ ಕಾರ್ಯಗಳು ಆಚರಿಸಲ್ಪಡತಕ್ಕವಲ್ಲ. ಅಸ್ಮಾಕಂ-ನಮಗೆ ಸಂಬಂಧಪಟ್ಟ ಯಾನಿ ಸುಚರಿತಾನಿ-ಒಳ್ಳೆಯ ನಡತೆಗಳುಂಟೋ, ತಾನಿ-ಅವುಗಳು, ತ್ವಯಾ-

ನಿನ್ನಿಂದ, ಉಪಾಸ್ಯಾನಿ-ಆಚರಿಸಲ್ಪಡತಕ್ಕವು, ಇತರಾಣಿ ನೋ-ಬೇರೆಯವು ಆಚರಿಸಲ್ಪಡತಕ್ಕವುಗಳಲ್ಲ. ಯೇಕೇಚ ಬ್ರಾಹ್ಮಣಾಃ-ಯಾವ ಬ್ರಾಹ್ಮಣರು, ಅಸ್ಮಾತ್–ನಮಗಿಂತ, ಶ್ರೇಯಾಂಸಃ-ಶ್ರೇಷ್ಠರೋ, ತೇಷಾಂ–ಅವರಿಗೆ, ತ್ವಯಾ-ನಿನ್ನಿಂದ,ಆಸನೇನ-ಆಸನದಿಂದ,ಪ್ರಶ್ವಸಿತವ್ಯಂ-ನಮ್ರನಾಗಿರತಕ್ಕದ್ದು. (ಎಂದರೆ ಶ್ರೇಷ್ಠರಿಗೆ ಸಮನಾಗಿ ಹಾಸಿಗೆ ಪೀಠಗಳನ್ನು ಹಾಕಿಕೊಳ್ಳಬೇಡ). ಶ್ರದ್ಧಯಾ–ಶ್ರದ್ಧೆಯಿಂದ, ದೇಯಂ-ಕೊಡಬೇಕು. ಅಶ್ರದ್ಧಯಾ, ಅದೇಯಂ-ವಿಶ್ವಾಸವಿಲ್ಲದೇ ಕೊಡಕೂಡದು. ಶ್ರಿಯಾ-ಐಶ್ವರ್ಯದೊಡನೆ ದೇಯಂ-ಕೊಡಬೇಕು. ಹ್ರಿಯಾದೇಯಂ-ನಾಚಿಕೆಯೊಡನೆ ಕೊಡಬೇಕು. ಭಿಯಾ–ಭಯದೊಡನೆ, ದೇಯಂ-ಕೊಡಬೇಕು. ಸಂವಿದಾ–ತಿಳುವಳಿಕೆಯೊಡನೆ, ದೇಯಂ-ಕೊಡಬೇಕು. (ಸಂಕಲ್ಪ ಮಾಡಿಕೊಡಬೇಕು). ಅಥ-ಬಳಿಕ, ತೇ–ನಿನಗೆ, ಕರ್ಮವಿಚಿಕಿತ್ಸಾವಾ-ಕರ್ಮ ವಿಷಯದಲ್ಲಿ ಸಂದೇಹವಾಗಲೀ, ವೃತ್ತವಿಚಿಕಿತ್ಸಾವಾ-ಆಚಾರ ವಿಷಯದಲ್ಲಿ ಸಂದೇಹವಾಗಲೀ, ಯದಿ (ಭವೇತ್), ಉಂಟಾದರೆ (ತದಾ) ಆಗ, ತತ್ರ-ಆ ಕಾಲದಲ್ಲಿ, ಯೇ ಬ್ರಾಹ್ಮಣಾಃ-ಯಾವ ಬ್ರಾಹ್ಮಣರು, ಸಂಮರ್ಶಿನಃ–ವಿಮರ್ಶೆ ಮಾಡುವುದಕ್ಕೆ ಸಮರ್ಥರೋ, ಯುಕ್ತಾಃ-ಕರ್ಮಾನುಷ್ಠಾನದಲ್ಲಿ ಸಮರ್ಥರೋ, ಆಯುಕ್ತಾಃ-ಲೋಕ ಕಾರ್ಯಗಳಲ್ಲಿ ಕುಶಲರೋ, ಅಲೂಕ್ಷಾಃ-ಕ್ರೋಧ ಲೋಭಗಳಿಲ್ಲದವರೋ, ಧರ್ಮಕಾಮಾಃ ಸ್ಯುಃ–ಧರ್ಮದಲ್ಲಿ ಆಸಕ್ತಿಯುಳ್ಳವರೂ ಆಗಿರುತ್ತಾರೊ, ತೇ–ಅವರು, ತತ್ರ–ಆ ವಿಷಯದಲ್ಲಿ ಯಥಾ-ಯಾವ ವಿಧವಾಗಿ, ವರ್ತೇರ್ರ-ಆಚರಿಸುತ್ತಾರೆಯೋ ತಥಾ–ಆ ರೀತಿಯಾಗಿ, ತತ್ರ-ಆ ವಿಷಯದಲ್ಲಿ, ವರ್ತೇಥಾಃ–ಆಚರಿಸು. ಅಥ-ಮತ್ತು, ಅಭ್ಯಾಖ್ಯಾತೇಷು–ದೋಷವುಳ್ಳವನೆಂದು ಸಂದೇಹಕ್ಕೆ ಆಸ್ಪದನಾದವನ ವಿಷಯದಲ್ಲಿ, ತತ್ರ–ಆ ವಿಷಯದಲ್ಲಿ, ಯೇ ಬ್ರಾಹ್ಮಣಾಃ ಸಮ್ಮರ್ಶಿನಃ–ಯಾವ ಬ್ರಾಹ್ಮಣರು ವಿಚಾರಪರರೋ, ಯುಕ್ತಾಃ ಆಯುಕ್ತಾಃ–ಕರ್ಮಾಸಕ್ತಿ ಲೌಕಿಕ ಪ್ರಜ್ಞೆಗಳುಳ್ಳವರೋ, ಅಲೂಕ್ಷಾಃ-ಕ್ರೋಧ ಲೋಭಗಳಿಲ್ಲದೇ, ಧರ್ಮಕಾಮಾಃ ಸ್ಯುಃ–ಧರ್ಮಾಸಕ್ತಿಯುಳ್ಳವರಾಗಿದ್ದಾರೋ, ತೇ–ಅವರು, ತೇಷು. ಅಂತಹವರ ವಿಷಯದಲ್ಲಿ, ಯಥಾ-ಹೇಗೆ, ವರ್ತೇರ್ರ–ನಡೆದುಕೊಳ್ಳುತ್ತಾರೆಯೋ, ತೇಷು-ಅವರ ವಿಷಯದಲ್ಲಿ, ತಥಾ ವರ್ತೇಥಾಃ-ಹಾಗೆಯೇ ನಡೆದುಕೋ. ಏಷಃ ಆದೇಶಃ-ಇದು ರಾಜನ ಅಪ್ಪಣೆಗೆ ಸಮವಾದ ಅಪ್ಪಣೆ. ಏಷಃ ಉಪ

ಡೇಶಃ- ಇದು ತಂದೆಯು ಹೇಳುವಂತೆ ಹಿತೈಷಿಯ ಮಾತು. ಏಷಾ-ಇದು, ವೇದೋಪನಿಷತ್-ವೇದದ ರಹಸ್ಯೋಪದೇಶವು. ಏತತ್-ಇದು, ಅನುಶಾಸನಂ-ಶಿಷ್ಯನನ್ನು ಕುರಿತು ಕರ್ತವ್ಯೋಪದೇಶವು ಏವಂ ಉಪಾಸಿತವ್ಯಂ- ಹೀಗೆ, ಆಚರಿಸಬೇಕು. ಏವಂ ಉಚ ಏತತ್ ಉಪಾಸ್ಯಂ-ಇದು ಹೀಗೆಯೇ ಆಚರಿಸಲ್ಪಡತಕ್ಕದ್ದು.

(ವಾ. ಅರ್ಥ)

ಗುರುವು ಶಿಷ್ಯನಿಗೆ ವೇದವನ್ನು ಕಲಿಸಿದ ನಂತರ (ಕೆಳಗೆ ಹೇಳಿರುವ ರೀತಿಯಲ್ಲಿ) ಈ ರೀತಿ ಆಜ್ಞೆ ಮಾಡುತ್ತಾರೆ.

| | |
|---|---|
| ೧) ಆಚಾರ್ಯಃ ವೇದಂ ಅನೂಚ್ಯ ಅಂತೇವಾಸಿನಂ ಅನುಶಾಸ್ತಿ. | ೧) ಗುರುವು ವೇದವನ್ನು ಕಲಿಸಿ ಶಿಷ್ಯನನ್ನು ಕುರಿತು ಅಪ್ಪಣೆಮಾಡುತ್ತಾರೆ. |
| ೨) ಸತ್ಯಂವದ; ಧರ್ಮಂಚರ, ಸ್ವಾಧ್ಯಾಯಾತ್ ಮಾಪ್ರಮದಃ. | ೨) ನಿಜವನ್ನು ಹೇಳು; ಧರ್ಮವನ್ನು ಮಾಡು; ವೇದವನ್ನು ಕಲಿಯುವುದರಲ್ಲಿ ಅಜಾಗರೂಕನಾಗಬೇಡ. |
| ೩) ಆಚಾರ್ಯಾಯ ಪ್ರಿಯಂ ಧನಂ ಆಹೃತ್ಯ ಪ್ರಜಾತಂತುಂ ಮಾವ್ಯವ ಚ್ಛೇತ್ಸೀಃ. | ೩) ಗುರುವಿಗೆ ಇಷ್ಟವಾದ ಧನವನ್ನು ತಂದುಕೊಡು. ವಂಶ ಬೆಳೆಯತಕ್ಕದ್ದನ್ನು ನಿಲ್ಲಿಸಬೇಡ (ಎಂದರೆ ಮಕ್ಕಳಾಗಲು ವಿವಾಹಮಾಡಿಕೋ.) |
| ೪) ಸತ್ಯಾತ್ ನ ಪ್ರಮದಿತವ್ಯಂ; ಧರ್ಮಾತ್ನ ಪ್ರಮದಿತವ್ಯಂ; ಕುಶಲಾತ್ನ ಪ್ರಮದಿತವ್ಯಂ; ಭೂತ್ಯೈನ ಪ್ರಮದಿತವ್ಯಂ; ಸ್ವಾಧ್ಯಾಯ ಪ್ರವಚನಾಭ್ಯಾಂ ನಪ್ರಮದಿತವ್ಯಂ; ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ. | ೪) ನಿಜಹೇಳುವುದರಿಂದ ಅಜಾಗರೂಕನಾಗಬೇಡ; ಧರ್ಮವನ್ನು ಮಾಡುವುದರಿಂದ ಅಜಾಗರೂಕನಾಗಬೇಡ; ಕುಶಲದಿಂದ ಅಜಾಗರೂಕನಾಗಬೇಡ ; ದೇವಪೂಜೆ ಮೊದಲಾದವುಗಳಿಂದ ಅಜಾಗರೂಕನಾಗಬೇಡ; ಐಶ್ವರ್ಯಕ್ಕಾಗಿ ಅಜಾಗರೂಕನಾಗಬೇಡ; ವೇದ ಕಲಿ |

ಯುವುದು, ಕಲಿಸುವುದು ಇವುಗಳಲ್ಲಿ ಅಜಾಗರೂಕನಾಗಬೇಡ, ಯಜ್ಞಶ್ರಾದ್ಧಗಳಿಂದ ಅಜಾಗರೂಕನಾಗಬೇಡ.

೫) ಮಾತೃದೇವೋ ಭವ; ಪಿತೃದೇವೋ ಭವ; ಆಚಾರ್ಯ ದೇವೋ ಭವ, ಅತಿಥಿದೇವೋ ಭವ.

೫) ತಾಯಿಯೇ ದೇವರೆಂದು ಇರು; ತಂದೆಯೇ ದೇವರೆಂದು ಇರು; ಗುರುವೇ ದೇವರೆಂದು ಇರು; ಅತಿಥಿಯೇ ದೇವರೆಂದು ಇರು.

೬) ಯಾನಿ ಕರ್ಮಾಣಿ ಅನವದ್ಯಾನಿ ತಾನಿ ಸೇವಿತವ್ಯಾನಿ; ಇತರಾಣಿ ನೋ.

೬) ಯಾವ ಕಾರ್ಯಗಳು ದೋಷವಿಲ್ಲದವೋ ಅವುಗಳೇ ಆಚರಿಸಲ್ಪಡತಕ್ಕವು; ಬೇರೆ ಕಾರ್ಯಗಳು ಆಚರಿಸಲ್ಪಡತಕ್ಕವುಗಳಲ್ಲ.

೭) ಅಸ್ಮಾಕಂ ಯಾನಿ ಸುಚರಿತಾನಿ, ತಾನಿ ತ್ವಯಾ ಉಪಾಸ್ಯಾನಿ; ಇತರಾಣಿ ನೋ.

೭) ನಮಗೆ ಸಂಬಂಧಪಟ್ಟ ಯಾರ ಒಳ್ಳೆಯ ನಡತೆಗಳುಂಟೋ ಅವುಗಳು ನಿನ್ನಿಂದ ಆಚರಿಸಲ್ಪಡತಕ್ಕವು; ಬೇರೆಯವು ಆಚರಿಸಲ್ಪಡತಕ್ಕವುಗಳಲ್ಲ.

೮) ಯೇ ಕೇಚ ಬ್ರಾಹ್ಮಣಾಃ ಅಸ್ಮತ್‌ಶ್ರೇಯಾಂಸಃ ತೇಷಾಂ ತ್ವಯಾ ಆಸನೇನ ಪ್ರಶ್ವಸಿತವ್ಯಂ.

೮) ಯಾವ ಬ್ರಾಹ್ಮಣರು ನಮಗಿಂತ ಶ್ರೇಷ್ಠರೋ ಅವರಿಗೆ ನಿನ್ನಿಂದ ಆಸನದಿಂದ ನಮ್ರನಾಗಿರ ತಕ್ಕದ್ದು. (ಎಂದರೆ ಶ್ರೇಷ್ಠನಿಗೆ ಸಮನಾಗಿ ಹಾಸಿಗೆ ಪೀಠಗಳನ್ನು ಹಾಕಿಕೊಳ್ಳಬೇಡ.) ಅವರಿಗೆ ಆಸನಾದಿಗಳನ್ನು ಕೊಟ್ಟು ಗೌರವಿಸಬೇಕು.

೯) ಶ್ರದ್ಧಯಾ ದೇಯಂ; ಅಶ್ರದ್ಧಯಾ ಅದೇಯಂ;ಶ್ರಿಯಾದೇಯಂ; ಹ್ರಿಯಾ ದೇಯಂ ; ಭಿಯಾ ದೇಯಂ; ಸಂವಿದಾ ದೇಯಂ.

೯) ಮನಃಪೂರ್ವಕವಾಗಿ ಮರ್ಯಾದೆಯಿಂದ, ಕೊಡಬೇಕು ; ವಿಶ್ವಾಸವಿಲ್ಲದೆ ಕೊಡಕೂಡದು; ಐಶ್ವರ್ಯದೊಡನೆ ಕೊಡಬೇಕು; ನಾಚಿಕೆಯೊಡನೆ ಕೊಡಬೇಕು; ಭಯದೊಡನೆ ಕೊಡಬೇಕು, ತಿಳುವಳಿ

| | |
|---|---|
| | ಕೆಯೊಡನೆ (ಅಂದರೆ ಸಂಕಲ್ಪಮಾಡಿ ಕೊಡಬೇಕು.) |
| ೧೦) ಅಥತೇಕರ್ಮ ವಿಚಿಕಿತ್ಸಾವಾ, ವೃತ್ತ ವಿಚಿ ಕಿತ್ಸಾವಾ, ಯದಿ (ಭವೇತ್), (ತದಾ) ತತ್ರಯೇ ಬ್ರಾಹ್ಮಣಾಃ ಸಂಮರ್ಶಿನಃ ಯುಕ್ತಾಃ, ಆಯುಕ್ತಾಃ, ಅಲೂಕ್ಷಾಃ ಧರ್ಮ ಕಾಮಾಸ್ಯುಃ, ತೇ ತತ್ರ ಯಥಾವರ್ತೇರ್ರ, ತಥಾ ತತ್ರ ವರ್ತೇ ಥಾಃ. | ೧೦) ಬಳಿಕ ನಿನಗೆ ಕರ್ಮ ವಿಷಯದಲ್ಲಿ ಸಂದೇಹವಾಗಲೀ, ಆಚಾರ ವಿಷಯದಲ್ಲಿ ಸಂದೇಹವಾಗಲೀ ಉಂಟಾದರೆ, (ಆಗ) ಆ ಕಾಲದಲ್ಲಿ ಯಾವ ಬ್ರಾಹ್ಮಣರು ವಿಮರ್ಶೆ ಮಾಡುವುದಕ್ಕೆ ಸಮರ್ಥರೋ ಕರ್ಮಾನುಷ್ಠಾನದಲ್ಲಿ ಸಮರ್ಥರೋ, ಲೋಕ ಕಾರ್ಯಗಳಲ್ಲಿ ಕುಶಲರೋ, ಕ್ರೋಧಲೋಭಗಳಿಲ್ಲದಿರುವವರೋ, ಧರ್ಮದಲ್ಲಿ ಆಸಕ್ತಿಯುಳ್ಳವರು ಆಗಿರುತ್ತಾರೋ, ಅವರು ಆ ವಿಷಯದಲ್ಲಿ, ಯಾವ ವಿಧವಾಗಿ ಅಚರಿಸುತ್ತಾರೆಯೋ, ಆ ರೀತಿಯಾಗಿ ಆ ವಿಷಯದಲ್ಲಿ ಆಚರಿಸು. |
| ೧೧) ಅಥ ಅಭ್ಯಾಖ್ಯಾತೇಷು ತತ್ರಯೇ ಬ್ರಾಹ್ಮಣಾಃ ಸಂಮರ್ಶಿನಃ ಯುಕ್ತಾ ಆಯುಕ್ತಾಃ, ಅಲೂಕ್ಷಾ, ಧರ್ಮಕಾಮಾಸ್ಯುಃ, ತೇ ತೇಷು ಯಥಾವರ್ತೇರ್ರ ತೇಷು ತಥಾವರ್ತೇಥಾಃ. | ೧೧) ಅನಂತರ ದೋಷವುಳ್ಳವನೆಂದು ಸಂದೇಹಕ್ಕೆ ಆಸ್ಪದನಾದವನ ವಿಷಯದಲ್ಲಿ; ಆ ವಿಷಯದಲ್ಲಿ ಯಾವ ಬ್ರಾಹ್ಮಣರು ವಿಚಾರಪರರೋ, ಕರ್ಮಸಕ್ತಿ ಲೌಕಿಕ ಪ್ರಜ್ಞೆಗಳುಳ್ಳವರೋ, ಕ್ರೋಧ ಲೋಭಗಳಿಲ್ಲದೇ ಧರ್ಮಾಸಕ್ತಿ ಉಳ್ಳವರಾಗಿದ್ದಾರೆಯೋ ಅವರು ಅಂಥವರ ವಿಷಯಗಳಲ್ಲಿ ಹೇಗೆ ನಡೆದುಕ್ಕೊಳ್ಳುತ್ತಾರೆಯೋ ಹಾಗೆಯೇ ನಡೆದುಕೋ. |
| ೧೨) ಏಷಃ ಆದೇಶಃ ; ಏಷಃ ಉಪದೇಶಃ ; ಏಷಾ ವೇದೋಪನಿ | ೧೨) ಇದು ರಾಜನ ಅಪ್ಪಣೆಗೆ ಸಮನಾದ ಅಪ್ಪಣೆ : ಇದು ತಂದೆಯು |

| | |
|---|---|
| ಷತ್ ; ಏತತ್ ಅನುಶಾಸನಂ, ಏವಂಉಉಪಾಸಿತವ್ಯಂ ; ಏವಂ ಉಚ ಏತತ್ ಉಪಾಸ್ಯಂ. | ಹೇಳುವಂತೆ ಹಿತೈಷಿಯ ಮಾತು ; ಇದು ವೇದದ ರಹಸ್ಯೋಪದೇಶವು ; ಇದು ಶಿಷ್ಯನನ್ನು ಕುರಿತು ಕರ್ತವ್ಯೋಪದೇಶವು ಹೀಗೆ ಆಚರಿಸಬೇಕು ; ಇದ ಹೀಗೆಯೇ ಆಚರಿಸಲ್ಪಡತಕ್ಕದ್ದು. |

ಭಾವ—ವೇದವನ್ನು ಅಧ್ಯಯನ ಮಾಡಿದ ಮೇಲೆ ಆಚಾರ್ಯನು ಶಿಷ್ಯನಿಗೆ ಹೀಗೆ ಅನುಶಾಸನ ಮಾಡುವನು. ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ವೇದದ ಅಧ್ಯಯನದಲ್ಲಿ ಅಜಾಗರೂಕನಾಗಬೇಡ. ಗುರುವಿಗೆ ಪ್ರಿಯವಾಗುವ ದಕ್ಷಿಣೆಯನ್ನು ಕೊಡು. ಪುತ್ರಸಂತತಿಯ ಅವಿಚ್ಛೇದಕ್ಕೋಸ್ಕರ ವಿವಾಹ ಮಾಡಿಕೋ. ಸತ್ಯದಿಂದ ಜಾರಬೇಡ. ಧರ್ಮದಿಂದ ಜಾರಕೂಡದು. ಮಂಗಳಾಚರಣದಿಂದ ಜಾರಕೂಡದು. ಐಶ್ವರ್ಯಾರ್ಥ ಕರ್ಮದಿಂದ ಜಾರಕೂಡದು. ಸ್ವಾಧ್ಯಾಯ ಮತ್ತು ಪ್ರವಚನಗಳಿಂದ ಜಾರಕೂಡದು. ದೇವ ಪಿತೃಕಾರ್ಯಗಳಿಂದ ಜಾರಕೂಡದು. ದೇವರಂತೆ ಮಾತೆಯನ್ನು ಪರಿಗಣಿಸು ದೇವರಂತೆ ತಂದೆಯನ್ನು ಪರಿಗಣಿಸು. ದೇವರಂತೆ ಆಚಾರ್ಯನನ್ನು ಪರಿಗಣಿಸು. ಶುದ್ಧವಾದ ಕರ್ಮಗಳು ನಿನ್ನಿಂದ ಸೇವಿಸಲ್ಪಡಲಿ. ಇತರ ಕರ್ಮಗಳು ತ್ಯಜಿಸಲ್ಪಡಲಿ ನಾವು ಆಚರಿಸುವ ಕರ್ಮಗಳಲ್ಲಿ ಯಾವುವು ಸುಚರಿತಗಳೋ, ಅವು ನಿನ್ನಿಂದ ಸೇವಿಸಲ್ಪಡಲಿ. ನಮ್ಮ ಇತರ ಆಚರಣೆಗಳು ತ್ಯಜಿಲ್ಪಡಲಿ. ನಮಗಿಂತ ಶ್ರೇಷ್ಠರಾದ ಬ್ರಾಹ್ಮಣರೊಡನೆ ಒಂದೇ ಆಸನಾದಿಗಳಲ್ಲಿ ಸಮಾನರಂತೆ ನೀನು ಕುಳಿತುಕೊಳ್ಳಬೇಡ, ಶ್ರದ್ಧೆಯಿಂದ ದಾನ ಮಾಡಬೇಕು. ಅಶ್ರದ್ಧೆಯಿಂದ ದಾನ ಮಾಡಬಾರದು. ಪ್ರಸನ್ನತೆಯಿಂದ ದಾನ ಮಾಡಬೇಕು, ಲಜ್ಜೆಯಿಂದ ದಾನ ಮಾಡಬೇಕು. ಭೀತಿಯಿಂದ ದಾನ ಮಾಡಬೇಕು. ಸಮ್ಯಕ್ಸಂಕಲ್ಪದಿಂದ ದಾನ ಮಾಡಬೇಕು. ನಿನಗೆ ಯಾವುದಾದರೂ ಕರ್ಮದಲ್ಲಿ ಅಥವಾ ವೃತ್ತದಲ್ಲಿ ಧರ್ಮಾಧರ್ಮ ಸಂಶಯು ಒದಗಿದರೆ, ಆ ಸಂದರ್ಭದಲ್ಲಿ ವಿಚಾರ ಕುಶಲರೂ ವೇದ ಶಾಸ್ತ್ರದಲ್ಲಿ ನಿಷ್ಠೆಯುಳ್ಳವರೂ, ಸಮಗ್ರವಾಗಿ ಅಂದರೆ ಲೌಕಿಕದಲ್ಲಿಯೂ ಕುಶಲರೂ ಕ್ರೋಧಲೋಭರಹಿತರೂ ಮತ್ತು ಧರ್ಮವನ್ನೇ ಇಚ್ಛಿಸುವವರೂ ಆದ ಬ್ರಾಹ್ಮಣರು, ಯಾವ ರೀತಿ ವರ್ತಿಸುವರೋ ಆ ರೀತಿ ನೀನೂ ವರ್ತಿಸು. ಹಾಗೆಯೇ ನಿಂದಿತಕರ್ಮಗಳ ವಿಷಯಗಳಲ್ಲಿ ಅವರು ಹೇಗೆ ವರ್ತಿಸು

ವರ್ತೋ ಹಾಗೆಯೇ ನೀನೂ ವರ್ತಿಸು. ಇದು ಶಾಸನ ಇದು ಉಪದೇಶ. ಇದೇ ವೇದದ ರಹಸ್ಯೋಪದೇಶ. ಈ ಅನುಶಾಸನವು ಆಚಾರ್ಯನಿಂದ ಶಿಷ್ಯನಿಗೆ ಮಾಡಲ್ಪಡಬೇಕು. ಹೀಗೆಯೇ ಉಪಾಸನೆ ಮಾಡಬೇಕು.

## ೧೩ನೆಯ ಅನುವಾಕ

ಮೂಲ ಮಂತ್ರ:—ಶ ನ್ನೋ ಮಿತ್ರಃ ಶಂ ವರುಣಃ । ಶಂ ನೋ

ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಃ । ಶಂ

ನೋ ವಿಷ್ಣುರುರುಕ್ರಮಃ। ನಮೋ ಬ್ರಹ್ಮಣೇ । ನಮಸ್ತೇ

ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ

ಪ್ರತ್ಯಕ್ಷಂ ಬ್ರಹ್ಮಾವಾದಿಷಂ । ಋತಮವಾದಿಷಂ । ಸತ್ಯ

ಮವಾದಿಷಂ । ತನ್ಮಾಮಾವೀತ್ । ತದ್ವಕ್ತಾರಮಾವೀತ್ ।

ಅವೀನ್ಮಾಂ । ಆವೀದ್ವಕ್ತಾರಮ್ । ಓಂ ಶಾಂತಿಃ ಶಾಂತಿಃ

ಶಾಂತಿಃ ॥

ಅರ್ಥ—ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ-ಎನ್ನುವ ವರಿವಿಗೆ ಈ ಮಂತ್ರದ ಅರ್ಥವು ಮೊದಲೇ ಹೇಳಲ್ಪಟ್ಟಿದೆ. ತ್ವಾಮೇವ-ನಿನ್ನನ್ನೇ ಪ್ರತ್ಯಕ್ಷಂ ಬ್ರಹ್ಮ-ಪ್ರತ್ಯಕ್ಷವಾದ ಬ್ರಹ್ಮನನ್ನಾಗಿ, ಅವಾದಿಷಂ-ಹೇಳಿದೆನು. ಋತಂ ಅವಾದಿಷಂ-ಋತವನ್ನಾಗಿ ಹೇಳಿದೆನು. ಸತ್ಯಂ ಅವಾದಿಷಂ-ಸತ್ಯವನ್ನಾಗಿ ಹೇಳಿದೆನು. ತತ್-ಅದು, ಮಾಂ-ನನ್ನನ್ನು, ಆವೀತ್-ಕಾಪಾಡಿತು. ತತ್-ಅದು, ವಕ್ತಾರಂ-ಹೇಳಿಕೊಟ್ಟವನನ್ನು, ಆವೀತ್-ಕಾಪಾಡಿತು.

ಓಂ ಶಾಂತಿಃ ಶಾಂತಿಃ ಶಾಂತಿಃ ವಾಚಿಕ, ಕಾಯಿಕ, ಮಾನಸಿಕ ಪಾಪಗಳು ಅಡಗಲಿ.

(ವಾ. ಅರ್ಥ)

| | |
|---|---|
| ೧) ಮಿತ್ರಃ ನಃ ಶಂ ಭವತು | ೧) ಪ್ರಾಣಗಳನ್ನು ಕಿರಣಗಳ ಮೂಲಕ ಪೋಷಿಸತಕ್ಕ ಸೂರ್ಯನು ನಮಗೆ ಸುಖವನ್ನು ಕೊಡತಕ್ಕವನಾಗಲಿ. |
| ೨) ವರುಣಃ ಶಂ ಭವತು. | ೨) ಅ ಪಾ ನ ವೃ ತ್ತಿ ಗೆ ಅಭಿಮಾನಿಯಾದ ವರುಣನು ಸುಖಪ್ರದನಾಗಲಿ. |
| ೩) ಅರ್ಯಮಾ ನಃ ಶಂ ಭವತು. | ೩) ಚಕ್ಷುರಿಂದ್ರಿಯ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |
| ೪) ಇಂದ್ರಃ ನಃ ಶಂಭವತು. | ೪) ಬಲಕ್ಕೆ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |
| ೫) ಬೃಹಸ್ಪತಿಃ ನಃ ಶಂ ಭವತು. | ೫) ವಾಕ್ಕಿಗೆ ಅಭಿಮಾನಿಯು ನಮಗೆ ಸುಖಪ್ರದನಾಗಲಿ. |
| ೬) ಉರುಕ್ರಮಃ ವಿಷ್ಣುಃ ನಃ ಶಂ ಭವತು. | ೬) ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ ವಿಷ್ಣುವು ನಮಗೆ ಸುಖಪ್ರದನಾಗಲಿ. |
| ೭) ಬ್ರಹ್ಮಣೇ ನಮಃ | ೭) ವೇದಕ್ಕೆ ನಮಸ್ಕಾರವು. |
| ೮) ವಾಯೋ ತೇ ನಮಃ | ೭) ಪ್ರಾಣಾಪಾನಾದಿಗಳ ಶರೀರವನ್ನು ಧರಿಸಿ ವೇದಾಕ್ಷರಗಳನ್ನು ಪ್ರಕಾಶಪಡಿಸುವ ವಾಯುವೇ ನಿನಗೆ ನಮಸ್ಕಾರವು. |

೯) ತ್ವಮೇವ ಪ್ರತ್ಯಕ್ಷಂ ಬ್ರಹ್ಮ ಅಸಿ.

೯) ನೀನೇ ಕಣ್ಣಿಗೆ— ಕಾಣಿಸತಕ್ಕ ಜಗತ್ತನ್ನು ಕಾಪಾಡತಕ್ಕ ದೊಡ್ಡಗುಣವುಳ್ಳವನು ಆಗಿದ್ದೀಯೆ.

೧೦) ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ಅವಾದಿಷಂ.

೧೦) ನಿನ್ನನ್ನೇ ಪ್ರತ್ಯಕ್ಷವಾದ ಬ್ರಹ್ಮನನ್ನಾಗಿ ಹೇಳಿದೆನು.

೧೧) ತತ್ ಮಾಂ ಆವೀತ್.

೧೧) ಅದು ನನ್ನನ್ನು ಕಾಪಾಡಿತು.

೧೨) ತತ್ ವಕ್ತಾರಂ ಆವೀತ್.

೧೨) ಅದು ಹೇಳಿಕೊಟ್ಟವನನ್ನು ಕಾಪಾಡಿತು.

ಓಂ ಶಾಂತಿಃ ಶಾಂತಿಃ ಶಾಂತಿಃ !

ವಾಚಿಕ, ಕಾಯಿಕ, ಮಾನಸಿಕ ಪಾಪಗಳು ಅಡಗಲಿ.

**ಭಾವ**—ಸೂರ್ಯ, ವರುಣ, ಅರ್ಯಮ, ಇಂದ್ರ, ಬೃಹಸ್ಪತಿ, ಉರುಕ್ರಮನಾದವಿಷ್ಣು, ಇವರು ನಮಗೆ ಸುಖಪ್ರದರಾಗಲಿ. ವೇದಕ್ಕೆ ನಮಸ್ಕಾರ-ವಾಯುವಿಗೆ ನಮಸ್ಕಾರ-ನೀನು ಪ್ರತ್ಯಕ್ಷನಾದ ಬ್ರಹ್ಮನಾಗಿರುವೆ. ನಿನ್ನನ್ನು ಪ್ರತ್ಯಕ್ಷ ಬ್ರಹ್ಮನೆಂದು ಹೇಳಿದೆನು. ಋತವನ್ನು ಹೇಳಿದೆನು—ಸತ್ಯವನ್ನು ಹೇಳಿದೆನು. ಅದು (ವೇದವು) ನನ್ನನ್ನು ಕಾಪಾಡಿತು. ಆಚಾರ್ಯನನ್ನು ಕಾಪಾಡಿತು. ಎಲ್ಲರ ವಾಚಿಕ, ಕಾಯಿಕ, ಮಾನಸಿಕಗಳಾದ ಪಾಪಗಳೂ ಅಡಗಿ ಶಾಂತಿಯುಂಟಾಗಲಿ.

**ಮೂಲ ಮಂತ್ರ** :—ಸಹ ನಾವವತು। ಸಹ ನೌ ಭುನಕ್ತು। ಸಹ

ವೀರ್ಯಂ ಕರವಾವಹೈ। ತೇಜಸ್ವಿನಾವಧೀತಮಸ್ತು।

ಮಾವಿದ್ವಿಷಾವಹೈ

ಓಂ ಶಾಂತಿಃ ಶಾಂತಿಃ ಶಾಂತಿಃ.

ಅರ್ಥ—ನೌ-ಶಿಷ್ಯಾಚಾರ್ಯರುಗಳಿಬ್ಬರನ್ನೂ, ಸಹ ಅವತು-ಒಟ್ಟಿಗೆ ಕಾಪಾಡಲಿ. ನೌ-ನಮ್ಮಿಬ್ಬರನ್ನೂ, ಸಹ ಭುನಕ್ತು-ಒಟ್ಟಿಗೆ ಪಡೆಯಲಿ. ವೀರ್ಯಂ-ಆಯಾ ಫಲವನ್ನುಂಟುಮಾಡತಕ್ಕ ಸಾಮರ್ಥ್ಯವನ್ನು, ಸಹ ಕರ ವಾವಹೈ-ಒಟ್ಟಿಗೇ ಮಾಡುತ್ತೇವೆ. ನೌ-ನಮ್ಮಿಬ್ಬರಿಂದ, ಅಧೀತಂ-ಕಲಿಯಲ್ಪಟ್ಟ ಮಂತ್ರವು, ತೇಜಸ್ವಿ ಅಸ್ತು-ಸಾಮರ್ಥ್ಯವುಳ್ಳದ್ದಾಗಿ ಆಗಲಿ. ಮಾವಿದ್ವಿಷಾವಹೈ-(ದ್ವೇಷವಿಲ್ಲದಿರುತ್ತೇವೆ) ಪರಸ್ಪರ ಅನುರಾಗವುಳ್ಳವರಾಗಿರುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ—ಎಲ್ಲಾ ವಿಧವಾದ (ಎಲ್ಲರ) ಕಾಯಿಕ, ವಾಚಿಕ, ಮಾನಸಿಕವಾದ ಪಾಪ ದೋಷಗಳೂ ಹೋಗಿ ಶಾಶ್ವತವಾದ ಶಾಂತಿಯುಂಟಾಗಲಿ.

**(ವಾ. ಅರ್ಥ)**

| | |
|---|---|
| ಸಹ, ನಾವವತು | ಆಚಾರ್ಯ ಶಿಷ್ಯವರ್ಗದವರಾದ ನಮ್ಮಿಬ್ಬರುಗಳನ್ನೂ ಒಟ್ಟಿಗೆ ಕಾಪಾಡಲಿ. |
| ಸಹ ನೌ ಭುನಕ್ತು | ನಮ್ಮಿಬ್ಬರನ್ನೂ ಒಟ್ಟಿಗೆ (ಜೊತೆಯಾಗಿಯೇ) ಪಡೆಯಲಿ. |
| ಸಹ ವೀರ್ಯಂ ಕರವಾವಹೈ | ಆಯಾ ಫಲವನ್ನುಂಟುಮಾಡತಕ್ಕ ಸಾಮರ್ಥ್ಯವನ್ನು ಒಟ್ಟಿಗೇ ಮಾಡುತ್ತೇವೆ. |
| ನೌ ಅಧೀತಂ ತೇಜಸ್ವಿ ಅಸ್ತು | (ಆಚಾರ್ಯ ಶಿಷ್ಯರುಗಳಾದ) ನಮ್ಮಿಬ್ಬರಿಂದ ಕಲಿಯಲ್ಪಟ್ಟ ಮಂತ್ರವು ಸಾಮರ್ಥ್ಯವುಳ್ಳದ್ದಾಗಲಿ. |
| ಮಾವಿದ್ವಿಷಾವಹೈ | ಈಷತ್ತೂ ದ್ವೇಷವಿಲ್ಲದೆ ಪರಸ್ಪರ ಅನುರಾಗವುಳ್ಳವರಾಗಿರುತ್ತೇವೆ. |

ಓಂ ಶಾಂತಿಃ ಶಾಂತಿಃ ಶಾಂತಿಃ ಇತರ ದೋಷಗಳೆಲ್ಲಾ ಹೋಗಿ ಶಾಶ್ವತ ಸುಖವಾದ ಶಾಂತಿಯುಂಟಾಗಲಿ.

**ತಾತ್ಪರ್ಯ**—ಅಧ್ಯಯನ ಉಪದೇಶಗಳಿಂದ ಪ್ರಾರ್ಥನಾ ಫಲಶ್ರುತಿಗಳನ್ನು ವಿಶದಪಡಿಸುತ್ತದೆ. ಆಚಾರ್ಯ ಶಿಷ್ಯವರ್ಗದವರಿಬ್ಬರಿಗೂ ಜೊತೆಯಲ್ಲಿಯೇ, ಪರಸ್ಪರ ಅನುರಾಗಪೂರ್ವಕವಾಗಿ ಸಕಲವಿಧವಾದ ಸುಖ ಸಾಮ್ರಾಜ್ಯ ಸಂಪತ್ಸರ್ವವೂ ಉಂಟಾಗಲಿ. ಇಷ್ಟಾರ್ಥಸಿದ್ಧಿಯುಂಟಾಗಲಿ. ಸಕಲವಿಧವಾದ ಪಾಪ ದೋಷಗಳೂ ಹೋಗಿ, ಶಾಶ್ವತವಾದ ಸುಖ ಶಾಂತಿಗಳುಂಟಾಗಲಿ.

(ಶೀಕ್ಷಾವಲ್ಲೀ ಸಂಪೂರ್ಣಂ)

---

ಶ್ರೀಃ

# ತೈತ್ತಿರೀಯಉಪನಿಷತ್

II

# ಬ್ರಹ್ಮಾನಂದವಲ್ಲೀ

ಓಂ

# ಬ್ರಹ್ಮಾನಂದವಲ್ಲೀ.

## ಒಂದನೆಯ ಅನುವಾಕ

**ಮೂಲ ಮಂತ್ರ :— ಓಂ ಬ್ರಹ್ಮವಿದಾಪ್ನೋತಿಪರಮ್ ।**

**ತದೇಷಾಭ್ಯುಕ್ತಾ । ಸತ್ಯಂಜ್ಞಾನಮನನ್ತಂ ಬ್ರಹ್ಮ ।**

**ಯೋವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**

**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ**

**ವಿಪಶ್ಚಿತೇತಿ.**

ಪರಮ ತತ್ತ್ವವನ್ನೂ, ಹಿತವಾದ ಉಪಾಯವನ್ನೂ, ಪುರುಷಾರ್ಥವಾದ ಮೋಕ್ಷವನ್ನೂ ಬೋಧಿಸುವ ಬ್ರಹ್ಮವಲ್ಲಿಯು ಪ್ರಸ್ತಾಪಿಸಲ್ಪಡುತ್ತದೆ.

**ಅರ್ಥ**—ಬ್ರಹ್ಮವಿತ್-ಎಲ್ಲಕ್ಕಿಂತಲೂ ದೊಡ್ಡದಾದ ವಸ್ತುವನ್ನು ಉಪಾಸನೆ ಮಾಡತಕ್ಕವನು, ಪರಂ-ಎಲ್ಲಕ್ಕಿಂತಲೂ ಉತ್ಕೃಷ್ಟವಾದದ್ದನ್ನು. ಆಪ್ನೋತಿ-ಹೊಂದುತ್ತಾನೆ. ತತ್-ಬ್ರಹ್ಮವನ್ನು ಕುರಿತ, ಏಷಾ-ಈ ಋಕ್ಕು. ಅಭ್ಯುಕ್ತಾ-ಅಧ್ಯಯನ ಮಾಡುವವರಿಂದ ವಿವರಿಸಲ್ಪಟ್ಟಿದೆ.

ಮುಂದಿನ ವಾಕ್ಯಗಳು "ಬ್ರಹ್ಮವಿದಾಪ್ನೋತಿ ಪರಂ" ಎಂದು ಸಂಕ್ಷೇಪವಾಗಿ ಹೇಳಲ್ಪಟ್ಟ ತತ್ತ್ವ, ಹಿತ, ಪುರುಷಾರ್ಥಗಳನ್ನು ವಿವರಿಸುವುವು. ಮೊದಲು ಬ್ರಹ್ಮಶಬ್ದದ ಅರ್ಥವನ್ನು ವಿವರಿಸುತ್ತದೆ.

ಬ್ರಹ್ಮ-ಬ್ರಹ್ಮವೆಂಬುದು, ಸತ್ಯಂ-ನಿರುಪಾಧಿಕ ಸತ್ತೆಯುಳ್ಳದ್ದು, (ವಿಕಾರವನ್ನು ಹೊಂದುವ ಜಡ ಪದಾರ್ಥವೂ, ಆ ಜಡ ಪದಾರ್ಥದೊಡನೆ

ಕೂಡಿದ ಸಂಸಾರಿಯಾದ ಜೀವನೂ ಬೇರೆ ಬೇರೆ ಹೆಸರನ್ನು ಹೊಂದಲರ್ಹ ವಾದ ಅವಸ್ಥಾಂತರಗಳನ್ನು ಪಡೆಯುವುದರಿಂದ; ಪ್ರಕೃತಿ, ಜೀವ, ಇವುಗಳು ನಿರುಪಾಧಿಕ ಸತ್ತೆಯುಳ್ಳವುಗಳಲ್ಲವೆಂದು ತಾತ್ಪರ್ಯ).

ಜ್ಞಾನಂ-ಯಾವಾಗಲೂ ಸಂಕೋಚವನ್ನು ಹೊಂದದೇ ಇರುವ ಜ್ಞಾನ ವುಳ್ಳದ್ದು. (ಮುಕ್ತಿಯನ್ನು ಪಡೆದ ಜೀವರ ಜ್ಞಾನವು ಸಂಸಾರ ದಶೆಯಲ್ಲಿ ಸಂಕೋಚವನ್ನು ಹೊಂದಿರುವುದು. ಆದ್ದರಿಂದ ಮುಕ್ತರು ಈ ವಿಧವಾದ ಜ್ಞಾನವುಳ್ಳವರಲ್ಲವೆಂದು ಭಾವ). ಅನನ್ತಂ-ದೇಶ ಕಾಲ. ವಸ್ತು ಇವುಗಳಿಂದ ಅಳೆಯುವುದಕ್ಕಾಗದ ಸ್ವರೂಪವನ್ನೂ ಗುಣವನ್ನೂ ಉಳ್ಳದ್ದು. ಇದು ಇಲ್ಲಿ ಇದೆ. ಬೇರೆ ಕಡೆ ಇಲ್ಲವೆಂದು ಹೇಳುವುದಕ್ಕೆ ಅರ್ಹವಾದದ್ದು. "ದೇಶ ಪರಿ ಚ್ಛೇದವುಳ್ಳದ್ದು". ನಿತ್ಯವಾದ ಚೇತನರ ಸ್ವರೂಪವೂ ಗುಣವೂ ಈ ರೀತಿ ಇರುವುದರಿಂದ ಅವರು ಅನಂತರು. ಇದು ಈಗ ಇದೆ, ಬೇರೆ ಕಾಲದಲ್ಲಿಲ್ಲ ಎಂಬುದು "ಕಾಲ ಪರಿಚ್ಛೇದವುಳ್ಳದ್ದು". ಬ್ರಹ್ಮನು ಸದಾ ಇರುವುದರಿಂದ ಕಾಲಪರಿಚ್ಛೇದವಿಲ್ಲದವನಾದ್ದರಿಂದ ಅನಂತನು. ಈ ವಸ್ತುವು ಇದಲ್ಲ ಎಂದು ಹೇಳಲರ್ಹವಾದದ್ದು, "ವಸ್ತು ಪರಿಚ್ಛೇದವುಳ್ಳದ್ದು". "ಸರ್ವಂ ಖಲು ಇದಂ ಬ್ರಹ್ಮ" ಎಂದು ಬ್ರಹ್ಮವು ಎಲ್ಲಾ ವಸ್ತುಗಳೊಡನೆಯೂ ಕೂಡಿಕೊಂಡೇ ಇರು ವಂತೆ (ಸಮಾನಾಧಿಕರಣವಾಗಿ) ಹೇಳಲ್ಪಡುವುದರಿಂದ "ವಸ್ತು ಪರಿಚ್ಛೇದ ವಿಲ್ಲದುದು". ಆದುದರಿಂದಲೇ ಅನಂತವು ಎಂದು ತಾತ್ಪರ್ಯ. ಅಥವಾ ಇದಕ್ಕೆ ಸಮಾನವಾದುದಾಗಲೀ ಇದಕ್ಕಿಂತಲೂ ಅಧಿಕವಾದುದಾಗಲೀ ಇಲ್ಲ ವೆಂದು ಹೇಳಲು ಕಾರಣವಾದ ಗುಣಾಧಿಕ್ಯವೇ, ವಸ್ತು ಪರಿಚ್ಛೇದವಿಲ್ಲದಿರು ವಿಕೆ. ಆದುದರಿಂದ "ಅನಂತ" ಎಂಬ ಶಬ್ದಕ್ಕೆ "ಅನಂತವಾದ ಗುಣವುಳ್ಳದ್ದು" ಎಂದು ಅರ್ಥವೆಂದು ತಾತ್ಪರ್ಯ. ಇಲ್ಲಿ "ಅನಂತ" ಎಂಬ ಪದದಿಂದ ರೂಢಿ ಯಿಂದ "ನಾರಾಯಣನು" ಎಂಬ ದೇವತಾ ವಿಶೇಷವು ಬೋಧಿಸಲ್ಪಡುವುದು. ಆದುದರಿಂದ ಪರಬ್ರಹ್ಮವು ನಾರಾಯಣನೇ. ಆತನು ಜಡವಾದ ಪ್ರಕೃತಿ ಗಿಂತಲೂ, ಬದ್ಧ, ಮುಕ್ತ, ನಿತ್ಯರೆಂಬ ಮೂರು ವಿಧ ಚೇತನರಿಗಿಂತಲೂ ವಿಲ ಕ್ಷಣನು. ಆತನಿಗೆ ವಿಕಾರಗಳಿಲ್ಲ. ಆತನ ಜ್ಞಾನಕ್ಕೆ ಯಾವಾಗಲೂ ಸಂಕೋಚವಿಲ್ಲ. ಆತನ ಗುಣಗಳು ಅನಂತ. ಎಂಬುದು ಈ ವಾಕ್ಯದ ತಾತ್ಪರ್ಯ. ಹೀಗೆ "ಬ್ರಹ್ಮವಿದಾಪ್ನೋತಿ ಪರಂ" ಎಂಬ ವಾಕ್ಯದಲ್ಲಿರುವ

"ಬ್ರಹ್ಮ ಶಬ್ದದ" ಅರ್ಥವನ್ನು ವಿವರಿಸಿ ಆಯಿತು. ಮುಂದೆ "ವಿತ್" ಎಂಬು ದರ ಅರ್ಥವು ವಿವರಿಸಲ್ಪಡುವುದು.

"ವಿತ್" ಎಂಬ ಪದಕ್ಕೆ ಸಾಮಾನ್ಯವಾಗಿ "ಜ್ಞಾನ" ಎಂದರ್ಥವಾಗು ವುದು. ಮೇಲೆ ಹೇಳಿರುವ ವಾಕ್ಯದಲ್ಲಿರುವ, "ವಿತ್" ಎಂಬ ಪದಕ್ಕೆ "ಉಪಾ ಸನೆ" ಎಂಬ ವಿಶೇಷ ಜ್ಞಾನವು ಅರ್ಥವೆಂದು ಮುಂದೆ ಹೇಳಲ್ಪಡುತ್ತದೆ. "ಯೋವೇದ ನಿಹಿತಂ ಗುಹಾಯಾಂ" ಎಂದು.

ಯಃ-ಯಾವನು, (ಮೇಲೆ ಹೇಳಿದ ಅನಂತನೆಂಬ ಹೆಸರುಳ್ಳ ನಾರಾಯ ಣನನ್ನು) ಗುಹಾಯಾಂ-ಹೃದಯವೆಂಬ ಗುಹೆಯಲ್ಲಿ ನಿಹಿತಂ-ಇಡಲ್ಪಟ್ಟವನ ನ್ನಾಗಿ, ವೇದ-ಉಪಾಸನೆ ಮಾಡುವನೋ, ಸಃ-ಅವನು, ಪರಮೇವ್ಯೋರ್ಮ- ಶುದ್ಧ ಸತ್ತ್ವಗುಣವುಳ್ಳ ವೈಕುಂಠವೆಂಬ ದೇಶ ವಿಶೇಷದಲ್ಲಿ, ಸರ್ವಾ ಕಾರ್ಮಾ-ಎಲ್ಲಾ ಕಲ್ಯಾಣಗುಣಗಳನ್ನು, ವಿಪಶ್ಚಿತಾ-ನಿರುಪಾಧಿಕವಾಗಿಯೂ ಮತ್ತೊಬ್ಬರಿಗೆ ಅಧೀನವಿಲ್ಲದೆಯೂ, ಸಂಕೋಚವಿಲ್ಲದೆಯೂ, ಸರ್ವ ವಿಷಯಕ ವಾಗಿಯೂ ಇರುವ ಜ್ಞಾನವುಳ್ಳ, ಬ್ರಹ್ಮಣಾ ಸಹ-ಬ್ರಹ್ಮನೊಡನೆ, "ಅಶ್ನುತೇ" ಅನುಭವಿಸುತ್ತಾನೆ. "ಸೋಽಶ್ನುತೇ" ಎಂಬುವುದರಿಂದ "ಬ್ರಹ್ಮಣಾ ವಿಪಶ್ಚಿತಾ" ಎಂಬ ವಾಕ್ಯದವರೆಗೆ "ಬ್ರಹ್ಮವಿದಾಪ್ನೋತಿ ಎಂಬಲ್ಲಿ ಹೇಳಲ್ಪಟ್ಟಿರುವ "ಆಪ್ನೋತಿ" ಶಬ್ದದ ಅರ್ಥವು ವಿವರಿಸಲ್ಪಟ್ಟಿತು. ತನ್ನ ಹೃದಯ ಗುಹೆಯಲ್ಲಿ ಅಂಗುಷ್ಠ ಪ್ರಮಾಣವುಳ್ಳ ಪರಬ್ರಹ್ಮನ ಉಪಾಸಕನು ಪರಮ ಪದದಲ್ಲಿ ಪರಬ್ರಹ್ಮನೊಡನೆ ಆತನ ಕಲ್ಯಾಣ ಗುಣಗಳನ್ನು ಅನುಭವಿ ಸುವನೆಂಬುದು ಇದರ ತಾತ್ಪರ್ಯ. ಇದೇ ಅರ್ಥವನ್ನು ಯಥಾ ಕ್ರತುರಸ್ಮಿ ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ" ಎಂಬ ಮತ್ತೊಂದು ಶ್ರುತಿಯು ತಿಳಿಯಪಡಿಸುವುದು. ಈ ಶ್ರುತಿಯು ಈ ಲೋಕದಲ್ಲಿ ಉಪಾಸನೆ ಮಾಡುವವನು ಪರಲೋಕದಲ್ಲಿ ಅನುಭವಿಸುವನು ಎಂದು ಸ್ಪಷ್ಟವಾಗಿ ತಿಳಿಯ ಪಡಿಸುತ್ತದೆ. "ಬ್ರಹ್ಮನು" ಎಲ್ಲಾ ಕಡೆಯಲ್ಲಿಯೂ ಇರುವುದರಿಂದ ಆ ಪರ ಬ್ರಹ್ಮನನ್ನು ಪರಮಪದವೆಂಬ ದೇಶ ವಿಶೇಷದಲ್ಲಿ ಹೊಂದತಕ್ಕುದೇ ಪ್ರಾಪ್ಯವು. ಆದಕ್ಕಾಗಿ ಇಲ್ಲಿ ಉಪಾಸನೆ ಮಾಡಬೇಕು—ಎಂಬುದು ತಾತ್ಪರ್ಯ.

"ಸತ್ಯಂ ಜ್ಞಾನಂ ಅನಂತಂ" ಎಂಬ ವಾಕ್ಯದಲ್ಲಿ ಪರಿಚ್ಛೇದವಿಲ್ಲದಿರುವುದೇ "ಅನಂತತ್ವ"—ವೆಂದು ಹೇಳಲ್ಪಟ್ಟಿತು. ಈ ವಿಧವಾದ ಅನಂತತ್ವವನ್ನು "ಬ್ರಹ್ಮನು ಎಲ್ಲಕ್ಕೂ ಉಪಾದಾನ ಕಾರಣನು, ಎಲ್ಲಕ್ಕೂ ಅಂತರಾತ್ಮನು" ಎಂದು ಹೇಳಿ "ತಸ್ಮಾದ್ವಾಏತಸ್ಮಾತ್" ಎಂಬ ವಾಕ್ಯಗಳು ವಿಶದಪಡಿಸುವುವು.

## (ವಾಕ್ಯಗಳ ಅರ್ಥ ಅನುಸರಿಸಿ)

ಮುಂದಿನ ವಾಕ್ಯಗಳು "ಬ್ರಹ್ಮವಿದಾಪ್ನೋತಿ ಪರಂ'' ಎಂದು ಸಂಕ್ಷೇಪವಾಗಿ ಹೇಳಲ್ಪಟ್ಟ ತತ್ತ್ವ ಹಿತ ಪುರುಷಾರ್ಥಗಳನ್ನು ವಿವರಿಸುವುವು. ಮೊದಲು ಬ್ರಹ್ಮ ಶಬ್ದದ ಅರ್ಥವನ್ನು ವಿವರಿಸುತ್ತದೆ.

| | |
|---|---|
| ೧) ಬ್ರಹ್ಮವಿತ್‌ಪರಂ ಆಪ್ನೋತಿ. | ೧) ಎಲ್ಲಕ್ಕಿಂತಲೂ ದೊಡ್ಡದಾದ ವಸ್ತುವನ್ನು ಉಪಾಸನೆ ಮಾಡತಕ್ಕವನು, ಎಲ್ಲಕ್ಕಿಂತಲೂ ಉತ್ಕೃಷ್ಟವಾದದ್ದನ್ನು ಹೊಂದುತ್ತಾನೆ. |
| ೨) ತತ್ ಏಷಾ ಅಭ್ಯುಕ್ತಾ. | ೨) ಬ್ರಹ್ಮನನ್ನು ಕುರಿತ ಈ (ಋಕ್ಕು) ಅಧ್ಯಯನ ಮಾಡುವವರಿಂದ ವಿವರಿಸಲ್ಪಟ್ಟದೆ. |
| ೩) ಬ್ರಹ್ಮ ಸತ್ಯಂ. | ೩) ಬ್ರಹ್ಮವೆಂಬುದು ನಿರುಪಾಧಿಕ ಸತ್ತೆಯುಯುಳ್ಳದುದು. (ವಿಕಾರವನ್ನು ಹೊಂದುವ ಜಡ ಪದಾರ್ಥವೂ, ಅಜಡ ಪದಾರ್ಥದೊಡನೆ ಕೂಡಿದ ಸಂಸಾರಿಯಾದ ಜೀವನೂ, ಬೇರೆ ಬೇರೆ ಹೆಸರನ್ನು ಹೊಂದಲರ್ಹವಾದ ಅವಸ್ಥಾಂತರಗಳನ್ನು ಪಡೆಯುವುದರಿಂ |

ಪ್ರಕೃತಿ, ಜೀವ, ಇವುಗಳು ನಿರುಪಾಧಿಕ ಸತ್ತೆಯುಳ್ಳವುಗಳಲ್ಲಿವೆ, ಎಂದು ತಾತ್ಪರ್ಯ ! (ಬ್ರಹ್ಮವು).

೪) (ಬ್ರಹ್ಮ) ಜ್ಞಾನಂ.

೪) ಯಾವಾಗಲೂ ಸಂಕೋಚವನ್ನು ಹೊಂದದೆ ಇರುವ ಜ್ಞಾನವುಳ್ಳದ್ದು. (ಮುಕ್ತಿಯನ್ನು ಪಡೆದ ಜೀವನ ಜ್ಞಾನವು ಸಂಸಾರ ದೆಸೆಯಲ್ಲಿ ಸಂಕೋಚವನ್ನು ಹೊಂದಿರುವುದು. ಆದ್ದರಿಂದ ಮುಕ್ತರು ಈ ವಿಧವಾದ ಜ್ಞಾನವುಳ್ಳವರಲ್ಲರೆಂದು ಭಾವ).

೫) (ಬ್ರಹ್ಮ) ಅನಂತಂ.

(ಬ್ರಹ್ಮವು) ದೇಶ, ಕಾಲ, ವಸ್ತು ಇವುಗಳಿಂದ ಅಳೆಯುವುದಕ್ಕಾಗದ ಸ್ವರೂಪವನ್ನೂ, ಗುಣವನ್ನೂ ಉಳ್ಳದ್ದು.

೬) ಯಃ ಗುಹಾಯಾಂ ನಿಹಿತಂ ವೇದ, ಸಃ ಪರಮೇವ್ಯೋಮನ್ ಸರ್ವಾನ್ ಕಾಮಾನ್ ವಿಪಶ್ಚಿತಾ ಬ್ರಹ್ಮಣಾ ಅಶ್ನುತೇ

೬) ಯಾವನು (ಮೇಲೆ ಹೇಳಿದ ಅನಂತನೆಂಬ ಹೆಸರುಳ್ಳ ನಾರಾಯಣನನ್ನು) ಹೃದಯವೆಂಬ ಗುಹೆಯಲ್ಲಿ ಇಡಲ್ಪಟ್ಟದ್ದನ್ನಾಗಿ ಉಪಾಸನೆ ಮಾಡುವನೋ ಅವನು ಶುದ್ಧ ಸತ್ವ ಗುಣವುಳ ವೈಕುಂಠವೆಂಬ ದೇಶ ವಿಶೇಷದಲ್ಲಿ ಎಲ್ಲಾ ಕಲ್ಯಾಣಗುಣಗಳನ್ನೂ ನಿರುಪಾಧಿಕವಾಗಿಯೂ, ಮತ್ತೊಬ್ಬರಿಗೆ ಅಧೀನವಿಲ್ಲದೆಯೂ, ಸತ್ವ ವಿಷಯಕವಾಗಿಯೂ ಇರುವ ಜ್ಞಾನವುಳ್ಳ ಬ್ರಹ್ಮನೊಡನೆ ಅನುಭವಿಸುತ್ತಾನೆ.

ಮೂಲ ಮಂತ್ರ :—ತಸ್ಮಾದ್ವಾ ಏತಸ್ಮಾ ದಾತ್ಮನ ಆಕಾಶಃ

ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ ।

ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ ।

ಓಷಧೀಭ್ಯೋಽನ್ನಮ್ । ಅನ್ನಾತ್ಪುರುಷಃ । ಸ ವಾ ಏಷ

ಪುರುಷೋಽನ್ನರಸಮಯಃ । ತಸ್ಯೇದಮೇವ ಶಿರಃ ।

ಅಯಂ ದಕ್ಷಿಣಃ ಪಕ್ಷಃ । ಅಯಮುತ್ತರಃ ಪಕ್ಷಃ ।

ಅಯಮಾತ್ಮಾ । ಇದಂಪುಚ್ಛಂ ಪ್ರತಿಷ್ಠಾ । ತದಪ್ಯೇಷ

ಶ್ಲೋಕೋಭವತಿ ।

**ಅರ್ಥ** — ತಸ್ಮಾತ್–“ಬ್ರಹ್ಮವಿದಾಪ್ನೋತಿಪರಂ” ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ, ಏತಸ್ಮಾತ್–“ಸತ್ಯಂ ಜ್ಞಾನಂ ಅನಂತಂ ಬ್ರಹ್ಮ” ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ, ಆತ್ಮನಃ–ಪರಮಾತ್ಮನಾದ ನಾರಾಯಣನಿಂದ, ಆಕಾಶಃ ಸಂಭೂತಃ–ಆಕಾಶವು ಹುಟ್ಟಿತು. ಆಕಾಶಾತ್–ಆಕಾಶವನ್ನು ಶರೀರವಾಗಿ ಹೊಂದಿರುವ ಪರಮಾತ್ಮನಿಂದ, ವಾಯುಃ–ವಾಯುವು (ಹುಟ್ಟಿತು) ವಾಯೋಃ ವಾಯು ಶರೀಕನಾದ ಪರಮಾತ್ಮನಿಂದ, ಅಗ್ನಿಃ–ಅಗ್ನಿಯು (ಹುಟ್ಟಿತು) ಅಗ್ನೇಃ–ಅಗ್ನಿ ಶರೀರಕನಾದ ಪರಮಾತ್ಮನಿಂದ, ಆಪಃ–ನೀರು (ಹುಟ್ಟಿತು) ಅದ್ಭ್ಯಃ–ಜಲಶರೀರಕನಾದ ಪರಮಾತ್ಮನಿಂದ, ಪೃಥಿವೀ–ಭೂಮಿಯು (ಹುಟ್ಟಿತು), ಪೃಥಿವ್ಯಾಃ–ಪೃಥಿವೀ ಶರೀರಕನಾದ ಪರಮಾತ್ಮನಿಂದ ಓಷಧಯಃ ಓಷಧಿಗಳು (ಹುಟ್ಟಿದುವು). ಓಷಧೀಭ್ಯಃ-ಓಷಧಿಶರೀರಕನಾದ ಪರಮಾತ್ಮನಿಂದ, ಅನ್ನಂ–ಅನ್ನವುಂಟಾಯಿತು. ಅನ್ನಾತ್–ಅನ್ನಶರೀರಕನಾದ ಪರಮಾತ್ಮನಿಂದ ಪುರುಷಃ–ಈ ನಮ್ಮ ಶರೀರವು ಉಂಟಾಯಿತು. ಸಃ ಏಷಃ ಪುರುಷಃ–ಈ

ಶರೀರವು, ಅನ್ನರಸಮಯಃ-ಅನ್ನರಸದ ಪರಿಣಾಮವು. ("ಅನ್ನಮಶಿತಂ ತ್ರೇಧಾವಿಧೀಯತೇ" ಎಂದು ಛಾಂದೋಗ್ಯದ ಆರನೆಯ ಪ್ರಪಾಠಕದಲ್ಲಿ, ಜಠರಾಗ್ನಿಯಿಂದ ಪಕ್ವವಾದ ಅನ್ನರಸದಿಂದ, ಮಾಂಸ, ಅಸ್ಥಿ, ಮಜ್ಜಾ ಮೊದಲಾದುವುಗಳಿಂದ ಶರೀರವು ಉಂಟಾಗುವುದೆಂದು ತಿಳಿಯಪಡಿಸಿರುವುದು.) ತಸ್ಯ ಇದಮೇವಶಿರಃ-ಆ ದೇಹವೆಂಬ ಪುರುಷನಿಗೆ, ಕಣ್ಣಿಗೆ ಕಾಣಿಸುತ್ತಿರುವ ಇದೇ ತಲೆಯು. ಅಯಂ ದಕ್ಷಿಣಃ ಪಕ್ಷಃ-ಬಲಗೈಯು, ಬಲದರೆಕ್ಕೆ. ಅಯಂ ಉತ್ತರಃ ಪಕ್ಷಃ-ಎಡಗೈಯು, ಎಡದರೆಕ್ಕೆ, ಅಯಂ ಆತ್ಮಾ-ಹೊಕ್ಕಳಿನಿಂದ ಮೇಲೆ ಕತ್ತಿನ ಕೆಳಗಿರುವ ದೇಹದ ಮಧ್ಯಭಾಗವು ಆತ್ಮವು, ಎಂದರೆ ಧಾರಕವಾಗಿ ಪ್ರಧಾನವಾಗಿರುವ ಭಾಗವು. ಇದಂ-ಹೊಕ್ಕಳಿನಿಂದ ಕೆಳಗಿರುವ ಕಾಲುಗಳೆರಡೂ, ಪುಚ್ಛಂ-ಬಾಲದಂತೆ ಆಧಾರವಾಗಿರುವುದರಿಂದ ಪುಚ್ಛವೆನಿಸಿಕೊಳ್ಳುವುದು, ಪ್ರತಿಷ್ಠಾ-ಆಧಾರವು. ತದಪಿ-ಈ ವಿಷಯದಲ್ಲಿ ಕೂಡ, ಏಷಃ ಶ್ಲೋಕಃ-ಮುಂದೆ ಹೇಳಲ್ಪಡುವ ವಿವರಣ ಶ್ಲೋಕವು, ಭವತಿ-ಇರುತ್ತದೆ.

ಇಲ್ಲಿ "ಪುರುಷ" ಶಬ್ದದಿಂದ ಹೇಳಲ್ಪಡತಕ್ಕ ಮನುಷ್ಯನ ಕೈ ಮೊದಲಾದುವುಗಳನ್ನು ಪಕ್ಷವೆಂದು ಹೇಳುವುದು ಸುಲಭವಾಗಿ ತಿಳಿಯಪಡಿಸುವುದಕ್ಕಾಗಿ ಎಂದು ತಾತ್ಪರ್ಯ.

'ಸತ್ಯಂ ಜ್ಞಾನ ಮನಂತಂ' ಎಂಬ ವಾಕ್ಯದಲ್ಲಿ ವಸ್ತು ಪರಿಚ್ಛೇದವಿಲ್ಲದಿರುವುದೇ "ಅನಂತತ್ವಂ"ವೆಂದು ಹೇಳಲ್ಪಟ್ಟಿತು. ಈ ವಿಧವಾದ ಅನಂತತ್ವವನ್ನು, ಬ್ರಹ್ಮನು ಎಲ್ಲಕ್ಕೂ ಉಪಾದಾನಕಾರಣನು, ಎಲ್ಲಕ್ಕೂ ಅಂತರಾತ್ಮನು, ಎಂದು ಹೇಳಿ "ತಸ್ಮಾದ್ವಾ ಏತಸ್ಮಾತ್" ಎಂಬ ವಾಕ್ಯಗಳು ವಿಶದಪಡಿಸುತ್ತವೆ.

**(ವಾ. ಅರ್ಥ)**

೭) ತಸ್ಮಾತ್ ಏತಸ್ಮಾತ್ ಆತ್ಮನಃ ಆಕಾಶಃ ಸಂಭೂತಃ.

೭) "ಬ್ರಹ್ಮವಿದಾಪ್ನೋತಿ ಪರಂ" ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಪರಮಾತ್ಮನಾದ ನಾರಾಯಣನಿಂದ ಆಕಾಶವು ಹುಟ್ಟಿತು.

(೮) ಆಕಾಶಾತ್ ವಾಯುಃ (ಸಂಭೂತಃ)

(೮) ಆಕಾಶವನ್ನು ಶರೀರವಾಗಿ ಹೊಂದಿರುವ ಪರಮಾತ್ಮನಿಂದ ವಾಯುವು (ಹುಟ್ಟಿತು).

೯) ವಾಯೋಃ ಅಗ್ನಿಃ (ಸಂಭೂತಃ)

೯) ವಾಯು ಶರೀರಕನಾದ ಪರಮಾತ್ಮನಿಂದ ಅಗ್ನಿಯು (ಹುಟ್ಟಿತು).

೧೦) ಅಗ್ನೇಃ ಆಪಃ (ಸಂಭೂತಾಃ)

೧೦) ಅಗ್ನಿ ಶರೀರಕನಾದ ಪರಮಾತ್ಮನಿಂದ ನೀರು (ಹುಟ್ಟಿತು).

೧೧) ಅದ್ಭ್ಯಃ ಪೃಥಿವೀ (ಸಂಭೂತಾ)

೧೧) ಜಲಶರೀರಕನಾದ ಪರಮಾತ್ಮನಿಂದ ಭೂಮಿಯು ಹುಟ್ಟಿತು.

೧೨) ಪೃಥಿವ್ಯಾ ಓಷಧಯಃ (ಸಂಭೂತಾ)

೧೨) ಪೃಥಿವೀ ಶರೀರಕನಾದ ಪರಮಾತ್ಮನಿಂದ ಓಷಧಿಗಳು ಹುಟ್ಟಿದುವು.

೧೩) ಓಷಧೀಭ್ಯಃ ಅನ್ನಂ (ಸಂಭೂತಃ)

೧೩) ಓಷಧಿ ಶರೀರಕನಾದ ಪರಮಾತ್ಮನಿಂದ ಅಗ್ನಿಯುಂಟಾಯಿತು.

೧೪) ಅನ್ನಾತ್ ಪುರುಷಃ (ಸಂಭೂತಃ)

ಅನ್ನಶರೀರಕನಾದ ಪರಮಾತ್ಮನಿಂದ ಈ ನಮ್ಮ ಶರೀರವು ಉಂಟಾಯಿತು.

೧೫) ಸಃ, ಏಷ ಪುರುಷಃ ಅನ್ನರಸಮಯಃ

೧೫) ಈ ಶರೀರವು ಅನ್ನರಸದ ಪರಿಣಾಮವು. ('ಅನ್ನಮಶಿತಂ ತ್ರೇಧಾ ವಿಧೀಯತೇ') ಎಂದು, ಛಾಂದೋಗ್ಯದ ಆರನೆಯ ಪ್ರಪಾಠಕದಲ್ಲಿ ಜಠರಾಗ್ನಿಯಿಂದ ಪಕ್ವವಾದ ಅನ್ನರಸದಿಂದ ಮಾಂಸ, ಅಸ್ಥಿ, ಮಜ್ಜಾ ಮೊದಲಾದುವುಗಳಿಂದ ಶರೀರವು ಉಂಟಾಗುವುದೆಂದು ತಿಳಿಯಪಡಿಸಿರುವುದು.)

೧೬) ತಸ್ಯ ಇದಮೇವ ಶಿರಃ; ಅಯಂ ದಕ್ಷಿಣಃ ಪಕ್ಷಃ; ಅಯಂ ಉತ್ತರಃ ಪಕ್ಷಃ; ಅಯಂ ಆತ್ಮಾ; ಇದಂ ಪುಚ್ಛಂ ಪ್ರತಿಷ್ಠಾ.

೧೬) ಆದೇಹವೆಂಬ ಪುರುಷನಿಗೆ ಕಣ್ಣಿಗೆ ಕಾಣಿಸುತ್ತಿರುವದೇ ತಲೆಯು: ಬಲಗೈಯು ಬಲದ ರಕ್ಕೆ; ಎಡಗೈಯು ಎಡದ ರಕ್ಕೆ; ಹೊಕ್ಕಳಿನಿಂದ ಮೇಲೆ

ಕತ್ತಿನ ಕೆಳಗಿರುವ ಮಧ್ಯಭಾಗವು ಆತ್ಮವು ಎಂದರೆ ಧಾರಕವಾಗಿ ಪ್ರಧಾನವಾಗಿರುವ ಭಾಗವು ; ಹೊಕ್ಕಳಿನಿಂದ ಕೆಳಗಿರುವ ಕಾಲುಗಳೆರಡೂ ಬಾಲದಂತೆ ಆಧಾರವಾಗಿರುವುದರಿಂದ ಪುಚ್ಛವೆನಿಸಿಕೊಳ್ಳುವುದು, ಆಧಾರವು.

೧೭) ತದಪಿ ಏಷಃ ಶ್ಲೋಕಃ ಭವತಿ

೧೭.) ಈ ವಿಷಯದಲ್ಲಿ ಕೂಡ ಮುಂದೆ ಹೇಳಲ್ಪಡುವ ವಿವರಣ ಶ್ಲೋಕವು ಇರುತ್ತದೆ.

(ಇಲ್ಲಿ "ಪುರುಷ" ಶಬ್ದದಿಂದ ಹೇಳಲ್ಪಡತಕ್ಕ ಮನುಷ್ಯನ ಕೈ ಮೊದಲಾದುವುಗಳನ್ನು ಪಕ್ಷವೆಂದು ಹೇಳುವುದು ಸುಲಭವಾಗಿ ತಿಳಿಯಪಡಿಸುವುದಕ್ಕಾಗಿ ಎಂದು ತಾತ್ಪರ್ಯ).

## ೨ನೆಯ ಅನುವಾಕ

ಮೂಲ ಮಂತ್ರ :—ಅನ್ನಾದ್ವೈ ಪ್ರಜಾಃ ಪ್ರಜಾಯನ್ತೇ ।

ಯಾಃ ಕಾಶ್ಚ ಪೃಥಿವೀಗ್ಂ ಶ್ರಿತಾಃ । ಅಥೋ ಅನ್ನೇನೈವ

ಜೀವನ್ತಿ । ಅಥೈನದಪಿ ಯನ್ತ್ಯಂತತಃ । ಅನ್ನಗ್ಂಹಿ

ಭೂತಾನಾಂ ಜ್ಯೇಷ್ಠಮ್ । ತಸ್ಮಾ ತ್ಸರ್ವೌಷಧ

ಮುಚ್ಯತೇ । ಸರ್ವಂ ವೈತೇಽನ್ನ ಮಾಪ್ನುವಂತಿ ।

ಯೇಽನ್ನಂಬ್ರಹ್ಮೋಪಾಸತೇ । ಅನ್ನಗ್ಂಹಿ ಭೂತಾನಾಂ

ಜ್ಯೈಷ್ಠಮ್ । ತಸ್ಮಾತ್ಸರ್ವೌಷಧ ಮುಚ್ಯತೇ । ಅನ್ನಾ

ದ್ಭೂತಾನಿ ಜಾಯಂತೇ । ಜಾತಾನ್ಯನ್ನೇನ ವರ್ಧಂತೇ ।

ಅದ್ಯತೇಽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ ಇತಿ ।

ಅರ್ಥ—ಅನ್ನಾತ್ ವೈ-ಅನ್ನದಿಂದಲೇ, ಪೃಥಿವೀಂಶ್ರಿತಾಃ-ಭೂಮಿಯನ್ನು ಆಶ್ರಯಿಸಿದ, ಯಾಃಕಾಶ್ಚಪ್ರಜಾಃ-ಎಲ್ಲಾ ಪ್ರಜೆಗಳೂ, ಪ್ರಜಾಯಂತೇ-ಹುಟ್ಟುತ್ತಾರೆ. ಅಥೋ ಅನ್ನೇನೈವ-ಅನ್ನದಿಂದಲೇ, ಜೀವಂತಿ-ಬದುಕುತ್ತಾರೆ. ಅಥ ಏನತ್-ಮತ್ತು ಈ ಅನ್ನವನ್ನು, ಅಂತತಃ-ಕೊನೆಯಲ್ಲಿ ಅಪಿಯಂತಿ-ಸೇರುತ್ತಾರೆ; (ಲಯ ಹೊಂದುವರು). ಹಿ-ಯಾವ ಕಾರಣದಿಂದ, ಅನ್ನಂ-ಅನ್ನವು, ಭೂತಾನಾಂ; ಜ್ಯೇಷ್ಠಂ-ಪ್ರಾಣಿಗಳಲ್ಲಿ ಶ್ರೇಷ್ಠವಾದುದೋ, ತಸ್ಮಾತ್-ಆದುದರಿಂದಲೇ, ಸರ್ವೌಷಧಂ ಉಚ್ಯತೇ-(ಹಸಿವೆಂಬ ರೋಗವನ್ನು ನಿವಾರಣೆ ಮಾಡುವುದರಿಂದ) ಔಷಧವೆನ್ನಲ್ಪಡುವುದು. ಯೇ ಅನ್ನಂ ಬ್ರಹ್ಮ ಉಪಾಸತೇ-ಯಾರು ಅನ್ನವನ್ನು ಬ್ರಹ್ಮವೆಂದು ಧ್ಯಾನಮಾಡುವರೋ, ತೇ ಸರ್ವಂ ಅನ್ನಂ-ಆಪ್ನುವಂತಿ-ಅವರು ಇಷ್ಟವಾದಷ್ಟು ಅನ್ನವನ್ನು ಹೊಂದುವರು.

ಬ್ರಹ್ಮನ ಸಾಮ್ಯವು ಅನ್ನದಲ್ಲಿರುವುದರಿಂದ ಅದನ್ನು ಬ್ರಹ್ಮವೆಂದು ಧ್ಯಾನಮಾಡುವುದಕ್ಕೆ ಕಾರಣವು. ಎಂದು "ಅನ್ನಂಹಿ ಭೂತಾನಾಂ" ಎಂಬ ವಾಕ್ಯಗಳು ಬ್ರಹ್ಮಸಾಮ್ಯವನ್ನು ತಿಳಿಸುವುವು.

ಅನ್ನಂ ಹಿ ಭೂತಾನಾಂ ಜೇಷ್ಠಂ-ಅನ್ನವು ಎಲ್ಲಾ ಪ್ರಾಣಿಗಳಲ್ಲೂ ಶ್ರೇಷ್ಠವಾದುದು. ತಸ್ಮಾತ್ ಸರ್ವೌಷಧಂ-ಉಚ್ಯತೇ-ಆದ್ದರಿಂದ ಎಲ್ಲರ ರೋಗವನ್ನು ನಿವಾರಣೆ ಮಾಡತಕ್ಕುದೆಂದು ಹೇಳಲ್ಪಡುತ್ತದೆ. ಅನ್ನಾತ್-ಅನ್ನದಿಂದ ಭೂತಾನಿ-ಪ್ರಾಣಿಗಳು, ಜಾಯಂತೇ-ಹುಟ್ಟುತ್ತವೆ.
ಜಾತಾನಿ-ಹುಟ್ಟಿದವುಗಳು. ಅನ್ನೇನ-ಅನ್ನದಿಂದ, ವರ್ಧಂತೇ-ಬೆಳೆಯುತ್ತವೆ. (ಹೀಗೆ ಹುಟ್ಟಿಸುವುದು, ಬೆಳಿಸುವುದು ಅಥವಾ ವೃದ್ಧಿಪಡಿಸುವುದೂ ಬ್ರಹ್ಮನಲ್ಲಿಯೂ ಅನ್ನದಲ್ಲಿಯೂ ಇರುವುದು. ಆದ್ದರಿಂದ ಎರಡೂ ಸಮವೆಂದು

ಭಾವವು. ಅದ್ಯತೇ–ಜೀವನ ಕಾಲದಲ್ಲಿ ತಿನ್ನಲ್ಪಡುವುದು. ಭೂತಾನಿ ಚ ಅತ್ತಿ (ಮರಣ ಕಾಲದಲ್ಲಿ ಪಚನವಾಗದೇ ಅನ್ನವು) ಪ್ರಾಣಿಗಳನ್ನು ತಿನ್ನುತ್ತದೆ. (ಅಂದರೆ ನಾಶಪಡಿಸುತ್ತದೆ) ತಸ್ಮಾತ್–ಆದಕಾರಣ, ತತ್–ಅದು, ಅನ್ನಂ–ಅನ್ನವೆಂಬುದಾಗಿ, ಉಚ್ಯತೇ–ಹೇಳಲ್ಪಡುತ್ತದೆ. ಆಕಾಶ ಮೊದಲಾಗಿ ಅನ್ನರಸಮಯವಾದ ಸ್ಥೂಲ ಶರೀರದವರಿವಿಗೆ ಬ್ರಹ್ಮನೇ ಕಾರಣನೆಂದೂ ಬ್ರಹ್ಮನೇ ಅಂತರ್ಯಾಮಿಯೆಂದೂ ಈ ವಾಕ್ಯಗಳಿಂದ ತಿಳಿದು ಬರುತ್ತದೆ.

ಅನ್ನಮಯ ಶಬ್ದದಿಂದ ಹೇಳಲ್ಪಡುವ ಸ್ಥೂಲ ಶರೀರ ಪರ್ಯಂತವಾದ ಆಕಾಶ ಮೊದಲಾದುವುಗಳಿಗೆ, ಬ್ರಹ್ಮನೇ ಉಪಾದಾನ ಕಾರಣವೆಂದೂ ಆತ್ಮನೆಂದೂ ಹೇಳಿ, ಆ ಆತ್ಮನು "ಆನಂದಮಯನು" ಎಂದು ತಿಳಿಸುವುದಕ್ಕಾಗಿ, ಮೊದಲು ದೊಡ್ಡದಾದ ವಸ್ತುವನ್ನು ಆತ್ಮನನ್ನಾಗಿ ದೃಷ್ಟಾಂತವಾಗಿ ಕೊಟ್ಟು "ಆನಂದಮಯನೇ" ಎಂದು ತಿಳಿಯಪಡಿಸುವುದು. ಇದಕ್ಕೆ "ಸ್ಥೂಲಾರುಂಧತೀ ನ್ಯಾಯ'' ಎನ್ನುವರು. ಸೂಕ್ಷ್ಮವಾದ ಅರುಂಧತೀ ನಕ್ಷತ್ರವನ್ನು ತೋರಿಸಲು ಹೊರಟವರು ಮೊದಲೇ ಸೂಕ್ಷ್ಮವಾದ ಆ ನಕ್ಷತ್ರವನ್ನು ತೋರಿಸುವುದು ಅಸಾಧ್ಯವೆಂದು ತಿಳಿದು ಅದರ ಪಕ್ಕದಲ್ಲಿರುವ ದೊಡ್ಡ ನಕ್ಷತ್ರವನ್ನೇ ಮೊದಲು ''ಅರುಂಧತೀ" ಎಂದು ತೋರಿಸಿ ಅದರ ಪರಿಚಯವಾದ ಮೇಲೆ ಕಡೆಯಲ್ಲಿ ಸೂಕ್ಷ್ಮವಾದ ಅರುಂಧತಿಯನ್ನು ತೋರಿಸುತ್ತಾರೆ. ಹೀಗೆಯೇ ''ಅನ್ನಮಯ" ''ಪ್ರಾಣಮಯ'' ''ಮನೋಮಯ" ''ವಿಜ್ಞಾನಮಯ'' ಗಳನ್ನೇ ಆತ್ಮನೆಂದು ಮೊದಲು ತೋರಿಸುತ್ತಾ ಕೊನೆಯಲ್ಲಿ ''ಆನಂದಮಯನೇ ಆತ್ಮನು'' ಎಂದು ತೋರಿಸುತ್ತದೆ.

(ವಾ. ಅರ್ಥ)

| | |
|---|---|
| ೧) ಅನ್ನಾತ್ವೈ ಯಾಃ ಕಾಶ್ಚಪೃಥಿವೀಂ ಶ್ರಿತಾಃ ಪ್ರಜಾಃ ಪ್ರಜಾಯಂತೇ | ೧) ಅನ್ನದಿಂದಲೇ ಭೂಮಿಯನ್ನು ಆಶ್ರಯಿಸಿದ ಎಲ್ಲಾ ಪ್ರಜೆಗಳೂ ಹುಟ್ಟುತ್ತಾರೆ. |
| ೨) ಅಥೋ ಅನ್ನೇನೈವ ಜೀವಂತಿ. | ೨) ಅನ್ನದಿಂದಲೇ ಬದುಕುತ್ತಾರೆ. |

೩) ಅಥ ಏನತ್ ಅಂತತಃ ಅಪಿ ಯಂತಿ.

೩) ಮತ್ತು ಈ ಅನ್ನವನ್ನು ಕೊನೆಯಲ್ಲಿ ಸೇರುತ್ತಾರೆ.

೪) ಹಿ ಅನ್ನಂ ಭೂತಾನಾಂ ಜೇಷ್ಠಂ ತಸ್ಮಾತ್ ಸರ್ವೌಷಧಂ ಉಚ್ಯತೇ.

೪) ಯಾವ ಕಾರಣದಿಂದ ಅನ್ನವು ಪ್ರಾಣಿಗಳಿಗೆ ಮುಖ್ಯವಾದುದೋ, ಆದುದರಿಂದಲೇ ಹಸಿವೆಂಬ ರೋಗವನ್ನು ನಿವಾರಣೆ ಮಾಡುವುದರಿಂದ ಔಷಧವೆನ್ನಲ್ಪಡುವುದು.

೫) ಯೇ ಅನ್ನಂ ಬ್ರಹ್ಮ ಉಪಾಸತೇ, ತೆ ೯ಸರ್ವಂ ಅನ್ನಂ ಆಪ್ನುವಂತಿ ನೈ.

೫) ಯಾರು ಅನ್ನವನ್ನು ಬ್ರಹ್ಮವೆಂದು ಧ್ಯಾನ ಮಾಡುವರೋ ಅವರು ಇಷ್ಟವಾದಷ್ಟು ಅನ್ನವನ್ನು ಹೊಂದುವರು. (ಬ್ರಹ್ಮನ ಸಾಮ್ಯವು ಅನ್ನದಲ್ಲಿರೆವುದರಿಂದ ಅದನ್ನು ಬ್ರಹ್ಮವೆಂದು ಧ್ಯಾನ ಮಾಡುವುದಕ್ಕೆ ಕಾರಣವು) ಎಂದು "ಅನ್ನಂ ಹಿ ಭೂತಾನಾಂ" ಎಂಬ ವಾಕ್ಯಗಳು ಬ್ರಹ್ಮ ಸಾಮ್ಯವನ್ನು ತಿಳಿಸುವುವು.

೬) ಅನ್ನಂ ಹಿ ಭೂತಾನಾಂ, ಜ್ಯೇಷ್ಠಂ; ತಸ್ಮಾತ್ ಸರ್ವೌಷಧಂ ಉಚ್ಯತೇ.

೬) ಅನ್ನವು ಎಲ್ಲಾ ಪ್ರಾಣಿಗಳಿಗೂ ಶ್ರೇಷ್ಠವಾದುದು ; ಅದ್ದರಿಂದ ಎಲ್ಲರ ರೋಗವನ್ನೂ ನಿವಾರಣೆ ಮಾಡತಕ್ಕುದೆಂದು ಹೇಳಲ್ಪಡುತ್ತದೆ.

೭) ಅನ್ನಾತ್ ಭೂತಾನಿ ಜಾಯಂತೇ ; ಜಾತಾನಿ ಅನ್ನೇನ ವರ್ಧಂತೇ.

೭) ಅನ್ನದಿಂದ ಪ್ರಾಣಿಗಳು ಹುಟ್ಟುತ್ತವೆ: ಹುಟ್ಟಿದುವು ಅನ್ನದಿಂದ ಬೆಳೆಯುತ್ತವೆ. (ಹೀಗೆ ಹುಟ್ಟಿಸುವುದೂ, ಬೆಳೆಸುವುದೂ ಅಥವ ವೃದ್ಧಿಪಡಿಸುವುದೂ ಬ್ರಹ್ಮನಲ್ಲಿಯೂ ಅನ್ನದಲ್ಲಿಯೂ ಇರುವುವು. ಆದ್ದರಿಂದ ಎರಡೂ ಸಮವೆಂದು ಭಾವವು).

೮) ಅದ್ಯತೇ ಭೂತಾನಿ ಚ ಅತ್ತಿ. ೮) ಜೀವನ ಕಾಲದಲ್ಲಿ ತಿನ್ನಲ್ಪಡು ವುದು. ಮರಣ ಕಾಲದಲ್ಲಿ (ಪಚನ ವಾಗದೇ ಅನ್ನವು) ಪ್ರಾಣಿಗಳನ್ನು ತಿನ್ನುತ್ತದೆ ; ಅಂದರೆ ನಾಶಪಡಿಸುತ್ತದೆ

೯) ತಸ್ಮಾತ್ ಅನ್ನಂ ಉಚ್ಯತೇ. ೯) ಆದಕಾರಣ ಅದು ಅನ್ನವೆಂಬು ದಾಗಿ ಹೇಳಲ್ಪಡುತ್ತದೆ.

(ಆಕಾಶ ಮೊದಲಾಗಿ ಅನ್ನರಸಮಯ ವಾದ ಸ್ಥೂಲಶರೀರದವರಿವಿಗೆ ಬ್ರಹ್ಮನೇ ಕಾರಣವೆಂದೂ ಬ್ರಹ್ಮನೇ ಅಂತ ರ್ಯಾಮಿಯೆಂದೂ ಈ ವಾಕ್ಯಗಳಿಂದ ತಿಳಿದು ಬರುತ್ತದೆ).

ಮೂಲ ಮಂತ್ರ :—ತಸ್ಮಾದ್ವಾ ಏತಸ್ಮಾದನ್ನರಸಮಯಾತ್ ।

ಅನ್ಯೋಽನ್ತರ ಆತ್ಮಾಪ್ರಾಣಮಯಃ । ತೇನೈಷಪೂರ್ಣಃ ।

ಸವಾಏಷಪುರುಷವಿಧ ಏವ । ತಸ್ಯಪುರುಷವಿಧತಾಂ ।

ಅನ್ವಯಂ ಪುರುಷವಿಧಃ । ತಸ್ಯಪ್ರಾಣ ಏವಶಿರಃ ।

ವ್ಯಾನೋ ದಕ್ಷಿಣಃ ಪಕ್ಷಃ । ಅಪಾನ ಉತ್ತರಃ ಪಕ್ಷಃ ।

ಆಕಾಶ ಆತ್ಮಾ । ಪೃಥಿವೀಪುಚ್ಛಂ ಪ್ರತಿಷ್ಠಾ । ತದಪ್ಯೇಷ

ಶ್ಲೋಕೋಭವತಿ ।

ಅರ್ಥ-ತಸ್ಮಾತ್ ಏತಸ್ಮಾತ್ ಅನ್ನರಸಮಯಾತ್-ಅನ್ನರಸುಮಯ, ವಾದ (ಆ ದೇಹದೊಳಗಿದ್ದ) ಆ ದೇಹಕ್ಕಿಂತ, ಅನ್ಯಃ-ಬೇರೆಯಾಗಿರುವ

ಯಃ ಪ್ರಾಣಮಯಃ-ಪ್ರಾಣಮಯವೆನಿಸಿಕೊಳ್ಳತಕ್ಕವನು ಯಾವನೋ, ಸಃ ಅಂತರಾತ್ಮಾ-ಆತನೇ ಅಂತರ್ಯಾಮಿಯು. ತೇನ-ಆ ಪ್ರಾಣಮಯನಾದ ಆತ್ಮನಿಂದ, ಏಷಃ-ಅನ್ನರಸಮಯನಾದ ಆತ್ಮನು, ಪೂರ್ಣಃ-ವ್ಯಾಪಿಸಲ್ಪಟ್ಟಿರುವನು. (ದೇಹವೆಲ್ಲಾ ಪ್ರಾಣದಿಂದ ವ್ಯಾಪಿಸಲ್ಪಟ್ಟಿರುವುದು ಎಂದು ಭಾವ), ಸವಾಏಷಃ ಆ ಈ ಪ್ರಾಣಮಯನೂ, ಪುರುಷವಿಧಃ ಏವ-ಪುರುಷನ ಆಕಾರವುಳ್ಳದ್ದೇ, ತಸ್ಯ ಪುರುಷ ವಿಧತಾಂ ಅನು-ಅನ್ನಮಯ ಪುರುಷನನ್ನು ಅನುಸರಿಸಿ, ಅಯಂ ಪುರುಷವಿಧಃ-ಈ ಪ್ರಾಣಮಯನೂ, ಪುರುಷಾಕಾರವುಳ್ಳವನು (ಅನ್ನಮಯ ಪುರುಷನಂತೆಯೇ, ತಲೆ, ಭುಜ, ಕಾಲು ಮೊದಲಾದ ಐದು ಅವಯವವುಳ್ಳವನು) ತಸ್ಯ ಪ್ರಾಣಃ ಏವಶಿರಃ-ಪ್ರಾಣವೇ ಅದಕ್ಕೆ ತಲೆ, ವ್ಯಾನಃ ದಕ್ಷಿಣಃ ಪಕ್ಷಃ-ವ್ಯಾನವೇ ಬಲದ ಭುಜ. ಅಪಾನಃ ಉತ್ತರಃ ಪಕ್ಷಃ-ಅಪಾನವೇ ಎಡದ ಭುಜ, ಆಕಾಶಃ ಆತ್ಮಾ-ಆಕಾಶವೇ ಆತ್ಮವು. (ವಾಯುವಿಕಾರವಾದ ಪ್ರಾಣಾಪಾನಾದಿಗಳನ್ನೂ ಆಕಾಶವನ್ನೂ ಧರಿಸಿರುವುದರಿಂದ) ಪೃಥಿವೀ ಪುಚ್ಛಂ ಪ್ರತಿಷ್ಠಾ ಭೂಮಿಯೇ ಪುಚ್ಛದಂತೆ ಕೆಳಭಾಗವು, ತದಪಿ ಏಷಃ ಶ್ಲೋಕಃ ಭವತಿ-ಪ್ರಾಣ ಮಯ ಆತ್ಮವಿಷಯದಲ್ಲಿಯೂ ಈ ಶ್ಲೋಕಗಳು ಹೇಳಲ್ಪಟ್ಟಿವೆ.

**(ವಾ. ಅರ್ಥ)**

| | |
|---|---|
| ೧೦) ತಸ್ಮಾತ್ ಏತಸ್ಮಾತ್ ಅನ್ನ ರಸಮಯಾತ್, ಅನ್ಯಃ ಯಃ ಪ್ರಾಣ ಮಯಃ, ಸಃ ಅಂತರಾತ್ಮಾ ; ತೇನ ಏಷಃ **ಪೂರ್ಣಃ** | ೧೦) ಅನ್ನ ರಸಮಯವಾದ (ಆ ದೇಹದೊಳಗಿದ್ದು) ಆ ದೇಹಕ್ಕಿಂತ ಬೇರೆಯಾಗಿರುವ ಪ್ರಾಣಮಯನೆನಿಸಿಕೊಂಡಿರತಕ್ಕವನು ಯಾವನೋ ಆತನೇ ಅಂತರ್ಯಾಮಿಯು ; ಆ ಪ್ರಾಣಮಯನಾದ ಆತ್ಮನಿಂದ ಅನ್ನರಸ ಮಯವಾದ ಆತ್ಮನು ವ್ಯಾಪಿಸಲ್ಪಟ್ಟಿರುವನು (ದೇಹವೆಲ್ಲಾ ಪ್ರಾಣದಿಂದ ವ್ಯಾಪಿಸಲ್ಪಟ್ಟಿರುವುದು ಎಂದು ಭಾವ). |
| ೧೧) ಸವಾ ಏಷಃ ಪುರುಷ ವಿಧಃ ಏವ. ತಸ್ಯ ಪುರುಷ ವಿಧತಾಂ | ೧೧) ಆ ಈ ಪ್ರಾಣಮಯನೂ ಪುರುಷನ ಆಕಾರವುಳ್ಳದ್ದೇ ; ಅನ್ನಮಯ |

ಅನುಃ ಅಯಂ ಪುರುಷ ವಿಧಃ

ಪುರುಷನನ್ನು ಅನುಸರಿಸಿ ಈ ಪ್ರಾಣ ಮಯನೂ ಪುರುಷಾಕಾರವುಳ್ಳವನು. (ಅನ್ನಮಯ ಪುರುಷನಂತೆಯೇ ತಲೆ, ಭುಜ, ಕಾಲು ಮೊದಲಾದ ಐದು ಅವ ಯವ ಉಳ್ಳವನು).

೧೨) ತಸ್ಯ ಪ್ರಾಣ ಏವ ಶಿರಃ ವ್ಯಾನಃ ದಕ್ಷಿಣಃ ಪಕ್ಷಃ, ಅಪಾನಃ ಉತ್ತರಃ ಪಕ್ಷಃ, ಆಕಾಶಃ ಆತ್ಮಾ, ಪೃಥಿವೀ ಪುಚ್ಛಂ ಪ್ರತಿಷ್ಠಾ: ತದಪಿ ಏಷ ಶ್ಲೋಕಃ ಭವತಿ.

೧೨) ಪ್ರಾಣವೇ ಅದಕ್ಕೆ ತಲೆ ; ವ್ಯಾನವೇ ಬಲದ ಭುಜ, ಅಪಾನವೇ ಎಡದ ಭುಜ ; (ವಾಯು ವಿಕಾರವಾದ ಪ್ರಾಣಾಪಾನಾದಿಗಳನ್ನು ಆಕಾಶವು ಧರಿಸಿರುವುದರಿಂದ) ಆಕಾಶವೇ ಆತ್ಮವು ಭೂಮಿಯು ಪುಚ್ಛದಂತೆ ಕೆಳ ಭಾಗವು. ಪ್ರಾಣಮಯ ಆತ್ಮ ವಿಷಯದಲ್ಲಿ, ಈ ಶ್ಲೋಕವು ಹೇಳಲ್ಪ ಟ್ಟಿದೆ.

## ೩ನೆಯ ಅನುವಾಕ

ಮೂಲ ಮಂತ್ರ:-ಪ್ರಾಣಂದೇವಾ ಅನುಪ್ರಾಣಂತಿ। ಮನುಷ್ಯಾಃ

ಪಶವಶ್ಚ ಯೇ। ಪ್ರಾಣೋ ಹಿ ಭೂತಾನಾಮಾಯುಃ। ತಸ್ಮಾ

ತ್ಸರ್ವಾಯುಷ ಮುಚ್ಯತೇ। ಸರ್ವಮೇವ ತ ಆಯುರ್ಯನ್ತಿ।

ಯೇಪ್ರಾಣಂ ಬ್ರಹ್ಮೋಪಾಸತೇ। ಪ್ರಾಣೋಹಿಭೂತಾನಾ

ಮಾಯುಃ। ತಸ್ಮಾತ್ಸರ್ವಾಯುಷ ಮುಚ್ಯತ ಇತಿ। ತಸ್ಯೈಷ

ಏವ ಶಾರೀರ ಆತ್ಮಾ | ಯಃ ಪೂರ್ವಸ್ಯ | ತಸ್ಮಾದ್ವಾ ಏತಸ್ಮಾ

ತ್ಪ್ರಾಣಮಯಾತ್ | ಅನ್ಯೋಂತರ ಆತ್ಮಾ ಮನೋಮಯಃ |

ತೇನೈಷಪೂರ್ಣಃ | ಸವಾ ಏಷ ಪುರುಷವಿಧ ಏವ | ತಸ್ಯ

ಪುರುಷವಿಧತಾಂ | ಅನ್ವಯಂ ಪುರುಷವಿಧಃ | ತಸ್ಯಯಜು

ರೇವಶಿರಃ | ಋಗ್ದಕ್ಷಿಣಃಪಕ್ಷಃ | ಸಾಮೋತ್ತರಃ ಪಕ್ಷಃ | ಆದೇಶ

ಆತ್ಮಾ | ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ | ತದಪ್ಯೇಷ

ಶ್ಲೋಕೋಭವತಿ |.

ಅರ್ಥ — ದೇವಾಃ ಯೇ ಮನುಷ್ಯಾಃ ಪಶವಶ್ಚ — ದೇವಮನುಷ್ಯ ಪಶು ಮೊದಲಾದುವು, ಪ್ರಾಣಂ ಅನು ಪ್ರಾಣಂತಿ-ಪ್ರಾಣಕ್ಕೆ ಅಧೀನವಾಗಿ ಜೀವಿಸು ತ್ತವೆ. ಪ್ರಾಣಃ-ಪ್ರಾಣವು, ಭೂತಾನಾಂ—ಎಲ್ಲಾ ಪ್ರಾಣಿಗಳ, ಆಯುಃ ಹಿ- ಜೀವನಕ್ಕೆ ಕಾರಣವಲ್ಲವೇ? ತಸ್ಮಾತ್-ಆದುದರಿಂದಲೇ, ಸರ್ವಾಯುಷಂ ಉಚ್ಯತೇ ಎಲ್ಲರ ಆಯುಸ್ಸೆಂದು ಹೇಳಲ್ಪಡುತ್ತದೆ. ಯೇ-ಯಾರು, ಪ್ರಾಣಂ—ಪ್ರಾಣ ವನ್ನು, ಬ್ರಹ್ಮ—ಬ್ರಹ್ಮವೆಂದು, ಉಪಾಸತೇ—ಧ್ಯಾನ ಮಾಡುವರೋ, ತೇ- ಅವರು, ಸರ್ವಂ—ಎಲ್ಲಾ, ಆಯುಃ-ಆಯುಸ್ಸನ್ನು, ಯಂತಿ—ಹೊಂದುತ್ತಾರೆ. ಪ್ರಾಣಃ—ಪ್ರಾಣವು, ಭೂತಾನಾಂ-ಎಲ್ಲಾ ಪ್ರಾಣಿಗಳಿಗೂ, ಆಯುಃ ಹಿ-ಜೀವ ನಕ್ಕೆ ಕಾರಣವಲ್ಲವೇ ? ತಸ್ಮಾತ್—ಆದುದರಿಂದ, ಸರ್ವಾಯುಷಂ-ಎಲ್ಲರ ಆಯು ಸ್ಸೆಂದು, ಉಚ್ಯತೇ—ಹೇಳಲ್ಪಡುತ್ತದೆ. ಪೂರ್ವಸ್ಯ ಯಃ ಆತ್ಮಾ-ಅನ್ನಮಯಕ್ಕೆ ಯಾವುದು ಆತ್ಮವೋ, ಏಷಃ ಏವ ತಸ್ಯ-ಅದೇ ಪ್ರಾಣಮಯಕ್ಕೂ ಶಾರೀರಃ ಆತ್ಮಾ—ಶರೀರ ಪ್ರತಿಸಂಬಂಧಿಯಾದ ಆತ್ಮನು (ಅನ್ನಮಯಕ್ಕೂ ಪ್ರಾಣ ಮಯಕ್ಕೂ ಆತ್ಮನು ಒಬ್ಬನೇ. ಅನ್ನಮಯಕ್ಕೆ ಪ್ರಾಣಮಯನು ಆತ್ಮನಲ್ಲ ವೆಂದುಭಾವ). ತಸ್ಮಾತ್ ಏತಸ್ಮಾತ್ ಪ್ರಾಣಮಯಾತ್—ಆ ಈ ಪ್ರಾಣ

ಮಯನಿಗಿಂತಲೂ, ಅನ್ಯಃ-ಬೇರೆಯಾದ, ಮನೋಮಯಃ-ಮನೋಮಯನು ಅಂತರಾತ್ಮಾ-ಅಂತರಾತ್ಮನು. ತೇನ-ಮನೋವೃತ್ತಿ ಪ್ರಚುರನಾದ ಮನೋಮಯನಿಂದ, ಏಷಃ ಪೂರ್ಣಃ-ಈ ಪ್ರಾಣಮಯನು ವ್ಯಾಪಿಸಲ್ಪಟ್ಟಿದ್ದಾನೆ. ಸಃ ಏಷಃ ಪುರುಷ ವಿಧಃ ಏವ-ಆ ಈತನು ಪುರುಷಾಕಾರನೇ. ತಸ್ಯ ಪುರುಷ ವಿಧತಾಂ ಅನು-ಆ ಪ್ರಾಣಮಯದ ಪುರುಷಾಕಾರತ್ವವನ್ನು ಅನುಸರಿಸಿ, ಅಯಂ-ಈತನೂ, ಪುರುಷವಿಧಃ-ಪುರುಷಾಕಾರನು. ತಸ್ಯ-ಆತನಿಗೆ, ಯಜುಃ ಏವ ಶಿರಃ-ಯಜುರ್ವೇದ ವಿಷಯಕ ಜ್ಞಾನವನ್ನುಂಟುಮಾಡುವ ಮನಸ್ಸಿನ ವ್ಯಾಪಾರವು, ತಲೆ. ಋಕ್ ದಕ್ಷಿಣಃಪಕ್ಷಃ-ಋಗ್ವೇದ ಜ್ಞಾನವನ್ನುಂಟು ಮಾಡುವ ಮನೋವ್ಯಾಪಾರವು ಬಲದ ತೋಳು. ಸಾಮ ಉತ್ತರಃ ಪಕ್ಷಃ-ಸಾಮವೇದ ಜ್ಞಾನವನ್ನುಂಟುಮಾಡುವ ಮನೋವ್ಯಾಪಾರವು,ಎಡದತೋಳು. ಆದೇಶಃ ಆತ್ಮಾ-ವಿಧಿ ನಿಷೇಧ ರೂಪವಾದ ಅಪ್ಪಣೆಯ ವಿಷಯಕ ಮನೋವ್ಯಾಪಾರವು ಆತ್ಮವು. ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ-ಅಥರ್ವಾಂಗಿರಸದಿಂದ ಕಾಣಲ್ಪಟ್ಟ ಮಂತ್ರ ವಿಷಯಕ ಮನೋವ್ಯಾಪಾರವು. ನಿಲ್ಲುವುದಕ್ಕೆ ಆಧಾರವಾದ ಪುಚ್ಛವು. ತದಪಿ ಏಷಃ ಶ್ಲೋಕಃ ಭವತಿ-ಆ ಮನೋಮಯನ ವಿಷಯದಲ್ಲಿ ಈ ಶ್ಲೋಕವಿದೆ.

(ವಾ. ಅರ್ಥ)

| | |
|---|---|
| ೧) ದೇವಾಃ ಯೇ ಮನುಷ್ಯಾಃ, ಪಶವಶ್ಚ ಪ್ರಾಣಂ ಅನುಪ್ರಾಣನ್ತಿ | ೧) ದೇವ ಮನುಷ್ಯ ಪಶುವೇ ಮೊದಲಾದುವು ಪ್ರಾಣಕ್ಕೆ ಅಧೀನವಾಗಿ ಜೀವಿಸುತ್ತವೆ. |
| ೨) ಪ್ರಾಣಃ ಭೂತಾನಾಂ ಆಯುರ್ಹಿ ; ತಸ್ಮಾತ್ ಸರ್ವಾಯುಷಂ ಉಚ್ಯತೇ. | ೨) ಪ್ರಾಣವು ಎಲ್ಲಾ ಪ್ರಾಣಿಗಳ ಜೀವನಕ್ಕೆ ಕಾರಣವಲ್ಲವೆ? ಆದುದರಿಂದ ಎಲ್ಲರ ಆಯುಸ್ಸೆಂದು ಹೇಳಲ್ಪಡುತ್ತದೆ. |
| ೩) ಯೇ ಪ್ರಾಣಂ ಬ್ರಹ್ಮ ಉಪಾಸತೇ, ತೇ ಸರ್ವಂ ಆಯುಃ ಯನ್ತಿ. | ೪) ಯಾರು ಪ್ರಾಣವನ್ನು ಬ್ರಹ್ಮವೆಂದು ಧ್ಯಾನ ಮಾಡುವರೋ ಅವರು ಎಲ್ಲಾ ಆಯುಸ್ಸನ್ನೂ ಹೊಂದುತ್ತಾರೆ. |

| | |
|---|---|
| ೯) ಪ್ರಾಣಾಃ ಭೂತಾನಾಂ ಆಯುರ್ಹಿ; ತಸ್ಮಾತ್ ಸರ್ವಾಯುಷಂ ಉಚ್ಯತೇ | ೯) ಪ್ರಾಣವು ಎಲ್ಲಾ ಪ್ರಾಣಿಗಳಿಗೂ ಜೀವನಕ್ಕೆ ಕಾರಣವಲ್ಲವೇ? ಆದುದರಿಂದಲೇ ಎಲ್ಲರ ಆಯುಸ್ಸೆಂದು ಹೇಳಲ್ಪಡುತ್ತದೆ. |
| ೧೦) ಪೂರ್ವಸ್ಯ ಯಃ ಆತ್ಮಾ ಏಷ ಏವ ತಸ್ಯ ಶಾರೀರಃ ಆತ್ಮಾ | ೧೦) ಅನ್ನಮಯಕ್ಕೆ ಯಾವನು ಆತ್ಮವೋ, ಅವನೇ ಪ್ರಾಣಮಯಕ್ಕೂ ಶರೀರ ಪ್ರತಿ ಸಂಬಂಧಿಯಾದ ಆತ್ಮನು (ಅನ್ನಮಯಕ್ಕೂ ಪ್ರಾಣಮಯಕ್ಕೂ ಆತ್ಮನು ಒಬ್ಬನೇ; ಅನ್ನಮಯಕ್ಕೆ ಪ್ರಾಣಮಯನು ಆತ್ಮನಲ್ಲವೆಂದು ಭಾವ.) |
| ೧೧) ತಸ್ಮಾತ್ ಏತಸ್ಮಾತ್ ಪ್ರಾಣಮಯಾತ್ ಅನ್ಯಃ ಮನೋಮಯಃ ಅಂತರಾತ್ಮಾ. | ೧೧) ಈ ಪ್ರಾಣಮಯನಿಗಿಂತಲೂ ಬೇರೆಯಾದ ಆ ಮನೋಮಯನು ಅಂತರಾತ್ಮನು |
| ೧೨) ತೇನ ಏಷಃ ಪೂರ್ಣಃ | ೧೨) ಮನೋವೃತ್ತಿಪ್ರಚುರನಾದ ಮನೋಮಯನಿಂದ ಈ ಪ್ರಾಣಮಯನು ವ್ಯಾಪಿಸಲ್ಪಟ್ಟಿದ್ದಾನೆ. |
| ೧೩) ಸಃ ಏಷಃ ಪುರುಷವಿಧ ಏವ ತಸ್ಯ ಪುರುಷಃ ಅನುವಿಧತಾಂ | ೧೩) ಆ ಈತನು ಪುರುಷ ಆಕಾರನೇ; ಆ ಪ್ರಾಣಮಯದ ಪುರುಷಾಕಾರತ್ವವನ್ನು ಅನುಸರಿಸಿ ಈತನೂ ಪುರುಷಾಕಾರನು. |
| ೧೪) ತಸ್ಯ ಯಜುರೇವ ಶಿರಃ; ಋಕ್ ದಕ್ಷಿಣಃ ಪಕ್ಷಃ ಸಾಮ | ೧೪) ಆತನಿಗೆ ಯಜುರ್ವೇದ ವಿಷಯಕ ಜ್ಞಾನವನ್ನುಂಟುಮಾಡುವ ಮನಸ್ಸಿನ |

| | |
|---|---|
| ಉತ್ತರಃ ಪಕ್ಷಃ; ಆದೇಶಃ ಆತ್ಮಾ; ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ | ವ್ಯಾಪಾರವು ತಲೆ ; ಋಗ್ವೇದ ಜ್ಞಾನವನ್ನುಂಟುಮಾಡುವ ಮನೋವ್ಯಾಪಾರವು ಬಲದ ತೋಳು ; ಸಾಮವೇದ ಜ್ಞಾನವನ್ನುಂಟುಮಾಡುವ ಮನೋವ್ಯಾಪಾರವು ಎಡದ ತೋಳು ; ವಿಧಿನಿಷೇಧರೂಪವಾದ ಅಪ್ಪಣೆಯ ವಿಷಯಕ ಮನೋವ್ಯಾಪಾರವು ಆತ್ಮವು ; ಅಥರ್ವಾಂಗಿರಸದಿಂದ ಕಾಣಲ್ಪಟ್ಟ ಮಂತ್ರ ವಿಷಯಕ ಮನೋವ್ಯಾಪಾರವು ನಿಲ್ಲುವುದಕ್ಕೆ ಆಧಾರವಾದ ಪುಚ್ಛವು. |
| ೧೫) ತದಪಿ ಏಷ ಶ್ಲೋಕಃ ಭವತಿ | ೧೫) ಆ ಮನೋಮಯನ ವಿಷಯದಲ್ಲಿ ಈ ಶ್ಲೋಕವಿದೆ. |

## ೪ನೆಯ ಅನುವಾಕ

ಮೂಲ ಮಂತ್ರ :—ಯತೋ ವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾ ಸಹ। ಆನಂದಂ ಬ್ರಹ್ಮಣೋವಿದ್ವಾನ್। ನಬಿಭೇತಿ ಕದಾಚನೇತಿ। ತಸ್ಯೈಷ ಏವ ಶಾರೀರ ಆತ್ಮಾ। ಯಃ ಪೂರ್ವಸ್ಯ।ತಸ್ಮಾದ್ವಾ ಏತಸ್ಮಾನ್ಮನೋಮಯಾತ್।ಅನ್ಯೋಽನ್ತರ ಆತ್ಮಾವಿಜ್ಞಾನಮಯಃ। ತೇನೈಷ ಪೂರ್ಣಃ। ಸವಾಏಷ ಪುರುಷವಿಧ ಏವ। ತಸ್ಯ ಪುರುಷವಿಧತಾಂ। ಅನ್ವಯಂ

ಪುರುಷವಿಧಃ। ತಸ್ಯ ಶ್ರದ್ಧೈವ ಶಿರಃ। ಋತಂದಕ್ಷಿಣಃ ಪಕ್ಷಃ।

ಸತ್ಯ ಮುತ್ತರಃ ಪಕ್ಷಃ। ಯೋಗ ಆತ್ಮಾ। ಮಹಃಪುಚ್ಛಂ

ಪ್ರತಿಷ್ಠಾ। ತದಪ್ಯೇಷ ಶ್ಲೋಕೋಭವತಿ.।

**ಅರ್ಥ** — ಮನಸಾ ಸಹ ಅಪ್ರಾಪ್ಯ ಯತಃ ವಾಚಃ ನಿವರ್ತಂತೇ-ಯಾವ ಬ್ರಹ್ಮಾನಂದದ ದೆಸೆಯಿಂದ, ವಾಕ್ಕು, ಮನಸ್ಸೂ ಅವಧಿಯನ್ನು ಕಾಣದೆ ಹಿಂದಿರುಗುತ್ತವೆಯೋ, ಬ್ರಹ್ಮಣಃ ಆನಂದಂ-ಆ ವಿಧವಾದ ಬ್ರಹ್ಮಾನಂದವನ್ನು ವಿದ್ವಾನ್-ಪರಿಶುದ್ಧವಾದ ಮನಸ್ಸಿನಿಂದ ತಿಳಿದು, ಕದಾಚನ ನ ಬಿಭೇತಿ-ಯಾವಾಗಲೂ ಹೆದರುವುದಿಲ್ಲ. (ಇಲ್ಲಿ ಬ್ರಹ್ಮಾನಂದವು ಶುದ್ಧವಾದ ಮನಸ್ಸಿಗೆ ಗೋಚರವಾಗುವುದೆಂದು ಹೇಳುವುದರಿಂದ ಈ ಶ್ಲೋಕವು ಮನೋಮಯ ವಿಷಯವೆಂದರಿಯಬೇಕು). ಯಃ ಪೂರ್ವಸ್ಯ-ಯಾವನು ಪ್ರಾಣಮಯಕ್ಕೆ ಆತ್ಮನೋ, ಏಷಃ ಶಾರೀರ ಆತ್ಮಾ-ಈತನೇ ಶರೀರ ಪ್ರತಿ ಸಂಬಂಧಿಯಾದ ಆತ್ಮನು. ತಸ್ಮಾತ್ ಏತಸ್ಮಾತ್ ಮನೋಮಯಾತ್-ಆ ಈ ಮನೋಮಯನಿಗಿಂತಲೂ, ಅನ್ಯಃ ವಿಜ್ಞಾನಮಯಃ-ಬೇರೆಯಾದ ಜೀವನು, ಅಂತರಾತ್ಮಾ-ಅಂತರಾತ್ಮನು. ತೇನ-ಆ ವಿಜ್ಞಾನಮಯ ಜೀವನಿಂದ; ಏಷಃಪೂರ್ಣಃ-ಈ ಮನೋಮಯನು ವ್ಯಾಪಿಸಲ್ಪಟ್ಟಿರುವನು, ತಸ್ಯ-ಆ ಮನೋಮಯನಿಗೆ, ಶ್ರದ್ಧಾ ಏವಶಿರಃ-ಆತ್ಮಸಮರ್ಪಣೆ ಮಾಡುವ ನಂಬಿಕೆಯೇ ತಲೆ. ಋತಂ ದಕ್ಷಿಣಃ ಪಕ್ಷಃ-ಆ ವಿಧವಾದ ನಿಜ ಹೇಳುವುದು, ಬಲದ ತೋಳು. ಸತ್ಯಂ ಉತ್ತರಃ ಪಕ್ಷಃ-ಆ ವಿಧವಾದ ನಿಜವಾದ ನಡತೆಯು ಎಡದ ತೋಳು. ಯೋಗಃಆತ್ಮಾ-ಆತ್ಮ ಸಮರ್ಪಣೆ ಮಾಡುವುದು ಆತ್ಮವು-ಮಹಃ ಪುಚ್ಛಂ ಪ್ರತಿಷ್ಠಾ-ಆ ವಿಧವಾದ ಯೋಗಕ್ಕೆ ಅಡ್ಡಿಯಾದುದನ್ನು ಹೋಗಲಾಡಿಸುವ ಸಾಮರ್ಥ್ಯವು ನೆಲೆಯಲ್ಲಿ ನಿಲ್ಲಿಸುವ ಪುಚ್ಛವು. ತದಪಿ ಏಷಃ ಶ್ಲೋಕಃ ಭವತಿ-ಆ ವಿಜ್ಞಾನಮಯನ ವಿಷಯದಲ್ಲಿಯೂ ಈ ಶ್ಲೋಕವಿರುವುದು.

ಇಲ್ಲಿ ಶ್ರದ್ಧೆ ಸತ್ಯ ಮೊದಲಾದವುಗಳು ಆತ್ಮಗುಣಗಳಲ್ಲಿ ಪ್ರಸಿದ್ಧಗಳಾ

ದುದರಿಂದ ಅವುಗಳಿಂದ ಕೂಡಿರುವ ಆತ್ಮಸ್ವರೂಪವನ್ನು ತಲೆ, ಪಕ್ಷ, ಕಾಲು ಎಂಬ ಅವಯವಗಳೊಡನೆ ರೂಪಣೆ ಮಾಡಿರುವುದೆಂದು ತಿಳಿಯತಕ್ಕದ್ದು.

(ವಾ. ಅರ್ಥ)

೧) ಯತಃ ವಾಚಃ ಮನಸಾಸಹ ಅಪ್ರಾಪ್ಯ ನಿವರ್ತಂತೇ; ಬ್ರಹ್ಮಣಃ ಆನಂದಂ ವಿದ್ವಾನ್ ಕದಾಚನ ನ ಬಿಭೇತಿ

೧) ಯಾವ ಬ್ರಹ್ಮಾನಂದದ ದೆಶೆಯಿಂದ ವಾಕ್ಕೂ, ಮನಸ್ಸೂ, ಅವಧಿಯನ್ನು ಕಾಣದೆ ಹಿಂತಿರುಗುತ್ತವೆಯೋ ಆ ವಿಧವಾದ ಬ್ರಹ್ಮಾನಂದವನ್ನು ಪರಿಶುದ್ಧವಾದ ಮನಸ್ಸಿನಿಂದ ತಿಳಿದವನು ಯಾವಾಗಲೂ ಹೆದರುವುದಿಲ್ಲ. (ಇಲ್ಲಿ ಬ್ರಹ್ಮಾನಂದವು ಶುದ್ಧವಾದ ಮನಸ್ಸಿಗೆ ಗೋಚರವಾಗುವುದೆಂದು ಹೇಳುವುದರಿಂದ ಈ ಶ್ಲೋಕ "ಮನೋಮಯ" ವಿಷಯಕವೆಂದರಿಯಬೇಕು).

೨) ಯಃ ಪೂರ್ವಸ್ಯ ಏಷಃ ಶಾರೀರ ಆತ್ಮಾ

೨) ಯಾವನು ಪ್ರಾಣಮಯಕ್ಕೆ ಆತ್ಮನೋ, ಆತನೇ ಶರೀರ ಪ್ರತಿಸಂಬಂಧಿಯಾದ ಆತ್ಮನು.

೩) ತಸ್ಮಾತ್ ಏತಸ್ಮಾತ್ ಮನೋಮಯಾತ್ ಅನ್ಯಃ ವಿಜ್ಞಾನಮಯಃ ಅಂತರಾತ್ಮಾ; ತೇನ ಏಷಃ ಪೂರ್ಣಃ.

೩) ಆ ಈ ಮನೋಮಯನಿಗಿಂತಲೂ ಬೇರೆಯಾದ ವಿಜ್ಞಾನಮಯ ಜೀವನು ಅಂತರಾತ್ಮನು; ಆ ವಿಜ್ಞಾನಮಯ ಜೀವನಿಂದ ಈ ಮನೋಮಯನು ವ್ಯಾಪಿಸಲ್ಪಟ್ಟಿರುವನು.

೪) ತಸ್ಯ ಶ್ರದ್ಧಾ ಏವ ಶಿರಃ; ಋತಂ ದಕ್ಷಿಣಃ ಪಕ್ಷಃ; ಸತ್ಯಂ

೪) ಆ ಮನೋಮಯನಿಗೆ ಆತ್ಮಸಮರ್ಪಣೆ ಮಾಡುವ ನಂಬಿಕೆಯೇ

ಉತ್ತರಃ ಪಕ್ಷಃ; ಯೋಗಃ ಆತ್ಮಾ, ಮಹಃ ಪುಚ್ಛಂ ಪ್ರತಿಷ್ಠಾ.

ತಲೆ; ಆ ವಿಧವಾಗಿ ನಿಜ ಹೇಳುವುದು ಬಲದ ತೋಳು; ಆ ವಿಧವಾದ ನಿಜವಾದ ನಡತೆಯು ಎಡದ ತೋಳು; ಆತ್ಮ ಸಮರ್ಪಣೆ ಮಾಡುವುದು ಆತ್ಮವು; ಆ ವಿಧವಾದ ಯೋಗಕ್ಕೆ ಅಡ್ಡಿಯಾದುದನ್ನು ಹೋಗಲಾಡಿಸುವ ಸಾಮರ್ಥ್ಯವು ನೆಲೆಯಲ್ಲಿ ನಿಲ್ಲಿಸುವ ಪುಚ್ಛವು.

೫) ತದಪಿ ಏಷಃ ಶ್ಲೋಕ ಭವತಿ.

೫) ಆ ವಿಜ್ಞಾನಮಯದ ವಿಷಯದಲ್ಲಿಯೂ ಈ ಶ್ಲೋಕವಿರುವುದು.

ಇಲ್ಲಿ ಶ್ರದ್ಧೆ, ಸತ್ಯ ಮೊದಲಾದವುಗಳು ಆತ್ಮಗುಣಗಳಲ್ಲಿ ಪ್ರಸಿದ್ಧಗಳಾದುದರಿಂದ ಅವುಗಳಿಂದ ಕೂಡಿರುವ ಆತ್ಮ ಸ್ವರೂಪವನ್ನು ತಲೆ, ಪಕ್ಷ, ಕಾಲು ಎಂಬ ಅವಯುವಗಳೊಡನೆ ನಿರೂಪಣೆ ಮಾಡಿರುವುದೆಂದು ತಿಳಿಯತಕ್ಕದ್ದು,

## ೫ನೆಯ ಅನುವಾಕ;

ಮೂಲ ಮಂತ್ರ:—ವಿಜ್ಞಾನಂ ಯಜ್ಞಂ ತನುತೇ। ಕರ್ಮಾಣಿ

ತನುತೇ ಽಪಿ ಚ। ವಿಜ್ಞಾನಂ। ದೇವಾಸ್ಸರ್ವೇ। ಬ್ರಹ್ಮಜ್ಯೇಷ್ಠ

ಮುಪಾಸತೇ। ವಿಜ್ಞಾನಂ ಬ್ರಹ್ಮಚೇದ್ವೇದ। ತಸ್ಮಾಚ್ಚೇನ್ನ

ಪ್ರಮಾದ್ಯತಿ। ಶರೀರೇ ಪಾಪ್ಮನೋ ಹಿತ್ವಾ। ಸರ್ವಾನ್ಕಾಮಾ

ನ್ಸಮಶ್ನುತ ಇತಿ। ತಸ್ಯೈಷ ಏವ ಶಾರೀರ ಆತ್ಮಾ।ಯಃ

ಪೂರ್ವಸ್ಯ। ತಸ್ಮಾದ್ವಾ ಏತಸ್ಮಾದ್ವಿಜ್ಞಾನಮಯಾತ್.

ಅನ್ಯೋಽನ್ತರ ಆತ್ಮಾನಂದಮಯಃ । ತೇನೈಷಪೂರ್ಣಃ।

ಸವಾಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಂ।

ಅನ್ವಯಂ ಪುರುಷವಿಧಃ । ತಸ್ಯ ಪ್ರಿಯಮೇವಶಿರಃ ।

ಮೋದೋ ದಕ್ಷಿಣಃ ಪಕ್ಷಃ। ಪ್ರಮೋದ ಉತ್ತರಃ ಪಕ್ಷಃ ।

ಆನಂದ ಆತ್ಮಾ। ಬ್ರಹ್ಮ ಪುಚ್ಛಂ ಪ್ರತಿಷ್ಠಾ। ತದಪ್ಯೇಷ

ಶ್ಲೋಕೋ ಭವತಿ ।

ಅರ್ಥ—ವಿಜ್ಞಾನಂ-ಜ್ಞಾನವೆಂಬ ಗುಣವುಳ್ಳ ಜೀವನು, ಯಜ್ಞಂ-ಯಾಗವನ್ನು, ತನುತೇ-ಆಚರಿಸುತ್ತಾನೆ. ಕರ್ಮಾಣಿ ಅಪಿಚ-ಕರ್ಮಗಳನ್ನು ಕೂಡ, ತನುತೇ-ಆಚರಿಸುತ್ತಾನೆ. ಸರ್ವೇದೇವಾಃ-ಎಲ್ಲಾ ದೇವತೆಗಳೂ, ವಿಜ್ಞಾನಂ-ಜೀವವನ್ನು, ಬ್ರಹ್ಮ ಜ್ಯೇಷ್ಠಂ-ಪ್ರಕೃತಿಗಿಂತ ಶ್ರೇಷ್ಠನೆಂದು ಉಪಾಸತೇ-ಉಪಾಸನೆ ಮಾಡುತ್ತಾರೆ. ವಿಜ್ಞಾನಂ ಬ್ರಹ್ಮ ಇತಿ-ಜೀವನೆಂಬ ಬ್ರಹ್ಮನನ್ನು, ವೇದಚೇತ್-ಉಪಾಸನೆ ಮಾಡಿದರೆ, ತಸ್ಮಾತ್-ಆ ಜೀವನವನೆಯಿಂದ, ನ ಪ್ರಮಾದ್ಯತಿ ಚೇತ್-ಸಾಯುವ ಕಾಲದಲ್ಲಿ ಸ್ಮರಣೆಯುಂಟಾಗುವವರೆಗೂ ಅಜಾಗರೂಕತೆ ಮಾಡದಿದ್ದರೆ, ಶರೀರೇ-ದೇಹದಲ್ಲಿ ಇರುವಾಗಲೇ, ಪಾಪ್ಮನಃ ಹಿತ್ವಾ-ಪೂರ್ವ-ಉತ್ತರ ಪಾಪ ಸಂಬಂಧ ಲೇಪವಿಲ್ಲದವನಾಗಿ, ಸರ್ವಾನ್ ಕಾಮಾನ್-ಎಲ್ಲಾ ಕಲ್ಯಾಣ ಗುಣಗಳನ್ನೂ, ಸಮಶ್ನುತೇ-ಅನುಭವಿಸುತ್ತಾನೆ. ಯಃಪೂರ್ವಸ್ಯಆತ್ಮಾ-ಯಾವನು ಮನೋಮಯನಿಗೆ ಆತ್ಮನೋ, ಏಷಃ ಏವ-ಈತನೇ, ತಸ್ಯ ಶಾರೀರಃ ಆತ್ಮಾ-ಆ ವಿಜ್ಞಾನಮಯನಾದ ಜೀವನಿಗೂ ಶರೀರ ಪ್ರತಿ ಸಂಬಂಧಿಯಾದ ಆತ್ಮನು. ತಸ್ಮಾತ್ ಏತಸ್ಮಾತ್ ವಿಜ್ಞಾನಮಯಾತ್-ಆ ಈ ಜೀವನಿಗಿಂತಲೂ, ಅನ್ಯಃ ಆನಂದಮಯಃ-ಬೇರೆಯಾದ ಆನಂದಮಯನು, ಅಂತರಃ ಆತ್ಮಾ-ಅಂತರಾತ್ಮನು. ತೇನ ಏಷಃ ಪೂರ್ಣಃ-ಅವನಿಂದ ಈತನು ವ್ಯಾಪಿಸಲ್ಪಟ್ಟಿರುವನು. ಸಃ ಏಷಃ

ಪುರುಷವಿಧಃ ಏವ-ಆ ಈತನೂ ಪುರುಷನ ಆಕಾರವುಳ್ಳವನೇ. ತಸ್ಯಪುರುಷ ವಿಧತಾಂ ಅನು ಅಯಂ ಪುರುಷ ವಿಧಃ-ಆ ವಿಜ್ಞಾನಮಯ ಪುರುಷಾಕಾರತ್ವ ವನ್ನು ಅನುಸರಿಸಿ ಈತನೂ ಪುರುಷಾಕಾರನು. ತಸ್ಯ ಪ್ರಿಯಂ ಏವಶಿರಃ-ಆ ಆನಂದಮಯನಿಗೆ ಇಷ್ಟವಸ್ತುಗಳ ದರ್ಶನದಿಂದುಂಟಾಗುವ ಸುಖವೆಂಬ ಪ್ರಿಯವೇ ತಲೆ. ಮೋದಃ ದಕ್ಷಿಣಃ ಪಕ್ಷಃ-ಇಷ್ಟವಸ್ತು ಲಾಭದಿಂದ ಬರುವ ಸುಖವೇ ಬಲತೋಳು. ಪ್ರಮೋದಃ ಉತ್ತರಃ ಪಕ್ಷಃ-ಅವುಗಳ ಉಪಯೋಗ ದಿಂದ ಬರುವ ಸುಖವೇ ಎಡತೋಳು. ಆನಂದಃ ಆತ್ಮಾ-ಹೆಚ್ಚಾದ ಸುಖವೆಂಬ ಆನಂದವೇ ಆತ್ಮಾ, ಬ್ರಹ್ಮ ಪುಚ್ಛಂ ಪ್ರತಿಷ್ಠಾ-ಬ್ರಹ್ಮವೇ ಆಶ್ರಯ.

(ಇಲ್ಲಿ ಆನಂದಮಯನೂ ಬ್ರಹ್ಮನೂ ಒಂದೇ ಆದರೂ "ಬ್ರಹ್ಮತ್ವ" ಎಂಬ ಭಾವದಿಂದ ಪುಚ್ಛವೆಂದೂ "ಆನಂದತ್ವ" ಎಂಬ ರೂಪದಿಂದ ಆತ್ಮ ಶಬ್ದದಿಂದ ಬೋಧಿಸಲ್ಪಡುವ ಶರೀರವು ಮಧ್ಯಭಾಗವೆಂದೂ ರೂಪಣೆ ಮಾಡಲ್ಪಟ್ಟಿದೆ. ಆನಂದರೂಪಿಯಾದ ಬ್ರಹ್ಮನಿಗೆ ಪ್ರಿಯ, ಮೋದ, ಪ್ರಮೋದ ಗಳೆಂಬ ಧರ್ಮವಾದ ಆನಂನ ಪ್ರಚುರತ್ವವಿರುವುದರಿಂದ ಆನಂದಮಯನೆಂಬ ಹೆಸರೂ ಹೇಳಲ್ಪಟ್ಟಿದೆ. ತದಪಿ ಏಷಃ ಶ್ಲೋಕಃ ಭವತಿ-ಶಿರಸ್ಸು, ಪಕ್ಷ, ಪುಚ್ಛ ಗಳುಳ್ಳ ಆನಂದಮಯ ಬ್ರಹ್ಮ-ವಿಷಯಕ ಶ್ಲೋಕವು ಹೇಳಲ್ಪಡುತ್ತದೆ.

(ವಾ. ಅರ್ಥ)

| | |
|---|---|
| ೧) ವಿಜ್ಞಾನಂ ಯಜ್ಞಂತನುತೇ; ಕರ್ಮಾಣಿ ಅಪಿಚ ತನುತೇ. | ೧) ಜ್ಞಾನವೆಂಬ ಗುಣವುಳ್ಳ ಜೀವನು ಯಾಗವನ್ನು ಆಚರಿಸುತ್ತಾನೆ; ಕರ್ಮ ಗಳನ್ನು ಕೂಡ ಆಚರಿಸುತ್ತಾನೆ. |
| ೨) ಸರ್ವೇದೇವಾಃ ವಿಜ್ಞಾನಂ ಬ್ರಹ್ಮ ಜ್ಯೇಷ್ಠ ಉಪಾಸತೇ. | ೨) ಎಲ್ಲಾ ದೇವತೆಗಳೂ ಜೀವವನ್ನು ಪ್ರಕೃತಿಗಿಂತ ಶ್ರೇಷ್ಠವೆಂದು ಉಪಾಸನೆ ಮಾಡುತ್ತಾರೆ. |
| ೩) ವಿಜ್ಞಾನಂ ಬ್ರಹ್ಮ ಇತಿ ವೇದ ಚೇತ್, ತಸ್ಮಾತ್ ನ ಪ್ರಮಾದ್ಯತಿ | ೩) ಜೀವನೆಂಬ ಬ್ರಹ್ಮನನ್ನು ಉಪಾ ಸನೆ ಮಾಡಿದರೆ ಆ ಜೀವನ ದೆಸೆಯಿಂದ |

| | |
|---|---|
| ಚೇತ್, ಶರೀರೇ ಪಾಪ್ಮನಃ ಹಿತ್ವಾ ಸರ್ವಾನ್ ಕಾಮಾನ್ ಸಮಶ್ನುತೇ | ಸಾಯುವ ಕಾಲದಲ್ಲಿ ಸ್ಮರಣೆಯುಂಟಾಗುವವರೆಗೂ ಅಜಾಗರೂಕತೆ ಮಾಡದಿದ್ದರೆ ದೇಹದಲ್ಲಿರುವಾಗಲೇ ಪೂರ್ವೋತ್ತರ ಪಾಪ ಸಂಬಂಧ ಲೇಶವಿಲ್ಲದವನಾಗಿ ಎಲ್ಲಾ ಕಲ್ಯಾಣ ಗುಣಗಳನ್ನೂ ಅನುಭವಿಸುತ್ತಾನೆ. |
| ೪) ಯಃ ಪೂರ್ವಸ್ಯ ಆತ್ಮಾ ಏಷ ಏವ ತಸ್ಯ ಶಾರೀರ ಆತ್ಮಾ. | ೪) ಯಾವನು ಮನೋಮಯನಿಗೆ ಆತ್ಮನೋ ಈತನೇ ಆ ವಿಜ್ಞಾನಮಯನಾದ ಜೀವನಿಗೂ ಪ್ರತಿ ಸಂಬಂಧಿಯಾದ ಆತ್ಮನು. |
| ೫) ತಸ್ಮಾತ್ ಏತಸ್ಮಾತ್ ವಿಜ್ಞಾನಮಯಾತ್ ಅನ್ಯಃ ಆನಂದಮಯಃ ಅಂತರಾತ್ಮಾ; ತೇನ ಏಷಃ ಪೂರ್ಣಃ. | ೫) ಆ ಈ ಜೀವನಿಗಿಂತಲೂ ಬೇರೆಯಾದ ಆನಂದಮಯನು ಅಂತರಾತ್ಮನು; ಅವನಿಂದ ಈತನು ವ್ಯಾಪಿಸಲ್ಪಟ್ಟಿರುವನು. |
| ೬) ಸ ಏಷಃ ಪುರುಷಃ ವಿಧಃ ಏವ; ತಸ್ಯ ಪುರುಷವಿಧತಾಂ ಅನು ಅಯಂ ಪುರುಷವಿಧಃ. | ೬) ಆ ಈತನೂ ಪುರುಷದ ಆಕಾರವುಳ್ಳವನೇ; ಆ ವಿಜ್ಞಾನಮಯ ಪುರುಷಾಕಾರತ್ವವನ್ನು ಅನುಸರಿಸಿ ಈತನೂ ಪುರುಷಾಕಾರನು. |
| ೭) ತಸ್ಯ ಪ್ರಿಯಮೇವ ಶಿರಃ; ಮೋದಃ ದಕ್ಷಿಣಃ ಪಕ್ಷಃ; ಪ್ರಮೋದಃ ಉತ್ತರಃ ಪಕ್ಷಃ; ಆನಂದಃ ಆತ್ಮಾ; ಬ್ರಹ್ಮ ಪುಚ್ಛಂ ಪ್ರತಿಷ್ಠಾ; | ೭) ಆ ಆನಂದಮಯನಿಗೆ ಇಷ್ಟವಸ್ತುಗಳ ದರ್ಶನದಿಂದುಂಟಾಗುವ ಸುಖವೆಂಬ ಪ್ರಿಯವೇ ತಲೆ; ಇಷ್ಟವಸ್ತು ಲಾಭದಿಂದ ಬರುವ ಸುಖವೇ ಬಲತೋಳು; ಅವುಗಳ ಉಪಯೋಗದಿಂದ ಬರುವ ಸುಖವೇ ಎಡತೋಳು; |

ಲ) ತದಪಿಏಷ ಶ್ಲೋಕೋಭವತಿ. | ಹೆಚ್ಚಾದ ಸುಖವೆಂಬ ಆನಂದವೇ ಆತ್ಮಾ, ಬ್ರಹ್ಮವೇ ಆಶ್ರಯ. (ಇಲ್ಲಿ ಲ) ಶಿರಸ್ಸು, ಪಕ್ಷ, ಪುಚ್ಛಗಳುಳ್ಳ ಅನಂದಮಯ ಬ್ರಹ್ಮ ವಿಷಯ ಶ್ಲೋಕವು ಹೇಳಲ್ಪಡುತ್ತದೆ.

ಆನಂದಮಯನೂ ಬ್ರಹ್ಮನೂ ಒಂದೇ ಆದರೂ "ಬ್ರಹ್ಮತ್ವ"ವೆಂಬ ಭಾವದಿಂದ ಪುಚ್ಛವೆಂದೂ – "ಆನಂದತ್ವ"ವೆಂಬ ರೂಪದಿಂದ ಆತ್ಮ ಶಬ್ದದಿಂದ ಬೋಧಿಸಲ್ಪಡುವ ಶರೀರ ಮಧ್ಯ ಭಾಗವೆಂದೂ ನಿರೂಪಣೆ ಮಾಡಲ್ಪಟ್ಟಿದೆ. ಆನಂದ ರೂಪಿಯಾದ ಬ್ರ ಹ್ಮ ನಿ ಗೆ-ಪ್ರಿಯ, ಮೋದ ಪ್ರಮೋದಗಳೆಂಬ ಧರ್ಮವಾದ ಆನಂದ ಪ್ರಚುರತ್ವವಿರುವುದರಿಂದ, ಆನಂದಮಯನೆಂಬ ಹೆಸರೂ ಹೇಳಲ್ಪಟ್ಟಿದೆ.

## ಆರನೆಯ ಅನುವಾಕ

**ಮೂಲ ಮಂತ್ರ:**—ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದಚೇತ್ । ಅಸ್ತಿ ಬ್ರಹ್ಮೇತಿ ಚೇದ್ವೇದ । ಸಂತಮೇನಂ ತತೋ ವಿದುರಿತಿ । ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ। ಅಥಾತೋನು ಪ್ರಶ್ನಾಃ। ಉತಾವಿದ್ವಾನಮುಂ ಲೋಕಂ ಪ್ರೇತ್ಯ । ಕಶ್ಚನಗಚ್ಛತೀ (೩)। ಆಹೋ ವಿದ್ವಾನಮುಂಲೋಕಂ ಪ್ರೇತ್ಯೆ । ಕಶ್ಚಿತ್ಸಮಶ್ನುತಾ ೩ ಉ ।

**ಅರ್ಥ**—ಬ್ರಹ್ಮವೇದ ಇತಿ-ಬ್ರಹ್ಮಜ್ಞಾನವೆಂಬುದು, ಅಸತ್‌ಚೇತ್-ಇಲ್ಲದಿದ್ದರೆ, ಸಃ-ಬ್ರಹ್ಮಜ್ಞಾನವಿಲ್ಲದಾತನು, ಅಸನ್ನೇವಭವತಿ-ಇಲ್ಲವೆನಿಸಿ

ಕೊಳ್ಳುವನು. (ಬದುಕಿದ್ದರೂ ಸತ್ತವನೆಂದು ಭಾವ). ಬ್ರಹ್ಮವೇದ ಇತಿ–ಬ್ರಹ್ಮ ಜ್ಞಾನವೆಂಬುದು ಅಸ್ತಿ ಚೇತ್-ಇದ್ದರೆ, ತತಃ–ಆ ಕಾರಣದಿಂದ, ಏನಂ–ಈತನನ್ನು, ಸಂತಂ ವಿದುಃ–ಇರುವನೆಂದು ತಿಳಿಯುತ್ತಾರೆ. ತಸ್ಯ-ಆ ಆನಂದಮಯನಿಗೆ, ಯಃ–ಯಾವ ಬ್ರಹ್ಮವು, ಪೂರ್ವಸ್ಯ ಆತ್ಮಾ–ವಿಜ್ಞಾನಮಯನಿಗೆ ಆತ್ಮವೋ, ಏಷಃ ಏವ–ಈ ಆನಂಡಮಯವಾದ ಬ್ರಹ್ಮವೇ, ಶಾರೀರಃ ಆತ್ಮಾ–ಶರೀರಕ್ಕೆ ಪ್ರತಿಸಂಬಂಧಿಯಾದ ಅಂತರಾತ್ಮನು. (ಆನಂದಮಯನಿಗೆ ಆನಂದಮಯನೇ ಆತ್ಮನು, ಇವನಿಗೆ ಬೇರೊಬ್ಬ ಆತ್ಮನು ಇಲ್ಲ).

ಅನ್ನಮಯ, ಪ್ರಾಣಮಯ, ಮನೋಮಯ ವಿಜ್ಞಾನಮಯಗಳಿಗಿಂತ ಬೇರೆಯಾದ ಅಂತರಾತ್ಮನೊಬ್ಬನು ಇರುವನೆಂದು ಹೇಳಿರುವಂತೆ ಆನಂದಮಯನಿಗಿಂತ ಬೇರೆಯಾದ ಮತ್ತೊಬ್ಬನು ಅಂತರಾತ್ಮನು ಇರುವನೆಂದು ಹೇಳದೇ ಇರುವುದರಿಂದ ಈ ಆನಂದಮಯನೇ ಎಲ್ಲಕ್ಕೂ ಅಂತರಾತ್ಮನು, ಎಂದು ತಾತ್ಪರ್ಯ. "ಬ್ರಹ್ಮ ವಿದಾಪ್ನೋತಿಪರಂ" ಎಂಬ ವಾಕ್ಯದಲ್ಲಿ "ಆಪ್ನೋತಿ" ಎಂಬ ಶಬ್ದದಿಂದ ಬೋಧಿಸಲ್ಪಡುವ ಪ್ರಾಪ್ತಿಯನ್ನು ವಿಶದಪಡಿಸಲು ಪ್ರಾಪ್ತವಿಷಯಕ ಪ್ರಶ್ನೆಗಳು ತಿಳಿಸಲ್ಪಡುತ್ತವೆ.

**ಅರ್ಥ**—ಅಥ-ಬಳಿಕ, ಅತಃ–ಆದಕಾರಣ, ಅನುಪ್ರಶ್ನಾಃ–ಬ್ರಹ್ಮಪ್ರಾಪ್ತಿಯ ವಿಷಯದಲ್ಲಿ ಈ ವಿಧವಾದ ಪ್ರಶ್ನೆಗಳು (ಉದ್ಭವಿಸಿವೆ. ಕಶ್ಚನ ವಿದ್ವಾನ್–ಹೃದಯದಲ್ಲಿರುವ ಬ್ರಹ್ಮವನ್ನು ಉಪಾಸನೆ ಮಾಡತಕ್ಕವನೊಬ್ಬನು, ಪ್ರೇತ್ಯ–ಈ ಶರೀರವನ್ನು ಬಿಟ್ಟು, ಅಮುಂಲೋಕಂ–ಪರಮವ್ಯೋಮವೆಂದ ಹೇಳಲ್ಪಡುವ ವೈಕುಂಠಲೋಕವನ್ನು, ಗಚ್ಛತಿ ಉತಾ-ಸೇರುತ್ತಾನೆಯೋ ? ಅಥವಾ ಇಲ್ಲಿಯೇ ಬ್ರಹ್ಮನನ್ನು ಅನುಭವಿಸುತ್ತಾನೆಯೋ ? ಆಹೋ–ಅಥವಾ ಕಶ್ಚನವಿದ್ವಾನ್-ಬ್ರಹ್ಮೋಪಾಸಕನೊಬ್ಬನು, ಪ್ರೇತ್ಯ–ಶರೀರವನ್ನು ಬಿಟ್ಟು ಅಮುಂ ಲೋಕಂ ಸಮಶ್ನುತೇ–ಅರ್ಚಿರಾದಿಮಾರ್ಗದಲ್ಲಿ ಹೋಗಿ ಬ್ರಹ್ಮನನ್ನು ಅನುಭವಿಸುತ್ತಾನೆಯೋ, ಉ-ಬ್ರಹ್ಮನಲ್ಲಿ ಐಕ್ಯನಾಗುತ್ತಾನೆಯೋ ? (ಆನಂದಮಯನೇ ಎಲ್ಲಕ್ಕೂ ಅಂತರಾತ್ಮನೆಂದು ಉಪಾಸನೆ ಮಾಡತಕ್ಕವನು ಭೋಜ್ಯನಾದ ಈ ಪರಮಾತ್ಮನನ್ನು ದೇಶವಿಶೇಷದಲ್ಲಿ ಅನುಭವಿಸುವನೋ, ಅಥವಾ ಆ ಪರಬ್ರಹ್ಮನೊಡನೆ ಸೇರಿ ಹೋಗುತ್ತಾನೆಯೋ, ಎಂಬ ಪ್ರಶ್ನೆಯೊಂದು ಅರ್ಥ

ಬಲದಿಂದ ಬರತಕ್ಕುದು. ಮತ್ತು ಅರ್ಚಿರಾದಿಗತಿಯಲ್ಲಿ ಹೋಗಿ ದೇಶವಿಶೇಷದಲ್ಲಿ ಅನುಭವಿಸುವನೋ ಅಥವಾ ಆ ಗತಿಯನ್ನೇ ಅಪೇಕ್ಷಿಸದೇ ಈ ಶರೀರದೊಳಗೇ ಅನುಭವಿಸುವನೋ ಎಂಬುದು ಮತ್ತೊಂದು ಪ್ರಶ್ನೆ. ಈ ವಿಧವಾದ ಪ್ರಶ್ನೆಗಳು "ಪ್ರಶ್ನಾಃ" ಎಂಬ ಬಹುವಚನದಿಂದ ತಿಳಿದು ಬರುತ್ತದೆ.)

ಈ ಪ್ರಶ್ನೆಗಳಿಗೆ ಸಮಾಧಾನವನ್ನು ಹೇಳುವ ಉದ್ದೇಶದಿಂದ "ಜಗತ್ಕಾರಣ ವಸ್ತುವೇ ಹೊಂದಲ್ಪಡತಕ್ಕುದು" ಎಂಬುದನ್ನು ತಿಳಿಯಪಡಿಸಲು ಪರಮಾತ್ಮನಲ್ಲಿರುವ ಜಗತ್ಕಾರಣತ್ವವನ್ನು ಹೇಳಲಾಗುವುದು.

**(ನಾ. ಅರ್ಥ)**

| | |
|---|---|
| ೧) ಬ್ರಹ್ಮವೇದ ಇತಿ ಅಸತ್-ಚೇತ್ ಸಃ ಅಸನ್ನೇವ ಭವತಿ. | ೧) ಬ್ರಹ್ಮಜ್ಞಾನವೆಂಬುದು ಇಲ್ಲದಿದ್ದರೆ ಆ ಬ್ರಹ್ಮಜ್ಞಾನವಿಲ್ಲದವನು ಏನೂ ಇಲ್ಲವೆನಿಸಿಕೊಳ್ಳುವನು. (ಬದುಕಿದ್ದರೂ ಸತ್ತವನೆಂದು ಭಾವ) |
| ೨) ಬ್ರಹ್ಮವೇದ ಇತಿ ಅಸ್ತಿ ಚೇತ್, ತತಃ ಏನಂ ಸಂತಂ ವಿದುಃ. | ೨) ಬ್ರಹ್ಮಜ್ಞಾನವೆಂಬುದು ಇದ್ದರೆ, ಆ ಕಾರಣದಿಂದ ಈತನನ್ನು ಇರುವನೆಂದು ತಿಳಿಯುತ್ತಾರೆ. |
| ೩) ತಸ್ಯ ಯಃ ಪೂರ್ವಸ್ಯ ಆತ್ಮಾ ಏಷ ಏವ ಶಾರೀರ ಆತ್ಮಾ. | ೩) ಆ ಆನಂದಮಯನಿಗೆ ಯಾವ ಬ್ರಹ್ಮವು ವಿಜ್ಞಾನಮಯನಿಗೆ ಆತ್ಮವೋ ಈ ಆನಂದಮಯ ಬ್ರಹ್ಮವೇ ಶರೀರಕ್ಕೆ ಪ್ರತಿಸಂಬಂಧಿಯಾದ ಅಂತರಾತ್ಮನು (ಆನಂದಮಯನಿಗೆ ಆನಂದಮಯನೇ ಅತ್ಮನು ; ಇವನಿಗೆ ಬೇರೊಬ್ಬ ಆತ್ಮನು ಇಲ್ಲ.) |

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯಗಳಿಗಿಂತ ಬೇರೆಯಾದ ಅಂತರಾತ್ಮನೊಬ್ಬನು ಇರುವನೆಂದು ಹೇಳಿರುವಂತೆ ಆನಂದಮಯನಿಗಿಂತ ಬೇರೆಯಾದ ಮತ್ತೊಬ್ಬನು ಅಂತರಾತ್ಮನು ಇರುವನೆಂದು

ಹೇಳದೇ ಇರುವವುದರಿಂದ ಆ ಆನಂದಮಯನೇ ಎಲ್ಲಕ್ಕೂ ಅಂತರಾತ್ಮನು ಎಂದು ತಾತ್ಪರ್ಯ. "ಬ್ರಹ್ಮ ವಿದಾಪ್ನೋತಿ ಪರಂ" ಎಂಬ ವಾಕ್ಯದ "ಆಪ್ನೋತಿ" ಎಂಬ ಶಬ್ದದಿಂದ ಬೋಧಿಸಲ್ಪಡುವ ಪ್ರಾಪ್ತಿಯನ್ನು ವಿಶದಪಡಿಸಲು ಪ್ರಾಪ್ತಿ ವಿಷಯ ಪ್ರಶ್ನೆಗಳು ತಿಳಿಸಲ್ಪಡುತ್ತವೆ.

| | |
|---|---|
| ೪) ಅಥ ಅತಃ ಅನು ಪ್ರಶ್ನಾಃ | ೪) ಬಳಿಕ ಆದಕಾರಣ ಬ್ರಹ್ಮ ಪ್ರಾಪ್ತಿಯ ವಿಷಯದಲ್ಲಿ, ಈ ವಿಧವಾದ ಪ್ರಶ್ನೆಗಳು (ಉದ್ಭವಿಸಿವೆ). |
| ೫) ಕಶ್ಚನ ವಿದ್ವಾನ್ ಪ್ರೇತ್ಯ ಅಮುಂ ಲೋಕಂ ಗಚ್ಛತಿ ಉತಾ? | ೫) ಹೃದಯದಲ್ಲಿರುವ ಬ್ರಹ್ಮನನ್ನು ಉಪಾಸನೆ ಮಾಡತಕ್ಕವನೊಬ್ಬನು ಈ ಶರೀರವನ್ನು ಬಿಟ್ಟು ಪರಮ ವ್ಯೋಮವೆಂದು ಹೇಳಲ್ಪಡುವ ವೈಕುಂಠ ಲೋಕವನ್ನು ಸೇರುತ್ತಾನೆಯೋ (ಅಥವ ಇಲ್ಲಿಯೇ ಬ್ರಹ್ಮನನ್ನು ಅನುಭವಿಸುತ್ತಾನೆಯೋ). |
| ೬) ಅಹೋ, ಕಶ್ಚನ ವಿದ್ವಾನ್ ಪ್ರೇತ್ಯ ಅಮುಂ ಲೋಕಂ ಸಮಶ್ನುತೇ-ಉ. | ೬) ಅಥವಾ ಬ್ರಹ್ಮೋಪಾಸಕನೊಬ್ಬನು ಶರೀರವನ್ನು ಬಿಟ್ಟು. ಅರ್ಚಿರಾದಿ ಮಾರ್ಗದಲ್ಲಿ ಹೋಗಿ ಬ್ರಹ್ಮವನ್ನು ಅನುಭವಿಸುತ್ತಾನೆಯೋ ? ಬ್ರಹ್ಮದಲ್ಲಿ ಐಕ್ಯವಾಗುತ್ತಾನೆಯೋ : |

(ಆನಂದಮಯನೇ ಎಲ್ಲಕ್ಕೂ ಅಂತರಾತ್ಮನೆಂದು ಉಪಾಸನೆ ಮಾಡತಕ್ಕವನು, ಭೋಗ್ಯನಾದ ಪರಮಾತ್ಮನನ್ನು ದೇಶವಿಶೇಷದಲ್ಲಿ ಅನುಭವಿಸುವನೋ ಅಥವಾ ಆ ಪರಬ್ರಹ್ಮನೊಡನೆ ಸೇರಿಹೋಗುತ್ತಾನೆಯೋ ಎಂಬ ಪ್ರಶ್ನೆಯೊಂದೇ ಅರ್ಥಬಲದಿಂದ ಬರತಕ್ಕದು; ಮತ್ತು ಅರ್ಚಿರಾದಿ ಗತಿಯಲ್ಲಿ ಹೋಗಿ ದೇಶವಿಶೇಷದಲ್ಲಿ ಅನುಭವಿಸುವನೋ ಅಥವಾ ಆ ಗತಿಯನ್ನೇ ಅಪೇಕ್ಷಿಸದೇ ಈ ಶರೀರದೊಳಗೇ ಅನುಭವಿಸುವನೋ ಎಂಬುದು ಮತ್ತೊಂದು ಪ್ರಶ್ನೆ. ಈ ವಿಧವಾದ ಪ್ರಶ್ನೆಗಳು "ಪ್ರಶ್ನಾಃ" ಎಂಬ ಬಹುವಚನದಿಂದ ತಿಳಿದುಬರುತ್ತದೆ.)

ಈ ಪ್ರಶ್ನೆಗಳಿಗೆ ಸಮಾಧಾನವನ್ನು ಹೇಳುವ ಉದ್ದೇಶದಿಂದ “ಜಗತ್ಕಾರಣ ವಸ್ತುವೇ ಹೊಂದಲ್ಪಡತಕ್ಕದು” ಎಂಬುದನ್ನು ತಿಳಿಯಪಡಿಸಲು ಪರಮಾತ್ಮನಲ್ಲಿರುವ ಜಗತ್ಕಾರಣತ್ವವನ್ನು ಹೇಳಲಾಗುವುದು.

**ಮೂಲ ಮಂತ್ರ :**—ಸೋಽಕಾಮಯತ । ಬಹುಸ್ಯಾಂಪ್ರಜಾಯೇ
ಯೇತಿ । ಸತಪೋಽತಪ್ಯತ । ಸತಪಸ್ತಪ್ತ್ವಾ । ಇದಗ್ಂ
ಸರ್ವ ಮಸೃಜತ । ಯದಿದಂಕಿಂಚ । ತತ್ಸೃಷ್ಟ್ವಾ । ತದೇ
ವಾನುಪ್ರಾವಿಶತ್ । ತದನುಪ್ರವಿಶ್ಯ । ಸಚ್ಚತ್ಯಚ್ಚಾಭವತ್ ।
ನಿರುಕ್ತಂಚಾ ನಿರುಕ್ತಂಚ । ನಿಲಯನಂಚಾನಿಲಯನಂಚ ।
ವಿಜ್ಞಾನಂ ಚಾವಿಜ್ಞಾನಂಚ । ಸತ್ಯಂಚಾನೃತಂಚ ಸತ್ಯಮ
ಭವತ್ । ಯದಿದಂಕಿಂಚ । ತತ್ಸತ್ಯ ಮಿತ್ಯಾಚಕ್ಷತೇ ।
ತದಪ್ಯೇಷ ಶ್ಲೋಕೋ ಭವತಿ.

**ಅರ್ಥ :**—ಸಃ-ಆ ಪರಮಾತ್ಮನು. ಬಹುಸ್ಯಾಂ-ಬಹುವಾಗಿ ಆಗುವೆನು, ಪ್ರಜಾಯೇಯ-ಅದಕ್ಕಾಗಿ ಪ್ರಜೆಗಳನ್ನು ಸೃಷ್ಟಿಸುವೆನು, ಇತಿ ಅಕಾಮಯತ-ಹೀಗೆಂದು ಆಲೋಚಿಸಿದನು. ಸಃ-ಆ ಪರಮಾತ್ಮನು ತಪಃ-ಸೃಷ್ಟಿಯ ಆಲೋಚನೆಯನ್ನು, ತಪ್ತ್ವಾ-ಮಾಡಿ. ಇದಂ ಸರ್ವಂ-ಈ ಜಗತ್ತನ್ನೆಲ್ಲಾ, ಅಸೃಜತ-ಸೃಷ್ಟಿಸಿದನು. ಯತ್ ಕಿಂಚ ಇದಂ ತತ್-ಉಳಿದಿರುವ ಈ ಜಗತ್ತನ್ನು, ಸೃಷ್ಟ್ವಾ-ಸೃಷ್ಟಿ ಮಾಡಿ, ತದೇವ-ಆ ಜಗತ್ತನ್ನೇ, ಅನುಪ್ರಾವಿಶತ್-ಒಳ ಹೊಕ್ಕನು. (ಹಸುವಿನ ಗರ್ಭದಲ್ಲಿರುವ ಕರುವಿನಂತೆ ಪ್ರಪಂಚದೊಳಗೇ ಸೇರಿದನು. ಪರಮಾಣು, ಆಕಾಶ, ಘಟ, ಮೊದಲಾದುವುಗಳಲ್ಲಿ “ದ್ರವ್ಯತ್ವ”

ವೆಂಬ ಜಾತಿಯು ಪೂರ್ಣವಾಗಿರುವಂತೆ ಬ್ರಹ್ಮನು ಎಲ್ಲಾ ಪದಾರ್ಥಗಳಲ್ಲಿಯೂ ಪೂರ್ಣವಾಗಿ ವ್ಯಾಪಿಸಿರುವನೆಂದು ತಾತ್ಪರ್ಯ).

ತತ್ ಅನುಪ್ರವಿಶ್ಯ-ಚೇತನಾ ಚೇತನಾತ್ಮಕವಾದ ಆ ಪ್ರಪಂಚವನ್ನು ಒಳಹೊಕ್ಕು, ಸತ್ ಚ-ಯಾವಾಗಲೂ ಒಂದೇರೂಪದಿಂದ ಇರತಕ್ಕ "ಚೇತನ" ಶಬ್ದವಾಚ್ಯನೂ, ತ್ಯತ್ ಚ-ಸೂಕ್ಷ್ಮಾವಸ್ಥೆಯನ್ನು ಬಿಟ್ಟು ಸ್ಥೂಲಾವಸ್ಥೆಯನ್ನು ಪಡೆಯತಕ್ಕ "ಅಚೇತನ" ಶಬ್ದವಾಚ್ಯನೂ, ಅಭವತ್-ಆದನು. ನಿರುಕ್ತಂ ಚ-ಜಾತಿಗುಣಕ್ರಿಯೆ ಮೊದಲಾದ ಲಕ್ಷಣಗಳುಳ್ಳ, ಅಚೇತನ ಶಬ್ದ ವಾಚ್ಯನೂ, ಅನಿರುಕ್ತಂ ಚ-ಜಾತಿಗುಣಕ್ರಿಯಾದಿಗಳಿಲ್ಲದ ಚೇತನ ಶಬ್ದವಾಚ್ಯನೂ, ಅಭವತ್-ಆದನು. ನಿಲಯನಂ ಚ-ಚೇತನವರ್ಗವನ್ನಾಶ್ರಯಿಸಿರುವ ಅಚೇತನ ಶಬ್ದವಾಚ್ಯನೂ, ಅನಿಲಯನಂ ಚ-ಚೇತನ ಶಬ್ದವಾಚ್ಯನೂ, ವಿಜ್ಞಾನಂ ಚ-ಜ್ಞಾನ ಸ್ವರೂಪನಾದ ಚೇತನಶಬ್ದವಾಚ್ಯನೂ, ಅವಿಜ್ಞಾನಂ ಚ-ಜಡಸ್ವರೂಪವಾದ ಅಚೇತನಶಬ್ದವಾಚ್ಯನೂ, ಸತ್ಯಂ ಚ-ನಿರ್ವಿಕಾರವಾದ ಚೇತನಶಬ್ದ ವಾಚ್ಯನೂ, ಅನೃತಂ ಚ-ವಿಕಾರಾಶ್ರಯವಾದ ಅಚೇತನ ಶಬ್ದವಾಚ್ಯನೂ ಅಭವತ್-ಆದನು. ಸತ್ಯಂ ಅಭವತ್-ಹೀಗಿದ್ದರೂ ಬ್ರಹ್ಮನು ನಿರ್ವಿಕಾರನೂ ಸತ್ಯ ಶಬ್ದವಾಚ್ಯನೂ ಆಗಿದ್ದನು. ಯತ್ ಕಿಂ ಚ ಇದಂ ತತ್-ಬ್ರಹ್ಮನಿಂದ ಆತ್ಮವಾಗಿ ಪ್ರವೇಶಿಸಲ್ಪಟ್ಟ ಈ ಚೇತನಾಚೇತನಾತ್ಮಕ ಜಗತ್ತನ್ನು, ಸತ್ಯಂ-ಸತ್ಯಶಬ್ದ ವಾಚ್ಯವಾದ ಪರಬ್ರಹ್ಮನನ್ನಾಗಿಯೇ, ಆಚಕ್ಷತೇ-ಪರಾಶರರೇ ಮೊದಲಾದ ವೇದಾಂತಿಗಳು ಹೇಳುವರು.

ದೇವ, ಮನುಷ್ಯ ಮೊದಲಾದ ಶಬ್ದಗಳೆಲ್ಲಾ ಶರೀರವನ್ನು ಮಾತ್ರ ಬೋಧಿಸದೆ ಅದರೊಳಗಿರುವ ಆತ್ಮನನ್ನೇ ಮುಖ್ಯವೃತ್ತಿಯಿಂದ ಬೋಧಿಸುವಂತೆ ಚೇತನಾಚೇತನ ವಾಚಕವಾದ ಶಬ್ದಗಳೆಲ್ಲಾ ಮುಖ್ಯವೃತ್ತಿಯಿಂದ ಅವುಗಳಿಗೆ ಅಂತರಾತ್ಮನಾದ ಪರಮಾತ್ಮನನ್ನೇ ಬೋಧಿಸುವುವು ಎಂದು ವೇದಾಂತ ಜ್ಞಾನವನ್ನುಳ್ಳ ಪರಾಶರಾದಿಗಳು ಹೇಳುವರು-ಎಂದು ತಾತ್ಪರ್ಯ. ತದಪಿ-ಆ ವಿಷಯದಲ್ಲಿಯೂ, ಏಷಃ ಶ್ಲೋಕಃ ಭವತಿ-ಈ ಶ್ಲೋಕ ಇರುತ್ತದೆ.

| | |
|---|---|
| ೧) ಸಃ ಬಹುಸ್ಯಾಂ; ಪ್ರಜಾಯೇಯ ಇತಿ ಅಕಾಮಯತ. | ೧) ಆ ಪರಮಾತ್ಮನು ಬಹುವಾಗಿ ಆಗುವೆನು ಅದಕ್ಕಾಗಿ ಪ್ರಜೆಗಳನ್ನು |

ಸೃಷ್ಟಿಸುವೆನು ಹೀಗೆಂದು ಆಲೋಚಿಸಿದನು.

೨) ಸಃ ತಪಃ ತಪ್ತ್ವಾ ಇದಂ ಸರ್ವಂ ಅಸೃಜತ.

೨) ಆ ಪರಮಾತ್ಮನು ಸೃಷ್ಟಿಯ ಆಲೋಚನೆಯನ್ನು ಮಾಡಿ ಈ ಜಗತ್ತೆಲ್ಲವನ್ನೂ ಸೃಷ್ಟಿಸಿದನು.

೩) ಯತ್ ಕಿಂಚ ಇದಂ, ತತ್ ಸೃಷ್ಟ್ವಾ ತದೇವ ಅನುಪ್ರಾವಿಶತ್.

೩) ಉಳಿದಿರುವ ಈ ಜಗತ್ತನ್ನು ಸೃಷ್ಟಿ ಮಾಡಿ ಆ ಜಗತ್ತನ್ನೇ ಒಳಹೊಕ್ಕನು.

(ಹಸುವಿನ ಗರ್ಭದಲ್ಲಿರುವ ಕರುವಿನಂತೆ ಪ್ರಪಂಚದೊಳಗೆ ಸೇರಿದನು. ಪರಮಾಣು, ಆಕಾಶ, ಘಟ ಮೊದಲಾದವುಗಳಲ್ಲಿ "ದ್ರವ್ಯತ್ವವೆಂಬ ಜಾತಿಯು ಪೂರ್ಣವಾಗಿರುವಂತೆ ಬ್ರಹ್ಮನು ಎಲ್ಲಾ ಪದಾರ್ಥಗಳಲ್ಲಿಯೂ ಪೂರ್ಣವಾಗಿ ವ್ಯಾಪಿಸಿರುವನೆಂದು ತಾತ್ಪರ್ಯ).

೪) ತತ್ ಅನುಪ್ರವಿಶ್ಯ ಸತ್ ಚ, ತ್ಯತ್ ಚ ಅಭವತ್.

೪) ಚೇತನಾ ಚೇತನಾತ್ಮಕವಾದ ಆ ಪ್ರಪಂಚವನ್ನು ಒಳಹೊಕ್ಕು ಯಾವಾಗಲೂ ಒಂದೇ ರೂಪದಿಂದ ಇರತಕ್ಕ "ಚೇತನ" ಶಬ್ದವಾಚ್ಯನೂ, ಸೂಕ್ಷ್ಮಾವಸ್ಥೆಯನ್ನು ಬಿಟ್ಟು. ಸ್ಥೂಲಾವಸ್ಥೆಯನ್ನು ಪಡೆಯತಕ್ಕ "ಅಚೇತನ" ಶಬ್ದವಾಚ್ಯನೂ ಆದನು.

೫) ನಿರುಕ್ತಂಚ ಅನಿರುಕ್ತಂಚ ಅಭವತ್

೫) ಜಾತಿ ಗುಣಕ್ರಿಯೆ ಮೊದಲಾದ ಲಕ್ಷಣಗಳುಳ್ಳ "ಅಚೇತನ" ಶಬ್ದವಾಚ್ಯನೂ" ಜಾತಿಗುಣ ಕ್ರಿಯಾದಿಗಳಿಲ್ಲದ ಚೇತನ ಶಬ್ದವಾಚ್ಯನೂ ಆದನು.

೬) ನಿಲಯನಂಚ ಅನಿಲಯನಂಚ; ವಿಜ್ಞಾನಂಚ ಅವಿಜ್ಞಾ

೬) ಚೇತನವರ್ಗವನ್ನು ಆಶ್ರಯಿಸಿರುವ ಅಚೇತನ ಶಬ್ದವಾಚ್ಯನೂ,

ನಂಚ, ಸತ್ಯಂಚ ಅನೃತಂಚ, ಅಭವತ್. | ಜ್ಞಾನಸ್ವರೂಪವಾದ ಚೇತನ ಶಬ್ದ ವಾಚ್ಯನೂ ಜಡಸ್ವರೂಪವಾದ ಅಚೇತನ ವಾಚ್ಯನೂ ; ನಿರ್ವಿಕಾರವಾದ ಚೇತನ ಶಬ್ದವಾಚ್ಯನೂ ವಿಕಾರಾಶ್ರಯವಾದ ಅಚೇತನ ಶಬ್ಧವಾಚ್ಯನೂ ಅದನು.

೭) ಸತ್ಯಂ ಅಭವತ್; ಯತ್ ಕಿಂಚ ಇದಂ, ತತ್ ಸತ್ಯಂ ಆಚಕ್ಷತೇ. | ೭) ಹೀಗಿದ್ದರೂ ಬ್ರಹ್ಮನು ನಿರ್ವಿಕಾರನೂ ಸತ್ಯ ಶಬ್ಧವಾಚ್ಯನೂ ಆಗಿದ್ದನು; ಬ್ರಹ್ಮನಿಂದ ಆತ್ಮವಾಗಿ ಪ್ರವೇಶಿಸಲ್ಪಟ್ಟ ಈ ಚೇತನಾ ಚೇತನಾತ್ಮಕ ಜಗತ್ತನ್ನು ಸತ್ಯಶಬ್ದವಾಚ್ಯನಾದ ಪರಬ್ರಹ್ಮನನ್ನಾಗಿಯೇ ಪರಾಶರರೇ ಮೊದಲಾದ ವೇದಾಂತಿಗಳು ಹೇಳುವರು.

(ದೇವ ಮನುಷ್ಯ ಮೊದಲಾದ ಶಬ್ದಗಳೆಲ್ಲಾ ಶರೀರವನ್ನು ಮಾತ್ರ ಬೋಧಿಸದೆ ಅದರೊಳಗಿರುವ ಆತ್ಮನನ್ನೇ ಮುಖ್ಯ ವೃತ್ತಿಯಿಂದ ಬೋಧಿಸುವಂತೆ ಚೇತನಾ ಚೇತನವಾಚಕವಾದ ಶಬ್ದಗಳೆಲ್ಲವೂ ಮುಖ್ಯವೃತ್ತಿಯಿಂದ ಅವುಗಳಿಗೆ ಅಂತರಾತ್ಮನಾದ ಪರಮಾತ್ಮನನ್ನೇ ಬೋಧಿಸುವುವು, ಎಂದು ವೇದಾಂತಜ್ಞಾನವನ್ನುಳ್ಳ ಪರಾಶರಾದಿಗಳು ಹೇಳುವರು ಎಂದು ತಾತ್ಪರ್ಯ).

೮) ತದಪಿ ಏಷಃ ಶ್ಲೋಕಃ ಭವತಿ. | ೮) ಆ ವಿಷಯದಲ್ಲಿಯೂ ಈ ಶ್ಲೋಕವು ಇರುತ್ತದೆ,

### ೭ನೆಯ ಅನುವಾಕ

**ಮೂಲಮಂತ್ರ:—ಅಸದ್ವಾ ಇದಮಗ್ರಆಸೀತ್ । ತತೋ ವೈ ಸದಜಾಯತ । ತದಾತ್ಮಾನಗ್ಂ ಸ್ವಯಮಕುರುತ । ತಸ್ಮಾ**

ತ್ತತ್ಸುಕೃತ ಮುಚ್ಯತ ಇತಿ । ಯದ್ವೈ ತತ್ಸುಕೃತಂ ।

ರಸೋವೈಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ

ಭವತಿ । ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಷ

ಆಕಾಶ ಆನಂದೋ ನಸ್ಯಾತ್ । ಏಷ ಹ್ಯೇವಾನಂದ

ಯಾತಿ । ಯದಾಹ್ಯೇ ವೈಷ ಏತಸ್ಮಿನ್ನದೃಶ್ಯೇಽ ನಾತ್ಮ್ಯೇಽ

ನಿರುಕ್ತ್ಯೇಽ ನಿಲಯನೇಽ ಭಯಂ ಪ್ರತಿಷ್ಠಾಂ ವಿಂದತೇ ।

ಅಥಸೋಽಭಯಂಗತೋ ಭವತಿ। ಯದಾಹ್ಯೇ ವೈಷ

ಏತಸ್ಮಿನ್ನುದರ ಮಂತರಂ ಕುರುತೇ। ಅಥ ತಸ್ಯ ಭಯಂ

ಭವತಿ। ತತ್ವೇವ ಭಯಂ ವಿದುಷೋ ಮನ್ವಾನಸ್ಯ । ತದ

ಪ್ಯೇಷ ಶ್ಲೋಕೋಭವತಿ ।

**ಅರ್ಥ :**—ಇದಂ-ದೊಡ್ಡದಾಗಿ ಕಾಣಿಸುತ್ತಿರುವ ಚೇತನಾ-ಚೇತನ ಶರೀರವುಳ್ಳ ಬ್ರಹ್ಮವು, ಅಸತ್ ವಾ-ಪ್ರಕಾಶಕ್ಕೆ ಬಾರದಿರುವ ನಾಮರೂಪವುಳ್ಳ ದ್ದಾಗಿ, ಅಗ್ರೇ-ಸೃಷ್ಟಿಗೆ ಮೊದಲು, ಆಸೀತ್-ಇತ್ತು. ತತಃ-ಆ ಬ್ರಹ್ಮನಿಂದ ಸತ್-ಅಭಿವ್ಯಕ್ತವಾದ ನಾಮರೂಪವುಳ್ಳ ಜಗತ್ತು, ಅಜಾಯತ ವೈ-ಉಂಟಾ ಯಿತು. ತತ್-ಆ ಬ್ರಹ್ಮವು, ಆತ್ಮಾನಂ-ತನ್ನನ್ನೇ ಉಪಾದಾನ ಕಾರಣ ವನ್ನಾಗಿ ಸ್ವೀಕರಿಸಿ, ಸ್ವಯಂ-ತಾನೇ ಅಕುರುತ-ಪ್ರಪಂಚವನ್ನುಂಟು ಮಾಡಿತು. ತಸ್ಮಾತ್-ಆದುದರಿಂದ, ತತ್-ಆ ಬ್ರಹ್ಮವು, ಸುಕೃತಂ ಇತಿ- ಕ್ಲೇಶವಿಲ್ಲದ ಕಾರ್ಯವೆಂದು, ಉಚ್ಯತೇ-ಹೇಳಲ್ಪಡುತ್ತದೆ. (ತನಗಿಂತ ಬೇರೆ

ಕಾರ್ಯವನ್ನು ನಿರ್ಮಿಸಿದರಲ್ಲವೇ ಕ್ಲೇಶವು, ತಾನೇ ಕಾರ್ಯವಾದುದರಿಂದ ಕ್ಲೇಶವಿಲ್ಲ ವೆಂದು ಭಾವವು).

ಯತ್ ತತ್ ಸುಕೃತಂ-ಯಾವ ಬ್ರಹ್ಮವು ಸುಕೃತವೆಂದು ಹೇಳ ಲ್ಪಟ್ಟಿತೋ, ಸಃ ರಸಃ ವೈ-ಅದೇ ಆನಂದವು. ರಸಂಲಬ್ಧ್ವಾ ಏವಹಿ-ಆ ಆನಂದ ಮಯನಾದ ಬ್ರಹ್ಮನನ್ನು ಹೊಂದಿ, ಅಯಂ-ಈ ಉಪಾಸಕನು, ಆನಂದೀ ಭವತಿ-ಆನಂದವುಳ್ಳವನಾಗುತ್ತಾನೆ. (ಜಗತ್ಕಾರಣನಾದ ಬ್ರಹ್ಮನು ಆನಂದ ಸ್ವರೂಪನಾಗಿರುವುದರಿಂದ ಉಪಾಸ್ಯನೂ ಪ್ರಾಪ್ಯನೂ ಆಗಿರಲು ಅರ್ಹನಾಗಿರು ತ್ತಾನೆಂದು ಭಾವ) ಏಷಃ ಆಕಾಶಃ ಆನಂದಃ ಯದಿ ನ ಸ್ಯಾತ್-ಅಪರಿಚ್ಛಿನ್ನಾ ನಂದರಸನಾದ ಪರಮಾತ್ಮನಿಲ್ಲದಿದ್ದರೆ, ಕಃ-ಯಾವನು ತಾನೇ, ಅನ್ಯಾತ್ ಕಃ ಪ್ರಾಣ್ಯಾತ್-ಸಾಂಸಾರಿಕ ಸುಖವನ್ನೂ ಮೋಕ್ಷವನ್ನೂ ಹೊಂದುತ್ತಿದ್ದನು? ಏಷಃ ಏವ-ಈತನೇ,ಆನಂದಯಾತಿ-ಆನಂದವನ್ನುಂಟುಮಾಡುತ್ತಾನೆಯಲ್ಲವೇ? (ಅವನಿಗೆ ಸರ್ವವಿಧವಾದ ಆನಂದಕಾರಣತ್ವವಿರುವುದರಿಂದ ಪ್ರಾಪ್ಯತ್ವವಿದೆಯೆಂದು ಭಾವ), ಯದಿಾ ಏಷಃ ಏವ-ಯಾವಾಗ ಈ ಉಪಾಸಕನು, ಏತಸ್ಮಿನ್ ಅದೃಶ್ಯೇ- ಕಣ್ಣು ಮೊದಲಾದ ಇಂದ್ರಿಯಗಳಿಗೆ ಅಗೋಚರನಾದ (ಅಚಿದ್ವ್ಯಾವೃತ್ತನು) ಅನಾತ್ಮ್ಯೇ-ಶರೀರಕ್ಕಿಂತ ಬೇರೆಯಾದ (ಬದ್ಧವ್ಯಾವೃತ್ತನು) ಅನಿರುಕ್ತೇ-ಜಾತಿ ಗುಣಗಳನ್ನು ಬೋಧಿಸುವ ದೇವಾದಿಪದಗಳಿಂದ ಬೋಧಿಸುವುದಕ್ಕಾಗದ (ಮುಕ್ತವ್ಯಾವೃತ್ತನು) ಅನಿಲಯನೇ-ಆಧಾರವಿಲ್ಲದ ಪರಮಾತ್ಮನಲ್ಲಿ, (ನಿತ್ಯ ವ್ಯಾವೃತ್ತಃ) ಅಭಯಂ-ಭಯವಿಲ್ಲದಿರುವುದಕ್ಕಾಗಿ (ಅಭಯಕ್ಕೆ ಸಾಧನವಾದ) ಪ್ರತಿಷ್ಠಾಂ-ನಿರಂತರ ಸ್ಮರಣರೂಪವಾದ ನಿಷ್ಠೆಯನ್ನು, ವಿಂದತೇ-ಹೊಂದ ತ್ತಾನೆಯೋ,ಅಥ ಸಃ ಅಭಯಂಗತಃ ಭವತಿ-ಆಗ ಆತನು ಭಯವಿಲ್ಲದವನಾಗಿ ಆಗುತ್ತಾನೆ. ಏಷಃ-ಈ ಉಪಾಸಕನು, ಏತಸ್ಮಿನ್ನೇವ-ಈ ಪರಮಾತ್ಮನಲ್ಲಿಯೇ, ಅಂತರಂ-ಧ್ಯಾನಕ್ಕೆ ವಿಚ್ಛೇದವನ್ನು, ಅರಂ-ಸ್ವಲ್ಪಕೂಡ, ಯದಾ-ಯಾವಾಗ, ಕುರುತೇ-ಮಾಡುತ್ತಾನೆಯೋ, ಅಥತಸ್ಯಭಯಂ ಭವತಿ-ಆಗ ಅವನಿಗೆ ಭಯ ವುಂಟಾಗುವುದು. ಅಮನ್ವಾನಸ್ಯ-ನಿರಂತರ ಮನನ ಮಾಡದೇ ಇರುವವನಿಗೆ ತತ್ ಏವ ಭಯಂ-ಆ ಭಗವಂತನ ಸ್ಮರಣೆ ಇಲ್ಲದಿರುವುದೇ ಭಯ. ತದಪಿ- ಅವನ ವಿಷಯದಲ್ಲಿಯೂ, ಏಷಃ ಶ್ಲೋಕಃ ಭವತಿ-ಈ ಶ್ಲೋಕವಿರುವುದು.

(ವಾ. ಅರ್ಥ)

| | |
|---|---|
| ೧) ಇದಂ ಅಸತ್ವಾ ಅಗ್ರೇ ಆಸೀತ್. | ೧) ದೊಡ್ಡದಾಗಿ ಕಾಣಿಸುತ್ತಿರುವ ಚೇತನಾಚೇತ ಶರೀರವುಳ್ಳ ಬ್ರಹ್ಮವು ಪ್ರಕಾಶಕ್ಕೆ ಬಾರದಿರುವ ನಾಮವುಳ್ಳದ್ದಾಗಿ ಸೃಷ್ಟಿಗೆ ಮೊದಲು ಇತ್ತು. |
| ೨) ತತಃ ಸತ್ ಅಜಾಯತ ವೈ | ೨) ಆ ಬ್ರಹ್ಮನಿಂದ ಅಭಿವ್ಯಕ್ತವಾದ ನಾಮರೂಪವುಳ್ಳ ಜಗತ್ತು ಉಂಟಾಯಿತು. |
| ೩) ತತ್ ಆತ್ಮಾನಂ ಸ್ವಯಂ ಅಕುರುತ. | ೩) ಆ ಬ್ರಹ್ಮನು ತನ್ನನ್ನೇ ಉಪಾದಾನ ಕಾರಣವಾಗಿ ಸ್ವೀಕರಿಸಿ ತಾನೇ ಪ್ರಪಂಚವನ್ನು ಉಂಟುಮಾಡಿತು. |
| ೪) ತಸ್ಮಾತ್ ತತ್ ಸುಕೃತಂ ಇತಿ ಉಚ್ಯತೇ | ೪) ಆದುದರಿಂದ ಆ ಬ್ರಹ್ಮವು ಕ್ಲೇಶವಿಲ್ಲದ ಕಾರ್ಯವೆಂದು ಹೇಳಲ್ಪಡುತ್ತದೆ. |

(ತನಗಿಂತ ಬೇರೆ ಕಾರ್ಯವನ್ನು ನಿರ್ಮಿಸಿದರಲ್ಲವೇ ಕ್ಲೇಶವು ; ತಾನೇ ಕಾರ್ಯವಾದುದರಿಂದ ಕ್ಲೇಶವಿಲ್ಲವೆಂದು ಭಾವವು).

| | |
|---|---|
| ೫) ಯತ್ ತತ್ ಸುಕೃತಂ ಸಃ ರಸಃ ವೈ. | ೫) ಯಾವ ಬ್ರಹ್ಮವು ಸುಕೃತವೆಂದು ಹೇಳಲ್ಪಟ್ಟಿತೋ ಅದೇ ಆನಂದವು. |
| ೬) ರಸಂ ಲಬ್ಧ್ವಾ ಏವಹಿ ಅಯಂ ಆನಂದೀ ಭವತಿ. | ೬) ಆ ಆನಂದಮಯನಾದ ಬ್ರಹ್ಮನನ್ನು ಹೊಂದಿ ಈ ಉಪಾಸಕನು ಆನಂದವುಳ್ಳವನಾಗುತ್ತಾನೆ. |

(ಜಗತ್ಕಾರಣನಾದ ಬ್ರಹ್ಮನು ಆನಂದಸ್ವರೂಪನಾಗಿರುವುದರಿಂದ ಉಪಾಸ್ಯನೂ ಆಗಲು ಅರ್ಹನಾಗಿರುತ್ತಾನೆಂದು ಭಾವ)

| | |
|---|---|
| ೭) ಏಷಃ ಆಕಾಶಃ ಆನಂದಃ ಯದಿ ನ ಸ್ಯಾತ್, ಕಃ ಅನ್ಯಾತ್ ಕಃ ಪ್ರಾಣ್ಯಾತ್. | ೭) ಅ ಪರಿ ಚ್ಛಿ ನ್ನಾ ನಂ ದ ರ ಸ ನಾದ ಪರಮಾತ್ಮನಿಲ್ಲದಿದ್ದರೆ ಯಾವ ಮನುಷ್ಯನು ತಾನೇ ಸಾಂಸಾರಿಕ ಸುಖವನ್ನೂ ಮೋಕ್ಷ ಸುಖವನ್ನೂ ಹೊಂದುತ್ತಿದ್ದನು ? |
| ೮) ಏಷ ಏವ ಆನಂದಯಾತಿ | ೮) ಈತನೇ ಆನಂದವನ್ನುಂಟು ಮಾಡುತ್ತಾನೆಯಲ್ಲವೆ ? |

(ಅವನಿಗೆ ಸರ್ವವಿಧವಾದ ಆನಂದ ಕಾರಣತ್ವವಿರುವುದರಿಂದ ಪ್ರಾಪ್ಯತ್ವ ವಿದೆಯೆಂದು ಭಾವ).

| | |
|---|---|
| ೯) ಯದಾ ಏಷ ಏವ ಏತಸ್ಮಿನ್ ಅದೃಶ್ಯೇ ಅನಾತ್ಮ್ಯೇ, ಅನಿರುಕ್ತೇ, ಅ ನಿ ಲ ಯ ನೇ ಅ ಭ ಯಂ ಪ್ರತಿಷ್ಠಾಂ ವಿಂದತೇ ಅಥ ಸಃ ಅಭ ಯಂಗತಃ ಭವತಿ. | ೯) ಯಾವಾಗ ಈ ಉಪಾಸಕನು ಕಣ್ಣು ಮೊದಲಾದ ಇಂದ್ರಿಯಗಳಿಗೆ ಅ ಗೋ ಚ ರ ನಾ ದ (ಅಚಿದ್ವ್ಯಾವೃತ್ತನೂ) ಶರೀರಕ್ಕಿಂತ ಬೇರೆಯಾದ (ಬದ್ಧ–ವ್ಯಾವೃತ್ತನೂ), ಜಾತಿ ಗುಣ ಗಳನ್ನು ಬೋಧಿಸುವ ದೇವಾದಿ ಪದಗಳಿಂದ ಬೋಧಿಸುವುದಕ್ಕಾಗದ (ಮುಕ್ತ ವ್ಯಾವೃತ್ತನೂ) ಬೇರೆ ಆಧಾರ ವಿಲ್ಲದ ಪರಮಾತ್ಮನಲ್ಲಿ, (ನಿತ್ಯವ್ಯಾವೃತ್ತಃ) ಭಯವಿಲ್ಲದಿರುವುದಕ್ಕಾಗಿ (ಅಭಯಕ್ಕೆ ಸಾಧನವಾದ) ನಿರಂತರ ಸ್ಮರಣರೂಪವಾದ ನಿಷ್ಠೆಯನ್ನು ಹೊಂದುತ್ತಾನೆಯೋ, ಆಗ ಆತನು ಭಯವಿಲ್ಲದವನಾಗಿ ಆಗುತ್ತಾನೆ. |
| ೧೦) ಏಷಃ ಏ ತ ಸ್ಮಿ ನ್ನೇ ೯ ವ್ ಅಂತರಂ ಉತ್ ಅರಂ ಯದಾ | ೧೦) ಈ ಉಪಾಸಕನು ಈ ಪರ ಮಾತ್ಮನಲ್ಲಿಯೇ ಧ್ಯಾನಕ್ಕೆ ವಿಚ್ಛೇದ |

| | |
|---|---|
| ಕುರುತೇ, ಅಥ ತಸ್ಯ ಭಯಂ ಭವತಿ. | ವನ್ನು ಸ್ವಲ್ಪ ಕೂಡ ಯಾವಾಗ ಮಾಡುತ್ತಾನೆಯೋ ಆಗ ಅವನಿಗೆ ಭಯವುಂಟಾಗುವುದು. |
| ೧೧) ಅಮನ್ವಾನಸ್ಯ ತತ್ ಏವ ಭಯಂ. | ೧೧) ನಿರಂತರ ಮನನ ಮಾಡದೇ ಇರುವವನಿಗೆ ಆ ಭಗವಂತನ ಸ್ಮರಣೆ ಯಿಲ್ಲದಿರುವುದೇ ಭಯವು. |
| ೧೨) ತದಪಿ, ಏಷಃ ಶ್ಲೋಕಃ ಭವತಿ. | ೧೨) ಅವನ ವಿಷಯದಲ್ಲಿಯೂ ಈ ಶ್ಲೋಕವಿರುವುದು. |

## ೮ನೆಯ ಅನುವಾಕ

ಮೂಲ ಮಂತ್ರ :—ಭೀಷಾಽಸ್ಮಾದ್ವಾತಃ ಪವತೇ। ಭೀಷೋ
ದೇತಿ ಸೂರ್ಯಃ। ಭೀಷಾಸ್ಮಾದಗ್ನಿಶ್ಚೇಂದ್ರಶ್ಚ। ಮೃತ್ಯುರ್ಧಾ
ವತಿ ಪಂಚಮ ಇತಿ। ಸೈಷಾಽಽನಂದಸ್ಯ ಮೀಮಾಗ್ಂಸಾ
ಭವತಿ। ಯುವಾಸ್ಯಾತ್ಸಾಧು ಯುವಾಽಧ್ಯಾಯಕಃ। ಆಶಿ
ಷ್ಠೋ ದೃಢಿಷ್ಠೋ ಬಲಿಷ್ಠಃ। ತಸ್ಯೇಯಂ ಪೃಥಿವೀ ಸರ್ವಾ
ವಿತ್ತಸ್ಯ ಪೂರ್ಣಾ ಸ್ಯಾತ್। ಸ ಏಕೋಮಾನುಷ ಆನಂದಃ।
ತೇ ಯೇ ಶತಂ ಮಾನುಷಾ ಆನಂದಾಃ। ಸ ಏಕೋ
ಮನುಷ್ಯ ಗಂಧರ್ವಾಣಾ ಮಾನಂದಃ। ಶ್ರೋತ್ರಿಯಸ್ಯ

ಚಾಕಾಮಹತಸ್ಯ|ತೇ ಯೇ ಶತಂ ಮನುಷ್ಯ ಗಂಧರ್ವಾಣಾ
ಮಾನಂದಾಃ|ಸ ಏಕೋ ದೇವಗಂಧರ್ವಾಣಾ ಮಾನಂದಃ|
ಶ್ರೋತ್ರಿಯಸ್ಯ ಚಾಕಾಮಹತಸ್ಯ| ತೇ ಯೇ ಶತಂ ದೇವ
ಗಂಧರಾ ಣಾ ಮಾನಂದಾಃ|ಸಏಕಃ ಪಿತೃಣಾಂ ಚಿರಲೋಕ
ಲೋಕಾನಾ ಮಾನಂದಃ|ಶ್ರೋತ್ರಿಯಸ್ಯಚಾಕಾಮಹತಸ್ಯ|
ತೇ ಯೇ ಶತಂ ಪಿತೃಣಾಂ ಚಿರಲೋಕಲೋಕಾನಾ
ಮಾನಂದಾಃ|ಸ ಏಕ ಆಜಾನಜಾನಾಂ ದೇವಾನಾಮಾನಂದಃ|
ಶ್ರೋತ್ರಿಯಸ್ಯಚಾ ಕಾಮಹತಸ್ಯ | ತೇಯೇ ಶತಮಾಜಾನ
ಜಾನಾಂ ದೇವಾನಾಮಾನಂದಾಃ | ಸ ಏಕಃ ಕರ್ಮ
ದೇವಾನಾಂ ದೇವಾನಾಮಾನಂದಃ | ಯೇ ಕರ್ಮಣಾ
ದೇವಾನಪಿಯಂತಿ । ಶ್ರೋತ್ರಿಯಸ್ಯ ಚಾಕಾಮಹ ತಸ್ಯ |
ತೇಯೇ ಶತಂ ಕರ್ಮದೇವಾನಾಂ ದೇವಾನಾಮಾನಂದಾಃ |
ಸ ಏಕೋ ದೇವಾನಾಮಾನಂದಃ | ಶ್ರೋತ್ರಿಯಸ್ಯಚಾ
ಕಾಮಹತಸ್ಯ | ತೇಯೇ ಶತಂ ದೇವಾನಾ ಮಾನಂದಾಃ |
ಸ ಏಕ ಇಂದ್ರಸ್ಯಾನಂದಃ| ಶ್ರೋತಿಯಸ್ಯ ಚಾಕಾಮಹ

ತಸ್ಯ। ತೇಯೇ ಶತಮಿಂದ್ರಸ್ಯಾನಂದಾಃ। ಸ ಏಕೋ ಬೃಹ

ಸ್ಪತೇರಾನಂದಃ।ಶ್ರೋತ್ರಿಯಸ್ಯ ಚಾಕಾಮಹತಸ್ಯ।ತೇಯೇ

ಶತಂ ಬೃಹಸ್ಪತೇ ರಾನಂದಾಃ। ಸ ಏಕಃ ಪ್ರಜಾಪತೇರಾ

ನಂದಃ। ಶ್ರೋತ್ರಿಯಸ್ಯ ಚಾಕಾಮಹತಸ್ಯ। ತೇಯೇಶತಂ

ಪ್ರಜಾಪತೇರಾನಂದಾಃ। ಸ ಏಕೋ ಬ್ರಹ್ಮಣ ಆನಂದಃ।

ಶ್ರೋತ್ರಿಯಸ್ಯ ಚಾಕಾಮಹತಸ್ಯ।

ಸಯಶ್ಚಾಯಂಪುರುಷೇ।ಯಶ್ಚಾಸಾವಾದಿತ್ಯೇ।ಸ ಏಕಃ।

ಸಯಏವಂವಿತ್। ಅಸ್ಮಾಲ್ಲೋಕಾತ್ಪ್ರೇತ್ಯ। ಏತ ಮನ್ನ

ಮಯಮಾತ್ಮಾನ ಮುಪಸಂಕ್ರಾಮ। ತಿಏತಂಪ್ರಾಣಮಯ

ಮಾತ್ಮಾನ ಮುಪಸಂಕ್ರಾಮತಿ। ಏತಂ ಮನೋಮಯ

ಮಾತ್ಮಾನ ಮುಪಸಂಕ್ರಾಮತಿ। ಏತಂ ವಿಜ್ಞಾನಮಯ

ಮಾತ್ಮಾನ ಮುಪಸಂಕ್ರಾಮತಿ ಏತ ಮಾನಂದಮಯ

ಮಾತ್ಮಾನ ಮುಪಸಂಕ್ರಾಮತಿ। ತದಪ್ಯೇಷಶ್ಲೋಕೋ ಭವತಿ.

ಅರ್ಥ:—ಅಸ್ಮಾತ್‌ಭೀಷಾ-ಈ ಪರಮಾತ್ಮನ ಭಯದಿಂದ, ವಾತಃ ಪವತೇ-ಗಾಳಿಯು ಬೀಸುತ್ತದೆ. ಅಸ್ಮಾತ್ ಭೀಷಾ-ಈ ಪರಮಾತ್ಮನ ಭಯದಿಂದ, ಸೂರ್ಯಃ ಉದೇತಿ-ಸೂರ್ಯನು ಹುಟ್ಟುತ್ತಾನೆ. ಅಗ್ನಿಶ್ಚ ಇಂದ್ರಶ್ಚ-ಅಗ್ನಿ

ಇಂದ್ರಾದಿಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಾರೆ. ಪಂಚಮಃ ಮೃತ್ಯುಃ-ಸಾವನ್ನುಂಟುಮಾಡುವ ಯಮನು, ಧಾವತಿ-ಓಡುತ್ತಾನೆ. (ಆದುದರಿಂದ ಪರಬ್ರಹ್ಮನಿಗಿಂತ ಬೇರೆಯವರನ್ನು ಹೊಂದಿದರೂ ದುಃಖ ತಪ್ಪದು. ಅವರೆಲ್ಲರೂ ಆ ಪರಬ್ರಹ್ಮನ ಆಜ್ಞೆಯಂತೆ ನಡೆಯತಕ್ಕವರಾದುದರಿಂದ ಅಂಥವರ ಪದವಿಯನ್ನು ಕೋರುವುದು ದುಃಖಕ್ಕೆ ಕಾರಣವಾದುದೆಂದು ಭಾವ.)

(ಮುಂದೆ ಪರಬ್ರಹ್ಮನು ನಿರತಿಶಯವಾದ ಆನಂದವುಳ್ಳವನೆಂಬುದನ್ನು ವಿಶದಪಡಿಸುತ್ತದೆ).

ಆನಂದಸ್ಯ-ಆನಂದದ, ಸಾ ಏಷಾ ಮೀಮಾಂಸಾ ಭವತಿ–ಆ ಈ ವಿಚಾರವು ಪ್ರಾರಂಭವಾಗುತ್ತದೆ. ಯುವಾಸ್ಯಾತ್–ಪ್ರಾಯದವನಾಗಿರಬೇಕು; ಸಾಧು–ಶಾಸ್ತ್ರ ಪ್ರಸಾರವಾಗಿ, ಯುವಾಧ್ಯಾಯಕಃ ಸ್ಯಾತ್-ಯೌವನಸ್ಥರನ್ನೂ ಕಲಿಸತಕ್ಕವನಾಗಿರಬೇಕು. ಆಶಿಷ್ಠಃ-ಬೇಗ ಕೆಲಸಮಾಡತಕ್ಕವನೂ, ಆಶೀರ್ವಾದಕ್ಕೆ ಅರ್ಹನೂ, ದ್ರಢಿಷ್ಠ:-ಶರೀರಬಲವುಳ್ಳವನೂ, ಬಲಿಷ್ಠ:–ಮನೋಬಲವುಳ್ಳವನೂ ಸ್ಯಾತ್-ಆಗಿರಬೇಕು. ತಸ್ಯ-ಆತನಿಗೆ, ಇಯಂ ಸರ್ವಾ ಪೃಥಿವೀ-ಈ ಭೂಮಿಯೆಲ್ಲಾ, ವಿತ್ತಸ್ಯ ಪೂರ್ಣಾಸ್ಯಾತ್–ಹಣದಿಂದ ತುಂಬಿರಬೇಕು. ಸಃ ಏಕಃ ಮಾನುಷಃ ಆನಂದಃ-ಅದು ಒಬ್ಬ ಮನುಷ್ಯನ ಆನಂದವು. ಅಕಾಮಹತಸ್ಯ-ಸಾಂಸಾರಿಕ ಭೋಗವನ್ನು ಬಿಟ್ಟು ಮುಕ್ತನಾದ ಶ್ರೋತ್ರಿಯಸ್ಯಚ-ಬ್ರಹ್ಮನಿಷ್ಠನಿಗೂ ಸಹ (ಈ ಮುಕ್ತನ ಆನಂದದಲ್ಲಿ ಮನುಷ್ಯಾನಂದವು ಒಂದು ಭಾಗವೆಂದು ಭಾವ). ಯೇ ತೇ ಶತಂ ಮಾನುಷಾಃ ಆನಂದಾಃ-ಯಾವ ಆ ನೂರು ಮನುಷ್ಯರ ಆನಂದಗಳುಂಟೋ, ಸಃ ಮನುಷ್ಯಗಂಧರ್ವಾಣಾಂ ಏಕಃ ಆನಂದಃ-ಅದು ಮನುಷ್ಯರಲ್ಲಿ ಅಂತರ್ಧಾನ ಶಕ್ತಿಯನ್ನು ಪಡೆದವರ ಒಂದು ಆನಂದವು, ಅಕಾಮಹತಸ್ಯ ಶ್ರೋತ್ರಿಯಸ್ಯ ಚ-ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. ಯೇತೇ ಶತಂ ಮನುಷ್ಯಗಂಧರ್ವಾಣಾಂ ಆನಂದಾಃ–ಯಾವ ಆ ಮನುಷ್ಯಗಂಧರ್ವರ ನೂರು ಆನಂದವುಂಟೋ, ಸಃ ದೇವಗಂಧರ್ವಾಣಾಂ ಏಕಃ ಆನಂದಃ ಅದು ಅಂತರಿಕ್ಷದಲ್ಲಿ ವಾಸಮಾಡತಕ್ಕ ದೇವ ಗಂಧರ್ವರ ಒಂದು ಆನಂದ. ಚ–ಮತ್ತು, ಅಕಾಮಹತಸ್ಯ ಶ್ರೋತ್ರಿಯಸ್ಯ–ಮುಕ್ತನಾದ ಬ್ರಹ್ಮನಿಷ್ಠನದು.

ಯೇತೇ ಶತಂ ದೇವಗಂಧರ್ವಾಣಾಂ ಆನಂದಾಃ-ಯಾವ ಆ ದೇವಗಂಧರ್ವರ ನೂರು ಆನಂದವುಂಟೋ, ಸಃ ಚಿರಲೋಕ ಲೋಕಾನಾಂ-ಅದು ಚಿರಕಾಲ ವಿರತಕ್ಕ ಲೋಕದಲ್ಲಿರುವ, ಪಿತೃಣಾಂ-ಪಿತೃದೇವತೆಗಳ, ಏಕಃ ಆನಂದಃ-ಒಂದು ಆನಂದವು; ಚ–ಮತ್ತು ಅಕಾಮುಹತಸ್ಯ ಶ್ರೋತ್ರಿಯಸ್ಯ-ಮುಕ್ತನಾದ ಬ್ರಹ್ಮ ನಿಷ್ಠನದು. ಯೇ ತೇ ಶತಂ ಪಿತೃಣಾಂ ಚಿರಲೋಕ ಲೋಕಾನಾಂ ಆನಂದಾಃ-ಯಾವ ಚಿರಲೋಕದಲ್ಲಿರುವ ಪಿತೃದೇವತೆಗಳ ನೂರು ಆನಂದವುಂಟೋ, ಸಃ ಆಜಾನಜಾನಾನಾಂ ದೇವಾನಾಂ ಏಕಃ ಆನಂದಃ–ಅದು ಸ್ಮಾರ್ತಕರ್ಮದಿಂದ ದೇವತಾಸ್ಥಾನಗಳಲ್ಲಿ ಹುಟ್ಟಿದ ದೇವತೆಗಳ ಒಂದು ಆನಂದವು. ಅಕಾಮುಹ ತಸ್ಯಚ—ಮುಕ್ತನಾದ ಬ್ರಹ್ಮನಿಷ್ಠನದು. ಯೇ ತೇ ಶತಂ ಆಜಾನ ಜಾನಾಂ ದೇವಾನಾಂ ಆನಂದಾ :—ಯಾವ ಸ್ಮಾರ್ತಕರ್ಮಗಳಿಂದ ದೇವತಾಸ್ಥಾನಗಳಲ್ಲಿ ಹುಟ್ಟಿದ ದೇವತೆಗಳ ನೂರು ಆನಂದವುಂಟೋ, ಸಃ-ಅದು ಕರ್ಮದೇವಾನಾಂ ದೇವಾನಾಂ ಏಕಃ ಆನಂದಃ–ಅದು ಅಗ್ನಿಹೋತ್ರವೇ ಮೊದ ಲಾದ ಕರ್ಮಗಳಿಂದ ದೇವತೆಗಳ ಸಾಮ್ಯವನ್ನು ಪಡೆದವರ ಒಂದು ಆನಂದ. ಯೇ–ಯಾವ ಕರ್ಮ ದೇವತೆಗಳು, ದೇವಾ–ದೇವತೆಗಳನ್ನೂ ಕೂಡ, ಅಪಿ ಯಂತಿ-ಹೊಂದುವರೋ, ಚ–ಮತ್ತು ಅಕಾಮುಹತಸ್ಯ ಶ್ರೋತ್ರಿಯಸ್ಯ-ಮುಕ್ತನಾದ ಬ್ರಹ್ಮನಿಷ್ಠನದು. ಯೇತೇ ಶತಂ ಕರ್ಮದೇವಾನಾಂ ದೇವಾನಾಂ ಆನಂದಾಃ-ಯಾವ ಕರ್ಮದೇವತೆಗಳ ನೂರು ಆನಂದವುಂಟೋ, ಸಃ ಏಕಃ ದೇವಾನಾಂ ಆನಂದಃ-ಅದು ವಸುರುದ್ರಾದಿ ಸ್ವಾಭಾವಿಕ ದೇವತೆಗಳ ಒಂದು ಆನಂದ; ಚ–ಮತ್ತು, ಅಕಾಮುಹತಸ್ಯ ಶ್ರೋತಿಯಸ್ಯ-ಮುಕ್ತನಾದ ಬ್ರಹ್ಮ ನಿಷ್ಠನದು. ಯೇ ತೇ ಶತಂ ದೇವಾನಾಂ ಆನಂದಾಃ–ಯಾವ ಆ ಸ್ವಾಭಾವಿಕ ದೇವತೆಗಳ ನೂರು ಆನಂದವುಂಟೋ–ಸಃ ಏಷಃ ಇಂದ್ರಸ್ಯ ಆನಂದಃ–ಅದು ಇಂದ್ರನ ಒಂದು ಆನಂದವು. ಚ–ಮತ್ತು, ಅಕಾಮುಹತಸ್ಯ ಶ್ರೋತ್ರಿಯಸ್ಯ-ಮುಕ್ತನಾದ ಬ್ರಹ್ಮನಿಷ್ಠನದು. ಯೇ ತೇ ಶತಂ ಇಂದ್ರಸ್ಯ ಆನಂದಾಃ–ಯಾವ ಇಂದ್ರನ ನೂರು ಆನಂದಗಳು ಉಂಟೋ, ಸಃ ಬೃಹಸ್ಪತೇಃ ಏಕಃ ಆನಂದಃ–ಅದು ಬೃಹಸ್ಪತಿಯ ಒಂದು ಆನಂದವು ; ಚ–ಮತ್ತು ಅಕಾಮುಹತಸ್ಯ ಶ್ರೋತ್ರಿಯಸ್ಯ–ಮತ್ತು ಮುಃಕ್ತನಾದ ಬ್ರಹ್ಮನಿಷ್ಠನದು. ಯೇ ತೇ ಶತಂ ಬೃಹಸ್ಪತೇಃ ಆನಂದಾಃ-ಯಾವ ಬೃಹಸ್ಪತಿಯ ನೂರು ಆನಂದಗಳುಂಟೋ,

ಸಃ ಪ್ರಜಾಪತೇಃ ಏಕಃ ಆನಂದಃ ಅದು-ಚತುರ್ಮುಖನ ಒಂದು ಆನಂದ. ಯೇ ತೇ ಶತಂ ಪ್ರಜಾಪತೇಃ ಆನಂದಾಃ ಯಾವ ಆ ಚತುರ್ಮುಖನ ನೂರು ಆನಂದವುಂಟೋ, ಸಃ ಬ್ರಹ್ಮಣಃ ಏಕಃ ಆನಂದಃ-ಅದು ಪರಬ್ರಹ್ಮನ ಒಂದು ಆನಂದ, ಚ-ಮತ್ತು, ಅಕಾಮಹತಸ್ಯ ಶ್ರೋತ್ರಿಯಸ್ಯ-ಮುಕ್ತನಾದ ಬ್ರಹ್ಮ ನಿಷ್ಠನದು. ಇಲ್ಲಿ ಪರಬ್ರಹ್ಮಾನಂದವು ಚತುರ್ಮುಖಾದಿಗಳ ಆನಂದಕ್ಕಿಂತ ಹೆಚ್ಚಾದದ್ದು ಎಂದು ಹೇಳುವುದರಲ್ಲಿ ತಾತ್ಪರ್ಯ. ಅದಕ್ಕಾಗಿ ನೂರರಷ್ಟು ಎಂದು ಹೇಳಲ್ಪಟ್ಟಿದೆ. ಅಳತೆ ಮಾಡಿ ಹೇಳುವುದಕ್ಕಲ್ಲ.

ಯಶ್ಚ ಅಸೌ ಆದಿತ್ಯೇ-ಆದಿತ್ಯಮಂಡಲದ ಮಧ್ಯದಲ್ಲಿರುವ, ಯಶ್ಚ ಅಯಂಪುರುಷೇ-ಹಿರಣ್ಮಯನಾದ ಪುಂಡರೀಕಾಕ್ಷನಾದ ಯಾವ ಪುರುಷ ನುಂಟೋ, ಸಃ ಏಕಃ-ಆ ಪುರುಷನಾದ ನಾರಾಯಣನೇ, (ಹೃದಯ ಗುಹೆ ಯಲ್ಲಿರುವ) ಜೀವಾಂತರ್ಯಾಮಿಯಾದ ಆನಂದಮಯನು. ಅವನನ್ನೇ ಉಪಾ ಸನೆ ಮಾಡತಕ್ಕದ್ದು. ಯಃ-ಯಾವನು, ಏವಂವಿತ್-ಹೀಗೆ ಉಪಾಸನೆ ಮಾಡುವನೋ, (ಚೇತನಾಚೇತನಗಳನ್ನು ಶರೀರವನ್ನಾಗಿಯೂ ಆದಿತ್ಯ ಮಂಡಲದ ಮಧ್ಯದಲ್ಲಿರುವ ಪುಂಡರೀಕಾಕ್ಷನನ್ನಾಗಿ ಸತ್ಯಜ್ಞಾನಾಂತರೂಪ ನನ್ನಾಗಿಯೂ ಧ್ಯಾನ ಮಾಡುತ್ತಾನೆಯೋ) ಸಃ-ಅವನು, ಅಸ್ಮಾತ್ ಲೋಕಾತ್ ಪ್ರೇತ್ಯ-ಈ ಲೋಕವನ್ನು ಅರ್ಚಿರಾದಿಮಾರ್ಗದಿಂದ ಬಿಟ್ಟು ಅನ್ನಮಯಂ-ಅನ್ನಶರೀರಕನಾದ, ಏತಂ ಆತ್ಮಾನಂ-ಈ ಪರಮಾತ್ಮನನ್ನು, ಉಪಸಂಕ್ರಾಮತಿ-ಅನುಭವಿಸುವನು. ಪ್ರಾಣಮಯಂ-ಪ್ರಾಣಶರೀರಕನಾದ ಏತಂ ಆತ್ಮಾನಂ-ಈ ಪರಮಾತ್ಮನನ್ನು, ಉಪಸಂಕ್ರಾಮತಿ ಅನುಭವಿಸುವನು, ಮನೋಮಯಂ ಮನಶ್ಶರೀರಕನಾದ, ಏತಂ ಆತ್ಮಾನಂ-ಈ ಪರಮಾತ್ಮನನ್ನು ಉಪಸಂಕ್ರಾಮತಿ-ಅನುಭವಿಸುವನು. ವಿಜ್ಞಾನಮಯಂ ಜೀವಶರೀರಕನಾದ ಏತಂ ಆತ್ಮಾನಂ-ಈ ಪರಮಾತ್ಮನನ್ನು, ಉಪಸಂಕ್ರಾಮತಿ-ಅನುಭವಿಸುವನು ಆನಂದಮಯಂ-ಆನಂದಮಯನಾದ, ಏತಂ-ಆತ್ಮಾನಂ-ಈ ಪರಮಾತ್ಮನನ್ನು ಉಪಸಂಕ್ರಾಮತಿ-ಅನುಭವಿಸುವನು. ತದಪಿ-ಈ ವಿಷಯದಲ್ಲಿಯೂ, ಏಷ-ಶ್ಲೋಕಃ-ಈ ಶ್ಲೋಕವು ಭವತಿ-ಇರುತ್ತದೆ.

(ಸಮಷ್ಟಿ, ವ್ಯಷ್ಟಿ ವಿಭೂತಿಯುಳ್ಳ ನಿರತಿಶಯಾನಂದಮಯನಾಗಿ

ಭೋಗ್ಯನಾಗಿರುವ ಪರಮಾತ್ಮನನ್ನು ಜೀವನು ಭೋಕ್ತೃವಾಗಿ ಮುಕ್ತಿ ದಶೆಯಲ್ಲಿ ಅನುಭವಿಸುತ್ತಾನೆ. ಆ ಪರಮಾತ್ಮನೊಡನೆ ಐಕ್ಯವಾಗುವುದಿಲ್ಲ ವೆಂದು। ಭಾವ)

(ವಾ. ಅರ್ಥ)

೧) ಅಸ್ಮಾತ್ ಭೀಷಾ ವಾತಃ ಪವತೇ; ಅಸ್ಮಾತ್‌ಭೀಷಾ ಸೂರ್ಯಃ ಉದೇತಿ ; ಅಗ್ನಿಶ್ಚ ಇಂದ್ರಶ್ಚ ; ಪಂಚಮಃ ಮೃತ್ಯುಃ ಧಾವತಿ

೧) ಈ ಪರಮಾತ್ಮನ ಭಯದಿಂದ ಗಾಳಿಯು ಬೀಸುತ್ತದೆ; ಈ ಪರಮಾತ್ಮನ ಭಯದಿಂದ ಸೂರ್ಯನು ಹುಟ್ಟುತ್ತಾನೆ ; ಅಗ್ನಿ ಇಂದ್ರಾದಿಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಾರೆ; ಸಾವನ್ನುಂಟುಮಾಡುವ ಯಮನೂ ಓಡುತ್ತಾನೆ.

(ಆದ್ದರಿಂದ ಪರಬ್ರಹ್ಮನಿಗಿಂತ ಬೇರೆಯವರನ್ನು ಹೊಂದಿದರೂ ದುಃಖ ತಪ್ಪದು ; ಅವರೆಲ್ಲರೂ ಆ ಪರಬ್ರಹ್ಮನ ಆಜ್ಞೆಯಂತೆ ನಡೆಯತಕ್ಕವರಾದುದರಿಂದ ಅವರವರ ಅಧಿಕಾರ ತಪ್ಪಿದ ಕೂಡಲೇ ಅವರು ಕೆಳಕ್ಕೆ ಬರುವುದರಿಂದ ಅಂಥವರ ಪದವಿಯು ಬೇಕೆಂದು ಕೋರುವುದು ದುಃಖಕ್ಕೆ ಕಾರಣವಾದುದೆಂದು ಭಾವ) ಮುಂದೆ ಪರಬ್ರಹ್ಮನು ನಿರತಿಶಯವಾದ ಆನಂದವುಳ್ಳವನೆಂಬುದನ್ನು ವಿಶದಪಡಿಸುತ್ತದೆ.

೨) ಆನಂದಸ್ಯ ಸಾ ಏಷಾ ಮೀಮಾಗ್ಂಸಾಭವತಿ

೨) ಆನಂದದ ಆ ಈ ವಿಚಾರವು ಪ್ರಾರಂಭವಾಗುತ್ತದೆ.

೩) ಯುವಾಸ್ಯಾತ್, ಸಾಧು ಯುವಾಧ್ಯಾಯಕಃ ಸ್ಯಾತ್ ; ಆಶಿಷ್ಠಃ, ದ್ರಢಿಷ್ಠಃ, ಬಲಿಷ್ಠಃ ಸ್ಯಾತ್ ; ತಸ್ಯ ಇಮಂ ಸರ್ವಾ ಪೃಥಿವೀ, ವಿತ್ತಸ್ಯ ಪೂರ್ಣಾ ಸಃ

೩) ಪ್ರಾಯದವನಾಗಿರಬೇಕು, ಶಾಸ್ತ್ರ ಪ್ರಸಾರವಾಗಿ ಯೌವನಸ್ಥರನ್ನು ಕಲಿಸತಕ್ಕವನಾಗಿರಬೇಕು ; ಬೇಗ ಕೆಲಸ ಮಾಡತಕ್ಕವನೂ ಆಶೀರ್ವಾದಕ್ಕೆ ಅರ್ಹನೂ, ಶರೀರಬಲವುಳ್ಳವನೂ

| | |
|---|---|
| ಏಕ ಮಾನುಷಃ ಆನಂದಃ. | ಮನೋಬಲವುಳ್ಳವನೂ ಆಗಿರಬೇಕು ; ಆತನಿಗೆ ಈ ಭೂಮಿಯೆಲ್ಲಾ ಹಣದಿಂದ ತುಂಬಿರಬೇಕು, ಹೀಗಿರುವ ಪಕ್ಷದಲ್ಲಿ ಅದು ಒಬ್ಬ ಮನುಷ್ಯನ ಆನಂದವು. |
| (ii) ಅಕಾಮಹತಸ್ಯ ಶ್ರೋತ್ರಿಯಸ್ಯ ಚ | (ii) ಸಾಂಸಾರಿಕ ಭೋಗವನ್ನು ಬಿಟ್ಟು ಮುಕ್ತನಾದ ಬ್ರಹ್ಮನಿಷ್ಠನಿಗೂ ಸಹ (ಈ ಮುಕ್ತನ ಆನಂದದಲ್ಲಿ ಮನುಷ್ಯಾನಂದವು ಒಂದು ಭಾಗ ವೆಂದು ಭಾವ). |
| ಳ) ಯೇ ತೇ ಶತಂ ಮಾನುಷಾಃ ಆನಂದಾಃ ಸಃ | ಳ) (i) ಯಾವ ಆ ನೂರು ಮನುಷ್ಯನ ಆನಂದಗಳುಂಟೋ ಅದು |
| (i) ಮನುಷ್ಯ ಗಂಧರ್ವಾಣಾಂ ಏಕಃ ಆನಂದಃ | ಮನುಷ್ಯರಲ್ಲಿ ಅಂತರ್ಧಾನ ಶಕ್ತಿಯನ್ನು ಪಡೆದವರ ಒಬ್ಬರ ಆನಂದವು. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ ಚ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೞ) (i) ಯೇತೇಶತಂ ಮನುಷ್ಯ ಗಂಧರ್ವಾಣಾಂ ಆನಂದಾಃ ಸಃ ದೇವಗಂಧರ್ವಾಣಾಂ ಏಕಃ ಆನಂದಃ. | ೞ) (i) ಯಾವ ಮನುಷ್ಯ ಗಂಧರ್ವರ ನೂರು ಆನಂದವುಂಟೋ ಅದು ಅಂತರಿಕ್ಷದಲ್ಲಿ ವಾಸಮಾಡತಕ್ಕ ದೇವಗಂಧರ್ವರ ಒಂದು ಆನಂದ. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೬) ಯೇತೇಶತಂ ದೇವ ಗಂಧರ್ವಾಣಾಂ ಆನಂದಾಃ | ೬) ಯಾವ ಆ ದೇವ ಗಂಧರ್ವರ ನೂರು ಆನಂದವುಂಟೊ ಅದು |

| | |
|---|---|
| (i) ಸಃ ಚಿರಲೋಕಲೋಕಾನಾಂ ಪಿತೃಣಾಂ ಏಕಃಆನಂದಃ. | (i) ಚಿರಕಾಲವಿರತಕ್ಕ ಲೋಕದಲ್ಲಿರುವ ಪಿತೃದೇವತೆಗಳ ಒಂದು ಆನಂದವು. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೭) (i) ಯೇತೇಶತಂ ಪಿತೃಣಾಂ ಚಿರಲೋಕ ಲೋಕಾನಾಂ ಆನಂದಾಃ ಸಃ ಆಜಾನ ಜಾನಾಂ ದೇವಾನಾಂ ಏಕಃ ಆನಂದಃ. | ೭) ಯಾವ ಆ ಚಿರಲೋಕದಲ್ಲಿರುವ ಪಿತೃದೇವತೆಗಳ ನೂರು ಆನಂದವುಂಟೋ ಅದು |
| | (i) ಸ್ಮಾರ್ತಕರ್ಮದಿಂದ ದೇವತಾಸ್ಥಾನಗಳಲ್ಲಿಹುಟ್ಟದ ದೇವತೆಗಳ ಒಂದು ಆನಂದವು. |
| (ii) ಚ ಶ್ರೋತ್ರಿಯಸ್ಯ ಅಕಾಮಹತಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೮) (i) ಯೇತೇಶತಂ ಅಜಾನ ಜಾನಾಂ ದೇವಾನಾಂ ಆನಂದಾಃ ಸಃ ಕರ್ಮದೇವಾನಾಂ ದೇವಾನಾಂ ಏಕ ಆನಂದಃ. ಯೇ ಕರ್ಮಣಾ ದೇವಾ ಅಪಿಯನ್ತಿ. | ೮) (i) ಯಾವ ಆ ದೇವತೆಗಳ ಸ್ಥಾನದಲ್ಲಿ ಹುಟ್ಟದ ದೇವತೆಗಳ ನೂರು ಆನಂದವುಂಟೋ ಅದು ಅಗ್ನಿಹೋತ್ರವೇ ಮೊದಲಾದ ಕರ್ಮಗಳಿಂದ ದೇವತೆಗಳ ಸಾಮ್ಯವನ್ನು ಪಡೆದವರ (ಯಾವ ಕರ್ಮ ದೇವತೆಗಳು ದೇವತೆಗಳನ್ನು ಕೂಡ ಹೊಂದುವರೋ ಅಂತಹವರ) ಒಂದು ಆನಂದವು. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೯) ಯೇತೇಶತಂ ಕರ್ಮದೇವಾನಾಂ ದೇವಾನಾಂ ಆನಂದಾಃ | ೯) ಯಾವ ಕರ್ಮದೇವತೆಗಳ ನೂರು ಆನಂದವುಂಟೋ |

| | |
|---|---|
| (i) ಸಃ ಏಕಃ ದೇವಾನಾಂ ಆನಂದಃ | (i) ಅದು ವಸುರುದ್ರಾದಿ ಸ್ವಾಭಾವಿಕ ದೇವತೆಗಳ ಒಂದು ಆನಂದ. |
| (ii) ಚಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| (೧೦) ಯೇತೇಶತಂ ದೇವಾನಾಂ ಆನಂದಾಃ ಸಃ | (೧೦) ಯಾವ ಅ ಸ್ವಾಭಾವಿಕ ದೇವತೆಗಳ ನೂರು ಆನಂದವುಂಟೋ |
| (i) ಏಕಃ ಇಂದ್ರಸ್ಯ ಆನಂದಃ. | (i) ಅದು ಇಂದ್ರನ ಒಂದು ಆನಂದವು. |
| (ii) ಚ ಅಕಾಮಹತಸ್ಯ ಶ್ರೋತಿಯಸ್ಯ. | (ii) ಮತ್ತು ಮುಕ್ತನಾದಬ್ರಹ್ಮನಿಷ್ಠನದು. |
| ೧೧) ಯೇತೇಶತಂ ಇಂದ್ರಸ್ಯ ಆನಂದಾಃ | ೧೧) ಯಾವ ಇಂದ್ರನ ನೂರು ಆನಂದಗಳುಂಟೋ ಅದು |
| (i) ಸಃ ಬೃಹಸ್ಪತೇಃ ಏಕ ಆನಂದಃ. | (i) ಬೃಹಸ್ಪತಿಯ ಒಂದು ಆನಂದವು. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |
| ೧೨) ಯೇತೇಶತಂ ಬೃಹಸ್ಪತೇಃ ಆನಂದಾಃ | ೧೨) ಯಾವ ಬ್ರಹೃಸ್ಪತಿಯ ನೂರು ಆನಂದವುಂಟೋ |
| (i) ಸಃ ಪ್ರಜಾಪತೇಃ ಏಕ ಆನಂದಃ. | (i) ಅದು ಚತುರ್ಮುಖ ಬ್ರಹ್ಮನ ಒಂದು ಆನಂದವು. |
| (ii) ಚ ಅಕಾಮಹತಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮನಿಷ್ಠನದು. |

| | |
|---|---|
| ೧೩) ಯೇತೇಶತಂ ಪ್ರಜಾಪತೇ ರಾನಂದಾಃ ಸಃ | ೧೩) ಯಾವ ಆ ಚತುರ್ಮುಖನ ನೂರು ಆನಂದವುಂಟೋ ಅದು |
| (i) ಏಕೋಬ್ರಹ್ಮಣ ಆನಂದಃ | (i) ಪರಬ್ರಹ್ಮನ ಒಂದು ಆನಂದ. |
| (ii) ಚ ಅ ಕಾ ಮ ಹ ತ ಸ್ಯ ಶ್ರೋತ್ರಿಯಸ್ಯ. | (ii) ಮತ್ತು ಮುಕ್ತನಾದ ಬ್ರಹ್ಮ ನಿಷ್ಠನದು. |

(ಇಲ್ಲಿ ಪರಬ್ರಹ್ಮಾನಂದವು ಚತುರ್ಮುಖಾದಿಗಳ ಆನಂದಕ್ಕಿಂತ ಹೆಚ್ಚಾದದ್ದು ಎಂದು ಹೇಳುವುದರಲ್ಲಿಯೇ ತಾತ್ಪರ್ಯ; ಅದಕ್ಕಾಗಿ ನೂರರಷ್ಟು ಎಂದು ಹೇಳಲ್ಪಟ್ಟಿದೆ. ಅಳತೆಮಾಡಿ ಹೇಳುವುದಕ್ಕೆ ಅಲ್ಲ.)

| | |
|---|---|
| ೧೪) ಯಶ್ಚ ಅಸೌ ಆ ದಿ ತ್ಯೇ ಯಶ್ಚ ಅಯಂ ಪುರುಷೆ ಸಃ ಏಕಃ | ೧೪) ಆ ದಿ ತ್ಯ ಮಂಡಲದಲ್ಲಿರುವ ಹಿರಣ್ಮಯನಾದ ಪುಂಡರೀಕಾಕ್ಷನಾದ ಯಾವ ಪುರುಷನುಂಟೋ ಆ ಪುರುಷ ನಾದ ನಾರಾಯಣನೇ (ಹೃದಯದ ಗುಹೆಯಲ್ಲಿರುವ ಜೀವಾಂತರ್ಯಾಮಿ ಯಾದ ಆನಂದ ಮಯನು) ಅವ ನನ್ನೇ ಉಪಾಸನೆ ಮಾಡತಕ್ಕದ್ದು. |
| ೧೫) ಯಃ ಏವಂವಿತ್, ಸಃ ಅಸ್ಮಾನ್ ಲೋಕಾ಼ ಪ್ರೇತ್ಯ ಅನ್ನಮಯಂ ಏತಂ ಆತ್ಮಾನಂ ಉಪಸಂಕ್ರಾಮತಿ; ಪ್ರಾಣಮಯಂ ಏತಂ ಆತ್ಮಾನಂ ಉಪಸಂಕ್ರಾ ಮತಿ; ಮನೋಮಯಂ ಏತಂ ಆತ್ಮಾನಂ ಉಪಸಂಕ್ರಾಮತಿ; ವಿಜ್ಞಾನ ಮಯಂ ಏತಂ ಆತ್ಮಾನಂ ಉ ಪ ಸಂ ಕ್ರಾ ಮ ತಿ, ಆನಂದ ಮಯಂ ಏತಂ ಆತ್ಮಾನಂ ಉಪ | ೧೫) ಯಾವನು ಹೀಗೆ ಉಪಾಸನೆ ಮಾಡುವನೋ (ಚೇತನಾ ಚೇತನ ಗಳನ್ನು ಶರೀರವನ್ನಾಗಿಯೂ ಆದಿತ್ಯ ಮಂಡಲದ ಮಧ್ಯದಲ್ಲಿರುವ ಪುಂಡರೀ ಕಾಕ್ಷನನ್ನಾಗಿ ಸತ್ಯಜ್ಞಾನಾನಂತರೂಪ ನನ್ನಾಗಿಯೂ ಧ್ಯಾನ ಮಾಡುತ್ತಾ ನೆಯೋ) ಅವನು ಈ ಲೋಕವನ್ನು ಅರ್ಚಿರಾದಿಮಾರ್ಗದಿಂದ ಬಿಟ್ಟು ಅನ್ನಶರೀರಕನಾದ ಈ ಪರಮಾತ್ಮ ನನ್ನು ಅನುಭವಿಸುವನು ; ಪ್ರಾಣಶರೀ |

| | |
|---|---|
| ಸಂಕ್ರಾಮತಿ. | ರಕನಾದ ಈ ಪರಮಾತ್ಮನನ್ನು ಅನುಭವಿಸುವನು ; ಮನಶ್ಶರೀರಕನಾದ ಈ ಪರಮಾತ್ಮನನ್ನು ಅನುಭವಿಸುವನು: ಜೀವ ಶರೀರಕನಾದ ಈ ಪರಮಾತ್ಮನನ್ನು ಅನುಭವಿಸುವನು; ಆನಂದಮಯನಾದ ಈ ಪರಮಾತ್ಮನನ್ನು ಅನುಭವಿಸುವನು. |
| ೧೬) ತದಪಿ ಏಷಃ ಶ್ಲೋಕಃ ಭವತಿ. | ೧೬) ಈ ವಿಷಯದಲ್ಲಿಯೂ ಈ ಶ್ಲೋಕವು ಇರುತ್ತದೆ. |

(ಸಮಷ್ಟಿ ವ್ಯಷ್ಟಿ-ವಿಭೂತಿಯುಳ್ಳ ನಿರತಿಶಯಾನಂದಮಯನಾಗಿ ಭೋಗ್ಯವಾಗಿರುವ ಪರಮಾತ್ಮನನ್ನು ಜೀವನು ಭೋಕ್ತಾವಾಗಿ ಮುಕ್ತಿದೆಶೆಯಲ್ಲಿ "ಅನುಭವಿಸುತ್ತಾನೆ." ಆ ಪರಮಾತ್ಮನೊಡನೆ ಐಕ್ಯವಾಗುವುದಿಲ್ಲವೆಂದು ಭಾವ.)

## ೯ನೆಯ ಅನುವಾಕ

ಮೂಲ ಮಂತ್ರ :—ಯತೋವಾಚೋ ನಿವರ್ತಂತೇ। ಅಪ್ರಾಪ್ಯ

ಮನಸಾ ಸಹ । ಆನಂದಂ ಬ್ರಹ್ಮಣೋವಿದ್ವಾನ್ । ನಬಿ

ಭೇತಿಕುತಶ್ಚನೇತಿ । ಏತಗ್‌ಂಹವಾವನತಪತಿ । ಕಿಮ

ಹಂಗ್‌ಂಸಾಧುನಾಽ ಕರವಂ । ಕಿಮಹಂಪಾಪಮಕರ

ವಮಿತಿ । ಸಯ ಏವಂವಿದ್ವಾನೇತೇ ಆತ್ಮಾನಗ್‌ಂ

**ಸ್ಪೃಣುತೇ । ಉಭೇಹ್ಯೇವೈಷ ಏತೇ ಆತ್ಮಾನಗ್ಂ**

**ಸ್ಪೃಣುತೇ । ಯಏವಂವೇದ । ಇತ್ಯುಪನಿಷತ್**

**ಅರ್ಥ.**—ವಾಚಃ – ವಾಕ್ಕುಗಳು, ಮನಸಾಸಹ – ಮನಸ್ಸಿನೊಡನೆ, ಅಪ್ರಾಪ್ಯ–ಇಷ್ಟೇ ಇದೆಯೆಂದು ಹೇಳಲೂ ತಿಳಿಯಲೂ ಆಗದೇ, ಯತಃ–ಯಾವ ಪರಬ್ರಹ್ಮನ ದೆಸೆಯಿಂದ, ನಿವರ್ತ್ತಂತೇ–ಹಿಂತಿರುಗುತ್ತವೆಯೋ, ಬ್ರಹ್ಮಣಃ–ಆ ಪರಬ್ರಹ್ಮನ, ಆನಂದಂ–ನಿರತಿಶಯಾನಂದವನ್ನು, ವಿದ್ವಾನ್–ಅಪರಿಚ್ಛಿನ್ನವೆಂದು ಅನುಭವಿಸಿದವನು, ಕುತಶ್ಚನ–ಯಾತರ ದೆಸೆಯಿಂದಲೂ, ನಬಿಭೇತಿ–ಹೆದರುವುದಿಲ್ಲ. ಏತಂ–ಈ ಬ್ರಹ್ಮಜ್ಞಾನಿಯನ್ನು, ಅಹಂ–ನಾನು; ಸಾಧು–ಸತ್ಕರ್ಮವನ್ನು, ನಾಕರವಂ ಕಿಂ–ಮಾಡಲಿಲ್ಲವೇನೋ. ಅಹಂ–ನಾನು ಪಾಪಂ ಅಕರವಂ ಕಿಂ–ಪಾಪವನ್ನು ಮಾಡಿದೆನೋ ಏನೋ ಎಂಬ ಚಿಂತೆಯು, ನ ತಪತಿ ವಾವ–ಬಾಧಿಸುವುದಿಲ್ಲ. ಯಃ–ಯಾವನು ಏವಂ ವಿದ್ವಾನ್–ಬ್ರಹ್ಮಜ್ಞಾನದ ಮಹಾತ್ಮ್ಯೆಯು, ಹೀಗೆಂದು ತಿಳಿಯುತ್ತಾನೆಯೋ, ಸಃ-ಅವನು, ಏತೇ–ಈ ಪುಣ್ಯ ಪಾಪಗಳಿಂದ, ಆತ್ಮಾನಂ–ತನ್ನನ್ನು, ಸ್ಪೃಣುತೆ-ಕಾಪಾಡಿಕೊಳ್ಳುತ್ತಾನೆ. ಯಃ ಏವಂವೇದ–ಯಾವನು ಹೀಗೆ ತಿಳಿಯುವನೋ, ಏಷಃ–ಈತನು, ಉಭೇ ಏತೇ–ಈ ಪುಣ್ಯಪಾಪಗಳೆರಡರಿಂದಲೂ, ಆತ್ಮಾನಂ–ತನ್ನನ್ನು, ಸ್ಪೃಣುತೇ-ಕಾಪಾಡಿಕೊಳ್ಳುವನು. ಇತಿ–ಹೀಗೆಂದು, ಉಪನಿಷತ್-ರಹಸ್ಯವು.

(ವಾ. ಅರ್ಥ)

| | |
|---|---|
| ೧) ವಾಚಃ ಮನಸಾ ಸಹ ಅಪ್ರಾಪ್ಯಮತಃ ನಿವರ್ತಂತೇ, ಬ್ರಹ್ಮಣಃ ಆನಂದಂ ವಿದ್ವಾನ್ ಕುತಶ್ಚನ ನಬಿಭೇತಿ. | ೧) ವಾಕ್ಕುಗಳು ಮನಸ್ಸಿನೊಡನೆ ಇಷ್ಟೇ ಇದೆಯೆಂದು ತಿಳಿಯಲು ಆಗದೇ ಯಾವ ಪರಬ್ರಹ್ಮನ ದೆಶೆಯಿಂದ ಹಿಂತಿರುಗುತ್ತವೆಯೋ, (ಅಂತಹ) ಪರಬ್ರಹ್ಮನ ನಿರತಿಶಯಾ |

ನಂದವನ್ನು ಅಪರಿಚ್ಛಿನ್ನವೆಂದು ಅನುಭವಿಸಿದವನು ಯಾತರ ದೆಸೆಯಿಂದಲೂ ಹೆದರುವುದಿಲ್ಲ.

೨) ಏತಂ ಅಹಂ ಸಾಧುಸಾಕರವಂಹಿ ಕಿಂ, ಅಹಂ ಪಾಪಂ ಅಕರವಂ ಇತಿ ನ ತಪತಿ ವಾವ.

೨) ಈ ಬ್ರಹ್ಮಜ್ಞಾನಿಯನ್ನು "ನಾನು ಸತ್ಕರ್ಮವನ್ನು ಮಾಡಲಿಲ್ಲವೇನೋ, ಪಾಪವನ್ನು ಮಾಡಿದೆನೋ ಏನೋ" ಎಂಬ ಚಿಂತೆಯು ಬಾಧಿಸುವುದಿಲ್ಲ.

೩) ಯಃ ಏವಂ ವಿದ್ವಾನ್ ಸಃ ಏತೇ ಆತ್ಮಾನಂ ಸ್ಪೃಣುತೇ.

೩) ಯಾವನು ಬ್ರಹ್ಮ ಜ್ಞಾನದ ಮಹಾತ್ಮೆ ಹೀಗಿದೆಯೆಂದು ತಿಳಿಯುತ್ತಾನೆಯೋ ಅವನು ಈ ಪುಣ್ಯ ಪಾಪಗಳಿಂದ ತನ್ನನ್ನು ಕಾಪಾಡಿಕ್ಕೊಳ್ಳುತ್ತಾನೆ.

೪) ಯಃ ಏವಂ ವೇದ ಏಷಃ ಉಭೇವ ತೇ ಆತ್ಮಾನಂ ಸ್ಪೃಣುತೇ ಇತಿ ಉಪನಿಷತ್.

೪) ಯಾವನು ಹೀಗೆ ತಿಳಿಯುವನೋ ಆತನು ಈ ಪುಣ್ಯ ಪಾಪಗಳೆರಡರಿಂದಲೂ ತನ್ನನ್ನು ಕಾಪಾಡಿಕೊಳ್ಳುವನು ಹೀಗೆಂಬುದೇ ರಹಸ್ಯವು.

ಮೂಲ ಮಂತ್ರ—ಸಹನಾವವತು । ಸಹನೌಭುನಕ್ತು । ಸಹ

ವೀರ್ಯಂ ಕರವಾವಹೈ । ತೇಜಸ್ವಿನಾವಧೀತ ಮಸ್ತು ಮಾ

ವಿದ್ವಿಷಾವಹೈ.

ಓಂ ಶಾಂತಿಃ ಶಾಂತಿಃ ಶಾಂತಿಃ

ಅರ್ಥ — ನೌ-ಶಿಷ್ಯಾಚಾರ್ಯರಿಬ್ಬರನ್ನೂ, ಸಹ ಅವತು-ಒಟ್ಟಿಗೆ ಕಾಪಾಡಲಿ. ನೌ-ನಮ್ಮಿಬ್ಬರನ್ನೂ, ಸಹಭುನಕ್ತು-ಒಟ್ಟಿಗೆ ಪಡೆಯಲಿ, ವೀರ್ಯಂ-ಆಯಾಫಲವನ್ನುಂಟುಮಾಡತಕ್ಕ ಸಾಮರ್ಥ್ಯವನ್ನು, ಸಹಕರವಾವಹೈ-ಒಟ್ಟಿಗೆ ಮಾಡುತ್ತೇವೆ. ನೌ-ನಮ್ಮಿಬ್ಬರಿಂದ, ಅಧೀತಂ-ಕಲಿಯಲ್ಪಟ್ಟ ಮಂತ್ರವು, ತೇಜಸ್ವಿ ಅಸ್ತು-ಸಾಮರ್ಥ್ಯವುಳ್ಳದ್ದಾಗಿ ಇರಲಿ. ಮಾವಿದ್ವಿಷಾವಹೈ-ಪರಸ್ಪರ ಅನುರಾಗವುಳ್ಳವರಾಗುತ್ತೇವೆ. (ದ್ವೇಷವಿಲ್ಲದಿರುತ್ತೇವೆ) ಓಂ ಶಾಂತಿಃ ಶಾಂತಿಃ ಶಾಂತಿಃ. ಇತರ ದೋಷಗಳು ನಿವಾರಣೆಯಾಗಲಿ.

| | |
|---|---|
| ೧) ನೌ ಸಹ ಅವತು | ೧) ಶಿಷ್ಯಾಚಾರ್ಯರಿಬ್ಬರನ್ನೂ ಒಟ್ಟಿಗೆ ಕಾಪಾಡಲಿ. |
| ೨) ನೌ ಸಹ ಭುನಕ್ತು | ೨) ನಮ್ಮಿಬ್ಬರನ್ನೂ ಒಟ್ಟಿಗೆ ಪಡೆಯಲಿ, |
| ೩) ವೀರ್ಯಂ ಸಹಕರ ವಾವಹೈ. | ೩) ಆಯಾ ಫಲವನ್ನುಂಟುಮಾಡತಕ್ಕ ಸಾಮರ್ಥ್ಯವನ್ನು ಒಟ್ಟಿಗೆ ಮಾಡುತ್ತೇವೆ. |
| ೪) ನೌ ಅಧೀತಂ ತೇಜಸ್ವಿ ಅಸ್ತು | ೪) ನಮ್ಮಿಬ್ಬರಿಂದ ಕಲಿಯಲ್ಪಟ್ಟ ಮಂತ್ರವು ಸಾಮರ್ಥ್ಯವುಳ್ಳದ್ದಾಗಿ ಆಗಲಿ. |
| ೫) ಮಾವಿದ್ವಿಷಾವಹೈ | ೫) ಪರಸ್ಪರ ಅನುರಾಗವುಳ್ಳವರಾಗುತ್ತೇವೆ. (ದ್ವೇಷವಿಲ್ಲದಿರುತ್ತೇವೆ). |

ಓಂ ಶಾಂತಿಃ ಶಾಂತಿಃ ಶಾಂತಿಃ — ಇತರ ದೋಷಗಳು ನಿವಾರಣೆಯಾಗಿ, ಶಾಶ್ವತವಾದ ಸುಖ ಶಾಂತಿಗಳುಂಟಾಲಿ.

ಶ್ರೀಃ

# ತೈತ್ತಿರೀಯೋಪನಿಷತ್

## III

## (ಭೃಗುವಲ್ಲೀ)

# ಭೃ ಗು ವ ಲ್ಲೀ

## ಹರಿಃ ಓಂ

ಮತ್ತೊಂದು ಲಕ್ಷಣದಿಂದ ಬ್ರಹ್ಮನನ್ನು ತಿಳಿಯಪಡಿಸುವುದಕ್ಕಾಗಿಯೂ ಮತ್ತು ಬ್ರಹ್ಮನನ್ನು ತಿಳಿಯಬೇಕಾದರೆ ತಪಸ್ಸಿನಿಂದ ಪಾಪಗಳನ್ನೆಲ್ಲಾ ಕಳೆದುಕೊಂಡು ನಿಷ್ಕಲ್ಮಷವಾದ ಅಂತಃಕರಣವುಳ್ಳವನಾಗಿರಬೇಕೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿಯೂ, ತಂದೆ–ಮಗ, ಗುರು–ಶಿಷ್ಯ ಸಂವಾದ ರೂಪದಲ್ಲಿ ಈ ಭೃಗುವಲ್ಲಿಯು ಹೇಳಲ್ಪಟ್ಟಿದೆ.

### ಒಂದನೆಯ ಅನುವಾಕ

ಮೂಲ ಮಂತ್ರ :– ಭೃಗುರ್ವೈವಾರುಣಿಃ । ವರುಣಂ ಪಿತರ

ಮುಪ ಸಸಾರ । ಅಧೀಹಿಭಗವೋ ಬ್ರಹ್ಮೇತಿ । ತಸ್ಮಾ

ಏತತ್ಪ್ರೋವಾಚ । ಅನ್ನಂಪ್ರಾಣಂ ಚಕ್ಷುಃ ಶ್ರೋತ್ರಂ

ಮನೋವಾಚ ಮಿತಿ । ತಗ್ಂ ಹೋವಾಚ । ಯತೋವಾ

ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ

ಜೀವಂತಿ । ಯತ್ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾ

ಸಸ್ವ ।ತದ್ಬ್ರಹ್ಮೇತಿ। ಸತಪೋಽತಪ್ಯತ । ಸತಪಸ್ತಪ್ತ್ವಾ ।

**ಅರ್ಥ** :—ಭಗವಃ-ಪೂಜ್ಯನಾದ ವರುಣನೇ ಬ್ರಹ್ಮ ಅಧೀಹಿ-ಬ್ರಹ್ಮ ಜ್ಞಾನವನ್ನು ಉಪದೇಶಿಸು, ಇತಿ-ಹೀಗೆಂದು, ಪಿತರಂ-ತಂದೆಯಾದ, ವರುಣಂ—ವರುಣನನ್ನು, ವಾರುಣಿಃ-ವರುಣನ ಮಗನಾದ, ಭೃಗುಃ-ಭೃಗುವು, ಉಪಸಸಾರ-ಹೊಂದಿದನು. ಅನ್ನಂ, ಪ್ರಾಣಂ, ಚಕ್ಷುಃ, ಶ್ರೋತ್ರಂ, ಮನಃ ವಾಚಂ ಇತಿ-ಅನ್ನವು ಬ್ರಹ್ಮ, ಪ್ರಾಣವು ಬ್ರಹ್ಮ, ಚಕ್ಷುಸ್ಸು ಬ್ರಹ್ಮ, ಶ್ರೋತ್ರವು ಬ್ರಹ್ಮ, ಮನಸ್ಸು ಬ್ರಹ್ಮ, ವಾಕ್ಕು ಬ್ರಹ್ಮ, ಎಂದು, ಏತತ್-ಇದನ್ನು, ತಸ್ಮೈ ಆತನಿಗೆ, ಪ್ರೋವಾಚ-ಹೇಳಿದನು. ತಂ-(ಇವುಗಳೆಲ್ಲಾ ಒಟ್ಟಿಗೆ ಬ್ರಹ್ಮವೋ ಅಥವಾ ಇವುಗಳಲ್ಲಿ ಒಂದು ಬ್ರಹ್ಮವೋ, ಹಾಗಾದರೆ ಯಾವುದು ಬ್ರಹ್ಮ, ಎಂದು ಸಂದೇಹವುಳ್ಳ) ಆ ತನ್ನ ಮಗನನ್ನು ಕುರಿತು, ಇಮಾನಿ ಭೂತಾನಿ-ಈ ಪ್ರಾಣಿಗಳು, ಯತಃ ಯಾವನಿಂದ, ಜಾಯಂತೇ-ಹುಟ್ಟುತ್ತವೆಯೋ, ಜಾತಾನಿ ಹುಟ್ಟಿದವುಗಳು, ಯೇನ-ಆತ್ಮನಾದ ಯಾವನಿಂದ, ಜೀವಂತಿ—ಬದುಕುತ್ತ ವೆಯೋ, ಪ್ರಯಂತಿ-ನಾಶವಾಗತಕ್ಕವುಗಳಾಗಿ, ಯತ್ ಅಭಿಸಂವಿಶಂತಿ-ಯಾವ ನಲ್ಲಿ ಸೇರುತ್ತವೆಯೋ, ತತ್—ಅದನ್ನು, ಬ್ರಹ್ಮ ಇತಿ—ಬ್ರಹ್ಮನೆಂದು, ವಿಜಿಜ್ಞಾಸಸ್ವ ತಿಳಿ. ಹೀಗೆಂದು ಉವಾಚಹ-(ತಂದೆಯು) ಹೇಳಿದನು. ಸಃ-ಆ ಭೃಗುವು, ತಪಃ ಇಂದ್ರಿಯ ನಿಗ್ರಹರೂಪವಾದ ತಪಸ್ಸನ್ನು, ಅತಪ್ಯತ-ಆಚರಿಸಿದನು. (ಏಕಾಗ್ರ ಚಿತ್ತನಾಗಿ ಗುರುವಿನ ಉಪದೇಶವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿದನು).

(ವಾ. ಅರ್ಥ)

| | |
|---|---|
| ೧) ಭಗವಃ ಬ್ರಹ್ಮ ಅಧೀಹಿ ಇತಿ ಪಿತರಂ ವರುಣಂ ವಾರುಣಿಃ ಭೃಗುಃ ಉಪಸಸಾರ. | ೧) ಪೂಜ್ಯನಾದ ವರುಣನೇ! ಬ್ರಹ್ಮ ಜ್ಞಾನವನ್ನು ಉಪದೇಶಿಸು. ಹೀಗೆಂದು ತಂದೆಯಾದ ವರುಣನನ್ನು ವರುಣನ ಮಗನಾದ ಭೃಗುವು ಪ್ರಾರ್ಥಿಸಿದನು. |
| ೨) ಅನ್ನಂ, ಪ್ರಾಣಂ, ಚಕ್ಷುಃ, ಶ್ರೋತ್ರಂ ಮನೋ ವಾಚಂ ಇತಿ ಏತತ್ ತಸ್ಮೈ ಪ್ರೋವಾಚ. | ೨) ಅನ್ನವು ಬ್ರಹ್ಮ, ಪ್ರಾಣವು ಬ್ರಹ್ಮ, ಚಕ್ಷುಸ್ಸು ಬ್ರಹ್ಮ, ಶ್ರೋತ್ರವು ಬ್ರಹ್ಮ, ಮನಸ್ಸು ಬ್ರಹ್ಮ, ವಾಕ್ಕು |

ಬ್ರಹ್ಮ, ಎಂದು ಇದನ್ನು ಆತನಿಗೆ ಹೇಳಿದನು.

೩) ತಂ ಇಮಾನಿ ಭೂತಾನಿ ಯತಃ ಜಾಯಂತೇ, ಜಾತಾನಿ ಯೇನ ಜೀವನ್ತಿ, ಪ್ರಯನ್ತಿ ಯತ್ ಅಭಿಸಂವಿಶನ್ತಿ ತತ್ ಬ್ರಹ್ಮ ಇತಿ ವಿಜಿಜ್ಞಾಸಸ್ವ ಇತಿ ಉವಾಚಹ.

೩) ಇವುಗಳೆಲ್ಲಾ ಒಟ್ಟಿಗೆ ಬ್ರಹ್ಮವೋ ಅಥವ ಇವುಗಳಲ್ಲಿ ಒಂದು ಬ್ರಹ್ಮವೋ ಹಾಗಾದರೆ ಯಾವುದು ಬ್ರಹ್ಮ, ಎಂದು ಸಂದೇಹವುಳ್ಳ ಆತನ ಮಗನನ್ನು ಕುರಿತು—ಈ ಪ್ರಾಣಿಗಳು ಯಾವನಿಂದ ಹುಟ್ಟುತ್ತವೆಯೋ, ಹುಟ್ಟಿದವು ಆತ್ಮನಾದ ಯಾವನಿಂದ ಬದುಕುತ್ತವೆಯೋ ನಾಶವಾಗತಕ್ಕುವುಗಳಾಗಿ ಯಾವನಲ್ಲಿ ಸೇರುತ್ತವೆಯೋ ಅದನ್ನು ಬ್ರಹ್ಮವೆಂದು ತಿಳಿ. (ಹೀಗೆಂದು ತಂದೆಯು) ಹೇಳಿದನು.

೪) ಸಃ ತಪಃ ಅತಪ್ಯತ; ಸಃ ತಪಃ ತಪ್ತ್ವಾ.

೪) ಅ ಭೃಗುವು ಇಂದ್ರಿಯ ನಿಗ್ರಹ ರೂಪವಾದ ತಪಸ್ಸನ್ನು ಆಚರಿಸಿದನು, ಆತನು ತಪಸ್ಸನ್ನುಮಾಡಿ (ಏಕಾಗ್ರ ಚಿತ್ತನಾಗಿ ಗುರುವಿನ ಉಪದೇಶವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿದನು.)

## ೨ನೆಯ ಅನುವಾಕ

ಮೂಲ ಮಂತ್ರ:—ಅನ್ನಂ ಬ್ರಹ್ಮೇತಿ ವ್ಯಜಾನಾತ್ ।

ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।

**ಅನ್ನೇನ ಜಾತಾನಿ ಜೀವಂತಿ । ಅನ್ನಂ ಪ್ರಯಂತ್ಯಭಿಸಂ**

**ವಿಶಂತೀತಿ । ತದ್ವಿಜ್ಞಾಯ । ಪುನರೇವವರುಣಂ ಪಿತರ**

**ಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ**

**ಹೋವಾಚ । ತಪಸಾ ಬ್ರಹ್ಮವಿಜಿಜ್ಞಾಸಸ್ವ । ತಪೋ**

**ಬ್ರಹ್ಮೇತಿ । ಸತಪೋಽ ತಪ್ಯತ । ಸತಪಸ್ತಪ್ತ್ವಾ ।**

**ಅರ್ಥ.**—ಅನ್ನಂ-ಸ್ಥೂಲದೇಹಕ್ಕೆ ಕಾರಣವಾದ ಪಂಚಭೂತಗಳನ್ನು ಬ್ರಹ್ಮ ಇತಿ-ಬ್ರಹ್ಮವೆಂದು, ವ್ಯಜಾನಾತ್-ತಿಳಿದುಕೊಂಡನು, ಇಮಾನಿ ಭೂತಾನಿ-ಈ ಪ್ರಾಣಿಗಳೆಲ್ಲವೂ, ಅನ್ನಾತ್ ಏವಹಿ-ಅನ್ನದಿಂದಲೇ, ಜಾಯಂತೇ ಖಲು-ಹುಟ್ಟುತ್ತವೆಯಲ್ಲವೇ ? ಜಾತಾನಿ - ಹುಟ್ಟಿದವು ಅನ್ನೇನ-ಅನ್ನದಿಂದ, ಜೀವಂತಿ-ಬದುಕುತ್ತವೆ. ಪ್ರಯಂತಿ-ನಾಶವಾಗ ತಕ್ಕವು, ಅನ್ನಂ ಅಭಿಸಂವಿಶಂತಿ-ಅನ್ನವನ್ನೇ ಸೇರುತ್ತವೆ. ಇತಿ-ಆದ ಕಾರಣದಿಂದ (ಅನ್ನವು ಬ್ರಹ್ಮ ವೆನಿಸಿಕೊಳ್ಳಲು ಅರ್ಹವಾದುದು). ತದ್ವಿಜ್ಞಾಯ-ಅನ್ನವು ಬ್ರಹ್ಮವೆಂದು ತಿಳಿದನಂತರ ; (ತೃಪ್ತಿಪಡದೇ) ಪುನಃ ಏವ-ತಿರಿಗಿಯೂ, ಪಿತರಂ ವರುಣಂ-ತಂದೆಯಾದ ವರುಣನನ್ನು, ಭಗವಃ-ಪೂಜ್ಯನೇ, ಬ್ರಹ್ಮ ಅಧೀಹಿ-ಬ್ರಹ್ಮವನ್ನುಉಪದೇಶಿಸು. ಇತಿ-ಹೀಗೆಂದು, ಉಪಸಸಾರ-ಹೊಂದಿದನು. ತಪಃ ಬ್ರಹ್ಮ-ತಪಸ್ಸೇಬ್ರಹ್ಮಜ್ಞಾನಕ್ಕೆ ಕಾರಣವು (ಆದುದರಿಂದ) ತಪಸಾ-ತಪಸ್ಸಿನಿಂದ, ಬ್ರಹ್ಮ-ಬ್ರಹ್ಮನನ್ನು, ವಿಜಿಜ್ಞಾಸಸ್ವ-ತಿಳಿದುಕೋ, ಇತಿ ತಂ ಉವಾಚಹ-ಹೀಗೆಂದು ಅವನನ್ನು ಕುರಿತು, ವರುಣನು ಹೇಳಿದನು. ಸಃ ತಪಃ ಅತಪ್ಯತ ತಪಃತಪ್ತ್ವಾ-ಆ ಭೃಗುವು ತಪಸ್ಸನ್ನು ಆಚರಿಸಿ.

ವಾ—ಅರ್ಥ

| | |
|---|---|
| ೧) ಅನ್ನಂ ಬ್ರಹ್ಮ ಇತಿ ವ್ಯಜಾನಾತ್ ; | ೧) ಸ್ಥೂಲ ದೇಹಕ್ಕೆ ಕಾರಣವಾದ ಪಂಚ ಭೂತಗಳನ್ನು ಬ್ರಹ್ಮವೆಂದು ತಿಳಿದುಕೊಂಡನು. |
| ೨) ಇಮಾನಿ ಭೂತಾನಿ ಅನ್ನಾತ್ ಏವಹಿಜಾಯಂತೇ ಖಲು? ಜಾತಾನಿ ಅನ್ನೇನ ಜೀವಂತಿ; ಪ್ರಯಂತಿ; ಅನ್ನಂ ಅಭಿಸಂ-ವಿಶಂತಿ, ಇತಿ. | ೨) ಈ ಪ್ರಾಣಿಗಳೆಲ್ಲವೂ ಅನ್ನದಿಂದಲೇ ಹುಟ್ಟುತ್ತವೆಯಲ್ಲವೇ ? ಹುಟ್ಟಿದವು ಅನ್ನದಿಂದ ಬದುಕುತ್ತವೆ ; ನಾಶವಾಗುತಕ್ಕುವು ಅನ್ನವನ್ನೇ ಸೇರುತ್ತವೆ; ಆದಕಾರಣದಿಂದ (ಅನ್ನವು) ಬ್ರಹ್ಮವೆನಿಸಿಕೊಳ್ಳಲು ಅರ್ಹವಾದುದು. |
| ೩) ತದ್ವಿಜ್ಞಾಯ, ಪುನರೇವ ಪಿತರಂ ವರುಣಂ "ಭಗರ್ವ ಬ್ರಹ್ಮ ಅಧೀಹಿ" ಇತಿ ಉಪಸಸಾರ. | ೩) ಅನ್ನವು ಬ್ರಹ್ಮವೆಂದು ತಿಳಿದ ನಂತರವೂ (ತೃಪ್ತಿಪಡದೆ) ತಿರುಗಿಯೂ ತಂದೆಯಾದ ವರುಣನನ್ನು—"ಪೂಜ್ಯನೇ! ಬ್ರಹ್ಮವನ್ನು ಉಪದೇಶಿಸು" ಹೀಗೆಂದು ಹೊಂದಿದನು. |
| ೪) ತಪಃ ಬ್ರಹ್ಮ; ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಇತಿ ತಂ ಉವಾಚಹ. | ೪) ತಪಸ್ಸೇ ಬ್ರಹ್ಮಜ್ಞಾನಕ್ಕೆ ಕಾರಣವು ; (ಆದುದರಿಂದ) ತಪಸ್ಸಿನಿಂದ ಬ್ರಹ್ಮನನ್ನು ತಿಳಿದುಕೋ ಹೀಗೆಂದು ಅವನನ್ನು ಕುರಿತು ವರುಣನು ಹೇಳಿದನು. |
| ೫) ಸ ತಪಃ ಅತಪ್ಯತ; ಸಃ ತಪಃ ತಪ್ತ್ವಾ- | ೫) ಆ ಭೃಗುವು ತಪಸ್ಸನ್ನು ಆಚರಿಸಿದನು; ಅವನು ತಪಸ್ಸನ್ನಾಚರಿಸಿ, |

## ೩ನೆಯ ಅನುವಾಕ

ಮೂಲ ಮಂತ್ರ:—ಪ್ರಾಣೋ ಬ್ರಹ್ಮೇತಿ ವ್ಯಜಾನಾತ್ । ಪ್ರಾಣಾ

ದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಪ್ರಾಣೇನ

ಜಾತಾನಿ ಜೀವಂತಿ । ಪ್ರಾಣಂ ಪ್ರಯಂತ್ಯಭಿಸಂವಿಶಂತೀತಿ ।

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ ।

ಅಧೀಹಿಭಗವೋ ಬ್ರಹ್ಮೇತಿ । ತಗ್ಂ ಹೋವಾಚ ।

ತಪಸಾ ಬ್ರಹ್ಮವಿಜಿಜ್ಞಾಸಸ್ವ । ತಪೋಬ್ರಹ್ಮೇತಿ । ಸತಪೋಽ

ತಪ್ಯತ । ಸತಪಸ್ತಪ್ತ್ವಾ ।

**ಅರ್ಥ**—ಪ್ರಾಣಃ ಬ್ರಹ್ಮ ಇತಿ-ಪ್ರಾಣವೇ ಬ್ರಹ್ಮನೆಂದು, ವ್ಯಜಾನಾತ್ ತಿಳಿದುಕೊಂಡನು. ಇಮಾನಿ ಭೂತಾನಿ-ಈ ಪ್ರಾಣಿಗಳು, ಪ್ರಾಣಾತ್ ಏವ ಜಾಯಂತೇಖಲು-ಪ್ರಾಣದಿಂದಲೇ ಹುಟ್ಟುತ್ತವೆಯಲ್ಲವೆ ? ಜಾತಾನಿಪ್ರಾಣೇನ ಜೀವಂತಿ-ಹುಟ್ಟಿದವುಗಳು ಪ್ರಾಣದಿಂದ ಬದುಕುತ್ತವೆ. ಪ್ರಯಂತಿ ಪ್ರಾಣಂ ಅಭಿಸಂವಿಶಂತಿ-ನಾಶವಾಗತಕ್ಕವು ಪ್ರಾಣವನ್ನು ಸೇರುತ್ತವೆ. ಇತಿ—ಆದುದರಿಂದ ಪ್ರಾಣವು ಬ್ರಹ್ಮ. ತತ್ ವಿಜ್ಞಾಯ-ಪ್ರಾಣವು ಬ್ರಹ್ಮವೆಂದು ತಿಳಿದು ನಂತರ (ತೃಪ್ತಿ ಹೊಂದದೆ) ಪುನಃ ಏವ-ಮತ್ತೆ, ಪಿತರಂ ವರುಣಂ-ತಂದೆಯಾದ ವರುಣನನ್ನು, ಭಗವಃ ಅಧೀಹಿ ಬ್ರಹ್ಮ ಇತಿ ಉಪಸಸಾರ-ಪೂಜ್ಯನೇ ಬ್ರಹ್ಮನನ್ನು ಉಪದೇಶಿಸು ಎಂದು ಹೊಂದಿದನು. ಸಃ-ಆತನು, ತಪಸಾ ಬ್ರಹ್ಮವಿಜಿಜ್ಞಾಸಸ್ವ ಇತಿತಂ ಉವಾಚಹ-ತಪಸ್ಸಿನಿಂದ ಬ್ರಹ್ಮನನ್ನು ತಿಳಿದುಕೋ ಎಂದು ಆತನಿಗೆ ಹೇಳಿದನು. ಸಃ ತಪಃ ತಪ್ತ್ವಾ—ಆತನು ತಪಸ್ಸನ್ನು ಆಚರಿಸಿ,

(ವಾ. ಅರ್ಥ)

| | |
|---|---|
| ೧) ಪ್ರಾಣಃ ಬ್ರಹ್ಮ ಇತಿ ವ್ಯಜಾನಾತ್ | ೧) ಪ್ರಾಣವೇ ಬ್ರಹ್ಮನೆಂದು ತಿಳಿದುಕೊಂಡನು. |
| ೨) ಇಮಾನಿ ಭೂತಾನಿ ಪ್ರಾಣಾತ್ ಏವ ಜಾಯಂತೇ ಹಿಖಲು; ಜಾತಾನಿ ಪ್ರಾಣೇನ ಜೀವನ್ತಿ ಪ್ರಯಂತಿ ಪ್ರಾಣಂ ಅಭಿ ಸಂವಿಶಂತಿ | ೨) ಈ ಪ್ರಾಣಿಗಳು ಪ್ರಾಣದಿಂದಲೇ ಹುಟ್ಟುತ್ತವೆಯಲ್ಲವೆ? ಹುಟ್ಟಿದವುಗಳು ಪ್ರಾಣದಿಂದ ಬದುಕುತ್ತವೆ; ನಾಶವಾಗತಕ್ಕವು ಪ್ರಾಣವನ್ನು ಸೇರುತ್ತವೆ. |
| ೩) ಇತಿ ತದ್ವಿಜ್ಞಾಯ ಪುನರೇವ ಪಿತರಂ ವರುಣಂ ಭಗವೋ ಬ್ರಹ್ಮ ಅಧೀಹಿ ಇತಿ ಉಪಸಸಾರ. | ೩) ಆದುದರಿಂದ ಪ್ರಾಣವು ಬ್ರಹ್ಮವೆಂದು ತಿಳಿದ ನಂತರ (ತೃಪ್ತಿ ಹೊಂದದೆ) ಮತ್ತೆ ತಂದೆಯಾದ ವರುಣನನ್ನು "ಪೂಜ್ಯನೇ ಬ್ರಹ್ಮನನ್ನು ಉಪದೇಶಿಸು" ಎಂದು ಹೊಂದಿದನು. |
| ೪) ಸಃ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಇತಿ ತಂ ಉವಾಚಹ. | ೪) ಆತನು ತಪಸ್ಸಿನಿಂದ ಬ್ರಹ್ಮನನ್ನು ತಿಳಿದುಕೋ ಎಂದು ಆತನಿಗೆ ಹೇಳಿದನು. |
| ೫) ಸಃ ತಪಃ ಅತಪ್ಯತ; ಸಃ ತಪಃ ತಪ್ತ್ವಾ. | ೫) ಆ ಭೃಗುವು ತಪಸ್ಸನ್ನು ಮಾಡಿದನು; ಆತನು ತಪಸ್ಸನ್ನು ಆಚರಿಸಿ, |

## ೪ನೆಯ ಅನುವಾಕ

**ಮೂಲ ಮಂತ್ರ**:—ಮನೋ ಬ್ರಹ್ಮೇತಿ ವ್ಯಜಾನಾತ್ ।

ಮನಸೋ ಹ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।

ಮನಸಾಜಾತಾನಿ ಜೀವಂತಿ । ಮನಃ ಪ್ರಯಂತ್ಯಭಿಸಂವಿ

ಶಂತೀತಿ । ತದ್ವಿಜ್ಞಾಯ । ಪುನರೇವರುಣಂ ಪಿತರ ಮುಪ

ಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್‌ಂಹೋ

ವಾಚ। ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋಬ್ರಹ್ಮೇತಿ।

ಸತಪೋಽತಪ್ಯತ। ಸತಪಸ್ತಪ್ತ್ವಾ

**ಅರ್ಥ** :—ಮನಃ ಬ್ರಹ್ಮ ಇತಿ ವ್ಯಜಾನಾತ್-ಮನಸ್ಸೇ ಬ್ರಹ್ಮವೆಂದು ತಿಳಿದನು. ಮನಸಾ ಏವ ಇಮಾನಿ ಭೂತಾನಿ ಜಾಯಂತೇ ಹಿ ಖಲು—ಮನಸ್ಸಿನಿಂದಲೇ ಈ ಪ್ರಾಣಗಳು ಹುಟ್ಟುತ್ತವೆಯಲ್ಲವೇ; ಜಾತಾನಿ ಮನಸಾಜೀವಂತಿ-ಹುಟ್ಟಿದವು ಮನಸ್ಸಿನಿಂದ ಬದುಕುತ್ತವೆ. ಪ್ರಯಂತಿ ಮನಃ ಅಭಿಸಂವಿಶಂತಿ-ನಾಶವಾಗತಕ್ಕವು ಮನಸ್ಸನ್ನು ಸೇರುತ್ತವೆ. ಇತಿ-ಆದಕಾರಣ ಮನಸ್ಸೇ ಬ್ರಹ್ಮವೆಂದು, ತತ್ ವಿಜ್ಞಾಯ-ಅದನ್ನು ತಿಳಿದು, (ತೃಪ್ತಿ ಹೊಂದದೇ) ಪುನಃ ಏವ ಪಿತರಂ ವರುಣಂ-ಮತ್ತೆ ತಂದೆ ವರುಣನನ್ನು, ಭಗಃ, ಬ್ರಹ್ಮ ಅಧೀಹಿ-ಪೂಜ್ಯನೇ ಬ್ರಹ್ಮನನ್ನು ಉಪದೇಶಿಸು, ಇತಿ-ಹೀಗೆಂದು ಉಪಸಸಾರ-ಹೊಂದಿದನು. ತಪಃ ಬ್ರಹ್ಮೇತಿ-ತಪಸ್ಸೇ ಬ್ರಹ್ಮಜ್ಞಾನಕ್ಕೆ ಕಾರಣವಾಗಿರುವುದರಿಂದ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಇತಿತಂ ಉವಾಚಹ-ತಪಸ್ಸಿನಿಂದ ಬ್ರಹ್ಮನನ್ನು ತಿಳಿ ಎಂದು ಆ ಮಗನಾದ ಭೃಗುವಿಗೆ ಹೇಳಿದನು. ಸಃ ತಪಃ ಅತಪ್ಯತ-ಆತನು ತಪಸ್ಸು ಮಾಡಿದನು. ಸಃ ತಪಃ ತಪ್ತ್ವಾ-ಆತನು ತಪಸ್ಸನ್ನು ಆಚರಿಸಿ.

**(ವಾ. ಅರ್ಥ)**

| | |
|---|---|
| ೧) ಮನಃ ಬ್ರಹ್ಮ ಇತಿ ವ್ಯಜಾನಾತ್. | ೧) ಮನಸ್ಸೇ ಬ್ರಹ್ಮವೆಂದು ತಿಳಿದನು. |

| | |
|---|---|
| ೨) ಮನಸಾ ಏವ ಇಮಾನಿ ಭೂತಾನಿ ಜಾಯಾಂತೇಹಿ ಖಲು. | ೨) ಮನಸ್ಸಿನಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆಯಲ್ಲವೇ? |
| ೩) ಜಾತಾನಿ ಮನಸಾ ಜೀವಂತಿ. | ೩) ಹುಟ್ಟಿದವು ಮನಸ್ಸಿನಿಂದಲೇ ಬದುಕುತ್ತವೆ. |
| ೪) ಪ್ರಯಂತಿ ಮನಃ ಅಭಿಸಂವಿಶಂತಿ. | ೪) ನಾಶವಾಗತಕ್ಕವುಗಳು ಮನಸ್ಸನ್ನು ಸೇರುತ್ತವೆ. |
| ೫) ಇತಿ ತದ್ವಿಜ್ಞಾಯ ಪುನರೇವ ಪಿತರಂ ವರುಣಂ ಭಗವೋ ಬ್ರಹ್ಮ ಅಧೀಹಿ ಇತಿ ಉಪಸಸಾರ. | ೫) ಆದಕಾರಣ ಮನಸ್ಸೇ ಬ್ರಹ್ಮವೆಂದು ಅದನ್ನು ತಿಳಿದು (ತೃಪ್ತಿ ಹೊಂದದೆ) ಮತ್ತೆ ತಂದೆ ವರುಣನನ್ನು "ಪೂಜ್ಯನೇ ಬ್ರಹ್ಮನನ್ನು ಉಪದೇಶಿಸು" ಎಂದು ಹೊಂದಿದನು. |
| ೬) ತಪಃ ಬ್ರಹ್ಮೇತಿ; ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಇತಿ ತಂ ಉವಾಚ ಹ. | ೬) ತಪಸ್ಸೇಬ್ರಹ್ಮ ಜ್ಞಾನಕ್ಕೆ ಕಾರಣವಾಗಿರುವುದರಿಂದ ತಪಸ್ಸಿನಿಂದ ಬ್ರಹ್ಮನನ್ನು ತಿಳಿ ಎಂದು ಆ ಮಗನಾದ ಭೃಗುವಿಗೆ ಹೇಳಿದನು. |
| ೭) ಸಃ ತಪಃ ಅತಪ್ಯತ; ಸ ತಪಃ ತಪ್ತ್ವಾ | ೭) ಆತನು ತಪಸ್ಸು ಮಾಡಿದನು; ಆತನು ತಪಸ್ಸನ್ನು ಆಚರಿಸಿ, |

## ೫ನೆಯ ಅನುವಾಕ

**ಮೂಲ ಮಂತ್ರ :—ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ ।**

**ವಿಜ್ಞಾನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।**

ವಿಜ್ಞಾನೇನ ಜಾತಾನಿ ಜೀವಂತಿ । ವಿಜ್ಞಾನಂ ಪ್ರಯಂತ್ಯ

ಭಿಸಂವಿಶಂತೀತಿ । ತದ್ವಿಜಾಯ । ಪುನರೇವ ವರುಣಂ

ಪಿತರ ಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ ।

ತಗ್ಂಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ ।

ತಪೋ ಬ್ರಹ್ಮೇತಿ । ಸತಪೋಽತಪ್ಯತ। ಸತಪಸ್ತಪ್ತ್ವಾ।

**ಅರ್ಥ** :—ವಿಜ್ಞಾನಂ ಬ್ರಹ್ಮ ಇತಿ ವ್ಯಜಾನಾತ್-ಜೀವನೇ ಬ್ರಹ್ಮ ನೆಂದರಿತನು. ವಿಜ್ಞಾನಾತ್ ಇಮಾನಿ ಭೂತಾನಿ ಜಾಯಂತೇ ಖಲು ಹಿ—ಜೀವನಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆಯಲ್ಲವೇ ? ಜಾತಾನಿ ವಿಜ್ಞಾನೇನ ಜೀವಂತಿ—ಹುಟ್ಟಿದವು ಜೀವನಿಂದಲೇ ಬದುಕುತ್ತವೆ ಪ್ರಯಂತಿ ವಿಜ್ಞಾನಂ ಅಭಿಸಂವಿಶಂತಿ— ನಾಶವಾಗುತ್ತಾ ಜೀವನಲ್ಲೇ ಸೇರುತ್ತವೆ. ಇತಿ—ಆದುದರಿಂದ ಜೀವನೇ ಬ್ರಹ್ಮನು ಎಂದು ತತ್ ವಿಜ್ಞಾಯ—ಆ ಬ್ರಹ ನನ್ನು ತಿಳಿದು (ತೃಪ್ತಿಪಡದೇ) ಪುನಃ ಏವ—ಮತ್ತೆ ಪಿತರಂ ಪರುಣಂ ಉಪಸಸಾರ-ತಂದೆಯಾದ ವರುಣನನ್ನು ಸೇರಿದನು. ಭಗವನ್ ಬ್ರಹ್ಮ ಅಧೀಹಿ ಇತಿ—ಪೂಜ್ಯನೇ ಬ್ರಹ್ಮೋಪದೇಶವನ್ನು ಮಾಡು (ಎಂದು ಕೇಳಿದನ್ನು ತಪಃ ಬ್ರಹ್ಮ ಇತಿ—ತಪಸ್ಸೇ ಬ್ರಹ್ಮಜ್ಞಾನಕ್ಕೆ ಕಾರಣವು. ಆದುದರಿಂದ, ತಪಸಾ ಬ್ರಹ್ಮ ವಿಜಿಜ್ಞಾಸಸ್ವ— ತಪಸ್ಸಿನಿಂದ ಬ್ರಹ್ಮನನ್ನು ತಿಳಿ, ಎಂದು ತಂ ಉವಾಚ ಹ—ಅವನನ್ನು ಕುರಿತು ಹೇಳಿದನು. ಸಃ ತಪಃ ಅತಪ್ಯತ—ಅವನು ತಪಸ್ಸನ್ನು ಆಚರಿಸಿದನು. ಸಃ ತಪಃ ತಪ್ತ್ವಾ—ಅವನು ತಪಸ್ಸನು. ಆಚರಿಸಿ,

(ವಾ. ಅರ್ಥ)

| | |
|---|---|
| ೧) ವಿಜ್ಞಾನಂ ಬ್ರಹ್ಮ ಇತಿ ವ್ಯಜಾನಾತ್. | ೧) ಜೀವನೇ ಬ್ರಹ್ಮನೆಂದು ಅರಿತನು. |
| ೨) ವಿಜ್ಞಾನಾತ್ ಇಮಾನಿ ಭೂತಾನಿ ಜಾಯಂತೇ ಖಲು ಹಿ. | ೨) ಜೀವನಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆಯಲ್ಲವೆ? |
| ೩) ಜಾತಾನಿ ವಿಜ್ಞಾನೇನ ಜೀವನ್ತಿ. | ೩) ಹುಟ್ಟಿದವು ಜೀವನಿಂದಲೇ ಬದುಕುತ್ತವೆ. |
| ೪) ಪ್ರಯಂತಿ ವಿಜ್ಞಾನಂ ಅಭಿಸಂವಿಶಂತಿ. | ೪) ನಾಶವಾಗುತ್ತಾ ಜೀವನಲ್ಲೇ ಸೇರುತ್ತವೆ. |
| ೫) ಇತಿತತ್ ವಿಜ್ಞಾಯ ಪುನರೇವ ಪಿತರಂ ವರುಣಂ ಉಪಸಸಾರ | ೫) ಆದುದರಿಂದ ಜೀವನೇ ಬ್ರಹ್ಮನೆಂದು ಆ ಬ್ರಹ್ಮನನ್ನು ತಿಳಿದು (ತೃಪ್ತಿ ಪಡದೆ) ಮತ್ತೆ ತಂದೆಯಾದ ವರುಣನನ್ನು ಸೇರಿದನು. |
| ೬) ಭಗವಃ ಬ್ರಹ್ಮ ಅಧೀಹಿ ಇತಿ | ೬) "ಪೂಜ್ಯನೇ! ಬ್ರಹ್ಮೋಪದೇಶವನ್ನು ಮಾಡು" ಎಂದು ಕೇಳಿದನು. |
| ೭) ತಪಃ ಬ್ರಹ್ಮ, ತಪಸಾಬ್ರಹ್ಮ ವಿಜಿಜ್ಞಾಸಸ್ವ ಇತಿ ತಂ ಉವಾಚಹ. | ೭) ತಪಸ್ಸೇ ಬ್ರಹ್ಮ ಜ್ಞಾನಕ್ಕೆ ಕಾರಣವು; ಆದುದರಿಂದ ತಪಸ್ಸಿನಿಂದ ಬ್ರಹ್ಮನನ್ನು ತಿಳಿ ಎಂದು ಅವನನ್ನು ಕುರಿತು ಹೇಳಿದನು. |
| ೮) ಸಃ ತಪಃ ಅತಪ್ಯತ; ಸಃ ತಪಃ ತಪ್ತ್ವಾ. | ೮) ಅವನು ತಪಸ್ಸನ್ನು ಆಚರಿಸಿದನು; ಅವನು ತಪಸ್ಸನ್ನು ಆಚರಿಸಿ. |

## ೬ನೆಯ ಅನುವಾಕ

**ಮೂಲ ಮಂತ್ರ :—ಆನಂದೋ ಬ್ರಹ್ಮೇತಿ ವ್ಯಜಾನಾತ್ ।**

**ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।**

**ಆನಂದೇನ ಜಾತಾನಿ ಜೀವಂತಿ । ಆನಂದಂ ಪ್ರಯಂತ್ಯಭಿ**

**ಸಂವಿಶಂತೀತಿ । ಸೈಷಾ ಭಾರ್ಗವೀ ವಾರುಣೀ ವಿದ್ಯಾ ।**

**ಪರಮೇವ್ಯೋಮನ್ ಪ್ರತಿಷ್ಠಿತಾ । ಯ ಏವಂ ವೇದ ಪ್ರತಿ**

**ತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ಭವತಿ**

**ಪ್ರಜಯಾಪಶುಭಿರ್ಬ್ರಹ್ಮವರ್ಚಸೇನ । ಮಹಾಕೀರ್ತ್ಯಾ ।**

**ಅರ್ಥ** :—ಆನಂದಂ ಬ್ರಹ್ಮ ಇತಿ ವ್ಯಜಾನಾತ್-ಆನಂದಮಯನೇ ಬ್ರಹ್ಮವೆಂದು ತಿಳಿದನು. ಆನಂದಾತ್ ಇಮಾನಿ ಭೂತಾನಿ ಜಾಯಂತೇ ಖಲು ಹಿ-ಆನಂದಮಯನಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆಯಲ್ಲವೆ? ಜಾತಾನಿ ಆನಂದೇನ ಜೀವಂತಿ-ಆನಂದಮಯನಿಂದಲೇ ಹುಟ್ಟಿದವು ಬದುಕುತ್ತವೆ. ಪ್ರಯಂತಿ ಆನಂದಂ ಅಭಿಸಂವಿಶಂತಿ-ನಾಶವಾಗುತ್ತಾ ಆನಂದಮಯವನ್ನೇ ಸೇರುತ್ತವೆ. ಇತಿ-ಆದಕಾರಣ, (ಆನಂದಮಯನೇ ಬ್ರಹ್ಮನು). ಸಾ ಏಷಾ ಭಾರ್ಗವೀ ವಾರುಣೀ ವಿದ್ಯಾ-ಆ ಇದು ವರುಣನ ಮಗನಾದ ಭೃಗುವು ಅರಿತ ವಿದ್ಯೆಯು. ಪರಮೇವ್ಯೋಮನ್ ಪ್ರತಿಷ್ಠಿತಾ-ಪರಮಾತ್ಮನಲ್ಲಿ ನೆಲೆ ನಿಂತದ್ದು. ಯಃ ಏವಂ ವೇದ-ಯಾವನು ಹೀಗೆ ತಿಳಿಯುತ್ತಾನೆಯೋ, ಸಃ ಪ್ರತಿತಿಷ್ಠತಿ-ಆತನು ಸ್ಥಿರ ಬುದ್ಧಿಯುಳ್ಳವನಾಗಿ ಶಾಶ್ವತ ಸ್ಥಾನದಲ್ಲಿ ನಿಲ್ಲುವನು. ಅನ್ನವಾನ್-ಅನ್ನವುಳ್ಳವನೂ, (ಬ್ರಹ್ಮಜ್ಞಾನವುಳ್ಳವನೂ) ಅನ್ನಾದಃ-ಅನ್ನವನ್ನು ಅನುಭವಿಸತಕ್ಕವನೂ (ಬ್ರಹ್ಮವನ್ನು ಅನುಭವಿಸತಕ್ಕ

ವನೂ) ಭವತಿ-ಆಗುತ್ತಾನೆ. ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ-ಸಂತಾನ, ಪಶು ಬ್ರಹ್ಮತೇಜಸ್ಸು ಇವುಗಳಿಂದ ಮಹಾ೯ ಭವತಿ- ಮಹಾತ್ಮನಾಗುತ್ತಾನೆ. ಕೀರ್ತ್ಯಾಮಹಾ೯ಭವತಿ-ಕೀರ್ತಿಯಿಂದ ಮಹಾತ್ಮನಾಗುತ್ತಾನೆ.

(ವಾ. ಅರ್ಥ)

| | |
|---|---|
| ೧) ಆನಂದಂ ಬ್ರಹ್ಮ ಇತಿ ವ್ಯಜಾನಾತ್. | ೧) ಆನಂದಮಯನೇ ಬ್ರಹ್ಮವೆಂದು ತಿಳಿದನು. |
| ೨) ಆನಂದಾತ್ ಇಮಾನಿ ಭೂತಾನಿಜಾಯಂತೆ ಖಲುಹಿ. | ೨) ಆನಂದಮಯನಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆಯಲ್ಲವೇ ? |
| ೩) ಜಾತಾನಿ ಆನಂದೇನ ಜೀವಂತಿ. | ೩) ಆನಂದಮಯನಿಂದಲೇ ಹುಟ್ಟಿದವು ಬದುಕುತ್ತವೆ. |
| ೪) ಪ್ರಯಂತಿ ಆನಂದಂ ಅಭಿಸಂವಿಶಂತಿ. | ೪) ನಾಶವಾಗುತ್ತಾ ಆನಂದಮಯನನ್ನೇ ಸೇರುತ್ತವೆ. |
| ೫) ಇತಿ | ೫) ಆದಕಾರಣ (ಆನಂದಮಯನೇ ಬ್ರಹ್ಮನು). |
| ೬) ಸಾ ಏಷಾ ಭಾರ್ಗವೀ ವಾರುಣೀ ವಿದ್ಯಾ. | ೬) ಆ ಇದು ವರುಣನ ಮಗನಾದ ಭೃಗುವು ಅರಿತ ವಿದ್ಯೆಯು. |
| ೭) ಪರಮೆ ವ್ಯೋಮನ್ ಪ್ರತಿಷ್ಠಿತಾ. | ೭) ಪರಮಾತ್ಮನಲ್ಲಿ ನೆಲೆ ನಿಂತದ್ದು. |

| | |
|---|---|
| ೮) ಯ ಏವಂ ವೇದ ಸಃ ಪ್ರತಿಷ್ಠತಿ. | ೮) ಯಾವನು ಹೀಗೆ ತಿಳಿಯುತ್ತಾನೆಯೋ ಆತನು ಸ್ಥಿರಬುದ್ಧಿಯುಳ್ಳವನಾಗಿ ಶಾಶ್ವತ ಸ್ಥಾನದಲ್ಲಿ ನಿಲ್ಲುವನು. |
| ೯) ಅನ್ನವಾನ್ ಅನ್ನಾದಃ ಭವತಿ. | ೯) ಅನ್ನವುಳ್ಳವನೂ (ಬ್ರಹ್ಮಜ್ಞಾನವುಳ್ಳವನೂ) ಅನ್ನವನ್ನು ಅನುಭವಿಸತಕ್ಕವನೂ (ಬ್ರಹ್ಮವನ್ನು ಅನುಭವಿಸತಕ್ಕವನೂ) ಆಗುತ್ತಾನೆ. |
| ೧೦) ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಭವತಿ ; ಕೀರ್ತ್ಯಾ ಮಹಾನ್ ಭವತಿ. | ೧೦) ಸಂತಾನ, ಪಶು, ಬ್ರಹ್ಮತೇಜಸ್ಸು ಇವುಗಳಿಂದ ಮಹಾತ್ಮನಾಗುತ್ತಾನೆ; ಕೀರ್ತಿಯಿಂದ ಮಹಾತ್ಮನಾಗುತ್ತಾನೆ. |

ಪ್ರಾಣಶರೀರಗಳೂ, ಜಲತೇಜಸ್ಸುಗಳೂ, ಭೂವ್ಯಾಕಾಶಗಳೂ ಅನ್ನ ಮತ್ತು ಅನ್ನಾದಗಳೆಂಬ ಭಾವನೆಯಿಂದ ಒಂದರಲ್ಲಿ ಒಂದು ನೆಲೆಸಿ ನಿಲ್ಲತಕ್ಕವುಗಳಾಗಿ ಕಡೆಯಲ್ಲಿ ಆನಂದಮಯನಲ್ಲಿ ನೆಲೆ ನಿಲ್ಲುತ್ತವೆ–ಎಂದೂ ಈ ವಿಧವಾದ ವ್ರತವನ್ನೂ ಅದಕ್ಕೆ ಫಲವನ್ನೂ ಮುಂದಿನ ಅನುವಾಕಗಳು ತಿಳಿಯಪಡಿಸುವುವು.

## ೭ ನೆಯ ಅನುವಾಕ

ಮೂಲ ಮಂತ್ರ :—ಅನ್ನಂ ನ ನಿಂದ್ಯಾತ್। ತದ್ವ್ರತಂ।

ಪ್ರಾಣೋವಾ ಅನ್ನಮ್। ಶರೀರಮನ್ನಾದಮ್। ಪ್ರಾಣೇ

ಶರೀರಂ ಪ್ರತಿಷ್ಠಿತಮ್। ಶರೀರೇ ಪ್ರಾಣಃ ಪ್ರತಿಷ್ಠಿತಃ।

ತದೇತದನ್ನ ಮನ್ನೇ ಪ್ರತಿಷ್ಠಿತಮ್। ಸಯ ಏತದನ್ನ
ಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ। ಅನ್ನವಾ
ನನ್ನಾದೋ ಭವತಿ। ಮಹಾನ್ಭವತಿ ಪ್ರಜಯಾ ಪಶುಭಿ
ರ್ಬ್ರಹ್ಮವರ್ಚಸೇನ। ಮಹಾನ್ಕೀರ್ತ್ಯಾ।

ಅರ್ಥ :—ಅನ್ನಂ—ಅನ್ನವನ್ನು, ನನಿಂದ್ಯಾತ್-ತಿರಸ್ಕರಿಸ ಕೂಡದು. (ಅನ್ನದ ಮೂಲಕ ಬ್ರಹ್ಮಜ್ಞಾನವು ಉಂಟಾಗುವುದರಿಂದ). ತತ್ ವ್ರತಂ—(ಬ್ರಹ್ಮಜ್ಞಾನಿಗೆ) ಅದೇ ವ್ರತವು. ಪ್ರಾಣಃ ವಾ ಅನ್ನಂ – ಪ್ರಾಣವೇ ಅನ್ನವು. (ಶರೀರದೊಳಗೆ ಇರುವುದರಿಂದ), ಶರೀರಂ ಅನ್ನಾದಃ—ಶರೀರವು ಅನ್ನಾದ ವೆನಿಸಿಕೊಳ್ಳುವುದು. ಪ್ರಾಣೇ – ಪ್ರಾಣದಲ್ಲಿ (ಪ್ರಾಣದ ಮೂಲಕ) ಶರೀರಂ ಪ್ರತಿಷ್ಠಿತಂ—ಶರೀರವು ನಿಂತಿರುವುದು. ಶರೀರೇ – ಶರೀರದಲ್ಲಿ, ಪ್ರಾಣಃ ಪ್ರತಿಷ್ಠಿತಃ—ಪ್ರಾಣವು ನಿಂತಿರುವುದು. ತತ್ ಏತತ್ ಅನ್ನಂ—ಆ ಈ ಶರೀರವೆಂಬ ಅನ್ನವು, ಅನ್ನೇ ಪ್ರತಿಷ್ಠಿತಂ – ಅನ್ನ ಶಬ್ದವಾಚ್ಯನಾದ ಪರಮಾತ್ಮನಲ್ಲಿ ನೆಲೆ ನಿಂತಿದೆ ಎಂದು ತಿಳಿಯುತ್ತಾನೋ, ಸಃ—ಪ್ರತಿತಿಷ್ಠತಿ—ಅವನು ಬಹ್ಮವಲ್ಲಿ ಶಾಶ್ವತವಾಗಿ ನಿಲ್ಲುತ್ತಾನೆ. ಅನ್ನವಾನ್—ಅನ್ನವುಳ್ಳವನೂ (ಬಹ್ಮಜ್ಞಾನಿಯೂ), ಅನ್ನಾದಃ ಭವತಿ–ಅನ್ನವನ್ನು ಅನುಭವಿಸಿಸತಕ್ಕವನೂ ಆಗುವನು. ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಭವತಿ—ಮಕ್ಕಳು, ಪಶುಸಮೃದ್ಧಿ ಬ್ರಹ್ಮತೇಜಸ್ಸು ಇವುಗಳಿಂದ ಕೂಡಿ ಮಹಾತ್ಮನಾಗುತ್ತಾನೆ. ಕೀರ್ತ್ಯಾ ಮಹಾನ್ ಭವತಿ—ಯಶಸ್ಸಿನಿಂದ ಮಹಾತ್ಮನಾಗುತ್ತನೆ.

ಏಳನೆಯ ಅನುವಾಕದಿಂದ ಮುಂದಿನ ಅನುವಾಕಗಳು ಪ್ರಾಣ ಶರೀರ ಗಳೂ, ಜಲ ತೇಜಸ್ಸುಗಳೂ, ಭೂಮ್ಯಾಕಾಶಗಳೂ, ಅನ್ನ ಮತ್ತು ಅನ್ನಾದಗಳೆಂಬ ಭಾವನೆಯಿಂದ ಒಂದರಲ್ಲಿ ಒಂದು ನೆಲೆನಿಲ್ಲತಕ್ಕವುಗಳಾಗಿ ಕಡೆಯಲ್ಲಿ ಆನಂದಮಯನಲ್ಲಿ ನೆಲೆನಿಲ್ಲುತ್ತವೆಯೆಂದೂ—ಈ ವಿಧವಾದ

ವ್ರತವನ್ನೂ ಅದಕ್ಕೆ ಫಲವನ್ನೂ ಮುಂದಿನ ಅನುವಾಕಗಳು ತಿಳಿಯ ಪಡಿಸುವುವು.

**(ವಾ. ಅರ್ಥ)**

| | |
|---|---|
| ೧) ಅನ್ನಂನ ನಿಂದ್ಯಾತ್; ತತ್ ವ್ರತಂ. | ೧) (ಅನ್ನದ ಮೂಲಕ ಬ್ರಹ್ಮಜ್ಞಾನ ಉಂಟಾಗುವದರಿಂದ) : ಅನ್ನವನ್ನು ತಿರಸ್ಕಾರ ಮಾಡಕೂಡದು. (ಬ್ರಹ್ಮ ಜ್ಞಾನಿಗೆ) ಅದೇ ವ್ರತವು. |
| ೨) ಪ್ರಾಣೋ ವಾ ಅನ್ನಂ; ಶರೀರಂ ಅನ್ನಾದಂ. | ೨) (ಶರೀರದೊಳಗೆ ಇರುವುದರಿಂದ); ಪ್ರಾಣವೇ ಅನ್ನ, ಶರೀರವು ಅನ್ನಾದ ವೆನಿಸಿಕ್ಕೊಳ್ಳುವುದು. |
| ೩) ಪ್ರಾಣೇ ಶರೀರಂ ಪ್ರತಿಷ್ಠಿತಂ ; ಶರೀರೇ ಪ್ರಾಣಃ ಪ್ರತಿಷ್ಠಿತಃ. | ೩) ಪ್ರಾಣನಲ್ಲಿ (ಪ್ರಾಣದ ಮೂಲಕ) ಶರೀರವು ನಿಂತಿರುವುದು ; ಶರೀರದಲ್ಲಿ ಪ್ರಾಣವು ನಿಂತಿರುವುದು. |
| ೪) ತತ್ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ. | ೪) ಆ ಈ ಶರೀರವೆಂಬ ಅನ್ನವು ಅನ್ನಶಬ್ಧ ವಾಚ್ಯನಾದ ಪರಮಾತ್ಮನಲ್ಲಿ ನಿಂತಿರುವುದು. |
| ೫) ಯಃ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ ವೇದ, ಸಃ ಪ್ರತಿ ತಿಷ್ಠತಿ. | ೫) ಯಾವನು ಈ ಅನ್ನವು ಅನ್ನಶಬ್ದ ವಾಚ್ಯನಾದ ಪರಮಾತ್ಮನಲ್ಲಿ ನಿಂತಿದೆ ಎಂದು ತಿಳಿಯುತ್ತಾನೆಯೋ ಅವನು ಬ್ರಹ್ಮನಲ್ಲಿ ಶಾಶ್ವತವಾಗಿ ನಿಲ್ಲುತ್ತಾನೆ. |
| ೬) ಅನ್ನವಾನ್, ಅನ್ನಾದಃ ಭವತಿ ; ಪ್ರಜಯಾ ಪಶುಭಿಃ ಬ್ರಹ್ಮ ವರ್ಚಸೇನ ಮಹಾನ್ ಭವತಿ ; | ೬) ಅನ್ನವುಳ್ಳವನೂ (ಬಹ್ಮಜ್ಞಾನ-ವುಳ್ಳವನೂ), ಅನ್ನವನ್ನು ಅನುಭವಿಸ ತಕ್ಕವನೂ (ಬ್ರಹ್ಮವನ್ನು ಅನುಭವಿಸ |

ಕೀರ್ತ್ಯಾ ಮಹಾ್ನ್ ಭವತಿ. ತಕ್ಕವನೂ) ಆಗುತ್ತಾನೆ; ಮಕ್ಕಳು, ಹಸು, ಬ್ರಹ್ಮತೇಜಸ್ಸು ಇವುಗಳಿಂದ ಕೂಡಿ ಮಹಾತ್ಮನಾಗುತ್ತಾನೆ; ಯಶಸ್ಸಿನಿಂದ ಮಹಾತ್ಮನಾಗುತ್ತಾನೆ.

## ೮ನೆಯ ಅನುವಾಕ

ಮೂಲ ಮಂತ್ರ :—ಅನ್ನಂ ನ ಪರಿಚಕ್ಷೀತ । ತದ್ವ್ರತಮ್ ।

ಆಪೋ ವಾ ಅನ್ನಮ್ । ಜ್ಯೋತಿ ರನ್ನಾದಮ್ । ಅಪ್ಸು

ಜ್ಯೋತಿಃ ಪ್ರತಿಷ್ಠಿತಂ । ಜ್ಯೋತಿಷ್ಯಾಪಃ ಪ್ರತಿಷ್ಠಿತಾಃ ।

ತದೇತದನ್ನಮನ್ನೇ ಪ್ರತಿಷ್ಠಿತಂ । ಸಯ ಏತದನ್ನ ಮನ್ನೇ

ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾ ನನ್ನಾದೋ

ಭವತಿ । ಮಹಾನ್ಭವತಿ ಪ್ರಜಯಾ ಪಶುಭಿರ್ಬ್ರಹ್ಮ

ವರ್ಚಸೇನ । ಮಹಾ್ನ್ ಕೀರ್ತ್ಯಾ ।

ಅರ್ಥ :=ಅನ್ನಂ ನ ಪರಿಚಕ್ಷೀತ—ಅನ್ನವನ್ನು ನಿರಾಕರಿಸಕೂಡದು. ತತ್ ವ್ರತಂ—(ಬ್ರಹ್ಮಜ್ಞಾನಿಗೆ) ಅದೇ ವ್ರತವು. ಆಪಃ ವಾ ಅನ್ನಂ—ನೀರೇ ಅನ್ನವು. ಜ್ಯೋತಿಃ ಅನ್ನಾದಂ—ತೇಜಸ್ಸು ಅನ್ನಾದವು, ಅಪ್ಸು—ನೀರಿನಲ್ಲಿ ಜ್ಯೋತಿಃ—ತೇಜಸ್ಸು, ಪ್ರತಿಷ್ಠಿತಂ—ನೆಲೆಗೊಂಡಿದೆ. ಜ್ಯೋತಿಷಿ—ತೇಜಸ್ಸಿನಲ್ಲಿ, ಆಪಃ ಪ್ರತಿಷ್ಠಿತಾಃ—ನೀರು ನೆಲೆನಿಂತಿದೆ. ತತ್ ಏತತ್ ಅನ್ನಂ ಆ ಈ ಅನ್ನವು, ಅನ್ನೇ—ಬ್ರಹ್ಮನಲ್ಲಿ, ಪ್ರತಿಷ್ಠಿತಂ—ನೆಲೆ

ನಿಂತಿದೆ. ಯಃ—ಯಾವನು, ಏತತ್ ಅನ್ನವು—ಈ ಅನ್ನವು, ಅನ್ನೇ ಪ್ರತಿಷ್ಠಿತಂ ವೇದ....ಅನ್ನದಲ್ಲಿ ನೆಲೆನಿಂತಿದೆಯೆಂದು ತಿಳಿಯುತ್ತಾನೋ ಸಃ ಪ್ರತಿತಿಷ್ಠತಿ—ಅವನು (ಬ್ರಹ್ಮನಲ್ಲಿ) ಶಾಶ್ವತನಾಗಿ ನಿಲ್ಲುತ್ತಾನೆ. ಅನ್ನವಾ೯— ಬ್ರಹ್ಮಜ್ಞಾನಿಯೂ, ಅನ್ನಾದಃ ಭವತಿ....ಬ್ರಹ್ಮಾನುಭವವುಳ್ಳವನೂ ಆಗುತ್ತಾನೆ. ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ—ಮಕ್ಕಳು, ಪಶುಸಮೃದ್ಧಿ ಬ್ರಹ್ಮತೇಜಸ್ಸು ಇವುಗಳಿಂದ ತುಂಬಿ, ಮಹಾ೯ ಭವತಿ-ಮಹಾತ್ಮನಾಗುತ್ತಾನೆ. ಕೀರ್ತ್ಯಾ ಮಹಾ೯ ಭವತಿ—ಕೀರ್ತಿಯಿಂದ ದೊಡ್ಡವನಾಗುತ್ತಾನೆ.

(ವಾ. ಅರ್ಥ)

| | |
|---|---|
| ೧) ಅನ್ನಂ ನ ಪರಿಚಕ್ಷೀತ; ತತ್ ವ್ರತಂ. | ೧) ಅನ್ನವನ್ನು ನಿರಾಕರಿಸಕೂಡದು; ಬ್ರಹ್ಮಜ್ಞಾನಿಗೆ ಅದೇ ವ್ರತವು. |
| ೨) ಆಪೋ ವಾ ಅನ್ನಂ; ಜ್ಯೋತಿರನ್ನಾದಂ. | ೨) ನೀರೇ ಅನ್ನವು; ತೇಜಸ್ಸು ಅನ್ನಾದವು. |
| ೩) ಅಪ್ಸುಃ ಜ್ಯೋತಿಃ ಪ್ರತಿಷ್ಠಿತಂ ; ಜ್ಯೋತಿಷಿ ಆಪಃ ಪ್ರತಿಷ್ಠಿತಾಃ. | ೩) ನೀರಿನಲ್ಲಿ ತೇಜಸ್ಸು ನೆಲೆಗೊಂಡಿದೆ ತೇಜಸ್ಸಿನಲ್ಲಿ ನೀರು ನೆಲೆ ನಿಂತಿದೆ. |
| ೪) ತತ್ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ. | ೪) ಆ ಈ ಅನ್ನವು ಬ್ರಹ್ಮನಲ್ಲಿ ನೆಲೆ ನಿಂತಿದೆ. |
| ೫) ಯಃ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ ವೇದ ಸಃ ಪ್ರತಿತಿಷ್ಠತಿ. | ೫) ಯಾವನು ಈ ಅನ್ನವು ಅನ್ನದಲ್ಲಿ ನೆಲೆ ನಿಂತಿದೆಯೆಂದು ತಿಳಿಯುತ್ತಾನೋ ಅವನು (ಬ್ರಹ್ಮನಲ್ಲಿ) ಶಾಶ್ವತವಾಗಿ ನಿಲ್ಲುತ್ತಾನೆ. |

| | |
|---|---|
| ೭) ಅನ್ನವಾ೯ ಅನ್ನಾದೋ ಭವತಿ ; ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಭವತಿ ; ಕೀರ್ತ್ಯಾ ಮಹಾನ್ ಭವತಿ. | ೭) ಬ್ರಹ್ಮಜ್ಞಾನಿಯೂ ಬ್ರಹ್ಮಾನುಭವವುಳ್ಳವನೂ ಆಗುತ್ತಾನೆ; ಮಕ್ಕಳು ಹಸು, ಬ್ರಹ್ಮತೇಜಸ್ಸು ಇವುಗಳಿಂದ ಕೂಡಿ ಮಹಾತ್ಮನಾಗುತ್ತಾನೆ; ಕೀರ್ತಿಯಿಂದ ದೊಡ್ಡವನಾಗುತ್ತಾನೆ. |

## ೯ ನೆಯ ಅನುವಾಕ

ಮೂಲ ಮಂತ್ರ :—ಅನ್ನಂ ಬಹುಕುರ್ವೀತ। ತದ್ವ್ರತಂ। ಪೃಥಿವೀ ವಾ ಅನ್ನಂ। ಆಕಾಶೋಽನ್ನಾದಃ। ಪೃಥಿವ್ಯಾಮಾಕಾಶಃ ಪ್ರತಿಷ್ಠಿತಃ। ಆಕಾಶೇ ಪೃಥಿವೀ ಪ್ರತಿಷ್ಠಿತಾ। ತತ್ ಏತದನ್ನಮನ್ನೇ ಪ್ರತಿಷ್ಠಿತಂ। ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ। ಅನ್ನವಾನನ್ನಾದೋ ಭವತಿ। ಮಹಾನ್ಭವತಿ ಪ್ರಜಯಾಪಶುಭಿರ್ಬ್ರಹ್ಮವರ್ಚಸೇನ। ಮಹಾನ್ ಕೀರ್ತ್ಯಾ.

ಅರ್ಥ :—ಅನ್ನಂ ಬಹುಕುರ್ವೀತ-ಅನ್ನವನ್ನು ಬಹುವಾಗಿ ಸೇರಿಸಬೇಕು. ತತ್‌ವ್ರತಂ-ಅದೇವ್ರತವು. ಪೃಥಿವೀ ವಾ ಅನ್ನಂ-ಭೂಮಿಯೇ ಅನ್ನವು, ಆಕಾಶಃ ಅನ್ನಾದಃ-ಆಕಾಶವೇ ಅನ್ನಾದ. ಪೃಥಿವ್ಯಾಂ ಆಕಾಶಃ ಪ್ರತಿಷ್ಠಿತಃ-ಭೂಮಿಯಲ್ಲಿ ಆಕಾಶವು ನೆಲೆ ನಿಂತಿದೆ. ಆಕಾಶೇ ಪೃಥಿವೀ ಪ್ರತಿಷ್ಠಿತಾ-ಆಕಾಶದಲ್ಲಿ ಭೂಮಿಯು ನೆಲೆಗೊಂಡಿದೆ, ತತ್ ಏತತ್ ಅನ್ನಂ-ಆ ಈ

ಅನ್ನವು, ಅನ್ನೇ ಪ್ರತಿಷ್ಠಿತಂ-ಬ್ರಹ್ಮನಲ್ಲಿ ನೆಲೆ ನಿಂತಿದೆ. ಯಃ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ–ವೇದ–ಯಾವನು ಈ ಅನ್ನದಲ್ಲಿ ಅನ್ನವು ನೆಲೆಗೊಂಡಿದೆ ಯೆಂದು ತಿಳಿಯುತ್ತಾನೋ, ಸಃ ಪ್ರತಿತಿಷ್ಠತಿ–ಅವನು ನೆಲೆ ನಿಲ್ಲುವನು. ಪ್ರಜಯಾ ಪಶುಭಿಃ ಬ್ರಹ್ಮ ವರ್ಚಸೇನ–ಮಕ್ಕಳು, ಹಸು, ಬ್ರಹ್ಮ ತೇಜಸ್ಸು ಇವುಗಳಿಂದ ಮಹಾ‌ನ್ ಭವತಿ–ಮಹಾತ್ಮನಾಗುತ್ತಾನೆ. ಕೀರ್ತ್ಯಾ ಮಹಾನ್ ಭವತಿ–ಕೀರ್ತಿಯಿಂದ ದೊಡ್ಡವನಾಗುತ್ತಾನೆ.

## ಒಂಭತ್ತನೆಯ ಅನುವಾಕ

(ವಾ. ಅರ್ಥ)

| | |
|---|---|
| ೧) ಅನ್ನಂ ಬಹು ಕುರ್ವೀತ; ತತ್‌ವ್ರತಂ. | ೧) ಅನ್ನವನ್ನು ಬಹುವಾಗಿ ಸೇರಿಸ ಬೇಕು; ಅದೇ ವ್ರತವು. |
| ೨) ಪೃಥಿವೀವಾ ಅನ್ನಂ; ಆಕಾಶಃ ಅನ್ನಾದಃ. | ೨) ಭೂಮಿಯೇ ಅನ್ನವು; ಆಕಾ ಶವೇ ಅನ್ನಾದವು. |
| ೩) ಪೃಥಿವ್ಯಾಂ ಆಕಾಶಃ ಪ್ರತಿ ಷ್ಠಿತಃ; ಆಕಾಶೇ ಪೃಥಿವೀ ಪ್ರತಿ ಷ್ಠಿತಾ. | ೩) ಭೂಮಿಯಲ್ಲಿ ಆಕಾಶವು ನೆಲೆ ನಿಂತಿದೆ; ಆಕಾಶದಲ್ಲಿ ಭೂಮಿಯು ನೆಲೆ ಗೊಂಡಿದೆ. |
| ೪) ತತ್ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ. | ೪) ಆ ಈ ಅನ್ನವು ಬ್ರಹ್ಮನಲ್ಲಿ ನೆಲೆ ನಿಂತಿದೆ. |
| ೫) ಯಃ ಏತತ್ ಅನ್ನಂ ಅನ್ನೇ ಪ್ರತಿಷ್ಠಿತಂ ವೇದ ಸಃ ಪ್ರತಿತಿಷ್ಠತಿ. | ೫) ಯಾವನು ಈ ಅನ್ನದಲ್ಲಿ ಅನ್ನವು ನೆಲೆಗೊಂಡಿದೆಯೆಂದು ತಿಳಿಯುತ್ತಾ ನೆಯೋ ಅವನು (ಬ್ರಹ್ಮನಲ್ಲಿ) ಶಾಶ್ವತ ವಾಗಿ ನಿಲ್ಲುತ್ತಾನೆ. |

| | |
|---|---|
| ೬) ಪ್ರಜಯಾ ಪಶುಭಿಃ ಬ್ರಹ್ಮ ವರ್ಚಸೇನ ಮಹಾನ್ ಭವತಿ; ಕೀರ್ತ್ಯಾ ಮಹಾನ್ ಭವತಿ. | ೬) ಮಕ್ಕಳು, ಹಸು, ಬ್ರಹ್ಮ ತೇಜಸ್ಸು ಇವುಗಳಿಂದ ಕೂಡಿ ಮಹಾತ್ಮ ನಾಗುತ್ತಾನೆ; ಕೀರ್ತಿಯಿಂದ ದೊಡ್ಡವ ನಾಗುತ್ತಾನೆ. |

## ೧೦ ನೆಯ ಅನುವಾಕ

ಮೂಲ ಮಂತ್ರ :—ನ ಕಂಚನ ವಸತೌ ಪ್ರತ್ಯಾಚಕ್ಷೀತ।

ತದ್ವ್ರತಂ। ತಸ್ಮಾದ್ಯಯಾ ಕಯಾಚ ವಿಧಯಾ ಬಹ್ವನ್ನಂ

ಪ್ರಾಪ್ನುಯಾತ್ । ಅರಾಧ್ಯಸ್ಮಾ ಅನ್ನಮಿತ್ಯಾಚಕ್ಷತೇ ।

ಏತದ್ವೈ ಮುಖತೋಽನ್ನಗ್ಂರಾದ್ಧಂ। ಮುಖತೋಽಸ್ಮಾ

ಅನ್ನಗ್ಂರಾಧ್ಯತೇ । ಏತದ್ವೈ ಮಧ್ಯತೋಽನ್ನಗ್ಂ

ರಾದ್ಧಂ । ಮಧ್ಯತೋಽಸ್ಮಾ ಅನ್ನಗ್ಂ ರಾಧ್ಯತೇ ।

ಏತದ್ವಾ ಅಂತತೋಽನ್ನಗ್ಂ ರಾದ್ಧಂ । ಅಂತತೋಽಸ್ಮಾ

ಅನ್ನಗ್ಂ ರಾಧ್ಯತೇ । ಯ ಏವಂ ವೇದ। ಕ್ಷೇಮ ಇತಿ

ಯೋಗಕ್ಷೇಮ ಇತಿ ಪ್ರಾಣಾಪಾನಯೋಃ ।

ಕರ್ಮೇತಿ ಹಸ್ತಯೋಃ । ಗತಿರಿತಿಪಾದಯೋಃ । ವಿಮುಕ್ತಿ

ರಿತಿ ಪಾಯೌ । ಇತಿ ಮಾನುಷೀಃ ಸಮಾಜ್ಞಾಃ । ಅಥ

ದೈವೀಃ । ತೃಪ್ತಿ ರಿತಿ ವೃಷ್ಟೌ । ಬಲಮಿತಿ ವಿದ್ಯುತಿ ।
ಯಶ ಇತಿ ಪಶುಷು । ಜ್ಯೋತಿ ರಿತಿ ನಕ್ಷತ್ರೇಷು ।
ಪ್ರಜಾತಿ ರಮೃತ ಮಾನಂದ ಇತ್ಯುಪಸ್ಥೇ । ಸರ್ವಮಿತ್ಯಾ
ಕಾಶೇ । ತತ್ಪ್ರತಿಷ್ಠೇತ್ಯುಪಾಸೀತ । ಪ್ರತಿಷ್ಠಾವಾನ್ಭವತಿ ।
ತನ್ಮಹ ಇತ್ಯುಪಾಸೀತ । ಮಹಾನ್ಭವತಿ । ತನ್ಮನ ಇತ್ಯು
ಪಾಸೀತ । ಮಾನವಾನ್ಭವತಿ । ತನ್ನಮ ಇತ್ಯುಪಾಸೀತ ।
ನಮ್ಯಂತೇಽಸ್ಮೈ ಕಾಮಾಃ । ತದ್ಬ್ರಹ್ಮೇತ್ಯುಪಾಸೀತ ।
ಬ್ರಹ್ಮವಾನ್ಭವತಿ । ತದ್ಬ್ರಹ್ಮಣಃ ಪರಿಮರ ಇತ್ಯುಪಾಸೀತ ।
ಪರ್ಯೇಣಂ ಮ್ರಿಯನ್ತೇ ದ್ವಿಷಂತಃ ಸಪತ್ನಾಃ । ಪರಿಯೇಽ
ಪ್ರಿಯಾ ಭ್ರಾತೃವ್ಯಾಃ । ಸಯಶ್ಚಾಯಂ ಪುರುಷೇ ।
ಯಶ್ಚಾಸಾವಾದಿತ್ಯೇ । ಸ ಏಕಃ । ಸಯ ಏವಂವಿತ್ ।
ಅಸ್ಮಾಲ್ಲೋಕಾ ತ್ಪ್ರೇತ್ಯ । ಏತಮನ್ನಮಯ ಮಾತ್ಮಾನ
ಮುಪಸಂಕ್ರಮ್ಯ । ಏತಂ ಪ್ರಾಣಮಯ ಮಾತ್ಮಾನ
ಮುಪಸಂಕ್ರಮ್ಯ । ಏತಂ ಮನೋ ಮಯ ಮಾತ್ಮಾನ
ಮುಪಸಂಕ್ರಮ್ಯ । ಏತಂ ವಿಜ್ಞಾನಮಯ ಮಾತ್ಮಾನ

ಮುಪಸಂಕ್ರಮ್ಯ । ಏತಮಾನಂದಮಯ ಮಾತ್ಮಾನ

ಮುಪಸಂಕ್ರಮ್ಯ । ಇಮಾನ್ಲೋಕಾನ್ಕಾಮಾನ್ನೀಕಾಮ

ರೂಪ್ಯನು ಸಂಚರ ೯ । ಏತತ್ಸಾಮಗಾಯನ್ನಾಸ್ತೇ ।

ಹಾ (3)ಉ ಹಾS (3) ಉ ಹಾ (3) ಉ। ಅಹಮನ್ನ

ಮಹಮನ್ನ ಮಹಮನ್ನಂ । ಅಹಮನ್ನಾದೋsಽ ಹಮ

ನ್ನಾದ್ಕೋsಽ ಹಮನ್ನಾದಃ । ಅಹಗ್ಂ ಶ್ಲೋಕಕೃದ

ಹಗ್ಂ ಶ್ಲೋಕಕೃದಹಗ್ಂ ಶ್ಲೋಕಕೃತ್ । ಅಹಮಸ್ಮಿ

ಪ್ರಥಮಜಾ ಋತಾ (3)ಸ್ಯ। ಪೂರ್ವಂದೇವೇಭ್ಯೋ ಅಮೃ

ತಸ್ಯ ನಾಭಿಭಾಯಿ। ಯೋಮಾದದಾತಿ ಸ ಇದೇವ ಮಾ(3)

ವಾಃ । ಅಹಮನ್ನ ಮನ್ನಮದನ್ತ ಮಾ(3) ದ್ಮಿ । ಅಹಂ

ವಿಶ್ವಂ ಭುವನ ಮಭ್ಯಭವಾಂ। ಸುವರ್ಣ ಜ್ಯೋತೀಃ । ಯ

ಏವಂವೇದ । ಇತ್ಯುಪನಿಷತ್ ।

ಅರ್ಥ :—ವಸತೌ–ಮನೆಯಲ್ಲಿ, ಕಂಚನ–ಒಬ್ಬನನ್ನೂ, ನಪ್ರತ್ಯಾಚಕ್ಷೀತ–(ರಾತ್ರಿವೇಳೆಯಲ್ಲಿ) ನಿರಾಕರಿಸಕೂಡದು. ತತ್ ವ್ರತಂ–ಅದುವ್ರತ. ತಸ್ಮಾತ್–ಆದಕಾರಣ, (ಎಲ್ಲರಿಗೂ ಅನ್ನಹಾಕುವುದಕ್ಕಾಗಿ) ಯಯಾ ಕಯಾ ವಿಧಯಾಚ–ಯಾವರೀತಿಯಿಂದಾಗಲಿ, ಬಹು ಅನ್ನಂ–ಬಹಳ (ವಾಗಿ) ಅನ್ನವನ್ನು. ಪ್ರಾಪ್ನುಯಾತ್–ಸಂಪಾದಿಸಬೇಕು. ಅಸ್ಮೈ–ಇವನಿಗಾ

ಗಿಯೇ, ಅನ್ನಂ-ಅನ್ನವು, ಆರಾಧಿ-ಉಂಟಾಗುವುದು. ಇತಿ-ಹೀಗೆಂದು ಆಚಕ್ಷತೇ-ಹೇಳಲ್ಪಡುತ್ತದೆ. ಮುಖತಃ-ಆದಿಯಲ್ಲಿಯೂ ಏತತ್ ಅನ್ನಂ-ಈ ಅನ್ನವು, ರಾದ್ಧಂವೈ-ಉಂಟಾಗಿದೆಯಲ್ಲವೇ ? ಅನ್ನಂ ಅಸ್ಮೈಮುಖತಃ ರಾಧ್ಯತೇ-ಅನ್ನವು ಇವನಿಗಾಗಿ ಆದಿಯಲ್ಲಿ ಸಿದ್ಧವಾಗಿದೆ. ಮಧ್ಯತಃ-ಮಧ್ಯದಲ್ಲಿ, ಏತತ್ ಅನ್ನಂ-ಈ ಅನ್ನವು. ರಾದ್ಧಂ ವೈ-ಉಂಟಾಗಿದೆಯಲ್ಲವೇ ? ಅನ್ನಂ ಅಸ್ಮೈ ಮಧ್ಯತಃ ರಾಧ್ಯತೇ-ಅನ್ನವು ಇವನಿಗಾಗಿ ಮಧ್ಯದಲ್ಲಿ ಸಿದ್ಧವಾಗಿದೆ, ಅಂತತಃ-ಕೊನೆಯಲ್ಲಿ, ಏತತ್ ಅನ್ನಂ-ಈ ಅನ್ನವು, ರಾದ್ಧಂವೈ-ಉಂಟಾಗಿದೆಯಲ್ಲವೇ ? ಅನ್ನಂ ಅಸ್ಮೈ ಅಂತತಃ ರಾಧ್ಯತೇ-ಅನ್ನವು ಇವನಿಗಾಗಿ ಕಡೆಯಭಾಗದಲ್ಲಿಯೂ ಸಿದ್ಧವಾಗಿದೆ. (ಎಲ್ಲಾ ಕಡೆಯಲ್ಲಿಯೂ ಈ ಉಪಾಸಕನಿಗಾಗಿಯೇ ಅನ್ನವು ಸೃಷ್ಟಿಸಲ್ಪಟ್ಟಿದೆ ಎಂದು ಭಾವ). ಏವಂಯಃ ವೇದ-ಯಾವನು ಹೀಗೆ ಅನ್ನದ ಮಹಿಮೆಯನ್ನು ತಿಳಿಯುತ್ತಾನೆಯೋ, ಸಃ-ಅವನು, ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್-ಯಾವುದಾದರೂ ವಿಧದಿಂದ ಅಧಿಕವಾಗಿ ಅನ್ನವನ್ನು ಹೊಂದಲೇಬೇಕು. ವಾಚಿ ಕ್ಷೇಮ ಇತಿ-(ಬುದ್ಧಿಃಕರ್ತವ್ಯಾ) ವಾಕ್ಕು ಕ್ಷೇಮಕ್ಕೆ ಸಾಧನವಾದುದರಿಂದ ವಾಕ್ಕಿನಲ್ಲಿ ಕ್ಷೇಮವೆಂಬ ಬುದ್ಧಿಯನ್ನು ಮಾಡಬೇಕು. ಪ್ರಾಣಾಪಾನಯೋಃ-ಪ್ರಾಣಾಪಾನಗಳಲ್ಲಿ, ಯೋಗಕ್ಷೇಮ ಇತಿ-ಯೋಗಕ್ಷೇಮವೆಂಬ ಬುದ್ಧಿಯನ್ನು ಮಾಡಬೇಕು. ಹಸ್ತಯೋಃ-ಕೈಗಳಲ್ಲಿ, ಕರ್ಮ ಇತಿ-ಕರ್ಮಬುದ್ಧಿಯನ್ನು ಮಾಡಬೇಕು. ಪಾಯೌ ವಿಮುಕ್ತಿಃ ಇತಿ-ಪಾಯು ಇಂದ್ರಿಯದಲ್ಲಿ ವಿಮೋಚನ ಸಾಧನ ಬುದ್ಧಿಯನ್ನು ಮಾಡಬೇಕು. ಇತಿ ಮಾನುಷೀಃ ಸಮಾಜ್ಞಾಃ-ಹೀಗೆ ಆಧ್ಯಾತ್ಮಿಕ ಸಂಜ್ಞೆಗಳು ಹೇಳಲ್ಪಟ್ಟವು. ಅಥ ದೈವೀಃ-ಬಳಿಕ ದೈವಿಕವಸ್ತುಗಳ ವಿಷಯದಲ್ಲಿ, ಉಪಾಸನೆ ಹೇಗಿರಬೇಂಬುದನ್ನು ಹೇಳುವುದು. ವೃಷ್ಟೌ ತೃಪ್ತಿಃ ಇತಿ-ಮಳೆಯಲ್ಲಿ ತೃಪ್ತಿಸಾಧನೆ ಬುದ್ಧಿಯನ್ನು ಮಾಡಬೇಕು. ವಿದ್ಯುತಿ ಬಲಂ ಇತಿ-ಮಿಂಚಿನಲ್ಲಿ ಬಲಸಾಧನ ಬುದ್ಧಿಯನ್ನು ಮಾಡಬೇಕು. ಪಶುಷು ಯಶಃ ಇತಿ-ಪಶುಗಳಲ್ಲಿ ಕೀರ್ತಿ ಸಾಧನ ಬುದ್ಧಿಯನ್ನು ಮಾಡಬೇಕು. ನಕ್ಷತ್ರೇಷು ಜ್ಯೋತಿಃ-ನಕ್ಷತ್ರಗಳಲ್ಲಿ ಬೆಳಕಿಗೆ ಸಾಧನವೆಂಬ ಬುದ್ಧಿಯನ್ನು ಮಾಡಬೇಕು. ಪ್ರಜಾತಿ-ಪುತ್ರನು, ಅಮೃತಂ ಇತಿ-ಅಮೃತಕ್ಕೆ

ಸಾಧನವೆಂಬ ಬುದ್ಧಿಯನ್ನು, ಉಪಸ್ಥೇ-ಉಪಸ್ಥೇಂದ್ರಿಯದಲ್ಲಿ ಆನಂದ ಇತಿ-ಆನಂದಹೇತುವೆಂಬ ಬುದ್ಧಿಯನ್ನು, ಆಕಾಶೇ ಸರ್ವಂ ಇತಿ-ಆಕಾಶದಲ್ಲಿ (ಬ್ರಹ್ಮದಲ್ಲಿ) ಸರ್ವ-ಸಾಧನ ಬುದ್ಧಿಯನ್ನೂ ಮಾಡಬೇಕು. ತತ್ ಪ್ರತಿಷ್ಠಾ ಇತಿ-ಆ ಬ್ರಹ್ಮವೇ ನೆಲೆಯೆಂದು, ಉಪಾಸೀತ-ಉಪಾಸನೆ ಮಾಡಬೇಕು. ಪ್ರತಿಷ್ಠಾವಾನ್ ಭವತಿ-ಹಾಗೆ ಉಪಾಸನೆ ಮಾಡಿದವನು ನೆಲೆಯುಳ್ಳವನಾಗುತ್ತಾನೆ. ತತ್ ಮಹಃ ಇತಿ ಉಪಾಸೀತ-ಅದು ದೊಡ್ಡದೆಂದು ಉಪಾಸನೆ ಮಾಡಬೇಕು. ಸಃ-ಆತನು, ಮಹಾನ್ ಭವತಿ-ದೊಡ್ಡವನು ಆಗುತ್ತಾನೆ. ತತ್ ಮನಃ ಇತಿ ಉಪಾಸೀತ-ಅದು ಮನಸ್ಸೆಂದು ಉಪಾಸನೆ ಮಾಡಬೇಕು. ಸಃ ಮಾನವಾನ್ ಭವತಿ-ಅವನು ಮಾನವಂತನಾಗುತ್ತಾನೆ. (ಮನನ ಮಾಡಲು ಸಮರ್ಥನಾಗುತ್ತಾನೆ). ತತ್ ನಮಃ ಇತಿ ಉಪಾಸೀತ-ಅದನ್ನು ನಮನಗುಣವುಳ್ಳದ್ದೆಂದು ಉಪಾಸನೆ ಮಾಡಬೇಕು. ಅಸ್ಮೈ-ಈ ಉಪಾಸಕನಿಗೆ, ಕಾಮಾಃ-ವಿಷಯಗಳೆಲ್ಲವೂ. ನಮ್ಯಂತೇ-ಬಂದು ಸೇರುತ್ತವೆ. ತತ್ ಬ್ರಹ್ಮ ಇತಿ ಉಪಾಸೀತ-ಅದನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು ಸಃ ಬ್ರಹ್ಮವಾನ್‌ಭವತಿ-ಆತನು ಬೃಹತ್ತಿನ ಗುಣವುಳ್ಳವನು ಆಗುತ್ತಾನೆ. ತತ್ ಬ್ರಹ್ಮಣಃ ಪರಿಮರಃ ಇತಿ ಉಪಾಸೀತ-ಆಕಾಶವನ್ನು ಬ್ರಹ್ಮಸಂಬಂಧಿಯಾದ, ಸಾರ್ವತ್ರಿಕ ಮರಣಕ್ಕೆ ಅವಕಾಶಕೊಡತಕ್ಕ ಆಶ್ರಯನೆಂದು ಉಪಾಸನೆ ಮಾಡಬೇಕು. ಸಪತ್ನಾಃ ದ್ವಿಷಂತಃ-ಸವತಿ ಮಕ್ಕಳೂ ಶತ್ರುಗಳೂ ಏನಂ-ಉಪಾಸಕನ, ಪರಿತೋಮ್ರಿಯಂತೆ-ಸುತ್ತಲೂ ಸಾಯುತ್ತಾರೆ ಯೇ ಅಪ್ರಿಯಾ ಭ್ರಾತೃವ್ಯಾಃ-ಯಾವ ಪ್ರೀತಿಯಿಲ್ಲದ ದಾಯಾದರುಂಟೋ, ಏನಂ ಪರಿಮ್ರಿಯಂತೇ-ಈತನ ಸುತ್ತಲೂ ಸಾಯುತ್ತಾರೆ. ಅಂದರೆ, ಅನಿಷ್ಟ ನಿವೃತ್ತಿಯಾಗಿ, ಇಷ್ಟಪ್ರಾಪ್ತಿ ಉಂಟಾಗುವುದು ಎಂದು ಭಾವ. ಯಶ್ಚ ಅಸೌ ಆದಿತ್ಯೇ-ಯಾವನು ಈ ಆದಿತ್ಯನಲ್ಲಿ ಅಂತರ್ಯಾಮಿಯಾಗಿರುವನೋ, ಸಃ ಚ ಅಯಂ-ಆ ಇವನೇ, ಪುರುಷೇ-ಪುರುಷನಲ್ಲಿಯೂ ಅಂತರ್ಯಾಮಿಯಾಗಿರುವನು ಸಃ ಏಕಃ-ಎರಡರಲ್ಲಿಯೂ ಅಂತರ್ಯಾಮಿಯಾಗಿರುವ ಆತನು ಒಬ್ಬನೇ, ಯಃ ಏವಂವಿತ್-ಯಾವನು ಹೀಗೆ ತಿಳಿಯುತ್ತಾನೆಯೋ, ಸಃ-ಆತನು. ಅಸ್ಮಾತ್ ಲೋಕಾತ್ ಪ್ರೇತ್ಯ-ಈ ಲೋಕದಿಂದ ಅರ್ಚಿರಾದಿಮಾರ್ಗದಿಂದ ಹೊರಟು,

ಅನ್ನಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ-ಈ ಅನ್ನಶರೀರಕನಾದ ಈ ಪರಮಾತ್ಮನನ್ನು ಅನುಭವಿಸಿ, ಪ್ರಾಣಮಯಂ ಏತಂ ಆತ್ಮಾನಂ ಉಪ ಸಂಕ್ರಮ್ಯ-ಈ ಪ್ರಾಣಶರೀರಕನಾದ ಪರಮಾತ್ಮನನ್ನು ಅನುಭವಿಸಿ, ಮನೋ ಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ-ಈ ಮನಶ್ಶರೀರಕ ಪರಮಾತ್ಮ ನನ್ನು ಅನುಭವಿಸಿ, ವಿಜ್ಞಾನಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ-ಈ ಜೀವಶರೀರಕ ಪರಮಾತ್ಮನನ್ನು ಅನುಭವಿಸಿ, ಆನಂದಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ-ಆನಂದಮಯನಾದ ಪರಮಾತ್ಮನನ್ನು ಅನುಭವಿಸಿ ಕಾಮಾನ್ನೀ-ಕಲ್ಯಾಣಗುಣಗಳನ್ನು ಅನುಭವಿಸುತ್ತಾ, ಕಾಮರೂಪೀ-ಸಂಕಲ್ಪ ಮಾತ್ರದಿಂದುಂಟಾಗುವ ರೂಪವುಳ್ಳವನಾಗಿ, ಇಮಾನ್ ಲೋಕಾನ್-ಈ ಲೋಕ ಗಳಲ್ಲಿ ಪರಮಾತ್ಮನ ದಾಸನಾಗಿ, ಅನು ಸಂಚರನ್-ಸಂಚರಿಸುತ್ತಾ, ಹಾ (3) ಉ ಹಾ (3) ಉ ಹಾ (3)ಉ, ಏತತ್ ಸಾಮ- ಈ ವಿಧವಾದ ಸಾಮವನ್ನು, ಗಾಯನ್ ಆಸ್ತೇ-ಹಾಡುತ್ತಾ ಇರುತ್ತಾನೆ. ಅಹಂ-ನನ್ನ ಅಂತರಾತ್ಮನಾದ ಪರಮಾತ್ಮನು, (ಆ ನಾನು) ಅನ್ನಂ-ಭೋಗ್ಯವಾದ ಅನ್ನವೆಂದೂ ಹೇಳಲ್ಪಡತಕ್ಕವನು. ಅಹಂ ಅನ್ನಾದಃ-ಆ ಪರಮಾತ್ಮನು ಭೋಕ್ತೃವಾದ ಅನ್ನಾದವೆಂದೂ ಹೇಳಲ್ಪಡತಕ್ಕವನು. ಅಹಂ ಅನ್ನಾದಃ-ಆ ಪರಮಾತ್ಮನು ಭೋಕ್ತೃವಾದ ಅನ್ನಾದವೆಂದೂ ಹೇಳಲ್ಪಡತಕ್ಕವನು. ಅಹಂ ಶ್ಲೋಕಕೃತ್ ಆ ಪರಮಾತ್ಮನು ಜಗತ್ತನ್ನು ರಕ್ಷಣೆ ಮಾಡತಕ್ಕವನು. ಅಹಂ-ಆ ಪರ ಮಾತ್ಮನು, ಋತಸ್ಯ-ಕರ್ಮದ, ಪ್ರಥಮಜಾ-ಸೃಷ್ಟಿಯ ಆರಂಭದಲ್ಲಿ ಪರಿಪಾಕ ಮಾಡತಕ್ಕವನು, ಅಸ್ಮಿ-ಆಗಿದ್ದಾನೆ, (ಆ ನಾನು ಆಗಿದ್ದೇನೆ), ದೇವೇಭ್ಯಃ ಪೂರ್ವಂ-ದೇವತೆಗಳಿಂತ ಮೊದಲು ಇರತಕ್ಕ, ಅಮೃತಸ್ಯ-ಮೋಕ್ಷದ, ನಾಭಿಃ-ಚಕ್ರದ ನಾಭಿಯಂತೆ ಆಶ್ರಯವಾದವನು, (ನಾಭಾ ಇ. ಎಂಬುದು "ನಾಭಿ" ಎಂಬುದರ ಗಾನವಿಕಾರ) ಅಸ್ಮಿ-ಆಗಿದ್ದಾನೆ. ಯಃ-ಯಾವನು, ಮಾ-ನನ್ನನ್ನು ದದಾತಿ-ಯೋಗ್ಯನಾದ ಶಿಷ್ಯನಿಗೆ ಉಪದೇಶ ಮಾಡುತ್ತಾನೆಯೋ, ಸಃ ಏವ-ಅವನೇ, (ಇತ್-ಎಂಬುದಕ್ಕೆ ಅರ್ಥವಿಲ್ಲ) ಮಾ-ನನ್ನನ್ನು, ಆವಾಃ-ಹೊಂದು ತ್ತಾನೆ. ಅಹಂ-ನಾನು (ನನಗೆ ಅಂತರ್ಯಾಮಿಯಾದ ಪರಮಾತ್ಮನು) ಅನ್ನಂ-ಭೋಗ್ಯವಾದ ಆ ಚೇತನವನ್ನೂ, ಚ-ಮತ್ತು, ಅನ್ನಂ ಅದನ್ತಂ-ಅಚೇತನ

ವನ್ನು ಅನುಭವಿಸುವ ಚೇತನವರ್ಗವನ್ನೂ, ಆದ್ಮಿ-ವ್ಯಾಪಿಸುವೆನು. ಅಹಂ-ನಾನು (ಪರಮಾತ್ಮನು) ವಿಶ್ವಂ ಭುವನಂ-ಪ್ರಪಂಚವೆಲ್ಲವನ್ನೂ, ಅಭ್ಯಭವಂ-ಸಂಹರಿಸತಕ್ಕವನಾಗಿದ್ದೇನೆ. ಯಃ ಏವಂ ವೇದ-ಯಾವನು ಹೀಗೆ ತಿಳಿಯುತ್ತಾನೆಯೋ, ಸುವರ್ಣ ಜ್ಯೋತೀಃ-ಹೊಳೆಯುತ್ತಿರುವ ಶರೀರವುಳ್ಳವನಾಗುತ್ತಾನೆ. ಇತಿ ಉಪನಿಷತ್-ಹೀಗೆ ಉಪನಿಷತ್ತು ಸಂಪೂರ್ಣವಾಯಿತು.

(ವಾ ಅರ್ಥ)

| | |
|---|---|
| ೧) ವಸತೌ ಕಂಚನ ನ ಪ್ರತ್ಯಾ ಚಕ್ಷೀತ ; ತದ್ವ್ರತಂ. | ೧) ಮನೆಯಲ್ಲಿ ಒಬ್ಬನನ್ನೂ ರಾತ್ರಿ ವೇಳೆಯಲ್ಲಿ ನಿರಾಕರಿಸಕೂಡದು ; ಅದು ವ್ರತ. |
| ೨) ತಸ್ಮಾತ್ ಯಯಾ ಕಯಾಚ ವಿಧಯಾ ಚ ಬಹು ಅನ್ನಂ ಪ್ರಾಪ್ನುಯಾತ್. | ೨) ಆದಕಾರಣ (ಎಲ್ಲರಿಗೂ ಅನ್ನ ಹಾಕುವುದಕ್ಕಾಗಿ) ಯಾವ ರೀತಿಯಿಂದಾಗಲೀ ಬಹಳ(ವಾಗಿ) ಅನ್ನವನ್ನು ಸಂಪಾದಿಸಬೇಕು. |
| ೩) ಅಸ್ಮೈ ಅನ್ನಂ ಅರಾಧಿ ಇತಿ ಆಚಕ್ಷತೇ. | ೩) ಇವನಿಗಾಗಿಯೇ ಅನ್ನವು ಉಂಟಾಗಿರುವುದು ಹೀಗೆಂದು ಹೇಳಲ್ಪಡುತ್ತದೆ. |
| ೪) ಮುಖತಃ ಏತತ್ ಅನ್ನಂ ರಾದ್ಧಂ ; ವೈ. ಅನ್ನಂ ಅಸ್ಮೈ ಮುಖತಃ ರಾಧ್ಯತೇ. | ಆದಿಯಲ್ಲಿಯೂ ಈ ಅನ್ನವು ಉಂಟಾಗಿದೆಯಲ್ಲವೇ? ಅನ್ನವು ಇವನಿಗಾಗಿ ಆದಿಯಲ್ಲಿಯೇ ಸಿದ್ಧವಾಗಿದೆ. |
| ೫) ಮಧ್ಯತಃ ಏತತ್ ಅನ್ನಂ ರಾದ್ಧಂವೈ. ಅನ್ನಂ ಅಸ್ಮೈ ಮಧ್ಯತಃ ರಾಧ್ಯತೇ. | ೫) ಮಧ್ಯದಲ್ಲಿ ಈ ಅನ್ನವು ಉಂಟಾಗಿದೆಯಲ್ಲವೇ. ಅನ್ನವು ಮಧ್ಯದಲ್ಲಿಯೂ ಇವನಿಗಾಗಿ ಸಿದ್ಧವಾಗಿದೆ. |

೬) ಅಂತತಃ ಏತತ್ ಅನ್ನಂ ರಾದ್ಧಂ ವೈ. ಅಸ್ಮೈ ಅಂತತಃ ಅನ್ನಂ ರಾಧ್ಯತೇ.

೬) ಕೊನೆಯಲ್ಲಿ ಈ ಅನ್ನವು ಉಂಟಾಗಿದೆಯಲ್ಲವೆ. ಇವನಿಗಾಗಿ ಕೊನೆಯಲ್ಲಿಯೂ ಈ ಅನ್ನವು ಸಿದ್ಧವಾಗಿದೆ. (ಎಲ್ಲಾ ಕಡೆಯಲ್ಲಿಯೂ, ಈ ಉಪಾಸಕನಿಗಾಗಿಯೇ "ಇದೇ ಅನ್ನವು" ಸಿದ್ಧವಾಗಿ ಸೃಷ್ಟಿಸಲ್ಪಟ್ಟಿದೆ ಎಂದು ಭಾವ)

೭) ಏವಂ ಯಃ ವೇದ, ಸಃ ಯ ಯಾ ಕ ಯಾ ವಿ ಧ ಯಾ ಬಹ್ವನ್ನಂ ಪ್ರಾಪ್ನುಯಾತ್.

೭) ಯಾವನು ಹೀಗೆ 'ಈ ಅನ್ನದ' ಮಹಿಮೆಯನ್ನು ತಿಳಿಯುತ್ತಾನೋ, ಅವನು ಯಾವುದಾದರೊಂದು ವಿಧದಿಂದ ಅನ್ನವನ್ನು ಹೊಂದಲೇಬೇಕು.

೮) ವಾಚಿ ಕ್ಷೇಮ ಇತಿ ; (ಬುದ್ಧಿಃ ಕರ್ತವ್ಯಾ).

೮) ವಾಕ್ಕು ಕ್ಷೇಮಕ್ಕೆ ಸಾಧನವಾದುದರಿಂದ, ವಾಕ್ಕಿನಲ್ಲಿ ಕ್ಷೇಮವೆಂಬ ಬುದ್ಧಿಯನ್ನು ಮಾಡಬೇಕು.

೯) ಪ್ರಾಣಾಪಾನಯೋಃ ಯೋಗಕ್ಷೇಮ ಇತಿ ; ಹಸ್ತಯೋಃ ಕರ್ಮ ಇತಿ ; ಪಾದಯೋಃ ಗತಿ ಇತಿ ; ಪಾಯೌ ವಿಮುಕ್ತಿಃ ಇತಿ (ಬುದ್ಧಿಃ ಕರ್ತವ್ಯಾ)

೯) ಪ್ರಾಣಾಪಾನಗಳಲ್ಲಿ ಯೋಗಕ್ಷೇಮವೆಂಬ ಬುದ್ಧಿಯನ್ನು ಮಾಡಬೇಕು ; ಕೈಗಳಲ್ಲಿ ಕರ್ಮಬುದ್ಧಿಯನ್ನು ಮಾಡಬೇಕು ಕಾಲುಗಳಲ್ಲಿ ಗಮನಬುದ್ಧಿಯನ್ನು ಮಾಡಬೇಕು ; ಪಾಯು ಇಂದ್ರಿಯದಲ್ಲಿ ಮಲ ವಿಮೋಚನ ಸಾಧನ ಬುದ್ಧಿಯನ್ನು ಮಾಡಬೇಕು.

೧೦) ಇತಿ ಮಾನುಷೀಃ ಸಮಾಜ್ಞಾ.

೧೦) ಹೀಗೆ ಆಧ್ಯಾತ್ಮಿಕ ಸಂಜ್ಞೆಗಳು ಹೇಳಲ್ಪಟ್ಟವು.

| | |
|---|---|
| ೧೧) ಅಥ ದೈವೀಃ | ೧೧) ಬಳಿಕ ದೈವಿಕ ವಸ್ತುಗಳ ವಿಷಯಗಳಲ್ಲಿ ಉಪಾಸನೆ ಹೇಗಿರಬೇಕೆಂಬದ ಹೇಳಲ್ಪಡುತ್ತದೆ. |
| ೧೨) ವೃಷ್ಟೌ ತೃಪ್ತಿಃ ಇತಿ ; ವಿದ್ಯುತಿ ಬಲಂ ಇತಿ ; ಪಶುಷು ಯಶಃ ಇತಿ ; ನಕ್ಷತ್ರೇಷು ಜ್ಯೋತಿಃ ಇತಿ ; ಪ್ರಜಾತಿಃ ಅಮೃತಂ ಇತಿ ; ಉಪಸ್ಥೇ ಆನಂದ ಇತಿ ; | ೧೨) ಮಳೆಯಲ್ಲಿ ತೃಪ್ತಿ ಸಾಧನ ಬುದಿಯನ್ನು ಮಾಡಬೇಕು ; ಮಿಂಚಿನಲ್ಲಿ ಬಲ ಸಾಧನ ಬುದ್ಧಿಯನ್ನು ಮಾಡಬೇಕು ; ಪಶು ಸಮೃದ್ಧಿಯಲ್ಲಿ ಕೀರ್ತಿ ಸಾಧನ ಬುದ್ಧಿಯನ್ನು ಮಾಡಬೇಕು ; ನಕ್ಷತ್ರಗಳಲ್ಲಿ ಬೆಳಕಿಗೆ (ಜ್ಯೋತಿಸ್ಸು) ಸಾಧನವೆಂಬ ಬುದ್ಧಿಯನ್ನು ಮಾಡಬೇಕು ; ಉಪಸ್ಥೇಂದ್ರಿಯದಲ್ಲಿ ಆನಂದ ಹೇತುವೆಂಬ ಬುದ್ಧಿಯನ್ನು ಮಾಡಬೇಕು. |
| ೧೩) ಆಕಾಶೇ ಸರ್ವಂ ಇತಿ. | ೧೩) ಆಕಾಶದಲ್ಲಿ (ಬ್ರಹ್ಮದಲ್ಲಿ) ಸರ್ವ ಸಾಧನವಾದ ಬುದ್ಧಿಯನ್ನು ಮಾಡಬೇಕು. |
| ೧೪) ತತ್ ಪ್ರತಿಷ್ಠಾ ಇತಿ ಉಪಾಸೀತ ; (ಸಃ) ಪ್ರತಿಷ್ಠಾವಾನ್ ಭವತಿ. | ೧೪) ಆ ಬ್ರಹ್ಮವೇ ಶಾಶ್ವತವಾದ ನೆಲೆಯೆಂದು ಉಪಾಸನೆ ಮಾಡಬೇಕು ; ಹಾಗೆ ಉಪಾಸನೆ ಮಾಡಿದವನು ನೆಲೆಯುಳ್ಳವನಾಗುತ್ತಾನೆ. |
| ೧೫) ತತ್ ಮಹ ಉಪಾಸೀತ ; (ಸಃ) ಮಹಾನ್ ಭವತಿ. | ೧೫) ಆ ಬ್ರಹ್ಮವೇ ದೊಡ್ಡದೆಂದು ಉಪಾಸನೆ ಮಾಡಬೇಕು. ಹಾಗೆ ಮಾಡಿದವನೂ ದೊಡ್ಡವನೇ ಆಗುತ್ತಾನೆ. |

೧೬) ತತ್ ಮನ ಉಪಾಸೀತ ; (ಸಃ) ಮಾನವಾನ್ ಭವತಿ.

೧೬) ಅದು (ಆ ಬ್ರಹ್ಮವು) ಮನಸ್ಸೆಂದು ಉಪಾಸನೆ ಮಾಡಬೇಕು ; ಹಾಗೆ ಮಾಡುವವನು ಮಾನವಂತ ನಾಗುತ್ತಾನೆ (ಅಂದರೆ ಮನನ ಮಾಡಲು ಸಮರ್ಥನಾಗುತ್ತಾನೆ).

೧೭) ತತ್ ನಮ ಇತಿ ಉಪಸೀತ ; ಅಸ್ಮೈಕಾಮಾಃ ನಮ್ಯಂತೇ.

೧೭) ಆ ಬ್ರಹ್ಮನನ್ನು ನಮನ ಗುಣವುಳ್ಳದ್ದೆಂದು ಉಪಾಸನೆ ಮಾಡಬೇಕು; ಈ ಉಪಾಸಕನಿಗೆ ವಿಷಯಗಳೆಲ್ಲವೂ ಬಂದು ಸೇರುತ್ತವೆ, ನಮಸ್ಕರಿಸುತ್ತವೆ (ವಶವಾಗಿರುತ್ತವೆ).

೧೮) ತತ್ ಬ್ರಹ್ಮ ಇತಿ ಉಪಾಸೀತ ; ಸಃ ಬ್ರಹ್ಮವಾನ್ ಭವತಿ.

೧೮) ಅದನ್ನು ಬ್ರಹ್ಮ ವೆಂದೇ ಉಪಾಸನೆ ಮಾಡಬೇಕು ; ಹಾಗೆ ಮಾಡಿದವನು ಬೃಹತ್ತಿನ ಗುಣವುಳ್ಳವನಾಗುತ್ತಾನೆ.

೧೯) ತತ್ ಬ್ರಹ್ಮಣಃ ಪರಿಮರಃ ಇತ್ಯುಪಾಸೀತ ; ಸಪತ್ನಾಃ ದ್ವಿಷಂತಃ ಏನಂ ಸ ಪರಿತಃ ಮ್ರಿಯಂತೇ ; ಆ ಪ್ರಿಯಾಃ ಭ್ರಾತೃವ್ಯಾಃ ಚ ಏನಂ ಪರಿಮ್ರಿಯಂತೇ,

೧೯) ಆಕಾಶವನ್ನು ಬ್ರಹ್ಮಸಂಬಂಧಿಯಾದ ಸಾರ್ವತ್ರಿಕ ಮರಣಕ್ಕೆ ಅವಕಾಶ ಕೊಡತಕ್ಕ ಆಶ್ರಯನೆಂದು ಉಪಾಸನೆ ಮಾಡಬೇಕು. ಹಾಗೆ ಮಾಡಿದವನಿಗೆ ಶತ್ರುಗಳೆಲ್ಲರೂ ಸುತ್ತಲೂ ಸಾಯುವರು. (ಅಂದರೆ ಶತ್ರುನಾಶವಾಗಿ ಇಷ್ಟಾರ್ಥಸಿದ್ಧಿಯಾಗುವುದು). ಪ್ರೀತಿಯಿಲ್ಲದ, ದ್ವೇಷಿಗಳಾದ ದಾಯಾದರುಗಳಿದ್ದ ಪಕ್ಷದಲ್ಲಿ, ಅವರೂ ಕೂಡ ಇವನ ಸುತ್ತಲೂ ನಾಶವಾಗುತ್ತಾರೆ.

| | |
|---|---|
| ೨೦) ಯಶ್ಚ ಅಸೌ ಆದಿತ್ಯೇ, ಸ ಚ ಅಯಂ ಪುರುಷೇ, ಸಃ ಏಕಃ. | ೨೦) ಯಾವನು ಈ ಆದಿತ್ಯನಲ್ಲಿ ಅಂತರ್ಯಾಮಿ ಯಾಗಿರುವನೋ, ಆ (ಇವನೇ), ಈ ಪುರುಷನಲ್ಲಿಯೂ ಅಂತರ್ಯಾಮಿ ಯಾಗಿರುವನು ಎರಡರಲ್ಲಿಯೂ ಅಂತರ್ಯಾಮಿ ಯಾಗಿರುವ ಆತನು ಒಬ್ಬನೇ. |
| ೨೧) ಯಃ ಏವಂ ವಿತ್ ಸಃ ಅಸ್ಮಾಲ್ಲೋಕಾತ್ ಪ್ರೇತ್ಯ, | ೨೧) ಯಾವನು ಈ ರೀತಿಯಾಗಿ ತಿಳಿಯುತ್ತಾನೋ, ಆತನು ಈ ಲೋಕದಿಂದ ಅರ್ಚಿರಾದಿ ಮಾರ್ಗವಾಗಿ ಹೊರಟು, |
| ೨೨) (i) ಅನ್ನಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ; (i) ಪ್ರಾಣಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ; (iii) ಮನೋಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ: (iv) ವಿಜ್ಞಾನಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ; (v) ಆನಂದ ಮಯಂ ಏತಂ ಆತ್ಮಾನಂ ಉಪಸಂಕ್ರಮ್ಯ. | ೨೨) (i) ಈ ಅನ್ನ ಶರೀರಕನಾದ ಈ ಪರಮಾತ್ಮನನ್ನು ಅನುಭವಿಸಿ, (ii) ಈ ಪ್ರಾಣ ಶರೀರಕನಾದ ಪರಮಾತ್ಮನನ್ನು ಅನುಭವಿಸಿ; (iii) ಮನಶ್ಶರೀರಕನಾದ ಪರಮಾತ್ಮನನ್ನು ಅನುಭವಿಸಿ; (iv) ಈ ಜೀವಶರೀರಕನಾದ ಪರಮಾತ್ಮನನ್ನು ಅನುಭವಿಸಿ, (v) ಆನಂದಮಯನಾದ ಈ ಪರಮಾತ್ಮನನ್ನು ಅನುಭವಿಸಿ, |
| ೨೩) ಕಾಮಾನ್ನೀ, ಕಾಮರೂಪೀ, ಇಮಾನ್ ಲೋಕಾನ್ ಅನುಸಂಚರನ್, | ೨೩) ಪರಮಾತ್ಮನ ಕಲ್ಯಾಣ ಗುಣಗಳನ್ನು ಅನುಭವಿಸುತ್ತಾ, ಸಂಕಲ್ಪ ಮಾತ್ರ ದಿಂದಲೇ ಇಷ್ಟಬಂದ ರೂಪಗಳನು ಪಡೆಯಲು ಶಕ್ತಿಯುಳ್ಳವನಾಗಿ, ಈ ಲೋಕಗಳಲ್ಲಿ ಪರಮಾತ್ಮನ ದಾಸನಾಗಿ, ಸಂಚರಿಸುತ್ತಾ, |

| | |
|---|---|
| ೨೪) ಹಾ (3) ಉ (3) ಹಾ (3) ಉ ಹಾ (3) ಉ ಏತತ್ ಸಾಮ ಗಾಯನ್ ಆಸ್ತೇ. | ೨೪) ಈ ವಿಧವಾದ ಆನಂದಮಯವಾದ ಸಾಮವನ್ನು ಹಾಡುತ್ತಾ, ಇರುತ್ತಾನೆ. |
| ೨೫) ಅಹಂ ಅನ್ನಂ, ಅಹಂ ಅನ್ನಂ, ಅಹಂ ಅನ್ನಂ. | ೨೫) ನನ್ನ ಅಂತರಾತ್ಮನಾದ ಪರಮಾತ್ಮನು, ಪರಮಭೋಗ್ಯವಾದ "ಅನ್ನ"ವೆಂದೂ ಹೇಳಲ್ಪಡತಕ್ಕವನು. |
| ೨೬) ಅಹಂ ಅನ್ನಾದಃ, ಅಹಂ ಅನ್ನಾದಃ. ಅಹಂ ಅನ್ನಾದಃ. | ೨೬) ಆ ಪರಮಾತ್ಮನು ಭೋಕ್ತೃವಾದ 'ಅನ್ನಾದ' ವೆಂದೂ ಹೇಳಲ್ಪಡತಕ್ಕವನು. |
| ೨೭) ಅಹಂ ಶ್ಲೋಕಕೃತ್ ಅಹಂ ಋತಸ್ಯ ಪ್ರಥಮಜಾ ಅಸ್ಮಿ. | ೨೭) ಆ ಪರಮಾತ್ಮನು ಜಗತ್ತನ್ನು ರಕ್ಷಣೆ ಮಾಡತಕ್ಕವನು. ಆ ಪರಮಾತ್ಮನು ಸೃಷ್ಟಿಯ ಆರಂಭದಲ್ಲಿ ಕರ್ಮ ಪರಿಪಾಕ ಉಂಟು ಮಾಡತಕ್ಕವನು ಆಗಿದ್ದಾನೆ. (ಆ ನಾನು ಆಗಿದ್ದೇನೆ) |
| ೨೮) ದೇವೇಭ್ಯಃ ಪೂರ್ವಂ ಅಮೃತಸ್ಯ ನಾಭಿಃ ಅಸ್ಮಿ [ನಾಭಾ ಇ ಎಂಬುದು ನಾಭಿ ಎಂಬುದರ ಗಾನ ವಿಕಾರ]. | ೨೮) ದೇವತೆಗಳಿಗಿಂತ ಮೊದಲೇ ಇರತಕ್ಕ ಪರಮ ಪದದ, (ಚಕ್ರದ ನಾಭಿಯಂತೆ) ಆಶ್ರಯವಾದವನಾಗಿದ್ದೇದೆ. |
| ೨೯) ಯಃ ಮಾ ದದಾತಿ ಸಃ ಏವ ಮಾ ಅವಾಃ | ೨೯) ಯಾವನು (ನನ್ನನ್ನು) ಈ ಪರಮಾತ್ಮ ತತ್ವವನ್ನು, ಯೋಗ್ಯನಾದ ಶಿಷ್ಯನಿಗೆ ಉಪದೇಶ ಮಾಡುತ್ತಾನೋ ಅವನೇ (ನನ್ನನ್ನು) ಪರಮಾತ್ಮನನ್ನು ಹೊಂದುತ್ತಾನೆ. |

| | |
|---|---|
| ೩೦) ಅಹಂ ಅನ್ನಂ, ಅಹಂ ಅನ್ನಂ ಆದಂತಂ, ಆದಿ | ೩೦) (ನಾನು) ನನಗೆ ಅಂತರ್ಯಾಮಿಯಾದ ಪರಮಾತ್ಮನು ಭೋಗ್ಯವಾದ. ಅ ಚೇತನವನ್ನೂ, ಮತ್ತು ಆ ಅ ಚೇತನವನ್ನು ಅನುಭವಿಸುವ ಚೇತನ ವರ್ಗವನ್ನೂ ವ್ಯಾಪಿಸಿರುವನು. |
| ೩೧) ಅಹಂ ವಿಶ್ವಂ ಭುವನಂ ಅಭ್ಯಭವಂ. | ೩೧) (ನಾನು) (ನನಗೆ ಅಂತರ್ಯಾಮಿಯಾದ ಪರಮಾತ್ಮನು) ಪ್ರಪಂಚವೆಲ್ಲವನ್ನೂ ಉಪಸಂಹಾರ ಮಾಡತಕ್ಕವನೂ ಆಗಿದ್ದೇನೆ. |
| ೩೨) ಯಃ ಏವಂ ವೇದ, ಸಃ ಸುವರ್ಣ ಜ್ಯೋತಿಃ ಇತ್ಯುಪನಿಷತ್. | ೩೨) ಯಾವನು ಹೀಗೆ ತಿಳಿದುಕೊಂಡಿರುತ್ತಾನೋ, ಅವನು ಹೊಳೆಯುತ್ತಿರುವ ಜ್ಯೋತಿ ಶರೀರವುಳ್ಳವನಾಗುತ್ತಾನೆ. ಹೀಗೆ ಉಪನಿಷತ್ತು ಸಮಗ್ರವಾಗಿ ಸಂಪೂರ್ಣವಾಯಿತು. |

ಭೃಗುವಲ್ಲೀ ಸಂಪೂರ್ಣಂ

ಮೂಲ ಮಂತ್ರ :—ಸಹನಾವವತು | ಸಹನೌಭುನಕ್ತು | ಸಹ

ವೀರ್ಯಂಕರವಾವಹೈ | ತೇಜಸ್ವಿನಾವಧೀತ ಮಸ್ತು ಮಾ

ವಿದ್ವಿಷಾವಹೈ | ಓಂ ಶಾಂತಿಃ ಶಾಂತಿಃ ಶಾಂತಿಃ

ಇದರ ಅರ್ಥ ಹಿಂದಿನಂತೆಯೇ

ಇಲ್ಲಿಗೆ ತೈತ್ತಿರೀಯೋಪನಿಷತ್ತಿನ ಕರ್ಣಾಟಕ ಭಾಷಾವ್ಯಾಖ್ಯಾನವು
ಸಮಗ್ರವಾಗಿ ಸಂಪೂರ್ಣವಾಯಿತು.

|| ಹರಿಃ ಓಮ್ ||

ಶ್ರೀಃ

# ಶ್ರೀ ಶ್ರೀಯುವರ ಸಂಕ್ಷಿಪ್ತ ಚರಿತ್ರೆ

ಈ ತೈತ್ತಿರೀಯೋಪನಿಷತ್ತಿಗೆ, ಕರ್ಣಾಟಕ ಭಾಷೆಯಲ್ಲಿ ವ್ಯಾಖ್ಯಾನವನ್ನು ಪರಮಕೃಪೆಯಿಂದ ಅನುಗ್ರಹಿಸಿರುವ, ಶ್ರೀ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜಜೀಯರ್ ಸ್ವಾಮಿಗಳವರ (ಪೂರ್ವಾಶ್ರಮದಲ್ಲಿ ನ್ಯಾಯ ವಿದ್ವಾನ್ ಶ್ರೀ ಉ. ರಾ. ಅ. ಐಯ್ಯೆಶ್ಯೈಯ್ಯಂಗಾರ್ಯ ಸ್ವಾಮಿಗಳು) ಜೀವನ ಚರಿತ್ರೆ.

## ಆರಂಭ

ಯಾರೊಬ್ಬ ಮಹನೀಯರ ಚರಿತ್ರೆಯನ್ನು ಹೇಳಿ ಆನಂದ ಅನುಭವಿಸಬೇಕಾದರೂ ಅವರ ಧ್ಯೇಯದ ಪ್ರಕಾರ ತಿಳಿಸುವುದೇ ಕ್ರಮವೆಂಬುದು ಸರ್ವವಿದಿತವಾಗಿದೆ. ಈಗಿನ ಯತಿರಾಜಸ್ವಾಮಿಗಳವರು, ಅಂದರೆ ಪೂರ್ವಾಶ್ರಮದಲ್ಲಿ ಶ್ರೀ. ಉ. ಐಯ್ಯಶ್ಯೈಯ್ಯಂಗಾರ್ಯ ಸ್ವಾಮಿಗಳು ಋಷಿಗಳ ಧ್ಯೇಯವನ್ನು ಮೆಚ್ಚುತ್ತಾರೆ; ಆಳ್ವಾರುಗಳ ಧ್ಯೇಯಗಳನ್ನು ಕೊಂಡಾಡುತ್ತಾರೆ; ಅಂದರೆ ಪೂರ್ವಾಚಾರ್ಯರುಗಳ ಧ್ಯೇಯದಲ್ಲಿ ಅವರಿಗೆ ಪ್ರೀತಿ. ಅವರು ಆಚಾರ್ಯರುಗಳ ವಂಶಕ್ಕೆ ಸೇರಿದವರಾದುದರಿಂದ, ಈಗ ಅವರು ಆಚಾರ್ಯರ ಗುಂಪಿನ ಮುಖಂಡರುಗಳಲ್ಲಿ ಒಬ್ಬರಾಗಿರುವರು.

## ಈ ಸ್ವಾಮಿಗಳ ವಂಶ

ಶ್ರೀ ಭಗವದ್ರಾಮಾನುಜಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಉ. ಅನಂದಾಳ್ವಾರ್ ಅಥವ [(ಆನಂದ – ಅಣ್ – ಪಿಳ್ಳೈ = ಅನಂದಾಂಪಿಳ್ಳೈ) ಎಂಬ ಮಹನೀಯರು ಮೈಸೂರು ದೇಶದಲ್ಲಿ ಶ್ರೀರಂಗಪಟ್ಟಣದ ಕಾವೇರಿ ನದಿಯ ಹತ್ತಿರದಲ್ಲಿರುವ ಕಿರಂಗೂರಿನಲ್ಲಿ ಹುಟ್ಟಿ, ತಿರುಪತಿ ಕ್ಷೇತ್ರದಲ್ಲಿ ಭಗವಾನ್ ಶ್ರೀನಿವಾಸನಿಗೆ ವಿಶೇಷವಾದ ಕೈಂಕರ್ಯಗಳನ್ನು ನಡೆಸಿ ಪ್ರಸಿದ್ಧರಾಗಿದ್ದುದು ನಮಗೆಲ್ಲಾ ತಿಳಿದ ವಿಷಯವಾಗಿದೆ. ಅವರ ವಂಶಕ್ಕೆ ಸೇರಿದ ವಿದ್ವಾಂಸರುಗಳು ಕಾಲಕ್ರಮೇಣ ಐದು ಶ್ರೀ ವೈಷ್ಣವರುಗಳ ಗುಂಪಿಗೆ ಆಚಾರ್ಯರುಗಳಾದರು. ಒಂದು ಗುಂಪಿನವರಲ್ಲಿ ಒಬ್ಬರು, ಕುನ್ನ ಪಾಕ್ಕಂ ಅಪ್ಪೈ

ಶ್ರೀನಿವಾಸಾಚಾರ್ಯಸ್ವಾಮಿಗಳು. ಈ ಮಹನೀಯರು ವಿಜಯನಗರ ಮಹಾರಾಜ
ರಿಂದ ಬೆಂಗಳೂರಿಗೆ ಆಹ್ವಾನಿಸಲ್ಪಟ್ಟು ಅವರಿಂದ ಗೌರವಯುತವಾಗಿ ಮದ್ದೂ
ರಿಗೆ ಹತ್ತಿರದಲ್ಲಿ ಶ್ರೀರಾಮಾನುಜಪುರಂ ಎಂಬ ಗ್ರಾಮವನ್ನು ಜಹಗೀರಾಗಿ
ಪಡೆದರು. ಕಾಲಕ್ರಮೇಣ ಅಲ್ಲಿಗೆ ಹತ್ತಿರದಲ್ಲಿರುವ ಹೊನ್ನಲಗೆರೆ ಗ್ರಾಮ
ದಲ್ಲಿಯೂ ಶ್ರೀವೈಷ್ಣವರುಗಳ ಅಗ್ರಹಾರವನ್ನು ಸ್ಥಾಪಿಸಿ ಶ್ರೀವೈಷ್ಣವ ಕುಟುಂಬ
ದವರಿಗೆಲ್ಲಾ ಆಚಾರ್ಯಪುರುಷರಾದರು. ಆದುದರಿಂದ ಇವರ ವಂಶೀಕರಿಗೆಲ್ಲಾ
ಶ್ರೀ ರಾಮಾನುಜಪುರಂ ಆಚಾರ್ಯ ವಂಶಸ್ಥರೆಂಬ ಹೆಸರಾಯಿತು. ಈ ಅಪ್ಪ
ಶ್ರೀನಿವಾಸಾಚಾರ್ಯರ ವಂಶದಲ್ಲಿ ಕೆಲವು ತಲೆಗಳಾದಮೇಲೆ ಶ್ರೀ ಉ. ರಾಮಾ
ನುಜೈಯ್ಯಂಗಾರ್ ಸ್ವಾಮಿಗಳು ಆಚಾರ್ಯ ಪೀಠವನ್ನು ಅಲಂಕರಿಸಿದರು;
ಇವರು ಕಾಲವಾದಮೇಲೆ ಇವರ ಕುಮಾರರು ಶ್ರೀ ಉ. ಐಯ್ಯನೈಯ್ಯಂಗಾರ್
ಸ್ವಾಮಿಗಳು ಆಚಾರ್ಯರಾದರು; ಇವರು ಕಾಲವಾದಮೇಲೆ ಇವರ ಪುತ್ರರಾದ
ಶ್ರೀ ಉ. ರಾಮಾನುಜೈಯ್ಯಂಗಾರ್‌ಸ್ವಾಮಿಗಳು ಆಚಾರ್ಯರಾದರು. ಈ ಶ್ರೀ
ರಾಮಾನುಜೈಯ್ಯಂಗಾರ್ಯರು ಮಂಡಯಂಸಮುದಾಯದಲ್ಲಿ ಆನಂದಾಂಪಿಳ್ಳೆ
ಸ್ವಾಮಿಗಳ ವಂಶಕ್ಕೆ ಸೇರಿದ ಇನ್ನೊಂದು ಗುಂಪಿನ ಆಚಾರ್ಯರಾದ ಶ್ರೀ ಉ.
ಮಂಡಯಂ ತಾತಾಚಾರ್ಯ ಸ್ವಾಮಿಗಳ (ಪುಗಳಮಗಳು) ಮೊಮ್ಮಗಳಾದ ಶ್ರೀ
ಶ್ರೀರಂಗಮ್ಮನವರನ್ನು ಮದುವೆಯಾದರು. ಶ್ರೀರಾಮಾನುಜೈಯ್ಯಂಗಾರ್
ಸ್ವಾಮಿಗಳು ಮತ್ತು ಶ್ರೀ-ಶ್ರೀರಂಗಮ್ಮ ಈ ದಂಪತಿಗಳಿಗೆ ಐದು ಗಂಡು
ಮಕ್ಕಳೂ ಮತ್ತು ಐದು ಹೆಣ್ಣುಮಕ್ಕಳೂ ಜನಿಸಿದರು. ಇವರಲ್ಲಿ ಮೊದಲನೆಯ
ಪುತ್ರರೇ ಪೂರ್ವಾಶ್ರಮದಲ್ಲಿ ಶ್ರೀ ಉ. ಐಯ್ಯನೈಯ್ಯಂಗಾರ್‌ಸ್ವಾಮಿಗಳು ಎಂಬ
ಹೆಸರನ್ನು ಪಡೆದಿದ್ದ ಮತ್ತು ಈಗ ಶ್ರೀ ಯತಿರಾಜಸಂಪತ್ಕುಮಾರ ರಾಮಾನುಜ
ಜೀಯರ್ ಸ್ವಾಮಿಗಳು ಎಂದು ಹೆಸರನ್ನು ಪಡೆದಿರುವ ಮಹನೀಯರು.
ಇವರು ತಂದೆಯ ಕಡೆಯಲ್ಲಿ ರಾಮಾನುಜಪುರಂ ಆಚಾರ್ಯವಂಶಕ್ಕೆ ಸೇರಿದವರು;
ತಾಯಿಯ ಕಡೆಯಲ್ಲಿ ಆಳ್ವಾರ್ ತಾತಾಚಾರ್ಯರ ವಂಶಕ್ಕೆ ಸೇರಿದವರು.

## ಶ್ರೀ ಉ. ಅಯ್ಯನಯ್ಯಂಗಾರ್ಯರ ಜನನ ಮತ್ತು ಬಾಲ್ಯ
## (1887 ರಿಂದ 1896)

ಶ್ರೀ ಐಯ್ಯನೈಯ್ಯಂಗಾರ್ಯನೆಂಬ ಮಗುವು ಆಚಾರ್ಯ ಪುರುಷರಾದ

ಶ್ರೀ ರಾಮಾನುಜೈಯ್ಯಂಗಾರ್ಯರ ಮಗನಾಗಿ, ಆಚಾರ್ಯ ಪುರುಷರಾದ ಆಳ್ವಾರ್ ತಾತಾಚಾರ್ಯರ ಮೊಮ್ಮಗಳಾದ ಶ್ರೀ ಶ್ರೀರಂಗಮ್ಮನ (ಗರ್ಭದಲ್ಲಿ) ಸರ್ವಜಿತ್ ಸಂವತ್ಸರದ ಮೀನಮಾಸದ (1887 ಏಪ್ರಿಲ್) ಹಸ್ತನಕ್ಷತ್ರದಲ್ಲಿ ಜನಿಸಿದರು. ಈ ಶ್ರೀರಂಗಮ್ಮನ ತಂದೆಯಾದ ಶ್ರೀ ಪರವೈಕಾಂತಿ ಅಳಶಿಂಗ್ರಾಚಾರ್ಯರು ನಾಲ್ಕು ಸಾವಿರ ದಿವ್ಯ ಪ್ರಬಂಧಗಳನ್ನೂ ಕ್ರಮಾಂತ ವೇದ ಪಾಠವನ್ನೂ ಕಲಿತು ಪೂರ್ವಾಪರ ಪ್ರಯೋಗಗಳನ್ನು ಮಾಡಿಸುತ್ತಾ ಪೌರೋಹಿತ್ಯ ಕೆಲಸದಲ್ಲಿಯೂ ಇರುತ್ತಿದ್ದರು. ಈ ಮಗುವಿಗೆ ಆನಂದಾಳ್ವಾರ್ ವಂಶೀಕರಾದ ಎರಡು ಆಚಾರ್ಯ ಪುರುಷರಗುಂಪಿನ ಪರಂಪರೆಯ ಸದಾಚಾರಗಳೂ ಮತ್ತು ಧ್ಯೇಯಗಳೂ ಮಾತಾ ಮಹನ ವಿದ್ಯಾಪಾಂಡಿತ್ಯವೂ ಸಹ ಅವರ ರಕ್ತದಲ್ಲಿಯೇ ಇದ್ದುದರಿಂದ ಇವರಿಗೆ ಚಿಕ್ಕವಯಸ್ಸಿನಿಂದಲೇ ಸದ್ಗುಣಗಳೂ ಸದಾಚಾರಗಳೂ ಸ್ವಾಭಾವಿಕವಾಗಿಯೇ ತಲೆದೋರಿದವು. ಈ ಬಾಲಕನು ಮಂಡ್ಯವೆಂಬ ಊರಿನಲ್ಲಿ ತಂದೆ ತಾಯಿ ಗಳೊಡನೆ ವಾಸಮಾಡುತ್ತಾ ಅವರ ಹತ್ತಿರವೇ ಸ್ತೋತ್ರಗಳನ್ನೂ ಮತ್ತು ಪಾಶುರ ಗಳನ್ನೂ ಸಂತೆ ಹೇಳಿಸಿಕೊಂಡು ಅವುಗಳನ್ನೆಲ್ಲಾ ಸುಲಭವಾಗಿ ಕಂಠಪಾಠ ಮಾಡಿದನು. ಮಂಡ್ಯದಲ್ಲಿಯೇ ಕನ್ನಡ ಪಾಠಶಾಲೆಗಳಿಗೆ ಸೇರಿ ಪಾಠಶಾಲೆಯಲ್ಲೂ ಮನೆಯಲ್ಲೂ ಕನ್ನಡವನ್ನು ಚೆನ್ನಾಗಿ ಕಲಿತನು. ಪಾಠಶಾಲೆಯ ಉಪಾಧ್ಯಾ ಯರುಗಳು ಇವನ ಬುದ್ಧಿ ವೈಶಿಷ್ಟ್ಯವನ್ನೂ ಮೆಚ್ಚಿದರು. ಇವನ ತಂದೆ ತಾಯಿಗಳು ಈ ತಮ್ಮ ಮಗನಿಗೆ ಬಾಲ್ಯದಲ್ಲಿಯೇ ಸದಾಚಾರಗಳನ್ನು ಕಲಿಸಿದರು. ಇಷ್ಟೇ ಅಲ್ಲ; ಈ ಬಾಲಕನು ಮಂಡ್ಯದ ಜನಾರ್ಧನ ಸ್ವಾಮಿ ದೇವಸ್ಥಾನದ ಪೂಜೆಗಳಲ್ಲಿ ಯಾವಾಗಲೂ ಅನ್ವಯಿಸುತ್ತಿದ್ದುದರಿಂದ ಅವನಿಗೆ ಬಾಲ್ಯದಲ್ಲಿಯೇ ಹೃದಯದಲ್ಲಿ ದೈವಭಕ್ತಿಯು ವಿಶೇಷವಾಗಿ ಬೆಳೆಯಿತು.

## ಈ ಮಹನೀಯರ ಬ್ರಹ್ಮಚರ್ಯಾಶ್ರಮ
## (1896 to 1909)

ಆ ಕಾಲದಲ್ಲಿಯೇ ಬ್ರಾಹ್ಮಣ ಜಾತಿಯ ಯುವಕರಲ್ಲಿ ಅನೇಕರು ತಮ್ಮ ಪೂರ್ವಕಾಲದ ವಿದ್ಯೆಯಲ್ಲಿ ಉದಾಸೀನರಾಗಿದ್ದು, ತಮ್ಮ ಕುಲಾಚಾರಗಳನ್ನು ತ್ಯಜಿಸಿ ಬ್ರಿಟಿಷ್ ಸರ್ಕಾರದವರು ನಮ್ಮ ಭಾರತ ದೇಶದಲ್ಲಿ ಸ್ಥಾಪಿಸಿದ

ಇಂಗ್ಲೀಷು ಹೈಸ್ಕೂಲು ಮತ್ತು ಕಾಲೇಜುಗಳಿಗೆ ಸೇರಿ, ಡಿಗ್ರಿಗಳನ್ನು ಸಂಪಾದಿಸಿ, ದೊಡ್ಡ ಅಧಿಕಾರಗಳನ್ನು ಪಡೆದು, ಐಶ್ವರ್ಯವಂತ ಜೀವನವನ್ನು ನಡೆಸುತ್ತಿದ್ದರು. ಆದರೆ ಈ ಶ್ರೀ ಐಯ್ಯನ್ಯೈಯ್ಯಂಗಾರ್ಯನೆಂಬ ಬಾಲಕನು ಮಾತ್ರ 1896ನೇ ಇಸವಿಯಲ್ಲೇ ಉಪನಯನ ಸಂಸ್ಕಾರವನ್ನು ಪಡೆದು ಬ್ರಹ್ಮಚಾರಿ ಯಾದಾಗಲೇ, ತಾನು, ತನ್ನ ಇತರ ಬಂಧುಗಳು ಸ್ನೇಹಿತರು ಇವರುಗಳ ಹಾಗೆ ಇಂಗ್ಲೀಷು ಹೈಸ್ಕೂಲು ಮತ್ತು ಕಾಲೇಜುಗಳ ವಿದ್ಯಾಭ್ಯಾಸ ಗಳಿಗೆ ಸೇರುವುದಿಲ್ಲವೆಂದೂ, ಪೂರ್ವಕಾಲದಿಂದ ಬಂದಿದ್ದ ಸಂಸ್ಕೃತ-ಕನ್ನಡ ವಿದ್ಯಾಭ್ಯಾಸವನ್ನೇ ಪಡೆಯುವುದಾಗಿಯೂ ಮತ್ತು ಪೂರ್ವಕಾಲದ ವರ್ಣಾಶ್ರಮ ಧರ್ಮವನ್ನೇ ಜೀವನದಲ್ಲಿ ಅನುಸರಿಸುವುದಾಗಿಯೂ, ಶ್ರೀವೈಷ್ಣವ ಆಚಾರ ವನ್ನೇ ಕೈಗೊಳ್ಳುವುದಾಗಿಯೂ ಮತ್ತು ತನ್ನ ಆಚಾರ್ಯ ಪೀಠವನ್ನು ಆದರ ದೊಡನೆ ಸ್ವೀಕರಿಸಿ ಕೈಂಕರ್ಯ ಮಾಡಲು ಬೇಕಾಗುವ ಯೋಗ್ಯತೆಯನ್ನು ಪಡೆಯುವದಾಗಿಯೂ, ತನ್ನ ಒಂಭತ್ತನೆಯ ವಯಸ್ಸಿನಲ್ಲಿಯೇ ದೃಢವಾದ ಪ್ರತಿಜ್ಞೆಯನ್ನು ಮಾಡಿದನು. ಈ ವೈದಿಕ ಶ್ರೀವೈಷ್ಣವನ ಜೀವನವು ಬಡತನದ ಕಷ್ಟಗಳಿಂದ ಕೂಡಿದ್ದುದು ಮತ್ತು ಇಂಗ್ಲೀಷು ವಿದ್ಯಾಭ್ಯಾಸವನ್ನು ಪಡೆಯು ತ್ತಿರುವ ತನ್ನ ಸ್ನೇಹಿತರು ಮತ್ತು ಬಂಧುಗಳು ಅಧಿಕಾರ ಮತ್ತು ಐಶ್ವರ್ಯವನ್ನು ಅನುಭವಿಸುವರು ಎಂಬುದನ್ನು ಚೆನ್ನಾಗಿ ಅರಿತಿದ್ದಾಗ್ಯೂ ಕೂಡ ಈ ಮಹ ನೀಯ ಬಾಲಕನು ಸಹನೆಯಿಂದಲೂ ಧೈರ್ಯದಿಂದಲೂ ವರ್ಣಾಶ್ರಮದಿಂದ ಕೂಡಿದ ಶ್ರೀ ವೈಷ್ಣವ ಆಚಾರಗಳನ್ನೂ ಮತ್ತು ವೈದಿಕ ವಿದ್ಯೆಯನ್ನೂ ಸ್ವೀಕರಿ ಸಿದನು, ಚಿಕ್ಕ ವಯಸ್ಸಿನಲ್ಲಿಯೇ ಈ ದೃಢ ಪ್ರತಿಜ್ಞೆಯನ್ನು ಮಾಡಿ ಜೀವನ ದಲ್ಲಿ ಆಚರಿಸಿದುದು ಈ ಮಹನೀಯನ ಮಹತ್ವವನ್ನು ತೋರಿಸುತ್ತದೆ. ಇವನಿಗೆ ಉಪನಯನವಾದ ಮೇಲೆ ಅವನ ತಂದೆಯವರು ವೇದಾಭ್ಯಾಸವನ್ನೂ ಮಾಡಿಸಿ ದರು. ವೇದಗಳ ಮತ್ತು ಉಪನಿಷತ್ತುಗಳ ದಿವ್ಯ ಪ್ರಬಂಧಗಳ ಸಂತೆಯನ್ನು ಹೇಳಿಕೊಟ್ಟು ಅವುಗಳನ್ನು ಕಂಠಪಾಠ ಮಾಡಿಸಿದರು. ಇವರು 1901ನೆಯ ಇಸವಿಯಲ್ಲಿ ಮೈಸೂರಿಗೆ ಬಂದು ಶ್ರೀ ಆಜಿ ಶ್ರೀನಿವಾಸಯ್ಯಂಗಾರ್ಯರ ಮನೆ ಯಲ್ಲಿ ವಾಸಮಾಡಿಕ್ಕೊಂಡು ಶ್ರೀ ದೇವಶಿಖಾಮಣಿ ರಾಮಾನುಜಯ್ಯಂಗಾರ್ಯರ ಮನೆಯಲ್ಲಿ ಅವರ ಬಳಿ ಸಂಸ್ಕೃತ ಕಾವ್ಯ ಪಾಠವನ್ನು ಕಲಿತರು.

1898ನೇ ವರುಷದಲ್ಲಿ ಶ್ರೀ ಐಯನ್ನೈಯ್ಯಂಗಾರ್ಯರ ಹನ್ನೊಂದನೆಯ ವಯಸ್ಸಿನಲ್ಲಿ ಅವರಿಗೆ ಪಂಚ ಸಂಸ್ಕಾರವಾಯಿತು. ಆಗಲೇ ತಾವು ಆಚಾರ್ಯ ಪುರುಷ ವಂಶಕ್ಕೆ ಸೇರಿದವರೆಂದೂ ಮತ್ತು ಮುಂದೆ ಉತ್ತಮ ರೀತಿಯ ಆಚಾರ್ಯ ಪುರುಷರಾಗಬೇಕೆಂದೂ ದೃಢಸಂಕಲ್ಪ ಮಾಡಿದರು. ಇವರ ತಂದೆ ಯವರು 1903ನೇ ವರುಷದಲ್ಲಿ ಅಂದರೆ ಇವರ ಹದಿನೈದನೆಯ ವಯಸ್ಸಿನಲ್ಲಿ ಕಾಲವಾದರು. ತಾಯಿ, ಅಕ್ಕತಂಗಿಯವರು, ತಮ್ಮಂದಿರು ಇವರಿಂದ ಕೂಡಿದ ದೊಡ್ಡ ಸಂಸಾರವನ್ನು ನಡೆಸುವ ಜವಾಬ್ದಾರಿಯು ಇವರ ಮೇಲೆ ಬಿದ್ದಿತು. ಬಡತನದ ಕಷ್ಟ ಜೀವನವು ಒದಗಿತು. ಮಂಡ್ಯದಲ್ಲಿ ಸಂಸಾರವನ್ನು ನಡೆಸಲು ಅನುಕೂಲವಿಲ್ಲದುದರಿಂದ ಇವರೂ ಮತ್ತು ಇವರ ಕುಟುಂಬದವರೂ ಮಂಡ್ಯ ವನ್ನು ಬಿಟ್ಟು ಮೈಸೂರಿಗೆ ಬಂದು ಇವರ ಸೋದರ ಮಾವ ಪರಮೈಕಾಂತಿ ಶ್ರೀನಿವಾಸಯ್ಯಂಗಾರ್ಯರ ಆಶ್ರಯದಲ್ಲಿದ್ದರು. ಅವರ ಸೋದರಮಾವನವರು ತಮ್ಮ ಒಂದು ಚಿಕ್ಕ ಮನೆಯನ್ನು ಇವರುಗಳಿಗೆ ವಾಸ ಮಾಡುವುದಕ್ಕೆ ಕೊಟ್ಟಿ ದ್ದರು. ವರುಷಕ್ಕೆ ಆಗುವ ಭತ್ತವು ಇವರಿಗೆ ಸೇರಿದ ಜಮೀನಿನಿಂದ ಬರುತ್ತಿತ್ತು; ಇವರ ಶಿಷ್ಯರುಗಳಿಂದಲೂ ಅಲ್ಪ ಸ್ವಲ್ಪ ಸಹಾಯವೂ ನಡೆಯುತ್ತಿತ್ತು : ಮತ್ತು ಎಲ್ಲದಕ್ಕಿಂತ ಮೇಲಾಗಿ ಇವರ ತಾಯಿ ಸಾಧ್ವೀಮಣಿ ಶ್ರೀರಂಗಮ್ಮನವರು ಜಾಣತನದಿಂದ ಅಚ್ಚುಕಟ್ಟಾಗಿ ಬಡತನದ ಜೀವನವನ್ನು ನಡೆಸುತ್ತಾ ಮಕ್ಕ ಳನ್ನು ಪ್ರೀತಿಯಿಂದ ಕಾಪಾಡಿದರು.

1903ನೇ ಇಸವಿಯಿಂದ 1905ನೇ ಇಸವಿಯವರೆಗೆ ಶ್ರೀ ಐಯ್ಯ ನ್ನೈಯ್ಯಂಗಾರ್ಯರು ಮೈಸೂರು ಪಾಠಶಾಲೆಯಲ್ಲಿ ಬಹುಮಟ್ಟಿಗೆ ಸಂಸ್ಕೃತ ವಿದ್ಯಾಭ್ಯಾಸವನ್ನೂ, ಮತ್ತು ಸುಮಾರಾಗಿ ಸ್ವಲ್ಪ ಮಟ್ಟಿಗೆ ಇಂಗ್ಲೀಷು ಭಾಷೆ ಯನ್ನೂ ಕಲಿತರು. ಇವರು ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಪಡೆದುದಲ್ಲದೆ ಆ ಕಾಲದಲ್ಲಿ ಪ್ರಸಿದ್ಧ ವಿದ್ವಾಂಸರಾದ ಮಹಾ ವಿದ್ವಾನ್ ಪಂಡಿತ ದೇವ ಶಿಖಾಮಣಿ ರಾಮಾನುಜೈಯ್ಯಂಗಾರ್ಯರ ಹತ್ತಿರ ಅವರ ಮನೆಯಲ್ಲಿ ಸಂಸ್ಕೃತ ಸಾಹಿತ್ಯ ಶಾಸ್ತ್ರದಲ್ಲಿ ವಿಶೇಷವಾಗಿ ಶಿಕ್ಷಣವನ್ನು ಪಡೆದರು. ಆಮೇಲೆ 1905ರಿಂದ 1908ರ ವರೆಗೆ ಮೇಲುಕೋಟೆಗೆ ಹೋಗಿ ಅಲ್ಲಿಯ ಸಂಸ್ಕೃತ ಕಾಲೇಜಿನಲ್ಲಿ ತರ್ಕಶಾಸ್ತ್ರ ವಿದ್ಯಾಭ್ಯಾಸವನ್ನು ಪಡೆದು

ದಲ್ಲದೆ ಆ ಕಾಲದ ಅಲ್ಲಿಯ ಪ್ರಸಿದ್ಧ ವಿದ್ವಾಂಸರುಗಳಾದ ಶ್ರೀ ಉ ಆಳ್ವಾರ್ ಸ್ವಾಮಿಗಳಲ್ಲೂ ಮತ್ತು ಅವರ ಪುತ್ರ ತರ್ಕ ತೀರ್ಥ ಲಕ್ಷ್ಮೀತಾತಾಚಾರ್ ಸ್ವಾಮಿಗಳಲ್ಲೂ ಅವರ ಗೃಹದಲ್ಲಿಯೇ ಗುರುಕುಲ ವಾಸ ಮಾಡಿ ತರ್ಕಶಾಸ್ತ್ರ ವನ್ನು ಉತ್ತಮವಾಗಿ ವ್ಯಾಸಂಗ ಮಾಡಿದರು. ಇದರ ಫಲವಾಗಿ 1909ನೇ ವರುಷದಲ್ಲಿ ಮದರಾಸಿನಲ್ಲಿ ವೇದ ವೇದಾಂತ ಸಭೆಯವರಿಂದ ಪರೀಕ್ಷಿಸಲ್ಪಟ್ಟು ಉತ್ತಮವಾಗಿ ತೇರ್ಗಡೆಯನ್ನು ಪಡೆದು ಆ ಕಾಲದಲ್ಲಿ ಮದರಾಸಿನಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದ ಕುನ್ನುಪಾಕ್ಕಂ ಶ್ರೀನಿವಾಸಾಚಾರ್ಯರವರಿಂದ ವಿಶೇಷ ಬಹು ಮಾನಗಳನ್ನು ಪಡೆದರು. ಕೆಲವು ಕಾಲದ ಮೇಲೆ ಈ ಐಯ್ಯನೈಯ್ಯಂಗಾರ್ಯರು ಈ ಸಭೆಯ ಪರೀಕ್ಷಕರೂ ಆದರು. ಈ ಕಾಲದಲ್ಲಿ ಈ ಮಹನೀಯರು ಬ್ರಹ್ಮಚರ್ಯ ವ್ರತಗಳನ್ನೂ ಶ್ರೀ ವೈಷ್ಣವ ಆಚಾರಗಳನ್ನೂ ಚೆನ್ನಾಗಿ ಪರಿಪಾಲಿಸಿದರು. ಇವರ ಬಂಧುಗಳೂ ಸ್ನೇಹಿತರೂ ಇವರನ್ನು ಹಾಸ್ಯ ಮಾಡಿ ಬೇರೆ ದಾರಿಗೆ ಎಳೆಯಲು ಪ್ರಯತ್ನಿಸಿದರೂ ಇವರು ಮನ ಸೋಲದೆ ಆಹಾರ ವಿಹಾರಗಳಲ್ಲಿ ಹೆಚ್ಚಾದ ನಿಯಮಗಳನ್ನು ಇಟ್ಟುಕೊಂಡು, ಸ್ನಾನ ಸಂಧ್ಯಾವಂದನಾದಿ ಗಳನ್ನು ಶ್ರದ್ಧೆಯಿಂದ ನಡೆಸುತ್ತಾ, ಯಾವ ತಪ್ಪು ದಾರಿಗೂ ಹೋಗದೆ, ಮನೆಯಲ್ಲಿ ಬಡತನದಲ್ಲಿ ಎಷ್ಟು ಕಷ್ಟವಾದರೂ ಎದೆಗೆಡದೆ ಸದಾ ತನ್ನ ಸಂಸ್ಕೃತ ವಿದ್ಯಾವ್ಯಾಸಂಗದಲ್ಲೇ ನಿರತರಾಗಿ ಕಾಲ ಕಳೆಯುತ್ತಿದ್ದರು.

## ಶ್ರೀ ಸ್ವಾಮಿಗಳ ಗೃಹಸ್ಥಾಶ್ರಮ ಜೀವನ

## (1910 ರಿಂದ 1931ರ ವರೆಗೆ)

ಈ ಮಹನೀಯರಿಗೆ ಕ್ರಿ.ಶ. 1910ನೇ ಇಸವಿಯಲ್ಲಿ ಒಳ್ಳೆಯ ಮನೆತನದ ಶ್ರೀ ಸೌ. ಆಂಡಾಳಮ್ಮನೆಂಬ ಮಂಡಯಂ ಸಮುದಾಯಕ್ಕೆ ಸೇರಿದ ಕನ್ಯೆ ಯೊಡನೆ ಮದುವೆಯಾಗಿ ಅವರ ಗೃಹಸ್ಥಾಶ್ರಮವು ಆರಂಭವಾಯಿತು. ಅಂದಿ ಗಿಂತ ಇವರು 1954ನೇ ಇಸವಿಯಲ್ಲಿ ಆಶ್ರಮ ಸ್ವೀಕಾರ ಮಾಡಿದವರೆಗೂ ತಮ್ಮ ಮದುವೆಯ ದಿವಸದಲ್ಲಿ ಭಾರ್ಯೆಗೆ ಕೊಟ್ಟ "ಧರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಾಮಿ" ಎಂಬ ಪ್ರತಿಜ್ಞೆಯನ್ನು ಮನಃಪೂರ್ವಕ ವಾಗಿ ಪರಿಪಾಲಿಸಿದರು. 1911ರಿಂದ 1913ರವರಿಗೆ ಇವರು ಮೈಸೂರಿ

ನಲ್ಲಿದ್ದು ಅಲ್ಲಿ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಾ ನವೀನ ತರ್ಕ ಶಾಸ್ತ್ರದಲ್ಲಿ ಉತ್ತಮವಾಗಿ ತೇರ್ಗಡೆಯಾಗಿ ಮಹಾರಾಜರು ಮತ್ತು ಕರ್ಪೂರ ಶ್ರೀನಿವಾಸರಾಯುಲು ಇವರುಗಳಿಂದ ಏರ್ಪಡಿಸಿದ್ಧ ಪಾರಿತೋಷಕ ಬಹುಮಾನಗಳನ್ನು ಪಡೆದರು. ಗೃಹಸ್ಥಾಶ್ರಮದಲ್ಲಿ ವಿಧಿಸಿರುವ ಪಂಚ ಮಹಾಯಜ್ಞಗಳನ್ನೂ ಮತ್ತು ಶ್ರೀ ವೈಷ್ಣವ ಆಚಾರಗಳನ್ನೂ ಶ್ರದ್ಧೆ ಯಿಂದ ಎಲ್ಲರೂ ಮೆಚ್ಚುವ ಹಾಗೆ ಆಚರಿಸುತ್ತಿದ್ದರು. 1914ರಲ್ಲಿ ಪೂರ್ವ ಮೀಮಾಂಸಾಶಾಸ್ತ್ರವನ್ನು ಮೈಸೂರು ಪಾಠಶಾಲೆಯಲ್ಲಿ ಓದಿ ವಿದ್ವತ್ಪರಿಕ್ಷೆ ಕೊಟ್ಟರು. ಇವರ ಪಾಂಡಿತ್ಯವನ್ನೂ, ಲೌಕಿಕ ಜ್ಞಾನವನ್ನೂ ಮೆಚ್ಚಿ ಮೈಸೂರು ಸಂಸ್ಕೃತ ಕಾಲೇಜು ಅಧಿಕಾರಿಗಳು ಇವರಿಗೆ ಆ ಕಾಲೇಜಿನಲ್ಲೇ ಲೈಬ್ರೇರಿಯನ್ ಪದವಿಯನ್ನು ಕೊಟ್ಟುದುದಲ್ಲದೆ ಕೆಲವು ಶಾಸ್ತ್ರಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಡುವ ಅವಕಾಶವನ್ನೂ ಕಲ್ಪಿಸಿದರು. ಈ ಕಾಲದಲ್ಲಿ ಇವರು ಅನೇಕ ಸಂಸ್ಕೃತ ಗ್ರಂಥಗಳನ್ನು ತಾವೇ ವ್ಯಾಸಂಗ ಮಾಡಿದುದಲ್ಲದೆ ಪಾಠ ಹೇಳಿಕೊಟ್ಟು ಶಾಸ್ತ್ರಗಳಲ್ಲಿ ಪ್ರವೀಣರಾದರು. ಇಷ್ಟೇ ಅಲ್ಲ, ರಜಾ ಕಾಲಗಳಲ್ಲಿ ಈ ಮಹನೀಯರು ಮೇಲುಕೋಟೆಗೆ ಹೋಗಿ ಅಲ್ಲಿ ಪ್ರಸಿದ್ಧ ವಿದ್ವಾಂಸರೂ ಆಚಾರ್ಯ ಪುರುಷರೂ ಆಗಿದ್ಧ ಶ್ರೀ ಉ. ಅಳ್ವಾರ್ ಸ್ವಾಮಿ ಗಳಲ್ಲೂ ಮತ್ತು ಮಹಾ ಪಂಡಿತರಾದ ಸ್ಥಾನೀಕಂ ಪಂಡಿತರತ್ನಂ ಕುಪ್ಪಣ್ಣೆಂಗಾರ್ ಸ್ವಾಮಿಗಳಲ್ಲೂ ಶ್ರೀ ಭಾಷ್ಯ ಮತ್ತು ಸಂಪ್ರದಾಯ ರಹಸ್ಯ ಗ್ರಂಥಗಳನ್ನೆಲ್ಲಾ ಕಾಲಕ್ಷೇಪ ಮಾಡಿದರು. ಆ ಕಾಲದಲ್ಲಿ ಪ್ರಸಿದ್ಧ ವಿದ್ವಾಂಸ ರಾಗಿದ್ದ ಮತ್ತು ಕಾಲಕ್ರಮದಲ್ಲಿ ಶ್ರೀ ಯತಿರಾಜ ಮಠದ ಪೀಠವನ್ನು ಅಲಂ ಕರಿಸಿದ ವಿದ್ವಾನ್ ಆಸೂರಿ ಆನಂದಾಳ್ವಾರ್ ಸ್ವಾಮಿಗಳ ಹತ್ತಿರ ಕೆಲವು ಸಾಹಿತ್ಯ ಗ್ರಂಥಗಳನ್ನೂ ವ್ಯಾಸಂಗ ಮಾಡಿದರು. ಮೈಸೂರಿನಲ್ಲಿಯೂ ಕೂಡ ಪ್ರಸಿದ್ಧ ವಿದ್ವಾಂಸರಾಗಿದ್ದ ಕಾಲಕ್ರಮೇಣ ಶ್ರೀ ಪರಕಾಲ ಸ್ವಾಮಿಗಳಾದ ಆತ್ಮಕೂರು ರಂಗಾಚಾರ್ ಸ್ವಾಮಿಗಳಲ್ಲೂ ಮತ್ತು ಮಹಾವಿದ್ವಾನ್ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರಲ್ಲೂ ಅಡಿಗಡಿಗೆ ವ್ಯಾಸಂಗ ಮಾಡಿ ಅವರುಗಳಿಂದ ಆಸ್ತಿಕ ದರ್ಶನಗಳನ್ನು ಚೆನ್ನಾಗಿ ತಿಳಿದುಕೊಂಡರು. ಈ ಕಾಲದಲ್ಲಿ ಈ ಸ್ವಾಮಿಗಳು ಶ್ರೀ ಆಸೂರಿ ಆನಂದಾಳ್ವಾರ್‌ರೊಂದಿಗೂ ಮತ್ತು ಸ್ವಂತ ವಾಗಿಯೂ ಉತ್ತರ ದಕ್ಷಿಣ ದೇಶಗಳಲ್ಲಿ ಆಗಾಗ್ಯೆ ಯಾತ್ರೆ ಮಾಡಿ ಕಾಲಡಿ,

ಹೈದರಾಬಾದ್, ಕಾಂಚಿಪುರಂ ಇವೇ ಮೊದಲಾದ ಸ್ಥಳಗಳಲ್ಲಿ, ಏರ್ಪಡಿಸಿದ್ದ ವಿದ್ವತ್ ಸಭೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದರು.

ಹೀಗೆ ಈ ಮಹನೀಯರು ತಮ್ಮ ವಿದ್ಯೆಯಲ್ಲಿಯೂ ಮತ್ತು ಲೌಕಿಕ ಜ್ಞಾನದಲ್ಲಿಯೂ ಹೆಚ್ಚಾದ ಗೌರವವನ್ನು ಸಂಪಾದಿಸಿದರು. ಮೈಸೂರು ಸಂಸ್ಕೃತ ಕಾಲೇಜು ಅಧಿಕಾರಿಗಳು 1918ರಲ್ಲಿ ಇವರಿಗೆ "ಸಂಸ್ಕೃತ ಪರೀಕ್ಷಾ ಇಲಾಖೆಯ ಪಂಡಿತರು" ಎಂಬ ಉದ್ಯೋಗವನ್ನು ಕೊಟ್ಟು ಅವರ ಸಂಬಳವನ್ನು ಹೆಚ್ಚಿಸಿದರು. ಈ ಉದ್ಯೋಗದಲ್ಲಿ ಆರು ವರುಷ ಗಳಿದ್ದರು; ಈ ಕಾಲದಲ್ಲಿಯೇ ಸ್ವಾಮಿಗಳು ವಿಶಿಷ್ಟಾದ್ವೈತ ವೇದಾಂತ ದಲ್ಲಿ ಉತ್ತಮ ತರಗತಿಯಲ್ಲಿ ತೇರ್ಗಡೆಯನ್ನು "ಹೊಂದಿ" ವಿಶಿಷ್ಟಾ ದ್ವೈತ ವೇದಾಂತ ವಿದ್ವಾನ್ ಎಂಬ ಬಿರುದನ್ನು ಪಡೆದರು ವಿದ್ಯಾರ್ಥಿಗಳಿಗೆ ಈ ವಿಷಯಗಳಲ್ಲಿ ಪಾಠಗಳನ್ನೂ ಹೇಳಿಕೊಟ್ಟರು. ಈ ಕಾಲದಲ್ಲಿ ಇವರ ಎರಡು ಗಂಡುಮಕ್ಕಳೂ ಮತ್ತು ಎರಡು ಹೆಣ್ಣುಮಕ್ಕಳೂ ಇವರ ಪೋಷಣೆ ಯಲ್ಲಿದ್ದರು. ಇವರುಗಳಿಗೂ ಮತ್ತು ತಮ್ಮಂದಿರಿಗೂ ಇಂಗ್ಲೀಷು ಕಾಲೇಜು ಗಳಲ್ಲಿ ಶಿಕ್ಷಣವನ್ನು ಕೊಡಿಸುವ ಜವಾಬ್ದಾರಿಯು ಇವರದಾಗಿತ್ತು. ಇವರ ತಮ್ಮಂದಿರು ಪ್ರೌಢಶಿಕ್ಷಣವನ್ನು ಪಡೆದು, ಪದವೀಧರರಾಗಿ ಉತ್ತಮ ಪದವಿ ಗಳನ್ನು ಪಡೆದರು. ಸ್ವಾಮಿಗಳಿಗೆ ಈ ಕಾಲದಲ್ಲಿ ಸಂಸಾರವನ್ನು ನಡೆಸುವುದು ಕಷ್ಟವಾಗಿತ್ತು. 1924ರಲ್ಲಿ ಈ ಮಹನೀಯರಿಗೂ ಸಂಸ್ಕೃತ ಕಾಲೇಜಿನ ಅಧಿಕಾರಿಗಳಿಗೂ ಅಭಿಪ್ರಾಯ ಭೇದವುಂಟಾದುದರಿಂದ ತಮಗೆ ಸಂಸಾರದಲ್ಲಿ ಎಷ್ಟು ಜವಾಬ್ದಾರಿಯೂ ಕಷ್ಟಗಳೂ ಇದ್ದಾಗ್ಯೂ ಕೂಡ ಇವರು ಸಂಸ್ಕೃತ ಕಾಲೇಜಿನ ಪಂಡಿತ ಕಾರ್ಯಕ್ಕೆ ರಾಜೀನಾಮೆಯನ್ನು ಕೊಟ್ಟು ಸ್ವತಂತ್ರರಾದು ದಲ್ಲದೆ, ವಿದ್ಯೆಯನ್ನು ಹೆಚ್ಚಾಗಿ ಕಲಿತು ಪ್ರಚಾರ ಮಾಡುವುದಕ್ಕೆ ಅವಕಾಶ ವನ್ನು ಪಡೆದರು. ಈ ವಿರಾಮ ಕಾಲದಲ್ಲಿ ಅಂದರೆ 1924ರಿಂದ 1931ರವರಿಗೆ ಶ್ರೀ ಸ್ವಾಮಿಗಳು ಅಯೋಧ್ಯ, ಪಾಟ್ನಾ, ಗಯಾ ಮುಂತಾದ ಉತ್ತರದೇಶ ಗಳಲ್ಲೂ, ಕಾಂಚಿಪುರಂ ಶ್ರೀ ಪೆರಂಬೂದೂರು, ತಿರುವಲ್ಲಿಕ್ಕೇಣಿ, ತಿರುಪತಿ ಮುಂತಾದ ದಕ್ಷಿಣ ದೇಶಗಳಲ್ಲೂ ಯಾತ್ರೆ ಮಾಡಿ ಅಲ್ಲಿನ ವಿದ್ವಾಂಸರೊಡನೆ ಸಹವಾಸ ಮಾಡಿ ವಿಶೇಷ ಅನುಭವಗಳನ್ನು ಪಡೆದರು. ಆಮೇಲೆ ಬೊಂಬಾ

ಯಿಗೆ ಬಂದು ಕೆಲವು ತಿಂಗಳು ಪ್ರಸಿದ್ಧರಾದ ಶ್ರೀ ಶ್ರೀ ಗಾಧಿ ಅನಂತಾಚಾರ್ಯರ ಶ್ರೀ ಮಠದಲ್ಲಿ ಪಂಡಿತರಾಗಿ ಕೆಲಸ ಮಾಡಿದರು. ಆಮೇಲೆ ಕೆಲವು ತಿಂಗಳುಗಳು ಕಾಂಚೀಪುರದಲ್ಲಿ "ಸುದರ್ಶನ ಮುದ್ರಾಲಯದ" ಸಹಾಯಕ ಸಂಪಾದಕ ರಾಗಿದ್ದರು. ಈ ಕಾಲದಲ್ಲಿ ಸಂಸಾರ ನಿರ್ವಾಹಮಾತ್ರವಲ್ಲದೆ ವಿದ್ಯಾರ್ಜನೆ ಯಲ್ಲೂ ಅಲ್ಪ ಸ್ವಲ್ಪ ಸಂಪಾದನೆಯಲ್ಲೂ ನಿರತರಾಗಿದ್ದರು. ಈ ಕಷ್ಟ ಕಾಲ ದಲ್ಲೂ ಇವರು ತಮ್ಮ ಗೃಹಸ್ಥಾಶ್ರಮ ಧರ್ಮವನ್ನೂ ಶ್ರೀ ವೈಷ್ಣವ ಆಚಾರ ಗಳನ್ನೂ, ಆಚಾರ್ಯ ಪದವಿಯ ಧರ್ಮಗಳನ್ನೂ ತಮ್ಮ ಗೃಹದಲ್ಲಿ ಹಿಂದಿನಿಂದ ಬಿಜಯ ಮಾಡಿಸಿದ್ದ ಶ್ರೀರಾಮ ದೇವರ ನಿತ್ಯ ತಿರುವಾರಾಧನವನ್ನೂ ತಪ್ಪದೆ ಶ್ರದ್ಧೆಯಿಂದ ನಡೆಸುತ್ತಲೇ ಇದ್ದರು.

ಈ ವಿರಾಮ ಕಾಲದಲ್ಲಿ ಶ್ರೀ ಸ್ವಾಮಿಗಳು ಇಂಗ್ಲೀಷಿನಲ್ಲಿ ಪ್ರೌಢ ವಿದ್ಯಾ ಭ್ಯಾಸವನ್ನು ಪಡೆದು ಪದವೀಧರರಾಗಿದ್ದ ತಮ್ಮ ಬಂಧುಗಳು ಮತ್ತು ಸ್ನೇಹಿತ ರೊಡನೆ ಕಲೆತು ಅವರೊಡನೆ ತತ್ವ-ಹಿತ-ಪುರುಷಾರ್ಥವಿಚಾರಗಳಲ್ಲಿ ವಾದ ಮಾಡುತ್ತಾ ವಿಜ್ಞಾನಶಾಸ್ತ್ರಗಳ ಮತ್ತು ಆಧುನಿಕ ತತ್ವ-ಶಾಸ್ತ್ರಗಳ ಸಾರಾಂಶಗಳನ್ನೂ ಮತ್ತು ಭಾರತ ಜನಾಂಗ ಸ್ಥಾಪಕರಾದ ಸ್ವಾಮಿ ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದ, ಮತ್ತು ಮಹಾತ್ಮಾಗಾಂಧಿ ಇವರುಗಳ ಅಭಿಪ್ರಾಯ ಸಂದೇಶಗಳ ಸಾರಾಂಶವನ್ನೂ ತಿಳಿದುಕೊಂಡು ಪರಿ ಶೀಲಿಸಿದರು. ಇಷ್ಟೇ ಅಲ್ಲ, ಈ ಕಾಲದಲ್ಲಿ ಇವರು, ಮಂಡಯಂ ಸಮುದಾ ಯದ ಮುಖಂಡರೊಡನೆ ಸೇರಿ, ಶ್ರೀ ಮಂಡಯಂ ವಿದ್ಯಾರ್ಥಿನಿಲಯಕ್ಕೂ, ಶ್ರೀ ಮಂಡಯಂ ಶ್ರೀ ವೈಷ್ಣವ ಸಭೆಗೂ, ಶ್ರೀ ಮಂಡಯಂ ಶ್ರೀ ವೈಷ್ಣವ ಸಮ್ಮೇಳನಗಳಿಗೂ (conference) ಮತ್ತು ಶ್ರೀ ಯತಿರಾಜಮಠದ ಸ್ವಾಮಿಗಳಿಗೂ ಅನೇಕ ಸೇವೆಗಳನ್ನು ಸಲ್ಲಿಸಿದರು.

## ಶ್ರೀ ಸ್ವಾಮಿಗಳವರ ವಾನಪ್ರಸ್ಥಾಶ್ರಮ ಜೀವನ
## (1931–1954)

ಈ ಕಾಲದಲ್ಲಿ ಶ್ರೀ ಸ್ವಾಮಿಗಳವರಿಗೆ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸುವುದು ಬಹಳ ಕಷ್ಟವಾಗಿದ್ದಿತು. ಶ್ರೀರಾಮನಿಗೆ ಬಹಳ ಭಕ್ತಿ

ಯಿಂದ ತಿರುವಾರಾಧನವನ್ನು ನಡೆಸುತ್ತಲೇ ಇದ್ದರು. ಶ್ರೀರಾಮನ ಕೃಪೆಯಿಂದ 1931 ರಲ್ಲಿ ಇವರ ಮನಸ್ಸಿಗೆ ಶಾಂತಿ ಉಂಟಾಗುವ ಹಾಗೆ ಚಿಂತಾಮಣಿ ಹೈಸ್ಕೂಲ್ ಸಂಸ್ಕೃತ ಕನ್ನಡ ಪಂಡಿತರಾಗಿ ಇವರನ್ನು ನೇಮಕ ಮಾಡಿದರು. ಈ ಉಪಾಧ್ಯಾಯ ಕೆಲಸವನ್ನು 1947 ವರ್ಷದವರಿಗೆ ಅಂದರೆ ತಮ್ಮ ಅರವತ್ತನೇ ವಯಸ್ಸಿನ ವರುಷದವರಿವಿಗೆ ಹದಿನಾರು ವರುಷರ್ಷಗಳ ಕಾಲ ಉತ್ತಮರೀತಿಯಲ್ಲಿ ನಡೆಸಿದರು. ಇವರು ಚಿಂತಾಮಣಿಯಲ್ಲಿ ಉತ್ತಮದರ್ಜೆಯ ಪಂಡಿತ ಉಪಾಧ್ಯಾಯರಾಗಿ ಪಾಠಹೇಳುತ್ತಿದ್ದರು. ವಿದ್ಯಾರ್ಥಿಗಳ ಪ್ರೀತಿಯನ್ನೂ ಗೌರವವನ್ನೂ ಸಂಪಾದಿಸಿದ್ದರು. ಹೆಡ್ ಮಾಸ್ಟರುಗಳು ಇವರನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಸಹಾಯ ಉಪಾಧ್ಯಾಯರುಗಳು ತಮ್ಮ ಭಕ್ತಿಯನ್ನು ತೋರಿಸುತ್ತಿದ್ದರು. ಊರಿನಲ್ಲಿ ವೇದಾಂತ ಕಾಲಕ್ಷೇಪ ಹೇಳುತ್ತಿದ್ದರಿಂದ ಊರಿನವರ ಪ್ರೀತಿಯನ್ನೂ, ಗೌರವವನ್ನೂ ಸಂಪಾದಿಸಿದ್ದರು. ಇನ್ಸ್ಪೆಕ್ಟರ್ ಅಧಿಕಾರಿಗಳು ಇವರ ಕೆಲಸಗಳಲ್ಲಿ ತೃಪ್ತಿಯನ್ನು ಸೂಚಿಸಿದ್ದರು. ವಿದ್ಯಾರ್ಥಿಗಳು ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಬಹುಮಟ್ಟಿಗೆ ತೇರ್ಗಡೆಯಾಗುತ್ತಿದ್ದರು ಈ ರೀತಿಯಲ್ಲಿ ತಮ್ಮ ಹೊಸ ಉದ್ಯೋಗವನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿದರು. ಈ ಕಾಲದಲ್ಲಿಯೂ ಕೂಡ ಇವರು ಸದಾಚಾರಗಳಿಂದ ತಮ್ಮ ಆಚಾರ್ಯ ಪೀಠವನ್ನು ಉತ್ತಮವಾಗಿ ಕಾಪಾಡಿಕೊಂಡು ಶಿಷ್ಯರಿಗೆ ಸಮಾಶ್ರಯಣ ಮಾಡುವುದಲ್ಲದೆ ಅವರಲ್ಲಿ ಶ್ರದ್ಧೆಯನ್ನು ಪಡೆದವರಿಗೆ ಕಾಲಕ್ಷೇಪಗಳನ್ನೂ ನಡೆಸುತ್ತಿದ್ದರು. ಮೈಸೂರು ದೇಶದಲ್ಲಿ ವಿಶಿಷ್ಟಾದ್ವೈತ ತತ್ವ ಮತ್ತು ಶ್ರೀ ವೈಷ್ಣವ ಮತವನ್ನು ಪ್ರಚಾರಮಾಡಬೇಕೆಂಬುದೇ ಈ ಕಾಲದಲ್ಲೂ ಅವರ ಮುಖ್ಯಧ್ಯೇಯವಾಗಿದ್ದಿತು. ಅವರು ಕೆಳಗೆ ಸೂಚಿಸಿರುವ ಕನ್ನಡ ವ್ಯಾಖ್ಯಾನ ಗ್ರಂಥಗಳನ್ನು ಬರೆದರು-ಆಚಾರ್ಯ ಹೃದಯ, ಬ್ರಹ್ಮ ಸೂತ್ರ ತಾತ್ಪರ್ಯ, ಗೀತಾರ್ಥ ಸಂಗ್ರಹ, ಸಹಸ್ರನಾಮ ಭಾಷ್ಯ, ಅಷ್ಟ ಶ್ಲೋಕೀ, ಮುಮುಕ್ಷುಪ್ಪಡಿ, ಪ್ರಮೇಯ ಶೇಖರಂ, ಅರ್ಥಪಂಚಕ, ನವರತ್ನಮಾಲೆ, ನವವಿಧ ಸಂಬಂಧ, ಪ್ರಪನ್ನಪರಿತ್ರಾಣ, ಶ್ರೀ ಭಾಷ್ಯತಾತ್ಪರ್ಯಸಾರ. ಇವುಗಳಲ್ಲಿ ಆಚಾರ್ಯ ಹೃದಯ, ಶ್ರೀ ಭಾಷ್ಯತಾತ್ಪರ್ಯಸಾರ ಮಾತ್ರ ಅಚ್ಚಾಗಿವೆ. ಈ ಕಾಲದಲ್ಲಿ ಸ್ವಾಮಿಗಳು ನಾಸ್ತಿಕವಾದಗಳನ್ನು ಮಾಡುತ್ತಿದ್ದ ಮತ್ತು ಇಂಗ್ಲೀಷು

ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಮತ್ತು ಇತರರೊಡನೆ ವೇದಾಂತ ವಾದಗಳನ್ನು ಮಾಡಿ ಅವರಲ್ಲಿ ನಾಸ್ತಿಕತ್ವ ಭಾವನೆಗಳನ್ನು ಹೋಗಲಾಡಿಸಿ ಅವರನ್ನು ಆಸ್ತೀಕರನ್ನಾಗಿ ಮಾಡಲು ಪ್ರಯತ್ನಿಸಿ ಅನೇಕ ಸಂದರ್ಭಗಳಲ್ಲಿ ಜಯಶೀಲರಾದರು. ಯಾವಾಗಲೂ ಶಿಷ್ಯರಲ್ಲಿ ವೇದಾಂತ ತತ್ವ ಹಿತ ಪುರುಷಾರ್ಥಗಳನ್ನೇ ಮಾತನಾಡುತ್ತಿದ್ದರು.

1947ರಲ್ಲಿ ಇವರಿಗೆ 60 ವರ್ಷಗಳು ತುಂಬಿದ್ದುದರಿಂದ ಮುನಿಸಿಪಲ್ ಹೈಸ್ಕೂಲ್ ಪಂಡಿತ ಪದವಿಯಿಂದ ರಿಟೈರ್ ಅಥವ ನಿವೃತ್ತಿಯಾಯಿತು. ಆದರೆ ಆಕಾಲದಲ್ಲಿ ಮುಸಿಸಿಪಲ್ ಹೈಸ್ಕೂಲ್ ಉಪಾಧ್ಯಾಯರಿಗೆ ಪೆನ್‌ಷನ್ ಇರಲಿಲ್ಲ. ಆದುದರಿಂದ ಪುನಃ ಸಂಬಳವಿಲ್ಲದ ಸ್ಥಿತಿಯು ಒದಗಿತು. ಆದರೆ ಈ ವೇಳೆಗೆ ಹೆಣ್ಣು ಮಕ್ಕಳಿಗೆ ಮದುವೆಯಾಗಿ ಗಂಡುಮಕ್ಕಳು ಪಧವೀಧರರಾಗಿ ಉದ್ಯೋಗಗಳಲ್ಲಿ ಸಂಪಾದಿಸುತ್ತಿದ್ದರು. ಆದುದರಿಂದ ಇವರು 1954 ನೇ ವರ್ಷದವರಿವಿಗೆ ಸಂಸಾರವನ್ನೆಲ್ಲಾ ಮಕ್ಕಳ ಜವಾಬ್ದಾರಿಗೆ ಬಿಟ್ಟು, ವಾನಪ್ರಸ್ಥಾಶ್ರಮವನ್ನು ಇನ್ನೂ ವಿಶೇಷವಾಗಿ ಆಚರಿಸಿದರು. ಯಾತ್ರೆಗಳನ್ನು ಮಾಡಿದರು; ಅಲ್ಲಲ್ಲಿ ವಾದಮಾಡಿ ಕಾಲಕ್ಷೇಪ ಹೇಳುತ್ತಿದ್ದರು; ಅಡಿಗಡಿಗೆ ಮೇಲುಕೋಟೆಗೆ ಹೋಗಿ ಅಲ್ಲಿ ದೇವರ ದರ್ಶನ ಉತ್ಸವಗಳಲ್ಲಿ ಅನ್ವಯಿಸುತ್ತಿದ್ದರು ; ತಿರುವಲ್ಲಿಕ್ಕೇಣಿಗೆ ಅಡಿಗಡಿಗೆ ಹೋಗಿ ಅಲ್ಲಿ ವೇದಾಂತಿಗಳ ಸಹವಾಸದಲ್ಲೂ, ದೇವಾಲಯಗಳ ಪೂಜೆಗಳಲ್ಲಿಯೂ ಸಾತ್ವಿಕವಾಗಿ ನಿರತರಾಗಿರುತ್ತಿದ್ದರು. ಆಹಾರ ವಿಚಾರದಲ್ಲೂ ಶ್ರೀ ವೈಷ್ಣವ ಆಚಾರಗಳಲ್ಲೂ ದೃಢವಾದ ನಿಯಮ ಆಚರಿಸುತ್ತಿದ್ದರು. ಆಗಿಂದಾಗ್ಯೆ ಮಕ್ಕಳುಗಳ ಮನೆಗಳಿಗೂ ಹೋಗಿ ಅವರಿಗೂ ಅನುಗ್ರಹಿಸುತ್ತಿದ್ದರು. ಸುಮಾರು 1952–54ರಲ್ಲಿ ಸ್ವಾಮಿಗಳು ಅವರ ಭಾವ ಪೆರೀಸ್ವಾಮಿ ಶ್ರೀನಿವಾಸೈಯ್ಯಂಗಾರ್ಯರ ಮನೆಯಲ್ಲಿದ್ದು ಉಭಯವೇದಾಂತ ಸಭೆಯ ಕಾರ್ಯಗಳಲ್ಲಿ ಹೆಚ್ಚಾಗಿ ಭಾಗವಹಿಸಿ ಸಹಾಯ ಮಾಡುತ್ತಿದ್ದರು. ಗ್ರಂಥಗಳನ್ನು ವ್ಯಾಸಂಗ ಮಾಡಿ ಬರೆಯುತ್ತಿದ್ದರು, ಮತ್ತು ಕಾಲಕ್ಷೇಪಾದಿಗಳಲ್ಲಿ ನಿರತರಾಗಿದ್ದರು.

## ಶ್ರೀ ಶ್ರೀ ಸ್ವಾಮಿಗಳ ಸನ್ಯಾಸಾಶ್ರಮ ಜೀವನ
## (1954 ರಿಂದ)

ಶ್ರೀ ಮಂಡಯಂ ಸಮುದಾಯದ ಮುಖಂಡರು 1953 ರಲ್ಲಿ ಈ
ಸ್ವಾಮಿಗಳನ್ನು ಆಗ ಖಾಲಿಯಾಗಿದ್ದ ಯತಿರಾಜ ಮಠದ ಪೀಠವನ್ನು ಅಲಂಕ
ರಿಸಬೇಕೆಂದು ಪ್ರಾರ್ಥಿಸಿದರು. ಆದರೆ ಅವರ ಮನೆಯವರು ಮತ್ತು ಅವರ
ಸ್ವಯಂ ಆಚಾರ್ಯ ಪೀಠದ ಶಿಷ್ಯರೂ ಇದಕ್ಕೆ ಒಪ್ಪಲಿಲ್ಲ. ಮನಸ್ಸಿನಲ್ಲಿ
ದ್ವಂದ್ವವಾಗಿ ಏನು ಮಾಡಬೇಕೆಂದು ತೀರ್ಮಾನವಾಗಲಿಲ್ಲ. ಒಂದು ದಿನ ರಾತ್ರಿ
ಮಲ್ಲೇಶ್ವರದ ಗೋಪಾಲಕೃಷ್ಣ ಸ್ವಾಮಿಯನ್ನು ತನಗೆ ಮನಸ್ಸಿನಲ್ಲಿ ಬೆಳಕನ್ನು
ಕೊಡಬೇಕೆಂದು ಪ್ರಾರ್ಥಿಸಿ ಮಲಗಿದ್ದಾಗ ಮರುದಿನ ಬೆಳಗಿನ ಜಾವದಲ್ಲಿ ಸ್ವಪ್ನ
ದಲ್ಲಿ ಶ್ರೀರಾಮಾನುಜಾಚಾರ್ಯರು ಪ್ರತ್ಯಕ್ಷವಾಗಿ "ನೀನು ವಿಶಿಷ್ಟಾದ್ವೈತ
ಸಿದ್ಧಾಂತವನ್ನೂ ಶ್ರೀವೈಷ್ಣವ ಮತವನ್ನೂ ಪ್ರಚಾರಮಾಡುವುದಕ್ಕಾಗಿ ನನ್ನ
ಯತಿರಾಜಮಠದ ಪೀಠವನ್ನು ಅಲಂಕರಿಸು" ಎಂದು ಆಜ್ಞೆಮಾಡಿದರು.
ಮಾರನೆಯ ದಿವಸವೇ ಎರಡನೆಯ ಯೋಚನೆಯನ್ನು ಮಾಡದೆ, ತಮ್ಮ
ಇತರ ಶಿಷ್ಯರ ಮತ್ತು ಮನೆಯವರ ಅಸಮಾಧಾನದ ಒತ್ತಾಯಕ್ಕಿಂತಲೂ
ಸಮುದಾಯದ ಹಿತೈಷಿಗಳ ಪ್ರಾರ್ಥನೆಯನ್ನು ಬಲವೆಂದೆಣಿಸಿ, ಸಮು
ದಾಯದ ಮುಖಂಡರಿಗೆ ಯತಿರಾಜ ಮಠದ ಪೀಠಾಧಿಪತಿಯಾಗುವುದಕ್ಕೆ
ಸಮ್ಮತಿಸಿ ಒಪ್ಪಿಗೆಯಿತ್ತರು. ಇವರು ಒಪ್ಪಿಕೊಂಡಮೇಲೆ ಇವರಿಗೆ ಆಶ್ರಮ
ಸ್ವೀಕಾರ ಕೊಡಲು ಸುಮಾರು ಆರುತಿಂಗಳ ಕಾಲವಾಯಿತು. ಈ ಕಾಲದಲ್ಲಿ
ಈ ಮಹನೀಯರು ತಮ್ಮ ಭಾರ್ಯೆಯೊಡನೆ ದಕ್ಷಿಣ ದೇಶಗಳ ಯಾತ್ರಾಸ್ಥಳ
ಗಳಲ್ಲೆಲ್ಲಾ ಅಂದರೆ ಎಲ್ಲಾ ದಿವ್ಯದೇಶಗಳಲ್ಲೂ ಯಾತ್ರೆಮಾಡಿ, ಆಯಾ
ಸ್ಥಳಗಳಲ್ಲಿ ಭಗವಂತನಿಗೆ ಮಂಗಳಾಶಾಸನಮಾಡಿ, ಪವಿತ್ರ ಭಾವನೆಯಿಂದ
ತಿರುನಾರಾಯಣಪುರಕ್ಕೆ ಬಂದು ಅಲ್ಲಿ ದೇವಾಲಯಗಳಲ್ಲಿ ಭಗವಂತನ
ಅನುಗ್ರಹ ಪಡೆದು 1954 ರಲ್ಲಿ ಮೇಲುಕೋಟೆ ಯತಿರಾಜಮಠದಲ್ಲಿ ಸನ್ಯಾ
ಸಾಶ್ರಮವನ್ನು ಸ್ವೀಕರಿಸಿದರು. ಶ್ರೀರಾಮಾನುಜರ ದಿವ್ಯಾಜ್ಞೆಯನ್ನು ಪರಿ
ಪಾಲಿಸಿದರು.

1954 ರಿಂದ ಇಲ್ಲಿಯವರಿವಿಗೆ (1967) ಮೇಲುಕೋಟೆ ಶ್ರೀಯತಿ ರಾಜ ಮಠದ ಮಂಡಯಂ ಶ್ರೀ ವೈಷ್ಣವ ಸಮುದಾಯದ ಶಿಷ್ಯರೂ ಮತ್ತು ಅಭಿಮಾನಿಗಳೂ ಶ್ರದ್ಧೆಯಿಂದ, ಉತ್ಸಾಹದಿಂದ, ಭಕ್ತಿಯಿಂದ ಈ ಸ್ವಾಮಿಗಳಿಗೆ ಸಂಬಂಧಪಟ್ಟ ಅನೇಕ ಉತ್ಸವಗಳನ್ನು ಸಂಭ್ರಮವಾಗಿ ನಡೆಸಲು ಶ್ರೀ ಸ್ವಾಮಿಗಳು ಅವರಿಗೆ ಕೃಪೆಯಿಂದ ಅನುಮತಿಯನ್ನು ಕೊಟ್ಟರು. 1954 ರಲ್ಲಿ ಆಶ್ರಮ ಸ್ವೀಕಾರ ಉತ್ಸವವು ಬಹಳ ಸಂಭ್ರಮವಾಗಿ ನಡೆಯಿತು. ಆಮೇಲೆ ಬೆಂಗಳೂರಿಗೆ ಶ್ರೀ ಶ್ರೀ ಸ್ವಾಮಿಗಳವರು ಮೊದಲನೆಯ ಸಲ ಬಂದು ತಮ್ಮ ಮಲ್ಲೇಶ್ವರದಲ್ಲಿರುವ ಶ್ರೀಮಠವನ್ನು ಪ್ರವೇಶಿಸಿ ಆಸ್ಥಾನಮಾಡಿದಾಗ ಸಂಭ್ರಮವಾಗಿ ಉತ್ಸವ ನಡೆಯಿತು. ತರುವಾಯ ಶ್ರೀ ಸ್ವಾಮಿಗಳು ಮದರಾಸಿಗೆ ದಿಗ್ವಿಜಯಮಾಡಿ ತಿರುವಲ್ಲಿಕ್ಕೇಣಿಯಲ್ಲಿರುವ ತಮ್ಮ ಮಠದಲ್ಲಿ ಆಸ್ಥಾನ ಮಾಡಿದಾಗ ಅಲ್ಲಿ ಸಂಭ್ರಮವಾಗಿ ಉತ್ಸವವು ನಡೆಯಿತು. ಅಷ್ಟೇ ಅಲ್ಲ; ಅಲ್ಲಿನ ಮಂಡಯಂ ಶ್ರೀ ವೈಷ್ಣವ ಶಿಷ್ಯಾಭಿಮಾನಿಗಳು ಅವರ ಎಪ್ಪತ್ತನೆಯ ತಿರುನಕ್ಷತ್ರದ ಉತ್ಸವವನ್ನೂ ಬಹಳ ಸಂಭ್ರಮವಾಗಿ ಕೊಂಡಾಡಿದರು. ಆ ಕಾಲದಲ್ಲಿಯೇ ಮದರಾಸಿನಲ್ಲಿ ನಡೆದ ವಿಶಿಷ್ಟಾದ್ವೈತದ ಸಮ್ಮೇಳನವನ್ನು ಶ್ರೀ ಸ್ವಾಮಿಗಳು ಮುಖಂಡರಾಗಿ ನಿಂತು ನಡೆಸಿದರು. ಮೇಲುಕೋಟೆಯಲ್ಲಿ ಪ್ರತಿ ವರುಷವೂ ಉತ್ಸವಗಳು ನಡೆಯುತ್ತಿವೆ. ಈಗ ಶ್ರೀ ಸ್ವಾಮಿಗಳ ಎಂಭತ್ತನೆಯ ತಿರುನಕ್ಷತ್ರವು ಬೆಂಗಳೂರಿನಲ್ಲಿಯೂ, ಮದರಾಸಿನಲ್ಲಿಯೂ, ಮುಖ್ಯವಾಗಿ ಮೇಲುಕೋಟೆಯಲ್ಲಿಯೂ ಬಹಳ ಉತ್ಸಾಹದಿಂದಲೂ ಸಂಭ್ರಮದಿಂದಲೂ ನಡೆದಿವೆ. ಮಂಡಯಂ ಶ್ರೀ ವೈಷ್ಣವ ಸಮುದಾಯದ ಶಿಷ್ಯಾಭಿಮಾನಿಗಳೆಲ್ಲರೂ ತಮ್ಮ ಯತಿರಾಜ ಮಠಕ್ಕೂ, ಶ್ರೀ ಸ್ವಾಮಿಗಳಿಗೂ ಭಕ್ತಿಯನ್ನೂ ಪ್ರೀತಿಯನ್ನೂ ವಿಶೇಷವಾಗಿ ತೋರಿಸಿರುವರು. ಶ್ರೀ ಸ್ವಾಮಿಗಳವರೂ ಭಗವಂತನನ್ನು ಪ್ರಾರ್ಥಿಸಿ ಮಂಗಳಾಶಾಸನ ಮಾಡಿ, ಪರಮಕೃಪೆಯಿಂದ ಸಮುದಾಯದ ಶಿಷ್ಯಾಭಿಮಾನಿಗಳೆಲ್ಲರನ್ನೂ ಆಶೀರ್ವದಿಸಿ ಅನುಗ್ರಹಿಸಿರುವರು.

ಶ್ರೀ ಸ್ವಾಮಿಗಳು ಯತಿರಾಜ ಮಠದ ಪೀಠವನ್ನು ಅಲಂಕರಿಸಿರುವ ಈ ಹದಿಮೂರು ವರುಷಗಳ ಕಾಲದಲ್ಲಿ ಮೇಲುಕೋಟೆಯ ಮಠದಲ್ಲಿ ಮತ್ತು

ಬೆಂಗಳೂರು ಮದರಾಸು ಶಾಖಾ ಮಠಗಳಲ್ಲಿಯೂ ಪೂಜಾದಿಗಳು ಶ್ರದ್ಧೆಯಿಂದ ನಡೆಯುತ್ತಿವೆ. ಮಠದ ಸ್ಥಿರ ಸ್ವತ್ತುಗಳು ಅಧಿಕವಾಗಿವೆ, ಉಪಯೋಗವಿಲ್ಲದ ಸ್ಥಿರ ಸ್ವತ್ತುಗಳು ಲಾಭವಾಗಿ ಮಾರಲ್ಪಟ್ಟು ಶ್ರೀ ಮಠದ ನಗದು ಆಸ್ತಿಯು ಹೆಚ್ಚಿದೆ. ಶ್ರೀ ಸ್ವಾಮಿಗಳು ಶ್ರೀ ಪಾದ ತೀರ್ಥದ ಕಾಣಿಕೆಗಳನ್ನೂ ಕೂಡ ತಮ್ಮ ಸ್ವಂತ ಖರ್ಚಿಗೆ ಉಪಯೋಗಿಸದೆ, ಶ್ರೀಮಠದ ಶಾಶ್ವತ ಅಭಿವೃದ್ಧಿಗೆ ಅವಶ್ಯಕವಾದ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಉಪಯೋಗಿಸಿರುತ್ತಾರೆ. ಕೆಲವು ಹಿಂದಿನ ಸ್ವಾಮಿಗಳು ಬಹುಕಾಲದಿಂದ ಆಶೆ ಪಡುತ್ತಿದ್ದ ಶ್ರೀ ಮಠದ ಪಕ್ಕದ ಮನೆಯು ಇವರ ಕಾಲದಲ್ಲಿ ಶ್ರೀ ಮಠಕ್ಕೆ ಕ್ರಯಲಬ್ಧವಾಗಿ ಸೇರಿತು. ಬೆಂಗಳೂರು ಮಠವು ಬಡಾವಣೆಯಾಯಿತು; ಮದರಾಸ್ ಮಠದಲ್ಲಿ ಕಲ್ಯಾಣಮಂಟಪದ ಕಟ್ಟಡಗಳನ್ನು ಕಟ್ಟುವ ಏರ್ಪಾಡುಗಳು ತ್ವರೆಯಿಂದ ನಡೆಯುತ್ತಿವೆ. ಮೈಸೂರು ವಾಣೀವಿಲಾಸ ಅಗ್ರಹಾರದ ಶ್ರೀ ಮಠದ ಖಾಲಿ ನಿವೇಶನದಲ್ಲಿ ಒಂದು ಶಾಖಾ ಮಠವನ್ನು ಕಟ್ಟುವ ಏರ್ಪಾಡು ಆರಂಭವಾಗಿದೆ. ಮೇಲುಕೋಟೆಯಲ್ಲಿ ಶ್ರೀ ಸ್ವಾಮಿಗಳ ಆಶ್ರಮದ ಬಡಾವಣೆಯು ಅವಶ್ಯಕವಾಗಿರುವುದರಿಂದ ಆ ಪವಿತ್ರ ಕೆಲಸವನ್ನೂ ಶ್ರೀ ಸ್ವಾಮಿಗಳು ಶೀಘ್ರದಲ್ಲಿಯೇ ಕೈಗೊಳ್ಳುವರು. ಶ್ರೀ ಸ್ವಾಮಿಗಳವರು ತಮ್ಮ ವೈಯುಕ್ತಿಕ ಅನುಕೂಲವನ್ನೂ ಗಣಿಸದೆ ಶ್ರೀ ಮಠದ ನಗದು ಆಸ್ತಿಯಿಂದಲೂ ಮತ್ತು ಶ್ರೀ ಮಠದ ಮಾಹೇಯಾನಾ ಬರುವ ಆದಾಯದಿಂದಲೂ ಹಣವನ್ನು ಮಿಗಿಸಿ ಈ ಕಟ್ಟಡಗಳನ್ನು ಕಟ್ಟಿಸುತ್ತಿರುವುದಕ್ಕಾಗಿ ಮುಂಡಯಂ ಶ್ರೀ ವೈಷ್ಣವ ಶಿಷ್ಯಾಭಿಮಾನಿಗಳೆಲ್ಲಾ ಅವರಿಗೆ ಕೃತಜ್ಞರಾಗಿರಬೇಕು.

ಶ್ರೀ ಸ್ವಾಮಿಗಳು ಆಶ್ರಮ ಸ್ವೀಕಾರ ಮಾಡಿದ ಕಾಲದಿಂದ ಇಲ್ಲಿಯವರೆಗೆ ಅನೇಕರಿಗೆ ಮೇಲುಕೋಟೆ ಮಠದಲ್ಲೂ, ಬೆಂಗಳೂರು ಮಠದಲ್ಲೂ, ಮದರಾಸ್ ಮಠದಲ್ಲೂ ಶ್ರದ್ಧೆಯಿಂದ ಕೇಳುವವರಿಗೆ ಕಾಲಕ್ಷೇಪವನ್ನು ಹೇಳಿದ್ದಾರೆ, ಮತ್ತು ಹೇಳುತ್ತಿದ್ದಾರೆ; ಏಕೆಂದರೆ ಅವರಿಗೆ ವಿಶಿಷ್ಟಾದ್ವೈತ ಮತ್ತು ಶ್ರೀ ವೈಷ್ಣವಮತ ಪ್ರಚಾರ ಮಾಡುವುದೇ ಮುಖ್ಯವಾದ ಧ್ಯೇಯ. ಈ ಸ್ವಾಮಿಗಳವರು ನವೀನ ತರ್ಕ ಮತ್ತು ಮೀಮಾಂಸಾ ಶಾಸ್ತ್ರಗಳಲ್ಲಿ ವಿಶೇಷ ಪಾಂಡಿತ್ಯ ಪಡೆದಿದ್ದುದರಿಂದಲೂ ಈ ಮಠದ ಪರಂಪರೆಯಲ್ಲಿ ಹಿಂದಿನ ಸ್ವಾಮಿಗಳ ಕಾಲಗಳಲ್ಲಿ ನಡೆಯು

ತ್ರಿದ್ದದಕ್ಕಿಂತಲೂ ಅತಿಶಯವಾಗಿ ಶ್ರೀ ಭಾಷ್ಯ ಮತ್ತು ಶ್ರುತಕಾಶಿಕಾ, ವೇದಾಂತ ವಾದಾವಳೀ ಮುಂತಾದ ಉತ್ತಮ ಗ್ರಂಥಗಳನ್ನು ವಿದ್ಯಾರ್ಥಿಗಳಿಗೆ ಪಾಠ ಹೇಳಿ, ವಿದ್ವಾಂಸರೊಡನೆ ವಾಕ್ಯಾರ್ಥ ನಡೆಸಿ ಆ ಶ್ರೀಮದ್ರಾಮಾನುಜಾ ಚಾರ್ಯರು ನಿಯಮಿಸಿರುವ ಪಠಿತ್ವಾಭಾಷ್ಯಂ ತತ್ಪ್ರವಚನಃ ಎಂಬ ಮುಖ್ಯ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಮೇಲುಕೋಟೆಯಲ್ಲಿ ವಿದ್ವತ್ ಪರೀಕ್ಷೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶಿಷ್ಟಾದ್ವೈತ ವೇದಾಂತದ ಪಾಠ ಹೇಳಿಕೊಟ್ಟಿದ್ದಾರೆ; ಈಗಲೂ ಹೇಳಿಕೊಡುತ್ತಿದ್ದಾರೆ. ಪ್ರೌಢ ವಿದ್ಯಾರ್ಥಿಗಳಿಗೆ ಶ್ರೀ ಭಾಷ್ಯ ಕಾಲಕ್ಷೇಪವನ್ನು ಮಾಡುವುದರಲ್ಲಿ ಇವರಿಗೆ ವಿಶೇಷವಾದ ಆನಂದ. ಇತರ ಸಭೆಗಳಲ್ಲಿ ಆಹ್ವಾನಿಸಲ್ಪಟ್ಟಾಗ ಶ್ರೀ ಸ್ವಾಮಿಗಳು ಎಲ್ಲರೂ ಮೆಚ್ಚುವ ಹಾಗೆ ಭಾಷಣಗಳನ್ನು ಮಾಡಿದ್ದಾರೆ. ಇಷ್ಟೇ ಅಲ್ಲ, ಶ್ರೀ ಉಪನಿಷತ್ತುಗಳಿಗೆ ವಿಶಿಷ್ಟಾದ್ವೈತ ಪರವಾಗಿ–ಮಂತ್ರ-ಅರ್ಥ–ತಾತ್ಪರ್ಯ ಇವುಗಳನ್ನು ಒಳಗೊಂಡಿರುವ ಕನ್ನಡ ಪುಸ್ತಕಗಳು ಇಲ್ಲವೆಂಬ ಕೊರತೆಯನ್ನು ನೀಗಿಸುವುದಕ್ಕಾಗಿ, ಶ್ರೀ ಸ್ವಾಮಿಗಳು ಈ ಸನ್ಯಾಸಾಶ್ರಮ ದಲ್ಲಿಯೂ ಅಂದರೆ "ವೃದ್ಧಾಪ್ಯದಲ್ಲಿಯೂ ಕೂಡ" ಈಶಾವಾಸ್ಯ ಉಪನಿಷತ್ತು, ಕೇನೋಪನಿಷತ್ತು ಇವುಗಳಿಗೆ ವ್ಯಾಖ್ಯಾನವನ್ನು ಮತ್ತು "ಶ್ರೀ ರಾಮಾಯಣ ರಹಸ್ಯ" ಎಂಬ ಪುಸ್ತಕವನ್ನೂ ಬರೆದು ಅಚ್ಚು ಹಾಕಿಸಿದ್ದಾರೆ. ಇವುಗಳಲ್ಲದೆ ಕಠೋಪನಿಷತ್ತು, ಮುಂಡಕೋಪನಿಷತ್ತು, ಬೃಹದಾರಣ್ಯಕ ಉಪನಿಷತ್ತಿನಲ್ಲಿ ಮುಖ್ಯವಾದ ಒಂದು ಅಧ್ಯಾಯ; ತೈತ್ತಿರಿಯೋಪನಿಷತ್ತು, ಛಾಂದೋಗ್ಯ ಉಪನಿಷತ್ತಿನ ಆರನೆಯ ಅಧ್ಯಾಯ ಇವುಗಳನ್ನು ಕನ್ನಡದಲ್ಲಿ ಹಸ್ತಲಿಖಿತವಾಗಿ ಬರೆದಿಟ್ಟಿರುವರು. ಈ ಸ್ವಾಮಿಗಳ ಎಂಭತ್ತನೆಯ ತಿರುನಕ್ಷತ್ರದ ಉತ್ಸವ ನಿರ್ವಾಹ ಸಮಿತಿಯವರು ಈಗ ಇವರ ತೈತ್ತಿರಿಯೋಪನಿಷತ್ತಿನ ಕನ್ನಡ ವ್ಯಾಖ್ಯಾನ ಸಮೇತ ಪುಸ್ತಕವನ್ನು ಅಚ್ಚು ಹಾಕಿಸಿದ್ದಾರೆ. ಸ್ವಾಮಿಗಳ ವಿಶಿಷ್ಟಾದ್ವೈತ ಪ್ರಚಾರ ಕಾರ್ಯವನ್ನು ಮುಂದುವರಿಸಿ ಅವರ ಅನುಗ್ರಹಕ್ಕೆ ಪಾತ್ರರಾಗಲು ಶಿಷ್ಯಾಭಿಮಾನ ಮುಖಂಡರು ಶ್ರೀ ಸ್ವಾಮಿಗಳು ಬರೆದಿರುವ ಎಲ್ಲಾ ಪುಸ್ತಕಗಳನ್ನು ಅಚ್ಚು ಹಾಕಿಸವುದಕ್ಕೆ ಉತ್ಸಾಹಿಗಳಾಗಿದ್ದಾರೆ. ಇದರಿಂದ ಲೋಕೋಪಕಾರವೂ ಆಗುತ್ತದೆ.

ವಿಷಯಗಳಾಗಲೀ ಮತ್ತು ಅಲ್ಪ ವಿಷಯಗಳಾಗಲಿ ಇರುವುದಿಲ್ಲ. ಶ್ರೀ ಸ್ವಾಮಿಗಳಿಗೆ ಆಳ್ವಾರುಗಳಲ್ಲಿಯೂ, ಶ್ರೀ ರಾಮಾನುಜಾಚಾರ್ಯರಲ್ಲೂ ಆಚಾರ್ಯರುಗಳಲ್ಲಿಯೂ, ತನ್ನ ಪೂರ್ವಿಕ ಆಚಾರ್ಯರುಗಳಲ್ಲಿಯೂ ಸಂಪೂರ್ಣವಾದ ಭಕ್ತಿ. ಮೇಲುಕೋಟೆ ದಿವ್ಯದೇಶದಲ್ಲಿಯೂ, ಅಲ್ಲಿಯ ದಿವ್ಯಮೂರ್ತಿಗಳಲ್ಲಿಯೂ ಅಧಿಕವಾದ ಪ್ರೇಮವನ್ನು ಪಡೆದಿರುವರು. ಶರೀರದಲ್ಲಿ ಆಲಸ್ಯ ತೊಂದರೆಯಾದರೂ ಕೂಡ ಔಷಧಿಗಳನ್ನು ತೆಗೆದುಕೊಳ್ಳುವುದಿಲ್ಲ. ಮುಕುಂದಮಾಲೆಯಲ್ಲಿರುವ "ಕೃಷ್ಣ ರಸಾಯನಂ ಪಿಬ" ಎಂಬ ದಿವ್ಯ ಔಷಧವನ್ನೇ ಯಾವಾಗಲೂ ಸೇವಿಸುತ್ತಿರುವರು. ಒಟ್ಟಿನಲ್ಲಿ, ಶ್ರೀರಾಮಾನುಜರಿಂದ ತನಗೆ ವಹಿಸಲ್ಪಟ್ಟಿರುವ ಶಿಷ್ಯರುಗಳಿಗೆ ಶ್ರೇಯಸ್ಸನ್ನುಂಟುಮಾಡುವ ಕಾರ್ಯಗಳನ್ನೂ ಮತ್ತು ಶ್ರೀ ಮಠದ ಸಾತ್ವಿಕ ಕಾರ್ಯಗಳನ್ನೂ ಫಲಾಪೇಕ್ಷೆರಹಿತವಾಗಿ, ಕೈಂಕರ್ಯಭಾವನೆಯಿಂದ ನಡೆಸುತ್ತಾ ಶ್ರೀ ಸ್ವಾಮಿಗಳು ತಿರುಮಂತ್ರಾರ್ಥವನ್ನು ಯಾವಾಗಲೂ ಅನುಸಂಧಾನ ಮಾಡುತ್ತಾ ಪರಮ ಪದದಲ್ಲಿ ನಿತ್ಯಕೈಂಕರ್ಯಪ್ರಾಪ್ತಿ ಕಾಲವನು ನಿರೀಕ್ಷಿಸುತ್ತಾ ಮುಕ್ತ ತುಲ್ಯರಾಗಿ ಶಾಂತಚಿತ್ತರಾಗಿರುವರು.

## ಮುಕ್ತಾಯ

ಭಗವಂತನು ಈಗಿನ ಶ್ರೀಯದುಗಿರಿ ಯತಿರಾಜಸಂಪತ್ಕುಮಾರ ರಾಮಾನುಜಜೀಯರ್ (ಶ್ರೀ ಉ. ಐಯ್ಯನೈಯ್ಯಂಗಾರ್) ಸ್ವಾಮಿಗಳವರಿಗೆ ಶ್ರೀರಾಮಾನುಜಾಚಾರ್ಯರ ಹಾಗೆ ದೀರ್ಘಾಯಸ್ಸನ್ನೂ, ಶರೀರದಲ್ಲಿ ಆರೋಗ್ಯವನ್ನೂ ಕೊಡಲಿ. ಅವರು ವಿಶಿಷ್ಟಾದ್ವೈತ ಸಿದ್ಧಾಂತವನ್ನೂ ಮತ್ತು ಶ್ರೀ ವೈಷ್ಣವ ಮತವನ್ನೂ ಪ್ರಚಾರಮಾಡಲಿ. ಶ್ರೀ ಮಠದ ಸ್ಥಿರ ಸ್ವತ್ತುಗಳನ್ನು ಭದ್ರವಾಗಿ ಕಾಪಾಡಿ ವೃದ್ಧಿಪಡಿಸಲಿ ಮತ್ತು ಅವರ ಮಂಡಯಂ ಶ್ರೀ ವೈಷ್ಣವ ಶಿಷ್ಯಾಭಿಮಾನಗಳಿಗೆ ಆಧ್ಯಾತ್ಮಿಕ–ನೈತಿಕ ವಿಷಯಗಳನ್ನು ಉಪದೇಶಮಾಡಿ ಮಂಗಳಾಶಾಸನ ಮಾಡುತ್ತಿರಲಿ. ಶ್ರೀ ಸ್ವಾಮಿಗಳು ನಮ್ಮ ಮಂಡಯಂ ಶ್ರೀ ವೈಷ್ಣವ ಸಮುದಾಯದಲ್ಲಿ, ಮಾತ್ರವಲ್ಲದೆ ವಿಶಾಲ

ಶ್ರೀ ವೈಷ್ಣವಗೋಷ್ಠಿಯಲ್ಲೂ ಒಂದು ವಿಧವಾಗಿ ಅಗ್ರಸ್ಥಾನವನ್ನು ಪಡೆದಿರುವರು. ಪಾರಂಪರ್ಯವಾಗಿ ಬಂದ ಶ್ರೀ ರಾಮನುಪುರಂ ಆಚಾರ್ಯ ಪುರುಷ ಪೀಠವನ್ನು ಅಲಂಕರಿಸಿರುವರು; ಈಗ ಶ್ರೀರಾಮಾನುಜರು ಸ್ಥಾಪಿಸಿದ ಮೇಲುಕೋಟೆ ಯತಿರಾಜ ಮಠದ ಪೀಠವನ್ನು ಅಲಂಕರಿಸಿ ಶ್ರೀ ಯತಿರಾಜ ಸ್ವಾಮಿಗಳಾಗಿರುವರು. ಹೀಗೆ ಎಲ್ಲಾ ಆಚಾರ್ಯ ಪೀಠಗಳು ಇವರಲ್ಲಿ ವಿಳಿತವಾಗಿವೆ.

ಮಂ. ಆಜಿ. ನಾರಾಯಣೈಯಂಗಾರ್ಯ
ಬೆಂಗಳೂರು.